KA / BG-GPO/2515/WPP-47/2009-2011

ALTERNATIVE LAW FORUM * BANGALORE *

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬ || ಬೆಂಗಳೂರು, ಗುರುವಾರ, ಮಾರ್ಚ್ ೧೭, ೨೦೧೧ (ಫಾಲ್ಗುಣ ೨೬, ಶಕವರ್ಷ ೧೯೩೨) || ಸಂಚಿಕೆ ೧೧

ವಿಷಯಸೂಚಿ

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
241	23-02-2011	ಸರ್ಕಾರದ ಆದೇಶ ಸಂಖ್ಯೆ: ಸಿಒ 28 ಸಿಎಲ್‌ಎಂ 2011, ಬೆಂಗಳೂರು, ದಿನಾಂಕ: 22ನೇ ಫೆಬ್ರವರಿ 2011
242	23-02-2011	ಸರ್ಕಾರದ ಆದೇಶ ಸಂಖ್ಯೆ: ಸಿಒ 28 ಸಿಎಲ್‌ಎಂ 2011, ಬೆಂಗಳೂರು, ದಿನಾಂಕ: 22ನೇ ಫೆಬ್ರವರಿ 2011
243	23-02-2011	ಸಂಖ್ಯೆ: ಸಿಐ 70 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ: 22ನೇ ಫೆಬ್ರವರಿ, 2011
244	23-02-2011	ಸಂಖ್ಯೆ: ಸಿಐ 71 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ: 22ನೇ ಫೆಬ್ರವರಿ, 2011
245	23-02-2011	No: CO 192 CLM 2010, Bengaluru, Dated: 23.02.2011
246	25-02-2011	ಸಂಖ್ಯೆ: ಸಇ 34 ಎಂಆರ್‌ಇ 2011, ಬೆಂಗಳೂರು, ದಿನಾಂಕ: 25/02/2011
247	25-02-2011	No. 100/CS-KT/1/2010:- Dated : 25th February, 2011
248	26-02-2011	No. UDD 51 MLR 2011, Bangalore, dated 25th February 2011.
249	28-02-2011	ಸಂಖ್ಯೆ: ಸಂವ್ಯಶಾಇ 66 ಭಾನಿವಿ 2009, ಬೆಂಗಳೂರು, ದಿನಾಂಕ 25-02-2011
250	28-02-2011	No. ED 78 TEC 2010, Bangalore, Dated: 28-02-2011
251	01-03-2011	No. KLA/LGA/02/Bill/2011, Bangalore, Dated: 1st March, 2011
252	01-03-2011	No. KLA/LGA/09/Bill/2011, Bangalore, Dated: 1st March, 2011
253	03-03-2011	ಸಂಖ್ಯೆ: ವಿಸಸ/ಶಾರಶಾ/ಸರಾ/311/2011, ಬೆಂಗಳೂರು, ದಿನಾಂಕ: 3ನೇ ಮಾರ್ಚ್, 2011
254	04-03-2011	ಸಂ. ಇಎಲ್‌ಎನ್.ಸಿಆರ್.118-A/2010-11, ದಿನಾಂಕ: 28.2.2011
255	04-03-2011	ಸಂ. ಇಎಲ್‌ಎನ್.ಸಿಆರ್.118/2010-11, ದಿನಾಂಕ: 28.2.2011
256	04-03-2011	No.CI.345:MMM.2010, Bangalore, Date: 04.03.2011
257	04-03-2011	ಸಂಖ್ಯೆ: ಕಾಇ 11 ಎಲ್‌ಎಂಡಬ್ಲ್ಯೂ 2009, ಬೆಂಗಳೂರು, ದಿನಾಂಕ: 03-03-2011
258	04-03-2011	ಸಂಖ್ಯೆ: ಕಾಇ 190 ಎಲ್‌ಎಂಡಬ್ಲ್ಯೂ 2007, ಬೆಂಗಳೂರು, ದಿನಾಂಕ: 03-03-2011
259	04-03-2011	ನಂ. ಚುನಾವಣೆ (2) ಸಿಆರ್.33/10-11, ದಿನಾಂಕ: 3/3/2011
260	04-03-2011	ನಂ. ಚುನಾವಣೆ (2) ಸಿಆರ್.33/10-11, ದಿನಾಂಕ: 3/3/2011
261	04-03-2011	ನಂ. ಚುನಾವಣೆ (2) ಸಿಆರ್.33/10-11, ದಿನಾಂಕ: 3/3/2011
262	04-03-2011	ನಂ. ಚುನಾವಣೆ (2) ಸಿಆರ್.33/10-11, ದಿನಾಂಕ: 3/3/2011
263	04-03-2011	ನಂ. ಚುನಾವಣೆ (2) ಸಿಆರ್.33/10-11, ದಿನಾಂಕ: 3/3/2011
264	04-03-2011	ನಂ. ಚುನಾವಣೆ (2) ಸಿಆರ್.33/10-11, ದಿನಾಂಕ: 3/3/2011
265	04-03-2011	ನಂ. ಚುನಾವಣೆ (2) ಸಿಆರ್.33/10-11, ದಿನಾಂಕ: 3/3/2011
266	05-03-2011	GOVERNMENT ORDER No. CI 193 MMN 2009, Bangalore, dated: 04-03-2011
267	05-03-2011	ಸಂಖ್ಯೆನಅಇ 47 ಎಂಎಲ್‌ಅರ್ 2011, ಬೆಂಗಳೂರು, ದಿನಾಂಕ: 05-03-2011
268	07-03-2011	ಕ್ರಮಾಂಕ : ಎಲ್‌ಎಕ್ಯೂಎಸ್‌ಆರ್/39/2010-11, ದಿನಾಂಕ : 03-02-2011
269	07-03-2011	GOVERNMENT ORDER NO.ED 96 DTE 2010 DATED 07th March 2011.
270	07-03-2011	ಸಂಖ್ಯೆ: ಸಿಐ 78 ಎಸ್‌ಪಿಕ್ಯೂ 2011, ಬೆಂಗಳೂರು, ದಿನಾಂಕ: 7ನೇ ಮಾರ್ಚ್, 2011
271	07-03-2011	ಸಂಖ್ಯೆ: ಸಇ 77 ಎಂಆರ್‌ಇ 2011, ಬೆಂಗಳೂರು, ದಿನಾಂಕ: 05/03/2011
272	07-03-2011	ಸಂಖ್ಯೆ: ಸಇ 78 ಎಂಆರ್‌ಇ 2011, ಬೆಂಗಳೂರು, ದಿನಾಂಕ: 05/03/2011
273	07-03-2011	ಸಂಖ್ಯೆ: ಸಇ 150 ಎಂಆರ್‌ಇ (1) 2010, ಬೆಂಗಳೂರು, ದಿನಾಂಕ: 05/03/2011
274	07-03-2011	ಸಂಖ್ಯೆ: ಸಇ 150 ಎಂಆರ್‌ಇ (2) 2010, ಬೆಂಗಳೂರು, ದಿನಾಂಕ: 05/03/2011
275	07-03-2011	ಸಂಖ್ಯೆ: ಸಇ 150 ಎಂಆರ್‌ಇ (3) 2010, ಬೆಂಗಳೂರು, ದಿನಾಂಕ: 05/03/2011
276	07-03-2011	ಸಂಖ್ಯೆ: ಸಇ 150 ಎಂಆರ್‌ಇ (4) 2010, ಬೆಂಗಳೂರು, ದಿನಾಂಕ: 05/03/2011

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.
http//www.Kar.nic.in/gazette.

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು.
http//www.Kar.nic.in/gazette.

೨೦೧೦-೨೦೧೧ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ – 1	22–00	880–00
2.	ಭಾಗ – 2	6–00	244–00
3.	ಭಾಗ – 3	26–00	1061–00
4.	ಭಾಗ – 4	4–00	175–00
5.	ಭಾಗ – 4ಎ	5–00	220–00
6.	ಭಾಗ – 5	22–00	879–00
7.	ಭಾಗ – 6 (ಬೆಂಗಳೂರು)	9–00	357–00
8.	ಭಾಗ – 6ಎ (ಮೈಸೂರು)	32–00	1300–00
9.	ಭಾಗ – 6ಬಿ (ಧಾರವಾಡ)	45–00	1790–00
10.	ಭಾಗ – 6ಸಿ (ಗುಲ್ಬರ್ಗ)	30–00	1194–00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ.ಸ. 1 ರಿಂದ 7 (ಭಾಗ–1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	94–00	3816–00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೧೦-೨೦೧೧ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ–4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	16-50
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :– 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI–ಎ, VI–ಬಿ, VI–ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು–59

ಮುದ್ರಕರು :–ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು–59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಮಾರ್ಚ್ ೧೭, ೨೦೧೧, (ಫಾಲ್ಗುಣ ೨೬, ಶಕ ವರ್ಷ ೧೯೩೨)	ಸಂಚಿಕೆ ೧೧

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಸಿಆಸುಇ 042/ಕೆಇವಿ 10, ಬೆಂಗಳೂರು, ದಿನಾಂಕ 03-01-2011

ದಿನಾಂಕ 22-12-10ರ ಆದೇಶ ಸಂಖ್ಯೆ ಸಿಆಸುಇ 042 ಕೆಇವಿ 10ರ ಪುಟ 6 ರಲ್ಲಿನ ಕ್ರಮ ಸಂಖ್ಯೆ 12ರ ನಂತರದ ಪ್ರಸ್ತಾವನೆಯ ಭಾಗವನ್ನು ತೆಗೆದುಹಾಕಲಾಗಿದೆ. ಅದರ ಬದಲಿಗೆ ಈ ಕೆಳಕಂಡ ಕಂಡಿಕೆಯನ್ನು ಸೇರಿಸಿ ಓದಿಕೊಳ್ಳುವುದು.

ಹೆಚ್ಚುವರಿ ಪೊಲೀಸು ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ಮೇಲೆ ಓದಲಾದ ಪ್ರಸ್ತಾವನೆಯನ್ನು ಸರ್ಕಾರವು, ಕೂಲಂಕಷವಾಗಿ ಸಾಕ್ಷ್ಯಾಧಾರಗಳೊಂದಿಗೆ ಪರಿಶೀಲಿಸಿರುವುದರಿಂದಲೂ ಶ್ರೀ ಎನ್. ಎಂ. ನೀಲಕಂಠ ರವರು ಲಂಚದ ಹಣಕ್ಕಾಗಿ ಫಿರ್ಯಾದುದಾರರನ್ನು ಒತ್ತಾಯಿಸಿರುವುದು ಮತ್ತು ಅದನ್ನು ಅವರ ಸಿಬ್ಬಂದಿಯವರ ಮೂಲಕ ಪಡೆಯುವಲ್ಲಿನ ಕೃತ್ಯವು ಮೇಲಿನ ವಿವರಗಳಿಂದ ನಿಸ್ಸಂಶಯವಾಗಿ ಮೇಲ್ನೋಟಕ್ಕೆ ಸಾಬೀತಾಗಿರುವುದಾಗಿ ಸಿಸಿಎ ನಿಯಮ 10 (3)ರ ಪರಿಶೀಲನೆಯಂತೆ ಮನವರಿಕೆಯಾಗಿರುವುದರಿಂದಲೂ ಇವರ ಈ ವರ್ತನೆಯು ಕರ್ತವ್ಯದಲ್ಲಿನ ನಿಷ್ಠೆ ಮತ್ತು ಶ್ರದ್ಧೆಯನ್ನು ಉಲ್ಲಂಘಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(1) ಅನ್ನು ಆಕರ್ಷಿಸಿರುವುದು ಮೇಲ್ನೋಟಕ್ಕೆ ದೃಢಪಟ್ಟಿದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

2. ಅದೇ ಆದೇಶದ ಪುಟ 7 ಮತ್ತು 8 ಆದೇಶ ಭಾಗದ 1ನೇ ಕಂಡಿಕೆಯ ಬದಲಿಗೆ ಈ ಕೆಳಕಂಡಂತೆ ಸೇರಿಸಿ ಓದಿಕೊಳ್ಳುವುದು.

ಪ್ರಸ್ತಾವನೆಯಲ್ಲಿನ ವಿವರಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಶ್ರೀ ಎನ್. ಎಂ. ನೀಲಕಂಠ, ಕೆಎಎಸ್ (ಕಿರಿಯ ಶ್ರೇಣಿ) ವಿಶೇಷ ಭೂ ಸ್ವಾಧೀನಾಧಿಕಾರಿ, ಬೆಂಗಳೂರು ಇವರು ಕರ್ತವ್ಯ ಲೋಪ ಎಸಗಿರುವುದು, ಕರ್ತವ್ಯದಲ್ಲಿ, ನಿಷ್ಠೆ ತೋರಿಲ್ಲದಿರುವುದು ಮತ್ತು ಕರ್ತವ್ಯದಲ್ಲಿ ಶ್ರದ್ಧೆ ಹೊಂದಿಲ್ಲದಿರುವ ಮೂಲಕ ಗಂಭೀರ ಕರ್ತವ್ಯ ನಿರ್ಲಕ್ಷ್ಯತೆ ತೋರಿರುವುದು ಸಾಕ್ಷ್ಯಾಧಾರಗಳಿಂದ ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 10 (1)(d) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತಿನಲ್ಲಿಡುತ್ತದೆ.

3. ಅದೇ ಆದೇಶದ ಆದೇಶ ಭಾಗದ ಕಂಡಿಕೆ 2 ಮತ್ತು 3 ಯಥಾ ರೀತಿ ಮುಂದುವರಿಯುವುದು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ|| ಎಂ. ಟಿ. ರೇಜು
ಸರ್ಕಾರದ ಉಪ ಕಾರ್ಯದರ್ಶಿ
ಸಿಆಸುಇ (ಸೇವೆಗಳು-2)

ಪಿ.ಆರ್. ನಂ. 190

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಸಿಆಸುಇ 540/ಸಅಸೇ 10, ಬೆಂಗಳೂರು, ದಿನಾಂಕ 07–01–2011

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 540 ಸಅಸೇ 2010, ದಿನಾಂಕ 3–12–2010 ರಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ ಸೃಜಿಸಲಾಗಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಇಲಾಖಾ ವಿಚಾರಣಾ ಕೈಪಿಡಿ) ಹುದ್ದೆಯನ್ನು **"ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿ"** (Officer on Special Duty and Ex-Officio Principal Secretary) ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ. ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸು ಇಲಾಖೆ (ಸೇವೆಗಳು–3)

ಪಿ.ಆರ್. ನಂ. 191

ಇಂಧನ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಇಎನ್ 148 ಇಬಿಎಸ್ 2010, ಬೆಂಗಳೂರು, ದಿನಾಂಕ 01–01–2011

ವಿಷಯ : ಶ್ರೀ ಕೆ. ಸಿ. ರೆಡ್ಡಿ, ವಿದ್ಯುತ್ ಪರಿವೀಕ್ಷಕರು, ಬಳ್ಳಾರಿ ಇವರಿಗೆ ಪರಿಷ್ಕೃತ ಶ್ರೇಣಿಯಲ್ಲಿ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

***

ಸರ್ಕಾರಿ ಆದೇಶ ಸಂಖ್ಯೆ: ಇಎನ್ 126 ಇಬಿಎಸ್ 2007 ದಿನಾಂಕ 29–04–2010ರ ಆದೇಶದಲ್ಲಿ ಆದೇಶ ಭಾಗದ 4ನೇ ಸಾಲಿನಲ್ಲಿ ಇರುವ ವೇತನ ಶ್ರೇಣಿ "ರೂ. 6300–11840"ನ್ನು "ರೂ. 14050–350–14450–400–16800–450–19500–525–22650–600–25050 (ರೂ. 14050–25050)" ಎಂಬುದಾಗಿ ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುಜಾತಮ್ಮ
ಪೀಠಾಧಿಕಾರಿ, ಇಂಧನ ಇಲಾಖೆ

ಪಿ.ಆರ್. ನಂ. 192

ಕಂದಾಯ ಸಚಿವಾಲಯ

ವಿಷಯ : ಶ್ರೀ ಆರ್. ಜಿ. ಪಾಲ್ಕರ್, ಹಿಂದಿನ ತಹಶೀಲ್ದಾರ್, ಖಾನಾಪುರ, ಬೆಳಗಾಂ ಜಿಲ್ಲೆ, ಪ್ರಸ್ತುತ ನಿವೃತ್ತರು ಇವರ ವಿರುದ್ಧ ಇಲಾಖಾ ವಿಚಾರಣೆ ಕುರಿತು–ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 29 ಎಡಿಇ 2006, ದಿನಾಂಕ 29–4–2008.
2. ವಿಚಾರಣಾಧಿಕಾರಿಯಾದ ಶ್ರೀ ಎ.ಎ. ಹುಲಗೇರಿ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಇವರು ಸಲ್ಲಿಸಿರುವ ವಿಚಾರಣಾ ವರದಿ, ದಿನಾಂಕ 5.1.2009.
3. ಎರಡನೇ ಕಾರಣ ಕೇಳುವ ನೋಟೀಸು, ಸಂಖ್ಯೆ ಆರ್‌ಡಿ 29 ಎಡಿಇ 2006, ದಿನಾಂಕ 20.2.2009.
4. ಶ್ರೀ ಆರ್. ಜಿ. ಪಾಲ್ಕರ್, ಹಿಂದಿನ ತಹಶೀಲ್ದಾರ್, ಖಾನಾಪುರ, ಬೆಳಗಾಂ ಜಿಲ್ಲೆ, ಪ್ರಸ್ತುತ ನಿವೃತ್ತರು ಸಲ್ಲಿಸಿರುವ ದಿನಾಂಕ 29–4–2009 ರ ಲಿಖಿತ ಹೇಳಿಕೆ.
5. ಸರ್ಕಾರದ ಪತ್ರ ಸಂಖ್ಯೆ : ಕಂಇ 29 ಎಡಿಇ 2006, ದಿನಾಂಕ 10–9–2009.
6. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ : ಪಿಎಸ್‌ಸಿ 128 ಸಿಎನ್‌ಎಸ್ 2009, ದಿನಾಂಕ 1–12–2009.

ಪ್ರಸ್ತಾವನೆ :

ಶ್ರೀ ಆರ್. ಜಿ. ಪಾಲ್ಕರ್, ಹಿಂದಿನ ತಹಶೀಲ್ದಾರ್, ಖಾನಾಪುರ, ಬೆಳಗಾಂ ಜಿಲ್ಲೆ, ಇಲ್ಲಿ (ಪ್ರಸ್ತುತ ನಿವೃತ್ತರು) ಇವರು 2005–06ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಕರ್ನಾಟಕ ಭೂ ಕಂದಾಯ ಅಧಿನಿಯಮಗಳು 1964ರನ್ವಯ ನಿಗದಿತ ಅವಧಿಯಲ್ಲಿ ಕ್ರಮ ಕೈಗೊಳ್ಳದೇ, ಸರ್ಕಾರಿ ದಾಖಲೆಗಳನ್ನು ತಿದ್ದುವ ಅಪರಾಧಿತ ಕೃತ್ಯದಲ್ಲಿ ತೊಡಗಿರುವ ದುರ್ನಡತೆಯ ಆಪಾದನೆಗೆ ಸಂಬಂಧಿಸಿದಂತೆ, ಅವರ ವಿರುದ್ಧ 1957ರ ಕರ್ನಾಟಕ ನಾಗರೀಕ ಸೇವಾ (ವ.ನಿ&ಮೇ) ನಿಯಮಾವಳಿ ನಿಯಮಗಳನ್ವಯ ಶಿಸ್ತು ಕ್ರಮ ಜರುಗಿಸುವಂತೆ ಆರೋಪಿತರ ವಿರುದ್ಧ ಕರಡು ದೋಷಾರೋಪಣಾ ಪಟ್ಟಿಯನ್ನು ಅನುಬಂಧ 1 ರಿಂದ 4 ರವರೆಗೆ ಸರ್ಕಾರಕ್ಕೆ ದಿನಾಂಕ 6–3–2006 ರಂದು ಜಿಲ್ಲಾಧಿಕಾರಿಗಳು, ಬೆಳಗಾಂ ರವರು ಪ್ರಸ್ತಾವನೆ ಸಲ್ಲಿಸಿದ್ದರನ್ವಯ, ಸರ್ಕಾರವು ದಿನಾಂಕ 27–4–2006 ರಂದು ಕಾರಣ ಕೇಳುವ ನೋಟೀಸನ್ನು ಶ್ರೀ ಆರ್. ಜಿ. ಪಾಲ್ಕರ್, ಹಿಂದಿನ ತಹಶೀಲ್ದಾರ್, ಖಾನಾಪುರ, ಬೆಳಗಾಂ ಜಿಲ್ಲೆ ರವರಿಗೆ

ಜಾರಿ ಮಾಡಿ ಆರೋಪಗಳ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆ ಆರೋಪಿತರು ದಿನಾಂಕ 3-7-2006 ರಂದು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿ, ತಮ್ಮನ್ನು ಆರೋಪಗಳಿಂದ ದೋಷಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಸದರಿ ರಕ್ಷಣಾ ಹೇಳಿಕೆಯನ್ನು ಪರಿಶೀಲಿಸಲಾಗಿ, ಆಪಾದನೆಯನ್ನು ಸಮರ್ಥಿಸುವಂತಹ ಅಂಶಗಳು ಹಾಗೂ ದಾಖಲಾತಿಗಳನ್ನು ಒದಗಿಸಿರುವುದಿಲ್ಲವಾದ್ದರಿಂದ, ಸರ್ಕಾರವು ಪ್ರಕರಣದಲ್ಲಿ ಸತ್ಯಾಸತ್ಯತೆಯನ್ನು ತಿಳಿಯಲು 1957ರ ಕರ್ನಾಟಕ ನಾಗರೀಕ ಸೇವಾ (ವ.ನಿ&ಮೇ) ನಿಯಮಾವಳಿಯ ನಿಯಮ 11 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಇಲಾಖಾ ವಿಚಾರಣೆಯನ್ನು ಜರುಗಿಸಲು ಶ್ರೀ ಎ.ಎ. ಹುಲಗೇರಿ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವ.ನಿ&ಮೇ) ನಿಯಮಾವಳಿಯ ನಿಯಮ 11(5) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸ್ಥಾನಿಕ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಬೆಳಗಾಂ ಇವರನ್ನು ಮೇಲೆ ಓದಲಾದ ಕ್ರಮ ಸಂಖ್ಯೆ : (1)ರ ಸರ್ಕಾರದ ದಿನಾಂಕ 29-4-2008 ರ ಆದೇಶದಲ್ಲಿ ನೇಮಿಸಿ ಆದೇಶಿಸಲಾಗಿತ್ತು.

ಸರ್ಕಾರದ ದಿನಾಂಕ 29-4-2008 ರ ಆದೇಶದಂತೆ, ವಿಚಾರಣಾಧಿಕಾರಿಗಳಾದ ಶ್ರೀ ಎ.ಎ. ಹುಲಗೇರಿ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ರವರು ಕೂಲಂಕಷವಾಗಿ ವಿಚಾರಣೆ ನಡೆಸಿ ಮೇಲೆ ಓದಲಾದ ಕ್ರಮ ಸಂಖ್ಯೆ : (2) ರಂತೆ ದಿನಾಂಕ 5-1-2009 ರಂದು ಮುಂದಿನ ಸೂಕ್ತ ಕ್ರಮಕ್ಕಾಗಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ ವಿಚಾರಣಾಧಿಕಾರಿಗಳು ಆರೋಪಿತರ ವಿರುದ್ಧದ 11 ಆರೋಪಗಳಲ್ಲಿ ಆರೋಪ 1, 2, 3, 4, 6, 8 ಮತ್ತು 9 ಗಳು ಸಾಬೀತಾಗಿರುತ್ತದೆ, ಆರೋಪ 5, 7, 10, 11 ಗಳು ಸಾಬೀತಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ವಿಚಾರಣಾಧಿಕಾರಿಗಳ ದಿನಾಂಕ 5-1-2009 ರ ವಿಚಾರಣಾ ವರದಿಯನ್ನು ಲಗತ್ತಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ: (3) ರ ದಿನಾಂಕ 20-2-2009ರ ಸರ್ಕಾರದಿಂದ ಜಾರಿ ಮಾಡಿರುವ ಎರಡನೇ ಕಾರಣ ಕೇಳುವ ನೋಟೀಸಿನಲ್ಲಿ, ವಿಚಾರಣಾ ಪ್ರಾಧಿಕಾರಿಯ ನಿರ್ಣಯಗಳ ಬಗ್ಗೆ ನಿಮ್ಮ ಸಮಜಾಯಿಷಿ ಏನಾದರೂ ಇದ್ದರೆ, ನೋಟೀಸು ತಲುಪಿದ 15 ದಿನಗಳೊಳಗಾಗಿ ಸಲ್ಲಿಸುವುದು ಎಂದು ತಿಳಿಸಲಾಗಿರುತ್ತದೆ.

ಸರ್ಕಾರದ ದಿನಾಂಕ 20-2-2009ರ ಎರಡನೇ ಕಾರಣ ಕೇಳುವ ನೋಟೀಸಿಗೆ ಶ್ರೀ ಆರ್. ಜಿ. ಪಾಲ್ಕರ್, ಹಿಂದಿನ ತಹಶೀಲ್ದಾರ್, ಖಾನಾಪುರ, ಬೆಳಗಾಂ ಜಿಲ್ಲೆ ಪ್ರಸ್ತುತ ನಿವೃತತರು ಮೇಲೆ ಓದಲಾದ ಕ್ರಮ ಸಂಖ್ಯೆ : (4) ದಿನಾಂಕ 29.4.2009 ರಂದು ತಮ್ಮ ಲಿಖಿತ ಸಮಜಾಯಿಷಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಉತ್ತರದಲ್ಲಿ ಜೆ-ಫಾರಂಗಳನ್ನು ಕಂಪ್ಯೂಟರ್ ವಿಭಾಗಕ್ಕೆ ಕಳುಹಿಸಿದ್ದು, ಅವು ತಮ್ಮ ಬಳಿ ಇರಲಿಲ್ಲವೆಂದು ತಾವು ಪ್ರವಾಸ ಕೈಗೊಂಡಾಗ ಉಪ ವಿಭಾಗಾಧಿಕಾರಿಗಳಿಗೆ ಶಿರಸ್ತೇದಾರರು ತಮ್ಮ ವಿರುದ್ಧ ಪಿತೂರಿ ನಡೆಸಿ ತಮ್ಮ ಹತ್ತಿರ ಜೆ-ಫಾರಂಗಳು ಬಾಕಿ ಇವೆಯೆಂದು ವರದಿ ಮಾಡಿದ್ದರಿಂದ ತಪ್ಪಾಗಿದೆಯೆಂದು ತಿಳಿಸಿರುತ್ತಾ, ಅದೇ ರೀತಿ ಭೂ ಪರಿವರ್ತನೆಯು ತಮ್ಮ ಅಧಿಕಾರ ವ್ಯಾಪ್ತಿಗೆ ಮೀರಿದ್ದರಿಂದ ಆ ಆದೇಶವನ್ನು ರದ್ದುಪಡಿಸಿರುವುದಾಗಿ, 3ನೇ ಆಪಾದನೆಯಲ್ಲಿ ಮರಣ ಪ್ರಮಾಣಪತ್ರ ಕೋರಿರುವ ಅರ್ಜಿಯನ್ನು ದಿನಾಂಕ 20-9-2005 ರಂದು ಪಡೆದಿದ್ದು ಉತ್ತರ ಜೀವಿತ ಪ್ರಮಾಣಪತ್ರವನ್ನು ದಿನಾಂಕ 22-10-2005 ರಂದು ನೀಡಲಾಗಿದ್ದು, ಇದರಿಂದ ಎರಡೇ ದಿವಸಗಳಲ್ಲಿ ನೀಡಲಾಗಿದೆ ಎಂದು ಹೇಳಲಾಗಿರುವುದನ್ನು ಅಲ್ಲಗಳೆಯಲಾಗಿದೆ ಎಂದು, ಇದೇ ರೀತಿ ಸೆಪ್ಟೆಂಬರ್, ಅಕ್ಟೋಬರ್ ಹಾಗೂ ನವೆಂಬರ್ ಡೈರಿಗಳನ್ನು ಸಕಾಲದಲ್ಲಿ ಸಲ್ಲಿಸಲಾಗಿದೆ ಎಂದು ಹಾಗೂ ಸಿಬ್ಬಂದಿ ಕೊರತೆಯಿಂದ ಅತಿವೃಷ್ಟಿ ಪರಿಹಾರದ ಬಗ್ಗೆ ವರದಿ ಸಲ್ಲಿಸುವಲ್ಲಿ ವಿಳಂಬವಾಗಿದೆ ಎಂದು ತಿಳಿಸಿ ತಮ್ಮ ವಿರುದ್ಧದ ಆಪಾದನೆಯನ್ನು ಕೈಬಿಡುವಂತೆ ಕೋರಿರುತ್ತಾರೆ. ಉಪ ವಿಭಾಗಾಧಿಕಾರಿಗಳು ತಹಶೀಲ್ದಾರರ ಕಛೇರಿಯನ್ನು ತಪಾಸಣೆ ನಡೆಸಿದಾಗ 286 ಅರ್ಜಿಗಳು ವಿವಿಧ ಸಿಬ್ಬಂದಿ ಬಳಿ ಬಾಕಿ ಇದ್ದುದರಿಂದ, ಆಪಾದಿತರು ಕೇವಲ 86 ಅರ್ಜಿಗಳು ಬಾಕಿ ಇವೆಯೆಂದು ಹೇಳಿರುವುದು ಸಮಂಜಸವಾಗಿಲ್ಲದಿರುವುದರಿಂದ, ಆಪಾದಿತ ವಿರುದ್ಧದ ಆಪಾದನೆ ಸಾಬೀತಾಗಿದೆ ಎಂದು ವಿಚಾರಣಾಧಿಕಾರಿಗಳು ತಿಳಿಸಿರುತ್ತಾರೆ. ಈ ಎಲ್ಲಾ ಆಪಾದನೆಗಳು ಸಾಬೀತಾಗಿವೆ ಎಂದು ಹೇಳಿರುವುದು ಆಪಾದಿತರ ಕರ್ತವ್ಯಲೋಪಕ್ಕೆ ಸಂಬಂಧಿಸಿದ್ದು, ಇದರಲ್ಲಿ ಯಾವುದೇ ಆರ್ಥಿಕ ನಷ್ಟದ ಆಪಾದನೆಗಳು ಇರುವುದಿಲ್ಲ. ಕರ್ತವ್ಯಲೋಪದ ಆಪಾದನೆಗಳು ವಿಚಾರಣೆಯಲ್ಲಿ ಸಾಬೀತಾಗಿರುವುದರಿಂದ, ಆಪಾದಿತ ನಿವೃತ್ತಿ ವೇತನದಲ್ಲಿ ಶೇಕಡ 10 ರಷ್ಟನ್ನು ಒಂದು ವರ್ಷದವರೆಗೆ ಕಡಿತಗೊಳಿಸುವ ದಂಡನೆ ವಿಧಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

ಅದರಂತೆ ಸರ್ಕಾರವು ಮೇಲೆ ಓದಲಾದ ಕ್ರಮಸಂಖ್ಯೆ : (5) ರ ದಿನಾಂಕ 10-9-2009ರ ಸರ್ಕಾರದ ಪತ್ರದಲ್ಲಿ ಶ್ರೀ ಆರ್. ಜಿ. ಪಾಲ್ಕರ್, ಹಿಂದಿನ ತಹಶೀಲ್ದಾರ್, ಖಾನಾಪುರ, ಬೆಳಗಾಂ ಜಿಲ್ಲೆ ಪ್ರಸ್ತುತ ನಿವೃತ್ತರು ಇವರಿಗೆ ಕೆ.ಸಿ.ಎಸ್.ಆರ್. ನಿಯಮ 214 ರಡಿಯಲ್ಲಿ ಇವರ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ಆಪಾದನೆಗಳು ಸಾಬೀತಾಗಿರುವುದರಿಂದ ಇವರ ನಿವೃತ್ತಿ ವೇತನದಲ್ಲಿ ಶೇಕಡ 10 ರಷ್ಟನ್ನು ಒಂದು ವರ್ಷದವರೆಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಲು ತೀರ್ಮಾನಿಸಿರುವ ಸರ್ಕಾರದ ಪ್ರಸ್ತಾವನೆಗೆ ಕರ್ನಾಟಕ ಲೋಕ ಸೇವಾ ಆಯೋಗದ ಸಮ್ಮತಿ ನೀಡುವಂತೆ ಕೋರಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (6) ರ ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗದ ದಿನಾಂಕ 1.12.2009ರ ಪತ್ರದಲ್ಲಿ ಶ್ರೀ ಆರ್. ಜಿ. ಪಾಲ್ಕರ್, ಹಿಂದಿನ ತಹಶೀಲ್ದಾರ್, ಖಾನಾಪುರ, ಬೆಳಗಾಂ ಜಿಲ್ಲೆ ಪ್ರಸ್ತುತ ನಿವೃತ್ತರು ಇವರಿಗೆ ಕೆ.ಸಿ.ಎಸ್.ಆರ್. ನಿಯಮ 214 ರಡಿಯಲ್ಲಿ ಇವರ ನಿವೃತ್ತಿ ವೇತನದಲ್ಲಿ ಶೇಕಡ 10 ರಷ್ಟನ್ನು ಒಂದು ವರ್ಷದವರೆಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಲು ತೀರ್ಮಾನಿಸಿರುವ ಸರ್ಕಾರದ ಪ್ರಸ್ತಾವನೆಗೆ ಸಹಮತಿಸಿದೆ ಎಂದು ತಿಳಿಸಿರುತ್ತಾರೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಂಇ 29 ಎಡಿಇ 2006, ಬೆಂಗಳೂರು, ದಿನಾಂಕ : 3-12-2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆರೋಪಿತ ನೌಕರರಾದ ಶ್ರೀ ಆರ್. ಜಿ. ಪಾಲ್ಕರ್, ಹಿಂದಿನ ತಹಶೀಲ್ದಾರ್, ಖಾನಾಪುರ, ಬೆಳಗಾಂ ಜಿಲ್ಲೆ ಪ್ರಸ್ತುತ ನಿವೃತ್ತರು ಇವರ ವಿರುದ್ಧದ ಇಲಾಖಾ ವಿಚಾರಣೆ ಪ್ರಕರಣದಲ್ಲಿ ಆಪಾದನೆಗಳು ಸಾಬೀತಾಗಿರುವ ಕಾರಣ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ 1958ರ ನಿಯಮ 214 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಇವರ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ಆಪಾದನೆಗಳು ಸಾಬೀತಾಗಿರುವುದರಿಂದ ಇವರ ನಿವೃತ್ತಿ ವೇತನದಲ್ಲಿ ಶೇಕಡ 10 ರಷ್ಟನ್ನು ಒಂದು ವರ್ಷದವರೆಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಸಸಾಲಟ್ಟಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್. 25

ಸಮಾಜ ಕಲ್ಯಾಣ ಸಚಿವಾಲಯ

ವಿಷಯ : ಸರ್ಕಾರದ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು, ಸ್ವಾಯತ್ತ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ನೌಕರರಿಗೆ ಬಡ್ತಿ ನೀಡುವಲ್ಲಿ ರೋಸ್ಟರ್ ನಿಯಮಗಳನ್ನು ಅನುಸರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಸುತ್ತೋಲೆ ಸಂಖ್ಯೆ : ಸಿಆಸುಇ 34 ಸೇನೆನಿ 2010, ದಿನಾಂಕ 28-05-2010.

2. ಸರ್ಕಾರದ ಅನಧಿಕೃತ ಟಿಪ್ಪಣಿ ಸಂಖ್ಯೆ : ಸಿಆಸುಇ 34 ಸೇನೆನಿ 2010, ದಿನಾಂಕ 11.06.2010.

3. ಸರ್ಕಾರದ ಪತ್ರ ಸಂಖ್ಯೆ : ಸಕ ಇ 26 ಎಸ್‌ಟಿಸಿ 2010, ದಿನಾಂಕ 07-07-2010.

ಪ್ರಸ್ತಾವನೆ :

ರಾಜ್ಯದ ವಿವಿಧ ಸರ್ಕಾರದ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು, ಸ್ವಾಯತ್ತ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ಬಡ್ತಿ ನೀಡುವಲ್ಲಿ ಸರ್ಕಾರದ ಆದೇಶ ಸಂಖ್ಯೆ ಡಿ.ಪಿ.ಎ.ಆರ್. 29 ಎಸ್.ಡಿ.ಸಿ 77, ದಿನಾಂಕ 27-04-1978 ಹಾಗೂ ತತ್ಸಂಬಂಧ ನಂತರ ಹೊರಡಿಸಿದ ಆದೇಶ ಮತ್ತು ಸುತ್ತೋಲೆಗಳನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಧಿಕಾರಿ/ನೌಕರರುಗಳಿಗೆ ಅನುಕ್ರಮವಾಗಿ ಶೇಕಡ 15 ಮತ್ತು 3ರ ಪ್ರಮಾಣದಲ್ಲಿ ಮೀಸಲಾತಿಯನ್ನು 33 ಬಿಂದುಗಳುಳ್ಳ ರೋಸ್ಟರನ್ನು ಅನುಸರಿಸಿ ಬಡ್ತಿ ನೀಡಬೇಕಾಗಿರುತ್ತದೆ. ಆದರೆ ಸಂಬಂಧಪಟ್ಟ ಸೂಚನೆಗಳನ್ನು ಕೆಲವು ಇಲಾಖೆಗಳು ಸರಿಯಾಗಿ ಪಾಲಿಸುತ್ತಿಲ್ಲವೆಂಬ ಅಂಶ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ : 593/2008 & 4953/2008 ರಲ್ಲಿ ದಿನಾಂಕ 19-01-2010 ರಂದು ತೀರ್ಪು ನೀಡುತ್ತಾ ಈ ಕೆಳಗಿನಂತೆ ಆದೇಶಿಸಿರುತ್ತದೆ :

> "Before parting with the case, we would like to emphasize on the Government that both the Government and the Transport Commissioner have failed to discharge their statutory duty in the matter of maintaining roster pertaining to the cadre of Regional Transport Officers. It is the duty of all authorities competent to order promotions to maintain roster in each cadre. The Government itself has issued directions as long back as 1978 to all authorities competent to order promotions that they shall maintain a separate register indicating the promotional rotation for each category of posts under them. But it is seen that the Government itself has failed to implement its own order. The present case can be only a tip of an iceberg in the State of Karnataka severe action has to be taken against the erring officers/officials. All authorities competent to order promotions may be once again directed to maintain rosters in all cadres. A committee consisting of experts on the subject may be constituted within three months and the committee may be empowered to inspect each and every Department and verify whether the policy of reservation is followed strictly and whether the prescribed percentage is maintained or not. We hope that the Government would rise to the occasion and take remedial measures immediately.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಕಇ 39 ಎಸ್‌ಟಿಸಿ 2010, ಬೆಂಗಳೂರು, ದಿನಾಂಕ : 21-12-2010

ರಾಜ್ಯ ಸರ್ಕಾರದ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು, ಸ್ವಾಯತ್ತ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆಗಳು ಅವುಗಳ ವ್ಯಾಪ್ತಿಗೆ ಬರುವ ವಿವಿಧ ವೃಂದದ ಅಧಿಕಾರಿ : ನೌಕರರಿಗೆ ಬಡ್ತಿ ನೀಡುವಲ್ಲಿ ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 29 ಎಸ್‌ಡಿಸಿ 77, ದಿನಾಂಕ : 27-04-1978 ಮತ್ತು ತತ್ಸಂಬಂಧವಾಗಿ ನಂತರ ಹೊರಡಿಸಿರುವ ಆದೇಶ ಮತ್ತು ಸುತ್ತೋಲೆಗಳನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಧಿಕಾರಿ/ನೌಕರರುಗಳಿಗೆ ಅನುಕ್ರಮವಾಗಿ ಶೇಕಡ 15 ಮತ್ತು 3ರ ಪ್ರಮಾಣದಲ್ಲಿ ಮೀಸಲಾತಿಯನ್ನು 33 ಬಿಂದು ಪ್ರಕಾರ ಬಡ್ತಿ ನೀಡುತ್ತವೆಯೇ? ಎಂಬುದನ್ನು ದೃಢಪಡಿಸಿಕೊಳ್ಳಲು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಪರಿಣಿತರ ಸಮಿತಿ ರಚಿಸಲಾಗಿದೆ :-

(1)	ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರು, ಸಮಾಜ ಕಲ್ಯಾಣ ಇವರ ಕಛೇರಿ	ಅಧ್ಯಕ್ಷರು
(2)	ಉಪ ನಿರ್ದೇಶಕರು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	ಸದಸ್ಯರು
(3)	ಸರ್ಕಾರದ ಅಧೀನ ಕಾರ್ಯದರ್ಶಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು), ವಿಧಾನಸೌಧ	ಸದಸ್ಯರು
(4)	ಉಪ ನಿರ್ದೇಶಕರು (ಉದ್ಯೋಗ ಮತ್ತು ತರಬೇತಿ) ಆಯುಕ್ತರು, ಸಮಾಜ ಕಲ್ಯಾಣ ಇವರ ಕಛೇರಿ	ಸದಸ್ಯ-ಕಾರ್ಯದರ್ಶಿ

ಸದರಿ ಸಮಿತಿಯು ಕಾಲ ಕಾಲಕ್ಕೆ ವಿವಿಧ ಸರ್ಕಾರಿ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು, ಸ್ವಾಯತ್ತ ಸಂಸ್ಥೆಗಳು ಹಾಗೂ ಸರ್ಕಾರಿ ಸಂಸ್ಥೆ ಇವುಗಳ ಕೇಂದ್ರ ಕಛೇರಿಗಳಿಗೆ ಭೇಟಿ ನೀಡಿ ಅಂತಹ ಸರ್ಕಾರಿ ಇಲಾಖೆಗಳು, ಉದ್ದಿಮೆಗಳು ಹಾಗೂ ಇತರೆ ಸಂಸ್ಥೆಗಳು ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರಿಗೆ ನಿಗದಿತ ಪ್ರಮಾಣದಲ್ಲಿ ಬಡ್ತಿ ನೀಡಲಾಗುತ್ತಿದೆಯೇ? ಎಂಬುದರ ತನಿಖೆ ನಡೆಸಿ ಕಾಲ ಕಾಲಕ್ಕೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರಿಗೆ ಇಲಾಖಾ/ಉದ್ದಿಮೆ/ಸಂಸ್ಥೆವಾರು ತನಿಖಾ ವರದಿ ತಯಾರಿಸಿ ಸಲ್ಲಿಸತಕ್ಕದ್ದು.

ಅಂತಹ ಇಲಾಖೆಗಳು/ಉದ್ದಿಮೆಗಳು/ಸಂಸ್ಥೆಗಳು ಅವುಗಳಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ವೃಂದದ ಅಧಿಕಾರಿ/ನೌಕರರ ಬಡ್ತಿಗೆ ಸಂಬಂಧಿಸಿದ ದಾಖಲಾತಿ ನಿರ್ವಹಿಸತಕ್ಕದ್ದು.

ಸದರಿ ಪರಿಣಿತರ ಸಮಿತಿಯು ಭೇಟಿ ನೀಡುವ ಸಂದರ್ಭಗಳಲ್ಲಿ ಇಲಾಖೆಗಳು/ಸಾರ್ವಜನಿಕ ಉದ್ದಿಮೆಗಳು/ಸಂಸ್ಥೆಗಳು ಅವುಗಳಿಗೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳು, ಅವುಗಳಿಗೆ ಕಾಲಕಾಲಕ್ಕೆ ತರಲಾದ ತಿದ್ದುಪಡಿ, ಮುಂಬಡ್ತಿ ನೀಡಲು ಆಧಾರವಾದ ಖಾಲಿ ಹುದ್ದೆಗಳ ವಹಿ, ರೋಸ್ಟರ್ ವಹಿ, ಜೇಷ್ಠತಾ ಪಟ್ಟಿ, ಮುಂಬಡ್ತಿ ಆದೇಶ ಹಾಗೂ ಸಮಿತಿ ಬಯಸುವ ಇನ್ನಿತರೆ ದಾಖಲೆಗಳನ್ನು ವೃಂದವಾರು ನಿರ್ವಹಿಸಿ ಒದಗಿಸತಕ್ಕದ್ದು.

ಅದಲ್ಲದೆ ಬಡ್ತಿ ವಿಷಯದಲ್ಲಿ ಪರಿಣಿತರ ಸಮಿತಿಯು ನೀಡುವ ಸಲಹೆ ಹಾಗೂ ಸೂಚನೆಗಳನ್ನು ಸಂಬಂಧಪಟ್ಟ ಇಲಾಖೆಗಳು/ಸಾರ್ವಜನಿಕ ಉದ್ದಿಮೆಗಳು, ಸ್ವಾಯತ್ತ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳು ಪಾಲಿಸಿ ಅನುಸರಣಾ ವರದಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ಆಯುಕ್ತರು, ಸಮಾಜ ಕಲ್ಯಾಣ ಇವರಿಗೆ ಕಳುಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಲೋಕನಾಥರಾವ್,
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

ಪಿ.ಆರ್. 26

ಸಮಾಜ ಕಲ್ಯಾಣ ಸಚಿವಾಲಯ

ವಿಷಯ : ಶ್ರೀ ಸಿ. ಜಗದೀಶ್, ಇವರನ್ನು ವಿಶೇಷ ನ್ಯಾಯವಾದಿಯಾಗಿ ನೇಮಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : 38 ಎಸ್‌ಎಡಿ 2005, ಬೆಂಗಳೂರು, ದಿನಾಂಕ 2-7-2007.

2. ಸೇರ್ಪಡೆ ಆದೇಶ ಸಂಖ್ಯೆ : ಸಕಇ 108 ಎಸ್‌ಎಡಿ 2007, ದಿನಾಂಕ 09-09-2008.

ಪ್ರಸ್ತಾವನೆ :

ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದ ವ್ಯಕ್ತಿಗಳ ವಿರುದ್ಧ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣಗಳಲ್ಲಿ ಸರ್ಕಾರದ ಪರವಾಗಿ ವಾದಿಸಲು ಶ್ರೀ ಸಿ. ಜಗದೀಶ್, ಇವರನ್ನು ಈ ಮೇಲೆ (1) ಮತ್ತು (2) ರಲ್ಲಿ ಓದಲಾದ ಆದೇಶಗಳಲ್ಲಿ ವಿಶೇಷ ನ್ಯಾಯವಾದಿಯಾಗಿ ನೇಮಿಸಲಾಗಿದ್ದು ಮೂರು ವರ್ಷಗಳ ಅವಧಿಯು ದಿನಾಂಕ 1-7-2010 ರಂದು ಮುಕ್ತಾಯಗೊಂಡಿರುತ್ತದೆ, ಆದ ಕಾರಣ ಶ್ರೀ ಸಿ. ಜಗದೀಶ್, ಇವರನ್ನು ನಂತರ ಅವಧಿಗೆ ಮುಂದುವರೆಸುವ ನಿಟ್ಟಿನಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಕಇ 57 ಎಸ್‌ಎಡಿ 2010, ಬೆಂಗಳೂರು, ದಿನಾಂಕ : 08-12-2010

ದಿನಾಂಕ 02-07-2007ರ ಉಲ್ಲೇಖಿತ ಆದೇಶದಲ್ಲಿ ನಮೂದಿಸಲಾದ ಷರತ್ತು ಹಾಗೂ ನಿಬಂಧನೆಗೆ ಒಳಪಟ್ಟು ಶ್ರೀ ಸಿ. ಜಗದೀಶ್, ದಿನಾಂಕ 02-07-2010 ರಿಂದು ಇನ್ನೂ ಮೂರು ವರ್ಷಗಳ ಅವಧಿಗೆ ವಿಶೇಷ ನ್ಯಾಯವಾದಿಯನ್ನಾಗಿ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಲೋಕನಾಥರಾವ್,
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

ಪಿ.ಆರ್. 27

ಸಮಾಜ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ಬಿ.ಆರ್. ಅಂಬೇಡ್ಕರ್ ಮತ್ತು ಡಾ॥ ಬಾಬು ಜಗಜೀವನ ರಾಂ ಪ್ರಶಸ್ತಿ ನೀಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಸಕಇ 92 ಪಕವಿ 2007, ದಿನಾಂಕ 14-03-2007.

2. ದಿನಾಂಕ 01-04-2010 ಹಾಗೂ 05-04-2010 ರಂದು ನಡೆದ ಡಾ॥ ಬಾಬು ಜಗಜೀವನ ರಾಂ ಮತ್ತು ಡಾ॥ ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ ಸಮಿತಿ ಸಭೆಯ ನಡವಳಿ.

3. ಪತ್ರ ಸಂಖ್ಯೆ : ಸಕನಿ/ಸಿಬ್ಬಂದಿ-6/ಬಾಜಜೀ-ಅಂ.ಪ್ರಶಸ್ತಿ/10-11, ದಿನಾಂಕ 18.8.2010.

ಪ್ರಸ್ತಾವನೆ :

ಸಾಮಾಜಿಕ ಕ್ಷೇತ್ರದಲ್ಲಿ ಅದರಲ್ಲೂ ಪ್ರಮುಖವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಜನಾಂಗದ ಏಳಿಗೆ, ಅಸ್ಪೃಶ್ಯತೆ ನಿರ್ಮೂಲನ ಹಾಗೂ ದೌರ್ಜನ್ಯ ತಡೆಯುವ ಚಟುವಟಿಕೆಗಳಲ್ಲಿ ಸ್ವಯಂ ಪ್ರೇರಣೆಯಿಂದ ನಿರಂತರವಾಗಿ ತೊಡಗಿಸಿಕೊಂಡು ಶ್ರಮಿಸುವ ವ್ಯಕ್ತಿಗಳನ್ನು ಗುರುತಿಸಿ ಡಾ॥ ಬಿ.ಆರ್. ಅಂಬೇಡ್ಕರ್ ಹಾಗೂ ಡಾ॥ ಬಾಬು ಜಗಜೀವನ ರಾಂ ಇವರ ಸ್ಮರಣಾರ್ಥ ಪ್ರತಿ ವರ್ಷ ಐದ್ಯೆದು ವ್ಯಕ್ತಿಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಉಲ್ಲೇಖಿತ ಪ್ರಶಸ್ತಿಗಳಿಗೆ ವ್ಯಕ್ತಿಗಳನ್ನು ಆಯ್ಕೆ ಮಾಡುವಲ್ಲಿ ನಿಗದಿತ ಕಾರ್ಯವಿಧಾನ ಅನುಸರಿಸುವ ಅವಶ್ಯಕತೆ ಇರುತ್ತದೆ.

ಆ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಕಇ 239 ಪಕಸೇ 2010, ಬೆಂಗಳೂರು, ದಿನಾಂಕ : 07-12-2010

ಡಾ॥ ಬಿ.ಆರ್. ಅಂಬೇಡ್ಕರ್ ಹಾಗೂ ಡಾ॥ ಬಾಬು ಜಗಜೀವನ ರಾಂ ಇವರ ಸ್ಮರಣಾರ್ಥ ಪ್ರಶಸ್ತಿ ನೀಡುವಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ:-

1) ಯಾವುದೇ ವ್ಯಕ್ತಿ ಒಂದು ಪ್ರಶಸ್ತಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

2) ಅರ್ಜಿದಾರರ ವಯಸ್ಸು ಕನಿಷ್ಠ 35 ವರ್ಷಗಳಾಗಿರತಕ್ಕದ್ದು.

3) ಯಾವುದೇ ವ್ಯಕ್ತಿಯನ್ನು ಒಂದು ಪ್ರಶಸ್ತಿಗೆ ಮಾತ್ರ ಆಯ್ಕೆ ಮಾಡತಕ್ಕದ್ದು.

4) ಪ್ರಶಸ್ತಿಗೆ ಯಾವುದೇ ಜನಾಂಗದ ವ್ಯಕ್ತಿ ಅರ್ಜಿ ಸಲ್ಲಿಸಬಹುದು.

5) ಡಾ॥ ಬಿ.ಆರ್. ಅಂಬೇಡ್ಕರ್ ಅವರ ಪ್ರಶಸ್ತಿಯನ್ನು ಗರಿಷ್ಠ 10 ಜನರಿಗೆ ಮತ್ತು ಡಾ॥ ಬಾಬು ಜಗಜೀವನ ರಾಂ ಪ್ರಶಸ್ತಿಯನ್ನು ಗರಿಷ್ಠ 10 ಜನರಿಗೆ ನೀಡಲಾಗುವುದು.

6) ಅಂತಹ ಪ್ರಶಸ್ತಿಗಳನ್ನು ಕ್ರಮವಾಗಿ ಡಾ॥ ಬಿ.ಆರ್. ಅಂಬೇಡ್ಕರ್ ಹಾಗೂ ಡಾ॥ ಬಾಬು ಜಗಜೀವನ ರಾಂ ಇವರ ಜನ್ಮ ದಿನಾಚರಣೆ ಸಮಾರಂಭದಲ್ಲಿ ಪ್ರಧಾನ ಮಾಡಲಾಗುವುದು.

7) ಪ್ರಶಸ್ತಿಯು ಪ್ರಶಂಸಾ ಪತ್ರ, ಸಾಲು, ಗಂಧದಹಾರ, ಫಲಪುಷ್ಪ ಹಾಗೂ ರೂ. 25,000.00 ಮೊತ್ತದ ನಗದನ್ನು ಒಳಗೊಂಡಿರುತ್ತದೆ.

8) ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ವ್ಯಕ್ತಿಯು ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರತಕ್ಕದ್ದಲ್ಲ.

9) ಮೊದಲನೇ ಹಂತದಲ್ಲಿ ಅರ್ಜಿಗಳನ್ನು ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಇವರಿಗೆ ಸಲ್ಲಿಸಬೇಕು. ಅಂತಹ ಅರ್ಜಿಗಳನ್ನು, ಜಿಲ್ಲಾಧಿಕಾರಿಗಳು ಅವರ ಹಂತದಲ್ಲಿ ಪರಿಶೀಲಿಸಿ ಸೂಕ್ತ ವ್ಯಕ್ತಿಗಳನ್ನು ಗುರುತಿಸಿ ಪ್ರತಿ ಜಿಲ್ಲೆಗೆ ಒಬ್ಬರಂತೆ (ಒಂದು ಪಕ್ಷ, ಒಂದೇ ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚು ಅರ್ಹ ವ್ಯಕ್ತಿಗಳು ಇದ್ದಲ್ಲಿ ವಯಸ್ಸಿನ ಆಧಾರದ ಮೇಲೆ) ಶಿಫಾರಸ್ಸು ಮಾಡಿ ಡಿಸೆಂಬರ್ ಅಂತ್ಯದೊಳಗೆ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸಿಕೊಡತಕ್ಕದ್ದು.

10) ರಾಜ್ಯ ಮಟ್ಟದಲ್ಲಿ ಸಾಮಾಜಿಕ ಸೇವೆ ಸಲ್ಲಿಸುತ್ತಿರುವ ಅರ್ಹ ವ್ಯಕ್ತಿಗಳು ನೇರವಾಗಿ ಅರ್ಜಿಗಳನ್ನು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಬಹುದು.

11) ಎರಡನೇ ಹಂತದಲ್ಲಿ ಜಿಲ್ಲಾಧಿಕಾರಿಗಳಿಂದ ಶಿಫಾರಸ್ಸಾದಂತಹ ಅರ್ಜಿಗಳು ಹಾಗೂ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಇವರಿಗೆ ನೇರವಾಗಿ ಸಲ್ಲಿಸಲ್ಪಟ್ಟ ಎಲ್ಲಾ ಅರ್ಜಿಗಳನ್ನು ಆಯುಕ್ತರು ಪರಿಶೀಲಿಸಿ ಪ್ರಶಸ್ತಿಗೆ ಅರ್ಹರೆಂದು ಕಂಡುಬರುವ ವ್ಯಕ್ತಿಗಳ ಪಟ್ಟಿಯನ್ನು ಜನವರಿ ತಿಂಗಳ ಅಂತ್ಯದೊಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

12) ಅಂತಹ ಅರ್ಜಿಗಳನ್ನು ಪರಿಶೀಲಿಸಿ ಅಂತಿಮ ನಿಲುವು ತಾಳಲು ಈ ಕೆಳಕಂಡ ಸಮಿತಿ ರಚಿಸಲಾಗಿದೆ :-

1	ಸರ್ಕಾರದಿಂದ ನಾಮ ನಿರ್ದೇಶನ ಮಾಡಲ್ಪಟ್ಟ ತಜ್ಞರು	ಅಧ್ಯಕ್ಷರು
2	ಸರ್ಕಾರದಿಂದ ಕಾಲಕಾಲಕ್ಕೆ ನಾಮ ನಿರ್ದೇಶನ ಮಾಡಲ್ಪಟ್ಟ ಇಬ್ಬರು ವ್ಯಕ್ತಿಗಳು	ಸದಸ್ಯರು
3	ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ	ಸದಸ್ಯರು
4	ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	ಸದಸ್ಯರು
5	ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ	ಸದಸ್ಯರು
6	ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ	ಸದಸ್ಯರು
7	ಜಂಟಿ ನಿರ್ದೇಶಕರು (ಆಡಳಿತ), ಸಮಾಜ ಕಲ್ಯಾಣ ಇಲಾಖೆ	ಸದಸ್ಯ-ಕಾರ್ಯದರ್ಶಿ

13) ಈ ಪ್ರಶಸ್ತಿಗಳಿಗೆ ವ್ಯಕ್ತಿಗಳನ್ನು ಆಯ್ಕೆ ಮಾಡುವಲ್ಲಿ ಸಮಿತಿಯು ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು:-

1) ಪ್ರಶಸ್ತಿಗೆ ಆಯ್ಕೆ ಮಾಡುವ ವ್ಯಕ್ತಿಯು ಸಾಮಾಜಿಕ ಕ್ಷೇತ್ರದಲ್ಲಿ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಸೇವೆ ಸಲ್ಲಿಸಿದ ವ್ಯಕ್ತಿಯಾಗಿದ್ದು ಜನಸಾಮಾನ್ಯರಲ್ಲಿ ಸ್ವಯಂ ಸೇವಕರಾಗಿ ಮಾನ್ಯತೆ, ಕೀರ್ತಿ/ಪ್ರಖ್ಯಾತಿ ಹೊಂದಿರಬೇಕು. ಅವರು ಸಾಧನೆ ಮಾಡಿರುವ ಸಾಧನೆಗಳ ಬಗ್ಗೆ ದಾಖಲಾತಿ ಹೊಂದಿರಬೇಕು. ಪ್ರಮುಖವಾಗಿ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದವರ ಶೈಕ್ಷಣಿಕ ಪ್ರಗತಿ ಹಾಗೂ ಆರ್ಥಿಕವಾಗಿ ಸಧೃಡಗೊಳಿಸಲು ಸ್ವಯಂ ಪ್ರೇರಣೆಯಿಂದ ದುಡಿಯುವ ವ್ಯಕ್ತಿಯಾಗಿರಬೇಕು.

2) ಪರಿಶಿಷ್ಟ ಜಾತಿಯವರು ಎದುರಿಸುತ್ತಿರುವ ಅಸ್ಪೃಶ್ಯತೆ ಹಾಗೂ ಅವರ ಮೇಲೆ ನಡೆಯುವ ದೌರ್ಜನ್ಯ ಇವುಗಳ ನಿರ್ಮೂಲನೆ ಹಾಗೂ ಸಮಾಜದಲ್ಲಿ ಸಾಮರಸ್ಯ ವಾತಾವರಣ ಮೂಡಿಸುವುದು ಅಥವಾ ಅಂತಹ ದೌರ್ಜನ್ಯ ನಿಯಂತ್ರಿಸಲು ಸಹಕಾರಿಯಾಗುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಶ್ರಮಿಸುವ ವ್ಯಕ್ತಿಯಾಗಿರಬೇಕು.

3) ಡಾ॥ ಬಿ.ಆರ್. ಅಂಬೇಡ್ಕರ್ ಮತ್ತು ಡಾ॥ ಬಾಬು ಜಗಜೀವನ ರಾಂ ಇವರ ತತ್ವ ಹಾಗೂ ಆದರ್ಶಗಳನ್ನು ಸಾಕಾರಗೊಳಿಸುವಂತಹ ಯಾವುದೇ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಜನರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ನಿಟ್ಟಿನಲ್ಲಿ ಶ್ರಮಿಸುವ ವ್ಯಕ್ತಿಯಾಗಿರಬೇಕು.

14) ಸದರಿ ಸಮಿತಿಯು ಫೆಬ್ರವರಿ/ಮಾರ್ಚಿ ತಿಂಗಳ ಒಳಗಾಗಿ ಆಯ್ಕೆ ಪ್ರಕ್ರಿಯೆ ಮುಗಿಸಿ ಅರ್ಹ ವ್ಯಕ್ತಿಗಳ ಪಟ್ಟಿಯನ್ನು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

15) ಈ ಕುರಿತಂತೆ ಸರ್ಕಾರ ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ.

16) ಆ ಸಂಬಂಧದ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2225-01-102-0-09 ಹಾಗೂ ಪ್ರತಿ ವರ್ಷ ಪರಿಶಿಷ್ಟ ಜಾತಿ ಕ್ರೋಢೀಕೃತ ಯೋಜನೆ ಇವುಗಳ ಅಡಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಲೋಕನಾಥರಾವ್,

ಸರ್ಕಾರದ ಅಧೀನ ಕಾರ್ಯದರ್ಶಿ-2,

ಸಮಾಜ ಕಲ್ಯಾಣ ಇಲಾಖೆ.

ಡಾ॥ ಬಿ.ಆರ್. ಅಂಬೇಡ್ಕರ್ ಹಾಗೂ ಡಾ॥ ಬಾಬು ಜಗಜೀವನ ರಾಂ ರವರ ಪ್ರಶಸ್ತಿ ಬಗ್ಗೆ ಅರ್ಜಿ

1	ಹೆಸರು	
2	ಲಿಂಗ : ಸ್ತ್ರೀ/ಪುರುಷ	
3	ಹುಟ್ಟಿದ ದಿನಾಂಕ, ವಯಸ್ಸು	
4	ಹುಟ್ಟಿದ ಸ್ಥಳ (ಗೊತ್ತಿದ್ದಲ್ಲಿ)	
5	ರಾಷ್ಟ್ರೀಯತೆ	
6	ಅಂಚೆ ವಿಳಾಸ ದೂರವಾಣಿ ಸಂಖ್ಯೆ : ಇ-ಮೇಲ್ ವಿಳಾಸ ಇತ್ಯಾದಿ	
7	ಧರ್ಮ	
8	ಜಾತಿ (ಪ.ಜಾತಿ/ಪ.ವರ್ಗ/ಇತರೆ/ಸಾಮಾನ್ಯ)	
9	ಉದ್ಯೋಗ (ಪದನಾಮ/ಕಛೇರಿಯ ವಿಳಾಸ)	
10	ಕ್ರಿಯೆ/ಸಾಧನೆಯ ಕ್ಷೇತ್ರ ಕಲೆ/ಕ್ರೀಡೆ/ಸಾಮಾಜಿಕ ಕಾರ್ಯ/ಇತ್ಯಾದಿ	
11	ಡಾ॥ ಬಿ.ಆರ್. ಅಂಬೇಡ್ಕರ್ / ಡಾ॥ ಬಾಬು ಜಗಜೀವನ ರಾಂ ಪ್ರಶಸ್ತಿ	
12	ಈ ಹಿಂದೆ ಪಡೆದ ಪ್ರಶಸ್ತಿಗಳ ವಿವರ	
13	ಪ.ಜಾತಿ/ಪ.ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ ಶ್ರಮಿಸಿದವರ ಸವಿವರವಾದ ವಿವರ ಹಾಗೂ ಪೂರಕ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ಕಳುಹಿಸುವುದು	

ಪಿ.ಆರ್. 28

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬಳ್ಳಾರಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾ ಯೋಜನೆ (ಪರಿಷ್ಕೃತ-1) ನ್ನು ಸರ್ಕಾರದ ಅಂತಿಮ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ನಅಇ 214 ಬೆಮಪ್ರಾ 2008, ದಿ: 28-08-2008.

2. ಸರ್ಕಾರಿ ಆದೇಶ ಸಂಖ್ಯೆ : ನಅಇ 196 ಬೆಮಪ್ರಾ 2008, ದಿ: 15-12-2008.

3. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ಇವರ ಪತ್ರ ಸಂಖ್ಯೆ : ಬನಪ್ರಾ:ಮಾ.ಪ್ಲಾ (ಪರಿಷ್ಕೃತ-1) (ರಿ) 2006-07/2431, ದಿನಾಂಕ 23-3-2010.

4. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಇವರ ಏಕ ಕಡತ ಸಂಖ್ಯೆ : ನಗ್ರಾಯೋ:7: ಉನಿ (ಯೋವಿ): ಬಳ್ಳಾರಿ : ಮ.ಯೋ: (ಪ-1) : ಅಂತಿಮ : 2010 ದಿನಾಂಕ : 10-05-2010 ಮತ್ತು 10-11-2010 ರಲ್ಲಿ ನೀಡಿರುವ ಅಭಿಪ್ರಾಯ.

5. ಜಿಲ್ಲಾ ಉಸ್ತುವಾರಿ ಸಚಿವರು ಬಳ್ಳಾರಿ ಹಾಗೂ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರ ನಡವಳಿ, ದಿನಾಂಕ 7-6-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1) ರ ಸರ್ಕಾರದ ಆದೇಶದಲ್ಲಿ ಬಳ್ಳಾರಿ ನಗರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾದ ಮಹಾ ಯೋಜನೆ ಪರಿಷ್ಕೃತ-1 ಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 61ರ ಕಲಂ 13(1) ರನ್ವಯ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ. ಕ್ರಮಾಂಕ (2)ರ ಆದೇಶದಲ್ಲಿ ಸರ್ಕಾರವು ಬಳ್ಳಾರಿ-ಸಂಡೂರು ಸ್ಥಳೀಯ ಯೋಜನಾ ಪ್ರದೇಶವನ್ನು ಉಪವಿಭಜನೆ ಮಾಡಿ ಒಟ್ಟು 31 ಗ್ರಾಮಗಳನ್ನು ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿ, ಸದರಿ ಪ್ರದೇಶಕ್ಕೆ ಸೇರಿಸಿ ಉಳಿದ ಪ್ರದೇಶವನ್ನು ಬಳ್ಳಾರಿ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿದೆ. ಆದ್ದರಿಂದ, ಬಳ್ಳಾರಿ ಸ್ಥಳೀಯ ಯೋಜನಾ ಪ್ರದೇಶವು 18 ಗ್ರಾಮಗಳನ್ನೊಳಗೊಂಡು ಕ್ಷೇತ್ರ ರೂ.267.25 ಚದುರ ಕಿ.ಮೀಟರ್ ಆಗಿದ್ದು, ಈ ಪ್ರದೇಶಕ್ಕೆ ಅಂತಿಮ ಮಹಾಯೋಜನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ

1961ರ ಕಲಂ 13(1) ರನ್ವಯ ಕ್ರಮ ಜರುಗಿಸಿ, ಉಲ್ಲೇಖ (3)ರ ಪತ್ರದಲ್ಲಿ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರವು ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರ ಮುಖಾಂತರ ಸರ್ಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಪರಶೀಲಿಸಿದಂತೆ, ಪ್ರಾಧಿಕಾರವು ತಾತ್ಕಾಲಿಕ ಅನುಮೋದನೆಗೊಂಡಿರುವ ಮಹಾಯೋಜನೆ ಪರಿಷ್ಕೃತ-1ರ ಕುರಿತಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1) ರನ್ವಯ ಕ್ರಮ ಜರುಗಿಸಿ ಸಾರ್ವಜನಿಕ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಿ ಪತ್ರಿಕಾ ಪ್ರಕಟಣೆಗಳನ್ನು ಮತ್ತು ದಿನಾಂಕ 2-10-2008ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆ ಹೊರಡಿಸಲಾಗಿದೆ. ಅದರನ್ವಯ ನಿಗಧಿತ ಅವಧಿಯಲ್ಲಿ ಸ್ವೀಕರಿಸಲಾದ 609 ಆಕ್ಷೇಪಣೆಗಳನ್ನು ಪರಿಶೀಲಿಸಿ, ಸರ್ಕಾರದ ಇತ್ತೀಚಿನ ಆದೇಶದಂತೆ ಮಹಾ ಯೋಜನೆಯನ್ನು ಮಹಾನಗರಪಾಲಿಕೆ, ಬಳ್ಳಾರಿ ಇವರಿಗೆ ಕಳುಹಿಸಿ, ಸದರಿಯವರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ದಿನಾಂಕ 22-2-2010 ರಂದು ನಡೆದ ಬಳ್ಳಾರಿ ಮಹಾನಗರಪಾಲಿಕೆ ಸಾಮಾನ್ಯ ಸಭೆಯಲ್ಲಿ ಮಹಾ ಯೋಜನೆ ಪರಿಷ್ಕೃತ-1 ಕ್ಕೆ ಯಾವುದೇ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವುದಿಲ್ಲವೆಂದು ಮತ್ತು ಸಾರ್ವಜನಿಕರಿಂದ ಸ್ವೀಕರಿಸಿದ ಆಕ್ಷೇಪಣೆಗಳನ್ನು ಪ್ರಾಧಿಕಾರವು ದಿನಾಂಕ 24-9-2009 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ತೆಗೆದುಕೊಂಡ ತೀರ್ಮಾನದನ್ವಯ ಮಹಾಯೋಜನೆಯಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(2) ರನ್ವಯ ಸರ್ಕಾರದ ಅಂತಿಮ ಅನುಮೋದನೆ ಸಲ್ಲಿಸಲು ತೀರ್ಮಾನಿಸಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ.

ಸದರಿ ಪ್ರಸ್ತಾವನೆಯಲ್ಲಿ ಬಳ್ಳಾರಿ ನಗರದ ಜನಸಂಖ್ಯೆಯು 2021 ರಲ್ಲಿ 760,000 ಗಳಷ್ಟು ಆಗಬಹುದೆಂದು ನಿರೀಕ್ಷಿಸಿ ಮಹಾಯೋಜನೆಯನ್ನು ತಯಾರಿಸಿದ್ದು, ಸ್ಥಳೀಯ ಯೋಜನಾ ಪ್ರದೇಶದ ಒಟ್ಟು 15,023.67 ಹೆಕ್ಟೇರ್ ಪ್ರದೇಶವನ್ನು ನಗರದ ಅಭಿವೃದ್ಧಿಗಾಗಿ ನಗರೀಕರಣ ಎಲ್ಲೆಯೆಂದು ಪ್ರಸ್ತಾಪಿಸಿ, ಪರಿಷ್ಕೃತ-1ರ ಮಹಾಯೋಜನೆಯಲ್ಲಿ ರೂಪಿಸಲಾಗಿದೆ. ಬಳ್ಳಾರಿ ಜನಸಂಖ್ಯೆಯ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಹಾಲಿ ಬೆಳವಣಿಗೆಗಳ ಗತಿ, ಹವಾಗುಣ ರಸ್ತೆಗಳ ಹಾಲಿ ಪರಿಚಲನೆ, ವ್ಯವಸ್ಥೆಯ ಸಮಸ್ಯೆಗಳನ್ನು ವಿಶ್ಲೇಷಿಸಿ, ಯೋಜನಾ ತತ್ವಗಳಿಗೆ ಅನುಗುಣವಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12ರಲ್ಲಿ ನಿಗದಿಪಡಿಸಿರುವ ಅಂಶಗಳನ್ನು ಪರಿಗಣಿಸಿ, ಪಟ್ಟಣದ ಬೆಳವಣಿಗೆಗೆ ವಿವಿಧ ಉಪಯೋಗಗಳಿಗೆ ಬೇಕಾಗಬಹುದಾದ ಭೂಮಿಯನ್ನು ಈ ಕೆಳಗಿನಂತೆ ಕಾಯ್ದಿರಿಸಿ ಪರಿಷ್ಕೃತ-1ರ ಯೋಜನೆಯನ್ನು ತಯಾರಿಸಲಾಗಿದೆ.

ಪಟ್ಟಣದ ಯೋಜಿತ ಬೆಳವಣಿಗೆಗಾಗಿ ಪ್ರಸ್ತಾಪಿಸಿರುವ 15023.67 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 5953.38 ಹೆಕ್ಟೇರ್ ಶೇ. 39.63, ವಾಣಿಜ್ಯಕ್ಕಾಗಿ 787.04 ಹೆಕ್ಟೇರ್ ಶೇ. 5.24, ಕೈಗಾರಿಕೆಗಾಗಿ 3599.06 ಹೆಕ್ಟೇರ್ ಶೇ. 23.96, ಸಾರ್ವಜನಿಕ ಅರೆ ಸಾರ್ವಜನಿಕ ಉಪಯೋಗಕ್ಕೆ 769.86 ಹೆಕ್ಟೇರ್, ಶೇ. 5.12, ಉದ್ಯಾನವನ ಮತ್ತು ಬಯಲು ಜಾಗಕ್ಕಾಗಿ 1706.51 ಹೆಕ್ಟೇರ್ ಶೇ. 11.38 ಹಾಗೂ ಸಾರಿಗೆ/ಸಂಪರ್ಕ ವಲಯಕ್ಕೆ 1950.05 ಹೆಕ್ಟೇರ್ ಶೇ. 12.98, ನಾಗರೀಕ ಸೌಲಭ್ಯಕ್ಕಾಗಿ 179.31 ಹೆಕ್ಟೇರ್ ಶೇ. 1.19, ಪುರಾತತ್ವ ಸ್ಮಾರಕಕ್ಕಾಗಿ 75.46 ಹೆಕ್ಟೇರ್ ಶೇ. 0.50 ಪ್ರದೇಶವನ್ನು ನಿಗದಿಪಡಿಸಲಾಗಿದೆ. ಮಹಾ ಯೋಜನೆ ಪರಿಷ್ಕೃತ-1ನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ-5ರ ನಡುವಳಿಯಲ್ಲಿ ಬಳ್ಳಾರಿ ನಗರದ ಮಾಸ್ಟರ್ ಪ್ಲಾನ್‌ನಲ್ಲಿ ಘನ ತ್ಯಾಜ್ಯ ವಸ್ತು ನಿರ್ವಹಣೆಗಾಗಿ ಸುಮಾರು 60 ಎಕರೆ ಜಮೀನನ್ನು ಪಬ್ಲಿಕ್ ಯುಟಿಲಿಟಿ ವಲಯಕ್ಕಾಗಿ ಅಳವಡಿಸಿರುವುದನ್ನು ಮಹಾನಗರಪಾಲಿಕೆ ರವರು ಸದರಿ ಜಮೀನನ್ನು ವಸತಿ ಉದ್ದೇಶಕ್ಕಾಗಿ ಬಳಸಲು ಉದ್ದೇಶಿಸಿದ್ದು, ಘನ ತ್ಯಾಜ್ಯ ವಸ್ತು ನಿರ್ವಹಣೆಗಾಗಿ ನಗರ ಹೊರ ಪ್ರದೇಶದಲ್ಲಿ ಪ್ರತ್ಯೇಕವಾಗಿ 80 ಎಕರೆ ಜಮೀನನ್ನು ಖರೀದಿಸಿರುವ ಪ್ರಯುಕ್ತ ಸದರಿ 60 ಎಕರೆ ಜಮೀನನ್ನು ವಸತಿ ಉದ್ದೇಶಕ್ಕಾಗಿ ಮಾಸ್ಟರ್ ಪ್ಲಾನ್ ನಲ್ಲಿ ಸೇರ್ಪಡೆಗೊಳಿಸಲು ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿರವರು ಬಳ್ಳಾರಿ ಜಿಲ್ಲೆಯ ಕೊಳಗಲ್ಲು ಗ್ರಾಮದ ಸರ್ವೆ ನಂಬರುಗಳನ್ನು ಒಳಗೊಂಡ ಜಮೀನುಗಳನ್ನು ಕೆ.ಐ.ಎ.ಡಿ.ಬಿ., ಕಾಯ್ದೆ 1966ರ ಕಲಂ 3(1)ರ ಪ್ರಕಾರ ಕೈಗಾರಿಕಾ ಉದ್ದೇಶಕ್ಕಾಗಿ ಭೂಸ್ವಾಧೀನ ಮಾಡಲು ಅಧಿಸೂಚನೆ ಹೊರಡಿಸಿದ್ದು, ಸದರಿ ಜಮೀನುಗಳನ್ನು ಈಗಾಗಲೇ ನಗರಾಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್‌ನಲ್ಲಿ ಕೃಷಿ/ಸಾರ್ವಜನಿಕ/ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಿದ್ದು, ಸದರಿ ಜಮೀನನ್ನು ಕೆ.ಐ.ಎ.ಡಿ.ಬಿ., ರವರು ಈಗಾಗಲೇ ಹೊರಡಿಸಿರುವ ಅಧಿಸೂಚನೆಯಂತೆ ಕೈಗಾರಿಕಾ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಿ ಮಾಸ್ಟರ್‌ಪ್ಲಾನ್ ನಲ್ಲಿ ಸೇರಿಸಲು ಸರ್ಕಾರವನ್ನು ಕೋರಿರುತ್ತಾರೆ.

ಸರ್ಕಾರವು ಮೇಲ್ಕಂಡ ವಿಷಯವನ್ನು ಪರಿಶೀಲಿಸಿ, ಪ್ರಾಧಿಕಾರವು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಮುಖಾಂತರ ಸಲ್ಲಿಸಿದ ಮಹಾಯೋಜನೆ ಪರಿಷ್ಕೃತ-1ರಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಪ್ರಾಧಿಕಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಮತ್ತು ಅಗತ್ಯವಿರುವ ಭೂ ಬದಲಾವಣೆ ಉಪಯೋಗಗಳನ್ನು ಮಾಡಿಕೊಂಡು ನಂತರ ಪೂರ್ಣ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳನ್ನು ಮಹಾಯೋಜನೆಯ ಪರಿಷ್ಕೃತ-1 ರಲ್ಲಿ ಅಳವಡಿಸಿಕೊಂಡು ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ.

1) Group Housing Definition ತೆಗೆದು ಹಾಕಲಾಗಿದೆ.
2) ಪ್ರಾರಂಪರಿಕ ಕಟ್ಟಡಗಳ ಸುತ್ತ ಂಡಿಜಚಿ ಠಜಿ ಖಿಠಿಬಿಚಿಟ ಛಿಠಟಣಡಿಠಟ ಅಡಿಯಲ್ಲಿ ಕೆಲವು ನಿಬಂಧನೆ ಅಳವಡಿಸಲಾಗಿದ್ದು, ಅದರ ಬದಲಾಗಿ ಘೋಷಿತ ಪಾರಂಪರಿಕ ಕಟ್ಟಡಗಳಿಗೆ AMASR (ತಿದ್ದುಪಡಿ) ಕಾಯ್ದೆಯನ್ವಯ ನಿಬಂಧನೆಗಳನ್ನು ಅಳವಡಿಸಲಾಗಿದೆ.
3) ವಸತಿ ಬಡಾವಣೆಗಳ ಅನುಮೋದನೆ ಕುರಿತ ನಿಯಮಾವಳಿಗಳನ್ನು ಮಾನ್ಯ ನಗರಾಭಿವೃದ್ಧಿ ಸಚಿವರು ಸೂಚಿಸಿರುವಂತೆ ಅಳವಡಿಸಲಾಗಿದೆ.
4) ನೆಲ ಮಹಡಿ (Basement) ಯಲ್ಲಿ ಅನುಮೋದಿಸಬಹುದಾದ ಉಪಯೋಗಗಳನ್ನು ಬದಲಾವಣೆ ಮಾಡಲಾಗಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 60 ಗುಅಪ್ರಾ 2010, ಬೆಂಗಳೂರು, ದಿನಾಂಕ : 01-12-2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಳ್ಳಾರಿ ನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾ ಯೋಜನೆಗೆ (ಪರಿಷ್ಕೃತ-1) ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 13(3) ರನ್ವಯ ಅಂತಿಮ ಅನುಮೋದನೆಯನ್ನು ನೀಡಲಾಗಿದೆ.

ಮಹಾ ಯೋಜನೆ (ಪರಿಷ್ಕೃತ-1) ಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಂ. ಹಿರೇಮಠ,

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 29

AGRICULTURE SECRETARIAT

Sub : Constitution of Expert Committee to study potentials of Agricultural Education and work load of teachers-reg.

- - - -

PREAMBLE :-

Karnataka State has three Agricultural Universities functioning at Bangalore, Dharwad and Raichur, besides establishment of fourth Agriculture University at Shimoga has been notified on 26-11-2010. The State Agriculture Universities have the responsibility of producing required human resource through UG and PG teachings, besides carrying out location specific, problem oriented research to solve the agriculture related issues and deliver the technologies to the farming community through the Development Department of the State Government. Although these Universities are functioning from several decades, assessment of manpower required for various agriculture and related sectors is not available in any studies. Further, demand for establishment of new colleges is being put forth by different sections of the society. On any average, the Universities produce 1200 undergraduates wherein nearly 50% of them join master degree programme of which 50% will normally seek admission to doctoral degree programmes. In the recent years, the graduates from State Agricultural Universities are being employed not only in Universities, Agri. Departments and also in various input agencies, sugar factories, banks etc., The Agriculture Assistants positions have been periodically upgraded and is being treated as dying cadre resulting in big vaccum in effective transfer of technology to the farming community. Further, it is felt that, intermediatory extension personnel skills/trained technicians/entrepreneurs are to be promoted in Agriculture and allied sectors. Therefore, there is a need for human resource assessment in line with the demand of graduates from agriculture and related sectors. Hence, this order.

GOVERNMENT ORDER No. AHD 320 AUM 2010, BANGALORE, DATED : 29/12/2010

The Government are pleased to appoint a Committee under the Chairmanship of Dr. S. Bisalaiah, Former Vice Chancellor, UAS, Bangalore alongwith following members, to make suitable recommendations to Government:-

1. Dr. M.N. Sheelavanthar - Former Vice Chancellor, UAS, Bangalore.
2. Dr. M.A. Singlachar - Former Director of Research, UAS, Bangalore.
3. Dr. T.K. Prabhakarashetty - Former Director of Extension, UAS, Bangalore.
4. Dr. H. Chandrashekar - Co-ordinator, PPMC, UAS, Bangalore

TERMS OF REFERENCE :-

1. To assess the requirement of establishment of New agricultural Universities/Agricultural Colleges and KVKs in different parts of the State.
2. To study the existing man power requirement to Agricultural Universities, Agri. Department, Input agencies, Sugar industries, Banking sector, State Development departments etc., and suggest the future admission pattern to meet the requirement on demand driven approach for the next ten years period.
3. To suggest, starting of appropriate Diploma/Certificate courses to meet the field functionary/intermediary man power requirement;
4. To assess the work load of teachers in Agricultural/Horticultural/KVAFS Universities as per the UGC and accreditation norms;

2. The committee shall submit its final report by the end of April 2011 for the first three above terms, in order to facilitate to implement the recommendations for the ensuing academic year. For the fourth point, the Committee shall submit its report before the end of December 2011.

By Order and in the name of the Governor of Karnataka
(G.K. GURANI)
Under secretary to Government.
Department of Agriculture (Services).

PR 147

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : 2007-08ನೇ ಸಾಲಿನಲ್ಲಿ ಕಬ್ಬು ಬೆಳೆದ ರೈತರಿಗೆ ಹಾಗೂ ಸಕ್ಕರೆ ಕಾರ್ಖಾನೆಗಳಿಗೆ ರಾಜ್ಯ ಸರ್ಕಾರದಿಂದ ವಿಶೇಷ ನೆರವು.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಎಸ್‌ಜಿಎಫ್ 2008 (ಭಾ-2), ದಿನಾಂಕ: 12-03-2008.
2) ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಎಸ್‌ಜಿಎಫ್ 2008 (ಭಾ-2), ದಿನಾಂಕ:13-06-2008.
3) ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಎಸ್‌ಜಿಎಫ್ 2008 (ಭಾ-2(2)), ದಿನಾಂಕ: 28-08-2008.
4) ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಎಸ್‌ಜಿಎಫ್ 2008 (ಭಾ-2(3)), ದಿನಾಂಕ: 16-12-2008.
5) ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಎಸ್‌ಜಿಎಫ್ 2008 (4) ದಿನಾಂಕ: 02-01-2009.
6) ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಎಸ್‌ಜಿಎಫ್ 2008 (5) ದಿನಾಂಕ: 19-01-2009.
7) ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಎಸ್‌ಜಿಎಫ್ 2008 (6) ದಿನಾಂಕ: 07-07-2009.
8) ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಎಸ್‌ಜಿಎಫ್ 2008 (7) ದಿನಾಂಕ: 07-12-2009.

9) ಆಯುಕ್ತರು ಕಬ್ಬು ಅಭಿವೃದ್ಧಿರವರ ಪತ್ರಗಳು ದಿನಾಂಕ 08-05-2009., 09-06-2009, 30-06-2009, 30-06-2009, 20-07-2009 ಮತ್ತು 22-07-2009.

***

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿರುವ ಸರ್ಕಾರದ ಆದೇಶದಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು 2007-08ನೇ ಸಾಲಿನ ಹಂಗಾಮಿನಲ್ಲಿ ದಿನಾಂಕ: 31-03-2008ರ ಅಂತ್ಯಕ್ಕೆ 12 ತಿಂಗಳು ಮೀರಿ ಪಕ್ವವಾದ ಎಲ್ಲಾ ಕಬ್ಬನ್ನು ನುರಿಸಬೇಕೆಂಬ ಹಿನ್ನೆಲೆಯಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕೆಲವು ವಿನಾಯಿತಿ ಮತ್ತು ಸಹಾಯಧನ ಸೌಲಭ್ಯಗಳನ್ನು ನೀಡಲಾಗುವುದೆಂದು ಆದೇಶಿಸಲಾಗಿದೆ.

ಮೇಲೆ ಓದಲಾದ (2)ರಲ್ಲಿರುವ ಆದೇಶದಲ್ಲಿ 2.00 ಕೋಟಿ ರೂ. ಗಳನ್ನು ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಗೆ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (3)ರಲ್ಲಿರುವ ಆದೇಶದಲ್ಲಿ 100.59 ಲಕ್ಷ ರೂ. ಗಳನ್ನು ಮೈಸೂರು ಪೇಪರ್ ಮಿಲ್ಸ್ ಲಿ., ರವರಿಗೆ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (4) ರಲ್ಲಿರುವ ಆದೇಶದಲ್ಲಿ 6,64,76,652/- ರೂ. ಗಳನ್ನು ನಂದಿ ಸ.ಸ. ಕಾರ್ಖಾನೆ ಮತ್ತು ದೂದ್‌ಗಂಗಾ ಸ.ಸ. ಕಾ. ಈ ಎರಡು ಸಕ್ಕರೆ ಕಾರ್ಖಾನೆಗಳಿಗೆ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (5)ರಲ್ಲಿರುವ ಆದೇಶದಲ್ಲಿ ವಿಸ್ತರಿಸಿದ ಅವಧಿಯಲ್ಲಿ ನುರಿಸಿದ ಕಬ್ಬಿಗೆ ರೂ. 100/- ಗಳ ಸಹಾಯಧನ ಬಾಬ್ತು ಶೇ. 50 ರಷ್ಟು 11,15,00,000/- ರೂ. ಗಳನ್ನು ಸಾಗಾಣಿಕೆ ಸಹಾಯಧನ 7,25,00,000/- ರೂ. ಗಳನ್ನು ಒಟ್ಟು ಸೇರಿ 18,40,00,000/- ರೂ. ಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (6)ರಲ್ಲಿರುವ ಆದೇಶದಲ್ಲಿ 100/- ರೂ. ಗಳ ಸಹಾಯಧನ ಬಾಬ್ತು 4,90,05,135/- ರೂ. ಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (7)ರಲ್ಲಿರುವ ಆದೇಶದಲ್ಲಿ 3,69,77,708/- ರೂ. ಗಳನ್ನು ಸಾಗಾಣಿಕೆ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (8)ರಲ್ಲಿರುವ ಆದೇಶದಲ್ಲಿ 3,87,56,200/- ರೂ. ಗಳ ರಫ್ತು ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (9)ರಲ್ಲಿರುವ ಆಯುಕ್ತರು ಕಬ್ಬು ಅಭಿವೃದ್ಧಿರವರ ಪತ್ರಗಳಲ್ಲಿ ರಾಜ್ಯದ 6 ಸಕ್ಕರೆ ಕಾರ್ಖಾನೆಗಳು 2007-08ನೇ ಸಾಲಿನಲ್ಲಿ ವಿಸ್ತರಿಸಿದ ಅವಧಿಯಲ್ಲಿ ಕಬ್ಬು ನುರಿಸಿದ್ದು, ಮತ್ತು 30 ಕಿ.ಮೀ. ಗೆ ಮೀರಿದ ದೂರದಿಂದ ಕಬ್ಬು ಸಾಗಾಣಿಕೆ ಮಾಡಿಕೊಂಡಿದ್ದು ಹಾಗೂ ಸಕ್ಕರೆಯನ್ನು ರಫ್ತು ಮಾಡಲಾಗಿದ್ದು ಈ ಸಂಬಂಧ ದಿನಾಂಕ 12-03-2008ರ ಸರ್ಕಾರದ ಆದೇಶದಂತೆ ವಿಸ್ತರಿಸಿದ ಅವಧಿಯಲ್ಲಿ ನುರಿಸಿದ್ದ ಕಬ್ಬಿಗೆ ಸಹಾಯಧನ, ಸಾಗಾಣಿಕೆ ಸಹಾಯಧನ ಮತ್ತು ರಫ್ತು ಸಹಾಯಧನವನ್ನು ಕಾರ್ಖಾನೆಗಳಿಗೆ ಬಿಡುಗಡೆ ಮಾಡಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆಗೆ ಶಿಫಾರಸ್ಸು ಮಾಡಿದ್ದಾರೆ.

ಆಯುಕ್ತರು ಕಬ್ಬು ಅಭಿವೃದ್ಧಿರವರ ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಎಸ್‌ಜಿಎಫ್ 2008 (8), ಬೆಂಗಳೂರು, ದಿನಾಂಕ: 21-12-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2007-08ನೇ ಸಾಲಿನಲ್ಲಿ ಈ ಕೆಳಕಂಡ 6 ಸಕ್ಕರೆ ಕಾರ್ಖಾನೆಗಳು 30 ಕಿ.ಮೀ. ಹೊರಗಿನ ದೂರದಿಂದ ಸಾಗಾಣಿಕೆ ಮಾಡಿಕೊಂಡ ಕಬ್ಬಿಗೆ ಪ್ರತಿ ಟನ್‌ಗೆ ಪ್ರತಿ ಕಿ.ಮೀ.ಗೆ ರೂ. 2/- ರಂತೆ ಸಾಗಾಣಿಕೆ ಸಹಾಯಧನ ರೂ. 1,36,52,873/- ಗಳನ್ನು (ಒಂದು ಕೋಟಿ ಮೂವತ್ತಾರು ಲಕ್ಷ, ಐವತ್ತೆರಡು ಸಾವಿರದ ಎಂಟುನೂರ ಎಪ್ಪತ್ತ್ ಮೂರು ರೂ. ಗಳು ಮಾತ್ರ) ಸಾಗಾಣಿಕೆ ಸಹಾಯಧನವಾಗಿ ಈ ಕೆಳಕಂಡ ಸಕ್ಕರೆ ಕಾರ್ಖಾನೆಗಳಿಗೆ ನೀಡುವ ಸಲುವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಕ್ರ. ಸಂ.	ಕಾರ್ಖಾನೆ ಹೆಸರು	ಸಾಗಾಣಿಕೆ ಸಹಾಯಧನ (ರೂ.ಗಳಲ್ಲಿ)	ಜಿಲ್ಲಾಧಿಕಾರಿ/ಜಿಲ್ಲೆ	ಯಾರಿಗೆ ಪಾವತಿ
1	ಕೊಥಾರಿ ಶುಗರ್ಸ್ (ಲಿ) (ಪಾಂಡವಪುರ ಎಸ್.ಎಸ್.ಕೆ ಗುತ್ತಿಗೆ ಪಡೆದಿದ್ದಾರೆ)	42,299-00	ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ	ಕಾರ್ಖಾನೆಗೆ
2	ಸದಾಶಿವ ಶುಗರ್ಸ್ (ಲಿ)	11,21,004-00	ಜಿಲ್ಲಾಧಿಕಾರಿ, ಬಾಗಲಕೋಟೆ ಜಿಲ್ಲೆ	ಕಾರ್ಖಾನೆಗೆ
3	ನಾರಂಜಾ ಸ.ಸ.ಕಾ	40,19,578-00	ಜಿಲ್ಲಾಧಿಕಾರಿ, ಬೀದರ್ ಜಿಲ್ಲೆ	ಕಾರ್ಖಾನೆಗೆ
4	ಶಿರಗುಪ್ಪ ಶುಗರ್ಸ್ ಅಂಡ್ ಕೆಮಿಕಲ್ಸ್ ಲಿಮಿಟೆಡ್	70,56,715-00	ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ	ಕಾರ್ಖಾನೆಗೆ
5	ಶ್ರೀ ಭಾಗ್ಯಲಕ್ಷ್ಮಿ ಸ.ಸ.ಕಾ	4,03,976-00	ಜಿಲ್ಲಾಧಿಕಾರಿ, ಬೆಳಗಾಂ ಜಿಲ್ಲೆ	ಕಾರ್ಖಾನೆಗೆ
6	ಸತೀಶ್ ಶುಗರ್ಸ್ ಲಿ.,	10,09,371-00	ಜಿಲ್ಲಾಧಿಕಾರಿ, ಬೆಳಗಾಂ ಜಿಲ್ಲೆ	ಕಾರ್ಖಾನೆಗೆ
	ಒಟ್ಟು	**1,36,52,873-00**		

2010–11ನೇ ಸಾಲಿನ ಆಯವ್ಯಯದಲ್ಲಿ ಈ ಉದ್ದೇಶಕ್ಕಾಗಿ ಲೆಕ್ಕ ಶೀರ್ಷಿಕೆ **"2852-08-201-0-07 (ಯೋಜನೆ)"** ಸಹಾಯಧನ ಇದರಡಿಯಲ್ಲಿ 2409–00 ಲಕ್ಷ ರೂ. ಗಳನ್ನು ಒದಗಿಸಲಾಗಿದ್ದು, ಈ ಹಣದಲ್ಲಿ ಮೇಲಿನಂತೆ 1,36,52,873/– ರೂ. ಗಳನ್ನು ಕಾರ್ಖಾನೆಗಳಿಗೆ ಸಾಗಾಣಿಕೆ ಸಹಾಯಧನವಾಗಿ ಬಿಡುಗಡೆಗೆ ಮಂಜೂರು ಮಾಡಲಾಗಿದೆ.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬಿಡುಗಡೆ ಮಾಡಲಾದ ಈ ಹಣವನ್ನು ಸರ್ಕಾರದ ಆದೇಶ ದಿನಾಂಕ 12–03–2008ರಲ್ಲಿ ವಿಧಿಸಲಾಗಿರುವ ನಿಬಂಧನೆ ಮತ್ತು ಮಾರ್ಗಸೂಚಿಗಳನ್ವಯ ಪರಿಶೀಲಿಸಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಮೂಲಕ ಸಂಬಂಧಿಸಿದ ಕಾರ್ಖಾನೆಗಳಿಗೆ ಬಿಡುಗಡೆ ಮಾಡಲು ಕ್ರಮ ವಹಿಸತಕ್ಕದ್ದು, ಕಾರ್ಖಾನೆಗಳು ರೈತರಿಗೆ ಕಬ್ಬು ಖರೀದಿ ಬಾಕಿ ಉಳಿಸಿಕೊಂಡಿದ್ದಲ್ಲಿ, ರೈತರಿಗೆ ಆದ್ಯತೆ ಮೇರೆಗೆ ಬಿಡುಗಡೆ ಮಾಡಲು ಕ್ರಮವಹಿಸತಕ್ಕದ್ದು, ವಿತರಿಸಲಾದ ಹಣದ ವಿವರವನ್ನು ಆಯುಕ್ತರು ಕಬ್ಬು ಅಭಿವೃದ್ಧಿರವರು ಜಿಲ್ಲಾಧಿಕಾರಿಗಳಿಂದ ಪಡೆದು ಸರ್ಕಾರಕ್ಕೆ ವರದಿ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್ ಡಿ 1363 ವೆಚ್ಚ–1/2010, ದಿನಾಂಕ: 06–12–2010 ರಲ್ಲಿ ನೀಡಲಾದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ. ಆನಂದ್‌ಕುಮಾರ್
ಪೀಠಾಧಿಕಾರಿ (ಸಕ್ಕರೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. ನಂ. 148

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿರುವ ರಸ್ತೆಗಳ ಕಾಮಗಾರಿ ಅನುಷ್ಠಾನಕ್ಕಾಗಿ 2010–11ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಸಿಐ 87 ಎಸ್‌ಜಿಎಫ್ 2010, ದಿನಾಂಕ 16.06.2010.
2) ಸರ್ಕಾರದ ಆದೇಶ ಸಂಖ್ಯೆ: ಸಿಐ 87 ಎಸ್‌ಜಿಎಫ್ 2010, ದಿನಾಂಕ 26.08.2010.
3) ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರವರ ಪತ್ರ ಸಂಖ್ಯೆ ಡಿಎಸ್‌ಕೆ/ರಕರ/ಅನುದಾನ/ 3/2010–11 ದಿನಾಂಕ 17.09.2010.
4) ಸರ್ಕಾರದ ಆದೇಶ ಸಂಖ್ಯೆ: ವಾಕೈ 52 ಆಂಆಸ (1) 2010, ದಿನಾಂಕ 01.04.2010.

ಪ್ರಸ್ತಾವನೆ :

ರಾಜ್ಯದ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕಾಗಿ 2010–11ನೇ ಸಾಲಿನಲ್ಲಿ ಒದಗಿಸಲಾಗಿದ್ದ ರೂ. 250.00 ಲಕ್ಷಗಳ ಅನುದಾನದಲ್ಲಿ ಮೊದಲನೇ ಮತ್ತು ಎರಡನೇ ತ್ರೈಮಾಸಿಕಕ್ಕೆ ಒಟ್ಟು ರೂ. 125.00 ಲಕ್ಷಗಳನ್ನು ಮೇಲೆ ಓದಲಾದ (1) ಮತ್ತು (2) ರಲ್ಲಿರುವ ದಿನಾಂಕ 16.06.2010ರ ಮತ್ತು 26.08.2010ರ ಸರ್ಕಾರದ ಆದೇಶಗಳಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿರವರಿಗೆ ಬಿಡುಗಡೆ ಮಾಡಲಾಗಿದೆ.

ರಾಜ್ಯದ ಈ ಕೆಳಕಂಡ 8 ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕಾಗಿ 2010–11ನೇ ಸಾಲಿನಲ್ಲಿ ಒದಗಿಸಲಾಗಿರುವ ರೂ. 250/– ಲಕ್ಷಗಳಲ್ಲಿ ಬಾಕಿ ಉಳಿದಿರುವ ರೂ. 125.00 ಲಕ್ಷಗಳಲ್ಲಿ ರೂ. 120.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಮತ್ತು ರೂ. 5.00 ಲಕ್ಷಗಳನ್ನು ರಸ್ತೆ ಅಭಿವೃದ್ಧಿ ಕಾಮಗಾರಿಗಳ ಮೌಲ್ಯಮಾಪನ ಕಾರ್ಯಕ್ಕೆ ಬಿಡುಗಡೆ ಮಾಡಲು ಮೇಲೆ ಓದಲಾದ (3)ರಲ್ಲಿನ ದಿನಾಂಕ 17.09.2010ರ ಪತ್ರದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿರವರು ಪ್ರಸ್ತಾಪಿಸಿರುತ್ತಾರೆ.

ರೂ. ಲಕ್ಷಗಳಲ್ಲಿ

ಕ್ರ. ಸಂ.	ಕಾರ್ಖಾನೆಯ ಹೆಸರು	ವರ್ಷ	ಮೊತ್ತ
1	ಗೋದಾವರಿ ಬಯೋರಿಫೈನರೀಸ್ ಲಿಮಿಟೆಡ್, ಸಮೀರವಾಡಿ, ಬಾಗಲಕೋಟೆ ಜಿಲ್ಲೆ	2001–02	7.60
2	ಜಮಖಂಡಿ ಶುಗರ್ಸ್ ಲಿಮಿಟೆಡ್, ಹೀರೆಪಡಸಾಲಗಿ, ಜಮಖಂಡಿ ತಾ. ಬಾಗಲಕೋಟೆ ಜಿಲ್ಲೆ	2001–02	12.25
3	ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ, ಸಂಕೇಶ್ವರ, ಹುಕ್ಕೇರಿ ತಾ. ಬೆಳಗಾಂ ಜಿಲ್ಲೆ	2001–02	24.48
4	ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ, ದೊಡ್ಡಬಾತಿ, ದಾವಣಗೆರೆ ಜಿಲ್ಲೆ	2002–03 2003–04	10.40 0.75
5	ದಾವಣಗೆರೆ ಶುಗರ್ಸ್ ಲಿಮಿಟೆಡ್, ಕುಕ್ಕವಾಡ, ದಾವಣಗೆರೆ ಜಿಲ್ಲೆ	2002–03	8.00
6	ಶ್ರೀರಾಮ ಸ.ಸ.ಕಾ. ಚುಂಚನಕಟ್ಟೆ, ಕೆ.ಆರ್. ನಗರ ತಾ. ಮೈಸೂರು ಜಿಲ್ಲೆ	2002–03 2004–05	3.35 0.69
7	ಬನ್ನಾರಿ ಅಮ್ಮನ್ ಶುಗರ್ಸ್ ಅಲಗಂಚಿ, ನಂಜನಗೂಡು, ಮೈಸೂರು ಜಿಲ್ಲೆ	2005–06	43.28

8	ಕೋರಮಂಡಲ್ ಶುಗರ್ಸ್, ಕೆ.ಆರ್, ಪೇಟೆ, ಮಂಡ್ಯ ಜಿಲ್ಲೆ (ಐ.ಸಿ.ಎಲ್. ಶುಗರ್ಸ್)	2005-06	9.00
9	ಮೌಲ್ಯಮಾಪನ ಕಾರ್ಯಕ್ಕೆ		5.00
	ಒಟ್ಟು		125.00

ಆಯುಕ್ತರು ಕಬ್ಬು ಅಭಿವೃದ್ಧಿರವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 87 ಎಸ್‌ಜಿಎಫ್ 2010 ಬೆಂಗಳೂರು, ದಿನಾಂಕ: 21-12-2010

ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಪ್ರಸ್ತಾವನೆಯಲ್ಲಿ ಕೋರಿರುವಂತೆ ರಾಜ್ಯದ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಕ್ರಿಯಾ ಯೋಜನೆಯನ್ನು ಕಾರ್ಯಗತಗೊಳಿಸಲು 2010-11ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 4860-04-800-0-01-ರಸ್ತೆಗಳು 172 (ಯೋಜನೆ) ಅಡಿಯಲ್ಲಿ ಒದಗಿಸಲಾಗಿರುವ ರೂ. 250.00 ಲಕ್ಷಗಳ ಅನುದಾನದಲ್ಲಿ ಬಾಕಿ ಉಳಿದಿರುವ ರೂ. 125.00 ಲಕ್ಷಗಳಲ್ಲಿ ರೂ. 120 ಲಕ್ಷಗಳನ್ನು (ಒಂದುನೂರು ಇಪ್ಪತ್ತು ಲಕ್ಷಗಳು ಮಾತ್ರ) ಪ್ರಸ್ತಾವನೆಯಲ್ಲಿ ನಮೂದಿಸಿರುವ 8 ಕಾರ್ಖಾನೆಗಳ ವ್ಯಾಪ್ತಿಯ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡುವ ಸಲುವಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ರವರಿಗೆ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 1125/ವೆಚ್ಚ-1/2010, ದಿನಾಂಕ 23.07.2010ರಲ್ಲಿ ,ಮತ್ತು ಟಿಪ್ಪಣಿ ಸಂಖ್ಯೆ: ಎಫ್‌ಡಿ 1720/ವೆಚ್ಚ-1/2010 ದಿನಾಂಕ 06.12.2010 ರಲ್ಲಿ ನೀಡಲಾದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಪಿ.ಆನಂದ್‌ಕುಮಾರ್)
ಪೀಠಾಧಿಕಾರಿ (ಸಕ್ಕರೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. ನಂ. 149

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಪೊನ್ನಂಪೇಟೆ ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ಸಿಬ್ಬಂದಿಯನ್ನು ಸೃಜಿಸುವ ಬಗ್ಗೆ

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಲಾ 12 ಎಲ್‌ಸಿಇ 2010, ದಿನಾಂಕ 11.01.2010.
2) ರಿಜಿಸ್ಟ್ರಾರ್ ಜನರಲ್‌ರವರ ಪತ್ರದ ಸಂಖ್ಯೆ: ಜಿಒಬಿ 11/253/2005, ದಿನಾಂಕ: 17-02-2010.

***

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕೊಡುಗು ಜಿಲ್ಲೆಯ ವಿರಾಜಪೇಟೆಯಲ್ಲಿರುವ ಹೆಚ್ಚುವರಿ ಸಿವ್ಹಿಲ್ ಜಡ್ಜ್ (ಕಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದ ಅಧ್ಯಕ್ಷಾಧಿಕಾರಿ ಹಾಗೂ ಸಿಬ್ಬಂದಿಯಯ ಸೇರಿದಂತೆ ಪೊನ್ನಂಪೇಟೆಗೆ ಸ್ಥಳಾಂತರಿಸಲು ಆದೇಶ ಹೊರಡಿಸಲಾಗಿದೆ. ಮೇಲೆ (2)ರ ಪತ್ರದಲ್ಲಿ ಸದರಿ ನ್ಯಾಯಾಲಯಕ್ಕೆ ಸಿಬ್ಬಂದಿ ಕೊರತೆ ಇರುವುದರಿಂದ ಸಿವ್ಹಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ವಿರಾಜಪೇಟೆಯ 8 ಹುದ್ದೆಗಳನ್ನು ಸ್ಥಳಾಂತರಿಸಲು ಹಾಗೂ ಈ ಕೆಳಕಂಡ 29 ಹುದ್ದೆಗಳನ್ನು ಸೃಜಿಸುವ ಬಗ್ಗೆ ರಿಜಿಸ್ಟ್ರಾರ್ ಜನರಲ್‌ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕ್ರ ಸಂ.	ಹುದ್ದೆಯ ಹೆಸರು	ಸ್ಥಳಾಂತರಿಸುವ ಹುದ್ದೆಗಳ ಸಂಖ್ಯೆ	ಸೃಜಿಸುವ ಹುದ್ದೆಗಳ ಸಂಖ್ಯೆ
1.	ಸಿವಿಲ್ ನ್ಯಾಯಾಧೀಶರು (ಕಿ.ವಿ.) ಮತ್ತು ಜೆ.ಎಂ.ಎಫ್.ಸಿ	01	-
2.	ಶಿರಸ್ತೆದಾರರು	-	02
3.	ಶೀಘ್ರಲಿಪಿಗಾರರು	01	-
4.	ಪ್ರಥಮ ದರ್ಜೆ ಸಹಾಯಕರು	-	06
5.	ದ್ವಿತೀಯ ದರ್ಜೆ ಸಹಾಯಕರು	01	08
6.	ಬೆರಳಚ್ಚುಗಾರರು	01	02
7.	ಬೆರಳಚ್ಚುಗಾರರು - ನಕಲುಗಾರರು	01	01
8.	ಬೇಲಿಫ್	-	02
9.	ಪ್ರೋಸಸ್ ಸರ್ವರ್	-	05
10.	ಅಟೆಂಡರ್	01	01
11.	ಪ್ಯೂನ್	02	02
	ಒಟ್ಟು	**08**	**29**

ರಿಜಿಸ್ಟ್ರಾರ್ ಜನರಲ್‌ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಲಾ 12 ಎಲ್‌ಸಿಇ 2010 ಬೆಂಗಳೂರು, ದಿನಾಂಕ: 27-12-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಪೊನ್ನಂಪೇಟೆಯ ನ್ಯಾಯಾಲಯಕ್ಕೆ ಈ ಕೆಳಕಂಡ ಸಿಬ್ಬಂದಿಯನ್ನು ಸೃಜಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
1.	ಶಿರಸ್ತೆದಾರರು	01
2.	ಪ್ರಥಮ ದರ್ಜೆ ಸಹಾಯಕರು	02
3.	ದ್ವಿತೀಯ ದರ್ಜೆ ಸಹಾಯಕರು	03
4.	ಬೇಲಿಫ್	02
5.	ಪ್ರೋಸಸ್ ಸರ್ವರ್	03
	ಒಟ್ಟು	11

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 336 ವೆಚ್ಚ-10/2010, ದಿನಾಂಕ: 04-10-2010 ರನ್ವಯ ಸಹಮತ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಸಯ್ಯದ್ ಅಬ್ದುಲ್ ನಜೀರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1)
ಕಾನೂನು ನ್ಯಾಯಾ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. ನಂ. 150

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಆದೇಶ.

ಓದಲಾಗಿದೆ : ಪತ್ರ ಸಂಖ್ಯೆ : ನಿಅಕಇ/ಯೋಜನಾ ಶಾಖೆ/ಸಿ-9/02/10-11/91, ದಿನಾಂಕ 9-4-2010.

ಪ್ರಸ್ತಾವನೆ :

2010-11ನೇ ಸಾಲಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಬುದ್ದಿಮಾಂದ್ಯ ಮತ್ತು ಆಟಿಸಂ ನ್ಯೂನತೆಯಿಂದ ಹಾಗೂ ಅಂಧ ಮುಂತಾದ ವಿಕಲತೆಯುಳ್ಳ ಮಕ್ಕಳ ಪಾಲನೆಗಾಗಿ ನಡೆಸುತ್ತಿರುವ ಸಂಸ್ಥೆಗಳಿಗೆ ಪಾಲನಾ ವೆಚ್ಚ ಹಾಗೂ ಶಿಕ್ಷಕರ ಸಂಭಾವನೆಗಳನ್ನು ಒಳಗೊಂಡಂತೆ ಮಕ್ಕಳ ಸಂಖ್ಯೆ ಆಧಾರದ ಮೇಲೆ ಅನುದಾನವನ್ನು ನೀಡಲು ರೂ.20.00 ಕೋಟಿ ಆಯವ್ಯಯ ಒದಗಿಸಲಾಗಿದೆಯೆಂದು ಘೋಷಿಸಲಾಗಿದ್ದು, ಈ ಸಂಬಂಧ 2010-11 ನೇ ಆಯವ್ಯಯದಲ್ಲಿ ರೂ. 10.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ರವರು ಮೇಲೆ ಓದಲಾದ ಪತ್ರದೊಂದಿಗೆ ಕಳುಹಿಸಿರುವ ಪ್ರಸ್ತಾವನೆಯಲ್ಲಿ ವಿಶೇಷ ಶಾಲೆಗಳಿಗೆ ಆರ್ಥಿಕ ನೆರವು ಒದಗಿಸುವ ಯೋಜನೆಗೆ 2010-11ನೇ ಸಾಲಿಗೆ ರೂ.10.00 ಕೋಟಿ ಆಯವ್ಯಯ ನಿಗದಿಯಾಗಿದ್ದು, ಸರ್ಕಾರೇತರ ಸಂಸ್ಥೆಗಳಿಂದ ನಡೆಸುತ್ತಿರುವ ಅಂಗವಿಕಲರ ವಿಶೇಷ ಶಾಲೆಗಳ ವಿಶೇಷ ಮಕ್ಕಳ ಶಿಶು ಕೇಂದ್ರೀಕೃತ ಯೋಜನೆ/ವಿಶೇಷ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಆರ್ಥಿಕ ಸಹಾಯಧನ ಯೋಜನೆಯನ್ನು ಅನುಮೋದಿಸಲು ಕೋರಿರುತ್ತಾರೆ.

ಈ ಯೋಜನೆ ಅನುಷ್ಠಾನದ ಪೂರ್ವ ಸರ್ಕಾರಿ ಆದೇಶ ಸಂಖ್ಯೆ : ಪಿಡಿ 5 ಐಎಂಎಂ 2010 ದಿನಾಂಕ 3.04.2010 ರ ಕಂಡಿಕೆ 3ರ ಮೇರೆಗೆ ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆ (ವೆಚ್ಚ-3) ಶಾಖೆಯ ಅಭಿಪ್ರಾಯ/ಸಹಮತಿಯನ್ನು ಕ್ರಮವಾಗಿ ಟಿಪ್ಪಣಿ ಸಂಖ್ಯೆ : ಪಿಡಿ 11 ಐಎಂಎಂ 10, ದಿನಾಂಕ 26-04-2010 ಮತ್ತು ಎಫ್‌ಡಿ 272 ವೆಚ್ಚ-3/10, ದಿನಾಂಕ 29-10-2010 ರಂತೆ ಪಡೆಯಲಾಗಿದೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ದಿನಾಂಕ 20-04-2010 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಮಟ್ಟದ ಪರಿಶೀಲನಾ ಸಮಿತಿ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ್ದು, 2010-11 ನೇ ಸಾಲಿನ ಆರ್ಥಿಕ ವರ್ಷವು ಅಂತ್ಯಗೊಳ್ಳುತ್ತಿರುವುದರಿಂದ ಸಚಿವ ಸಂಪುಟದ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಆದೇಶ ಹೊರಡಿಸುವಂತೆ ನೀಡಿದ ಸೂಚನೆ ಮೇರೆಗೆ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 109 ಪಿಹೆಚ್‌ಪಿ 2010, ಬೆಂಗಳೂರು, ದಿನಾಂಕ : 14-12-2010

ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ರಾಜ್ಯ ಸಹಾಯಧನದ ಹೊಸ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರೇತರ ಸಂಸ್ಥೆಗಳು ಕನಿಷ್ಠ 3 ವರ್ಷಗಳ ಅವಧಿಯವರೆಗೆ ನಿರ್ವಹಿಸಿರುವ ಶಾಲೆಗಳನ್ನು ಪರಿಗಣಿಸಿ, ಈ ಕೆಳಕಂಡ ಮಾರ್ಗಸೂಚಿಗಳನ್ನು ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ.

ಮಾರ್ಗಸೂಚಿ :

1. Institutions for education or training of physically/mentally challenged children should not be started without taking permission from the Director of Disabled Welfare. In case an institution is already running, it should formally apply for permission.
2. Eligibility for Grant-in-aid will arise when the institution has been run as per norms for 3 years after taking such permission.
3. The grant permissible will be based on the strength of students. Government will have no obligation to pay salary or any benefit to the teaching or non-teaching staff of the institution. Grant once sanctioned can later be varied or even stopped in case the number of students changes or if any other eligibility condition is violated.
4. As the students will be special children, it should be ensured by the Director, Disabled Welfare that all the teaching and supporting staff have got the required qualification and training and that they have to be

appointed on merit through a transparent process after giving proper advertisement. It should also be ensured that all relevant Government guidelines are followed in this regard. Confirmation of staff will be a separate process and sanction of grants will not mean automatic confirmation of staff. Any recruitment or change of staff should be done only with the concurrence of the Director of Disabled Welfare.

5. There should be a compulsory annual inspection of every such schools by the Director of Disabled Welfare to see that the grant conditions are being followed satisfactorily.
6. In view of the economy orders, not more than 20 such schools should be considered during the year 2010-11. During the subsequent years depending on the budget provision, the department shall send further proposals to Government for further action.

ಈ ಆದೇಶವನ್ನು ಯೋಜನಾ ಇಲಾಖೆ ಮತ್ತು ಆರ್ಥಿಕ ಇಲಾಖೆ (ವೆಚ್ಚ-3) ಶಾಖೆಗಳು ಕ್ರಮವಾಗಿ ನೀಡಿದ ಟಿಪ್ಪಣಿ ಸಂಖ್ಯೆ : ಪಿಡಿ 11 ಐಎಂಎಂ 10 ದಿನಾಂಕ 26-04-2010 ಮತ್ತು ಎಫ್‌ಡಿ 272 ವೆಚ್ಚ-3/10 ದಿನಾಂಕ 29-10-2010ರ ಅಭಿಪ್ರಾಯ/ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ಕಮಲಮ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 109 ಪಿಎಚ್‌ಪಿ 2010, ದಿನಾಂಕ 14-12-2010 ಕ್ಕೆ ಅನುಬಂಧಗಳು

ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ರಾಜ್ಯ ಸಹಾಯಧನದ ಹೊಸ ಯೋಜನೆ

ಪೀಠಿಕೆ :

ಕರ್ನಾಟಕ ರಾಜ್ಯದಲ್ಲಿ 2001 ರ ಜನಗಣತಿ ಆಧರಿಸಿ 9.40 ಲಕ್ಷ ಅಂಗವಿಕಲರು ಇರುತ್ತಾರೆ. 0.19 ವರ್ಷದೊಳಗಿನ ಅಂಗವಿಕಲರ ಸಂಖ್ಯೆ ಅಂದಾಜು 3.67 ಲಕ್ಷವೆಂದು ಪರಿಗಣಿಸಲಾಗಿದೆ.

ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯು ಅಂಗವಿಕಲರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು ಈ ಕಾರ್ಯಕ್ರಮಗಳು ಅಂಗವಿಕಲರನ್ನು ಸಾಮಾನ್ಯ ಜನರಂತೆ ಬದುಕಲು ನೆರವು ಮಾಡಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಮುಖ ಧ್ಯೇಯೋದ್ದೇಶಗಳನ್ನು, ಗುರಿಗಳನ್ನು ಇಟ್ಟುಕೊಂಡಿದೆ. ಇಲಾಖೆಯು ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮವು ಪ್ರಮುಖವಾಗಿದೆ.

ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ನೀತಿ, ರಾಷ್ಟ್ರೀಯ ಶಿಕ್ಷಣ ನೀತಿ, ಹಾಗೂ ಅಂಗವಿಕಲರ ಅಧಿನಿಯಮ-1995 ರನ್ವಯ 6 ರಿಂದ 18 ನೇ ವಯೋಮಿತಿಯ ಎಲ್ಲಾ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡುವುದು ಅತ್ಯವಶ್ಯಕವಾಗಿರುತ್ತದೆ. ಅಲ್ಲದೇ ಅಂಗವಿಕಲ ಮಕ್ಕಳಿಗೆ ವಿಶೇಷ ಶಾಲೆಗಳನ್ನು ಸರ್ಕಾರದಿಂದ / ಖಾಸಗಿ ವಲಯದಿಂದ ಕಡ್ಡಾಯವಾಗಿ ನಡೆಸುವುದು ಸಹ ಸರ್ಕಾರದ ಮುಖ್ಯ ಜವಾಬ್ದಾರಿಯಾಗಿರುತ್ತದೆ. ಅಂಗವಿಕಲರಿಗೆ ವಿಶೇಷ ಶಿಕ್ಷಣ/ತರಬೇತಿ ನೀಡಲು ರಾಜ್ಯದಲ್ಲಿ ಸುಮಾರು 300 ವಿಶೇಷ ಶಾಲೆಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. ವಿವಿಧ ಅಂಗವಿಕಲತೆ ಹೊಂದಿರುವ ಅಂಗವಿಕಲ ಮಕ್ಕಳು ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ಸಾಮಾನ್ಯ ಶಾಲೆಗಳಲ್ಲಿ ವ್ಯಾಸಂಗ ಮಾಡಲು ಶಕ್ತರಾಗಿರುವುದಿಲ್ಲ. ಅವರುಗಳಿಗೆ ಆದಷ್ಟು ಅವರು ವಾಸಿಸುವ ಪರಿಸರದಲ್ಲಿಯೇ ವಿಶೇಷ ಶಿಕ್ಷಣವನ್ನು ನೀಡುವ ಸೌಲಭ್ಯವನ್ನು ಒದಗಿಸಬೇಕಾಗುತ್ತದೆ. ಅಂಗವಿಕಲ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಅವರಿಗೆ ವಿಶೇಷ ಶಾಲೆಗಳಲ್ಲಿ ಉತ್ತಮ ಮೂಲಭೂತ ಸೌಕರ್ಯ, ಸೂಕ್ತ ಕಟ್ಟಡ, ಜೀವನ ಕೌಶಲ್ಯ, ವೃತ್ತಿಪರ ತರಬೇತಿ ಮುಂತಾದ ಸಮಗ್ರ ಶಿಕ್ಷಣ ಸೌಲಭ್ಯವನ್ನು ನೀಡಬೇಕಾಗುತ್ತದೆ. ಇದರಿಂದ ಅಂಗವಿಕಲ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಈ ದಿಶೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಅನುದಾನ ಸಂಹಿತೆ-1982ರಡಿ ವಿಶೇಷ ಶಾಲೆಗಳಿಗೆ ನೀಡುತ್ತಿರುವ ಸಹಾಯಧನವು ಶಿಕ್ಷಕರ ಕೇಂದ್ರೀಕೃತವಾಗಿದ್ದು ಇದನ್ನು ಪರಿಷ್ಕರಿಸಿ ಅಂಗವಿಕಲ ಮಕ್ಕಳನ್ನು ಆಧರಿಸಿ ಅವರಿಗೆ ಸಂಪೂರ್ಣ ಗುಣಾತ್ಮಕ ಶೈಕ್ಷಣಿಕ ಸೇವಾ ಸೌಲಭ್ಯವನ್ನು ಒದಗಿಸುವ ಸಲುವಾಗಿ ವಿಶೇಷ ಶಾಲೆಗಳನ್ನು ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸಹಾಯಧನ ನೀಡುವ ಸಲುವಾಗಿ ಈ ಕೆಳಕಂಡಂತೆ ಯೋಜನೆಯನ್ನು ರೂಪಿಸಿದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಮಾನ್ಯ ಮುಖ್ಯಮಂತ್ರಿಯವರು 2010-11ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ರೂ.10.00 ಕೋಟಿ ಆಯವ್ಯಯವನ್ನು ಘೋಷಿಸಿರುತ್ತಾರೆ. ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ : 2235-02-800-0-04 ಯೋಜನೆ ಉಪ ಲೆಕ್ಕ ಶೀರ್ಷಿಕೆ : 301 ಸಹಾಯಧನದಡಿ ಭರಿಸಲು ಅನುಮೋದನೆ ದೊರೆತಿರುತ್ತದೆ.

ಯೋಜನೆಯ ಹೆಸರು : ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ರಾಜ್ಯ ಸಹಾಯಧನ ಯೋಜನೆ :

ಉದ್ದೇಶ :

1. ಅಂಗವಿಕಲರ ಕಾಯ್ದೆ-95 ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.
2. ವಿಶೇಷ ಮಕ್ಕಳ ಶಿಕ್ಷಣಕ್ಕೆ ಸೂಕ್ತ ಪರಿಸರವನ್ನು ಕಲ್ಪಿಸುವುದು.
3. ಸಂವಿಧಾನದಲ್ಲಿ ಸರ್ವರಿಗೂ ಶಿಕ್ಷಣ ಹಕ್ಕು ಸೂಚಿಸಿದಂತೆ ಅಂಗವಿಕಲ ಮಕ್ಕಳಿಗೂ ಶಿಕ್ಷಣದ ಹಕ್ಕನ್ನು ನೀಡುವುದು.
4. ಎಲ್ಲಾ ಅಂಗವಿಕಲ ಮಕ್ಕಳಿಗೂ ಶೈಕ್ಷಣಿಕ ಸೌಲಭ್ಯ ಒದಗಿಸುವುದು.
5. ಅಂಗವಿಕಲ ಮಕ್ಕಳಲ್ಲಿ ಶೇ. 100 ರಷ್ಟು ಸಾಕ್ಷರತೆಯನ್ನು ಮೂಡಿಸುವುದು.
6. ಅಂಗವಿಕಲ ಮಕ್ಕಳನ್ನು ಇತರೆ ಸಾಮಾನ್ಯ ಪ್ರಜೆಗಳಂತೆ ರಾಷ್ಟ್ರದ ಪ್ರಗತಿಗೆ ಸಹಕಾರಿಯಾಗುವಂತೆ ಮಾಡುವುದು.
7. ಸೂಕ್ತ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಿ ಅಂಗವಿಕಲ ಮಕ್ಕಳಿಗೆ ಶಿಕ್ಷಣ ನೀಡಿ ನಂತರ ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ಸಹಕಾರಿಯಾಗುವುದು.
8. ಅಂಗವಿಕಲ ಮಕ್ಕಳ ಶೈಕ್ಷಣಿಕ ಕಾರ್ಯಕ್ರಮಕ್ಕೆ ಸ್ವಯಂ ಸೇವಾ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡುವುದು.

9. ಕುಷ್ಠರೋಗನಿವಾರಿತ ಅಂಗವಿಕಲರಿಗೆ, ಮಾನಸಿಕ ಅಸ್ವಸ್ಥರಿಗೆ ಹಾಗೂ ತರಬೇತಿ ಪಡೆಯಲು ಅರ್ಹರಿರುವಂತಹ ಬುದ್ಧಿಮಾಂದ್ಯರಿಗೆ ಔದ್ಯೋಗಿಕ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ಪುನರ್ವಸತಿಗೆ ನೆರವು ನೀಡುವುದು.
10. ಶೈಕ್ಷಣಿಕ ಕಲಿಕೆ ಒಳಪಡುವ ಬುದ್ಧಿಮಾಂದ್ಯ ಮಕ್ಕಳಿಗೆ ವಿಶೇಷ ವಸತಿಯುತ ಶಾಲೆಗಳನ್ನು ಜಿಲ್ಲಾ ಮಟ್ಟದಲ್ಲಿ ಪ್ರಾರಂಭಿಸುವುದು.
11. ಶಿಕ್ಷಣ ವ್ಯವಸ್ಥೆಗೆ ಒಳಪಡುವಂತಹ ಬುದ್ಧಿಮಾಂದ್ಯ ಮಕ್ಕಳಿಗೆ ವಿಶೇಷ ಶಾಲೆ/ಹಗಲು ಕೇಂದ್ರಗಳನ್ನು ಸ್ಥಾಪಿಸಿ ಶಿಕ್ಷಣ ನೀಡುವುದು.

ಅರ್ಹತೆ :

1. ಸ್ವಯಂ ಸೇವಾ ಸಂಸ್ಥೆಯು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಕಾರ ನೋಂದಣಿಯಾಗಿರುವ ಚಾರಿಟಬಲ್ ಟ್ರಸ್ಟ್, ಸೊಸೈಟಿ ಅಥವಾ ಸಮಾಜ ಸೇವೆಯಲ್ಲಿ ತೊಡಗಿರುವ ಅಧಿಕಾರೇತರ ಸಂಸ್ಥೆಯಾಗಿರಬೇಕು.
2. ಸ್ವಯಂ ಸೇವಾ ಸಂಸ್ಥೆಯು ಅಂಗವಿಕಲರ ಕಾಯ್ದೆ-1995 ಸೆಕ್ಷನ್ 50, 51 ರಂತೆ ನೋಂದಣಿ ಮಾಡಿಸಿರಬೇಕು.
3. ಸ್ವಯಂ ಸೇವಾ ಸಂಸ್ಥೆಯು ವಿಶೇಷ ಶಾಲೆಗಳನ್ನು ನಡೆಸಲು ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಿಂದ ನಿಯಮಾನುಸಾರ ಅನುಮತಿ ಪಡೆದಿರಬೇಕು.
4. ಸ್ವಯಂ ಸೇವಾ ಸಂಸ್ಥೆಯು ಇದೇ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದಿಂದಾಗಲೀ ಅಥವಾ ರಾಜ್ಯ ಸರ್ಕಾರದ ಇತರೆ ಇಲಾಖೆಗಳಿಂದಾಗಲೀ ಅಥವಾ ಸ್ಥಳೀಯ ಸಂಸ್ಥೆಗಳಿಂದಾಗಲೀ ಸಹಾಯಧನ ಪಡೆಯುತ್ತಿದ್ದಲ್ಲಿ ಅಂತಹ ಸಂಸ್ಥೆಯು ಈ ಯೋಜನೆಯಡಿ ಸಹಾಯಧನ ಪಡೆಯಲು ಅವಕಾಶವಿರುವುದಿಲ್ಲ.

ಸಹಾಯಧನ ಪಡೆಯಲು ಷರತ್ತುಗಳು :

1. ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ವತಿಯಿಂದ ಅನುಮತಿ ಪಡೆದಂತಹ ಸಂಸ್ಥೆಗಳಿಗೆ ಮಾತ್ರವೇ ಸಹಾಯಧನ ನೀಡಲಾಗುವುದು.
2. ಸಂಸ್ಥೆಯು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಯಾವುದೇ ರೀತಿಯ ಶುಲ್ಕ, ದೇಣಿಗೆ, ವಂತಿಗೆಧನ ಮುಂತಾದವುಗಳನ್ನು ಸ್ವೀಕರಿಸತಕ್ಕದ್ದಲ್ಲ.
3. ಸಹಾಯಧನವು ಆಯವ್ಯಯ ಲಭ್ಯತೆಗೆ ಒಳಪಟ್ಟಿರುತ್ತದೆ. ಸಂಸ್ಥೆಯು ಸಹಾಯಧನವನ್ನು ತನ್ನ ಸ್ವಂತ ಹಕ್ಕೆಂದು ಕ್ಲೇಮು ಮಾಡುವಂತಿಲ್ಲ.
4. ಯಾವುದೇ ಸಂಸ್ಥೆಯು ಇಲಾಖೆಯಿಂದ ಅನುಮತಿ ಪಡೆದು ಶಾಲೆ ಪ್ರಾರಂಭಿಸಿದ 03 ವರ್ಷದ ಒಳಗೆ ಸಹಾಯಧನಕ್ಕೆ ಅರ್ಹತೆ ಪಡೆಯುವುದಿಲ್ಲ. ಸಂಸ್ಥೆಯು ಶಾಲೆ ಪ್ರಾರಂಭಿಸಿದ 04ನೇ ವರ್ಷದಿಂದ ಸಹಾಯಧನ ಪಡೆಯಲು ಅರ್ಹತೆ ಹೊಂದಿರುತ್ತದೆ.
5. ಸಹಾಯಧನವನ್ನು ಮಂಜೂರು ಮಾಡಲು ಮಂಜೂರಾತಿಯು ಕೆಳಕಂಡ ನಿಬಂಧನೆಗೊಳಪಟ್ಟಿರುತ್ತದೆ.
   ಅ) ಶಾಲೆಯಲ್ಲಿ ಕನಿಷ್ಠ 25 ವಿದ್ಯಾರ್ಥಿಗಳು ದಾಖಲೆಯಲ್ಲಿರಬೇಕು. ಶಾಲೆಯಲ್ಲಿ 20 ಕ್ಕಿಂತ ಕಡಿಮೆ ಮಕ್ಕಳಿದ್ದಲ್ಲಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ.
   ಆ) ಶಾಲೆಯು 220 ದಿನಗಳಿಗೆ ಕಡಿಮೆ ಇರದಂತೆ ಕಾರ್ಯನಿರ್ವಹಿಸಿರಬೇಕು.
   ಇ) ಶಿಕ್ಷಕರ ಶೈಕ್ಷಣಿಕ ಅರ್ಹತೆಯು ಈ ಯೋಜನೆಯಲ್ಲಿ ಉಲ್ಲೇಖಿಸಿದಂತೆ ಇರಬೇಕು.
6. ಸಹಾಯಧನ ಪಡೆಯುವ ಸಂಸ್ಥೆಯು ರಾಜ್ಯ ಸರ್ಕಾರದ ಅಧಿಕಾರಿಗಳ ಅಥವಾ ಇಲಾಖೆಯಿಂದ ದೃಢೀಕರಿಸಲ್ಪಟ್ಟ ಯಾವುದೇ ವ್ಯಕ್ತಿಗಳ/ಸಂಸ್ಥೆಗಳ ತಪಾಸಣೆಗೆ ಸಿದ್ಧವಾಗಿರಬೇಕು/ಮುಕ್ತವಾಗಿರಬೇಕು.
7. ಸಂಸ್ಥೆಯು ಸಹಾಯಧನದ ಲೆಕ್ಕಪತ್ರಗಳನ್ನು ಪ್ರತ್ಯೇಕವಾಗಿ ಹಾಗೂ ಸರಿಯಾಗಿ ನಿರ್ವಹಿಸಿ ಅಗತ್ಯವೆನಿಸಿದಾಗ ತನಿಖೆಗೆ ನೀಡಬೇಕು.
8. ಸಹಾಯಧನದಿಂದ ಸಂಪೂರ್ಣವಾಗಿ ಅಥವಾ ಭಾಗಶಃ ಖರೀದಿಸಿದ ಎಲ್ಲಾ ರೀತಿಯ ಆಸ್ತಿಗಳ ಲೆಕ್ಕಪತ್ರಗಳನ್ನು ಸಂಸ್ಥೆಯು ಸರಿಯಾಗಿ ನಿರ್ವಹಿಸತಕ್ಕದ್ದು. ಈ ರೀತಿ ಪಡೆದ ಆಸ್ತಿಗಳ ವಿವರಗಳ ಪಟ್ಟಿಯನ್ನು ಪ್ರತಿ ವರ್ಷ ನಿರ್ದೇಶನಾಲಯಕ್ಕೆ ಸಲ್ಲಿಸಬೇಕು. ಇಂತಹ ಆಸ್ತಿಗಳನ್ನು ಸರ್ಕಾರದ ಪೂರ್ವಾನುಮತಿ ಇಲ್ಲದೇ ಪರಭಾರೆ ಮಾಡುವುದು, ಅತಿಕ್ರಮ ಪ್ರವೇಶಿಸುವುದಾಗಲಿ ಮಾಡಬಾರದು. ಯಾವ ಉದ್ದೇಶಕ್ಕಾಗಿ ಸಹಾಯಧನ ಪಡೆಯಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು. ಯಾವುದೇ ಸಂದರ್ಭದಲ್ಲಿಯೂ ಸಂಸ್ಥೆಯು ಮುಚ್ಚಿದಲ್ಲಿ ಅಂತಹ ಆಸ್ತಿಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9. ಮಂಜೂರು ಮಾಡಿದ ಸಹಾಯಧನವು ಅನುಮೋದಿಸಲ್ಪಟ್ಟ ಕಾರ್ಯಕ್ಕೆ ವಿನಿಯೋಗಿಸದೇ ಇರುವುದು ಕಂಡುಬಂದಲ್ಲಿ ಸರ್ಕಾರವು ಸಹಾಯಧನವನ್ನು ನಿಲ್ಲಿಸುವುದಲ್ಲದೇ ಹಿಂದೆ ನೀಡಿದ ಸಹಾಯಧನವನ್ನು ವಸೂಲಿ ಮಾಡಲಾಗುವುದು.
10. ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆ ಆಗುವ ಅನುದಾನಕ್ಕಿಂತ ಹೆಚ್ಚಿನ ಅನುದಾನದ ಅವಶ್ಯಕತೆ ಇದ್ದಲ್ಲಿ ಸಂಸ್ಥೆಯು ತನ್ನ ಸಂಪನ್ಮೂಲದಿಂದಲೇ ಭರಿಸಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡತಕ್ಕದ್ದು. ಯಾವುದೇ ಕಾರಣಕ್ಕೂ ಶಿಕ್ಷಣದ ಗುಣಮಟ್ಟದಲ್ಲಿ ಕೊರತೆ ಕಂಡುಬಂದಲ್ಲಿ ಸಂಸ್ಥೆಗೆ ಅನುದಾನವನ್ನು ರದ್ದುಪಡಿಸುವುದಲ್ಲದೇ ಸಂಸ್ಥೆಯನ್ನು ಕಪ್ಪುಪಟ್ಟಿಗೆ ಶಿಫಾರಸ್ಸು ಮಾಡಲಾಗುವುದು.
11. ಸಂಸ್ಥೆಯು ಯಾವುದೇ ಜಾತಿ ಮತ ಪರಿಗಣಿಸದೇ ಎಲ್ಲಾ ಅಂಗವಿಕಲ ಮಕ್ಕಳಿಗೂ ಮುಕ್ತವಾಗಿರಬೇಕು.
12. ಸರ್ಕಾರವು ಸಹಾಯಧನದ ಬಗ್ಗೆ ಯಾವುದೇ ಸ್ಪಷ್ಟೀಕರಣ ಕೇಳಿದಲ್ಲಿ ಸಂಸ್ಥೆಯು ಒದಗಿಸತಕ್ಕದ್ದು.
13. ಸರ್ಕಾರವು ಯಾವುದೇ ಸಂದರ್ಭದಲ್ಲಿ ವಿಶೇಷ ಶಾಲೆಗಳನ್ನು ಇತರೆ ಸರ್ಕಾರೇತರ ಸಂಸ್ಥೆಗಳಿಂದ ಮೌಲ್ಯಮಾಪನ ಮಾಡಿಸಲಾಗುವುದು.
14. ಸಹಾಯಧನವು ಮಂಜೂರಾಗದೇ ಇದ್ದಲ್ಲಿ ಯಾವುದೇ ಕಾರಣಕ್ಕೂ ಸಂಸ್ಥೆಯು ಶಾಲೆಯನ್ನು ಮುಚ್ಚತಕ್ಕದ್ದಲ್ಲ. ಸಂಸ್ಥೆಯು ತನ್ನ ಸಂಪನ್ಮೂಲಗಳಿಂದಲೇ ಶಾಲೆಯನ್ನು ನಡೆಸತಕ್ಕದ್ದು.
15. ಸಹಾಯಧನದ ಮಂಜೂರಾತಿಯು ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬೆಂಗಳೂರು ರವರ ಅಂತಿಮ ತೀರ್ಮಾನಕ್ಕೊಳಪಟ್ಟಿರುತ್ತದೆ.
16. ಸಹಾಯಧನ ಪಡೆಯಲು ಸಂಸ್ಥೆಗಳು ಅರ್ಜಿಗಳನ್ನು ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ರಚಿಸಲಾದ ಸಮಿತಿಯ ಮುಖಾಂತರ ಪರಿಶೀಲಿಸಿ ಶಿಫಾರಸ್ಸುಗೊಂಡ ಸೂಕ್ತ ಪ್ರಸ್ತಾವನೆಗಳನ್ನು ನಿರ್ದೇಶನಾಲಯದಲ್ಲಿ ಸ್ವೀಕರಿಸಲಾಗುವುದು.

ಆರ್ಥಿಕ ಧನ ಸಹಾಯ :

ವಿಶೇಷ ಶಾಲೆಗಳಿಗೆ ಆರ್ಥಿಕ ಧನ ಸಹಾಯವನ್ನು ಪ್ರಾಥಮಿಕ ವಿಭಾಗದಲ್ಲಿ 50 ಅಂಗವಿಕಲ ಮಕ್ಕಳ ಸಂಖ್ಯೆಯ ಯೂನಿಟ್ ಅಂತೆ ಹಾಗೂ ಪ್ರೌಢಶಾಲಾ ವಿಭಾಗದಲ್ಲಿ 25 ಮಕ್ಕಳ ಸಂಖ್ಯೆಯ ಯೂನಿಟ್ ಅಂತೆ ಅನುಗುಣವಾಗಿ ಭರಿಸಬಹುದಾದ ವೆಚ್ಚವನ್ನು ಆಧರಿಸಿ ಪರಿಗಣಿಸಲಾಗಿದೆ. ಪ್ರತಿ ಅಂಗವಿಕಲತೆಯ ಶಾಲೆಯಲ್ಲಿ ಕನಿಷ್ಠ 25 ಅಂಗವಿಕಲ ಮಕ್ಕಳಿದ್ದಲ್ಲಿ ಮಾತ್ರ ಈ ಸಹಾಯಧನಕ್ಕೆ ಪರಿಗಣಿಸಲಾಗುವುದು. ವಸತಿರಹಿತ ಶಾಲೆಯಾದಲ್ಲಿ ಒಂದು ಮಗುವಿಗೆ ಮಾಹೆಯಾನ ರೂ.2000/– ರಂತೆ, ವಸತಿಯುತ ಶಾಲೆಯಾದಲ್ಲಿ ಒಂದು ಮಗುವಿಗೆ ಮಾಹೆಯಾನ ರೂ.2500/– ರಂತೆ ಅನುದಾನವನ್ನು ನೀಡಲಾಗುವುದು. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನೀಡುವ ಈ ಸಹಾಯಧನದಲ್ಲಿಯೇ ಎಲ್ಲಾ ವೆಚ್ಚವನ್ನು ಭರಿಸತಕ್ಕದ್ದು. (ಈ ವೆಚ್ಚಕ್ಕೆ ಸಂಬಂಧಿಸಿದ ವಿವರಗಳನ್ನು ಅನುಬಂಧ–1 ರಲ್ಲಿ ನಮೂದಿಸಿದೆ).

ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ : 2235–02–800–0–04 ಯೋಜನೆ ಉಪ ಲೆಕ್ಕ ಶೀರ್ಷಿಕೆ : 301 ಸಹಾಯಾನುಧಾನದಡಿ ಭರಿಸುವುದು.

ಬೋಧನಾ ಮಾಧ್ಯಮ :

1. ಎಲ್ಲಾ ವಿಶೇಷ ಶಾಲೆಗಳಲ್ಲಿ ಬೋಧನಾ ಮಾಧ್ಯಮವು ಸಾಧ್ಯವಾದಷ್ಟು ಕನ್ನಡ ಭಾಷೆಯಲ್ಲಿ ಇರಬೇಕು.

ಸಿಬ್ಬಂದಿಗಳ ನೇಮಕಾತಿ :

1. ನಿಗದಿತ ಶೈಕ್ಷಣಿಕ ಅರ್ಹತೆ ಹೊಂದಿರುವ ಎಲ್ಲಾ ಸಿಬ್ಬಂದಿಗಳನ್ನು ಗೌರವಧನದ ಆಧಾರದ ಮೇಲೆ ಸಂಸ್ಥೆಯು ನೇಮಿಸತಕ್ಕದ್ದು. ಸಿಬ್ಬಂದಿಗಳಿಗೆ ಅನುಬಂಧದಲ್ಲಿ ಸೂಚಿಸಿರುವಂತೆ ಗೌರವಧನವನ್ನು ಚೆಕ್ ಮೂಲಕ ಪ್ರತಿ ತಿಂಗಳು ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡತಕ್ಕದ್ದು.
2. ಶಾಲೆಗಳಿಗೆ ಸಿಬ್ಬಂದಿ ವರ್ಗದವರನ್ನು ನೇಮಿಸುವಾಗ ಅರ್ಹ ಪರಿಶಿಷ್ಟ ಜಾತಿ/ಪಂಗಡ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡುವುದು.
3. ಪ್ರತಿ ಪ್ರಾಥಮಿಕ ಶಾಲೆಯ ಶಿಕ್ಷಕರು ಪಿ.ಯು.ಸಿ. ಹಾಗೂ ವಿಶೇಷ ಶಿಕ್ಷಣದಲ್ಲಿ (ದೃಷ್ಟಿದೋಷ, ಶ್ರವಣದೋಷ, ಬುದ್ಧಿಮಾಂದ್ಯ & ಸ್ಪಾಸ್ಟಿಕ್ ಮಕ್ಕಳಿಗೆ ಬೋಧಿಸುವಲ್ಲಿ) ಡಿಪ್ಲೊಮಾ ಹೊಂದಿರಬೇಕು. ಪ್ರೌಢಶಾಲೆಗಳಲ್ಲಿ ಶಿಕ್ಷಕರಿಗೆ ಪದವಿಯೊಂದಿಗೆ ಬಿ.ಎಡ್. ಹಾಗೂ ವಿಶೇಷ ಶಿಕ್ಷಣದಲ್ಲಿ (ದೃಷ್ಟಿದೋಷ, ಶ್ರವಣದೋಷ, ಬುದ್ಧಿಮಾಂದ್ಯ & ಸ್ಪಾಸ್ಟಿಕ್) ಡಿಪ್ಲೊಮಾ ಅಥವಾ ಪದವಿಯೊಂದಿಗೆ ವಿಶೇಷ ಶಿಕ್ಷಣದಲ್ಲಿ (ದೃಷ್ಟಿದೋಷ, ಶ್ರವಣದೋಷ, ಬುದ್ಧಿಮಾಂದ್ಯ & ಸ್ಪಾಸ್ಟಿಕ್) ಬಿ.ಎಡ್. ಹೊಂದಿರಬೇಕು. ಶಿಕ್ಷಕರ ಶೈಕ್ಷಣಿಕ ತರಬೇತಿಯು ಆರ್.ಸಿ.ಐ./ರಾಜ್ಯ ಸರ್ಕಾರದಿಂದ ಅಂಗೀಕೃತವಾಗಿರಬೇಕು.

ಅಂಗವಿಕಲತೆಯನುಸಾರ ವಿಶೇಷ ಶಾಲೆಗಳಲ್ಲಿ ಇರಬೇಕಾದ ಶಿಕ್ಷಕರ ಸಂಖ್ಯೆ ಹಾಗೂ ಸಿಬ್ಬಂದಿಯವರ ವಿವರ :

1. 10 ಶ್ರವಣದೋಷವುಳ್ಳ ಮಕ್ಕಳಿಗೆ ಒಬ್ಬ ಶಿಕ್ಷಕರು, 12 ದೃಷ್ಟಿದೋಷವುಳ್ಳ ಮಕ್ಕಳಿಗೆ ಒಬ್ಬ ಶಿಕ್ಷಕರು ಹಾಗೂ ಪ್ರತಿ 07 ಬುದ್ಧಿಮಾಂದ್ಯ ಅಥವಾ ಸ್ಪಾಸ್ಟಿಕ್ ಮಕ್ಕಳಿಗೆ ಒಬ್ಬರು ಶಿಕ್ಷಕರ ಅನುಪಾತದಂತೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು.
2. 75 ಶ್ರವಣದೋಷವುಳ್ಳ ಮಕ್ಕಳಿಗೆ ಒಬ್ಬರಂತೆ ಸ್ಪೀಚ್ ಥೆರಪಿಸ್ಟ್‌ನ್ನು ನೇಮಿಸಿಕೊಳ್ಳುವುದು.
3. ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆಯಲ್ಲಿ 50 ಮಕ್ಕಳಿಗೆ ಒಬ್ಬರಂತೆ ಫಿಜಿಯೋಥೆರಪಿಸ್ಟ್‌ನ್ನು ನೇಮಕ ಮಾಡಿಕೊಳ್ಳುವುದು.
4. ದೃಷ್ಟಿದೋಷ ಅಥವಾ ಶ್ರವಣದೋಷವುಳ್ಳ ಮಕ್ಕಳಿಗೆ ಪ್ರತ್ಯೇಕವಾಗಿ ಪ್ರಾಥಮಿಕ ಶಾಲೆ ನಡೆಸುತ್ತಿದ್ದಲ್ಲಿ ಅಥವಾ 7 ವಿಭಾಗಗಳನ್ನು ಹೊಂದಿರುವ ಬುದ್ಧಿಮಾಂದ್ಯ ಅಥವಾ ಸ್ಪಾಸ್ಟಿಕ್ ಮಕ್ಕಳ ಶಾಲೆಗೆ ಓರ್ವ ಮುಖ್ಯೋಪಾಧ್ಯಾಯರನ್ನು ನೇಮಿಸಿಕೊಳ್ಳುವುದು. ಪ್ರಾಥಮಿಕ ಶಾಲೆಯನ್ನು ಪ್ರೌಢಶಾಲೆಯೊಂದಿಗೆ ನಡೆಸುತ್ತಿದ್ದಲ್ಲಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಸಂಪೂರ್ಣ ಶಾಲೆಯ ಆಡಳಿತವನ್ನು ನೋಡಿಕೊಳ್ಳತಕ್ಕದ್ದು.
5. ದೃಷ್ಟಿದೋಷವುಳ್ಳ ಮಕ್ಕಳ ಶಾಲೆಗೆ ಓರ್ವ ಚಲನವಲನ ಶಿಕ್ಷಕರು, ಸಂಗೀತ ಶಿಕ್ಷಕರನ್ನು ಅನುಬಂಧದಲ್ಲಿರುವಂತೆ ನೇಮಿಸಿಕೊಳ್ಳುವುದು.
6. ದೃಷ್ಟಿದೋಷ ಅಥವಾ ಶ್ರವಣದೋಷವುಳ್ಳ ಮಕ್ಕಳ ಪ್ರೌಢಶಾಲಾ ವಿಭಾಗಕ್ಕೆ ಓರ್ವ ಮುಖ್ಯೋಪಾಧ್ಯಾಯರನ್ನು ನೇಮಿಸಿಕೊಳ್ಳುವುದು. ಇವರೊಂದಿಗೆ 03 ಪದವೀಧರ ಸಹಾಯಕರನ್ನು ನೇಮಿಸಿಕೊಳ್ಳುವುದು. ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರಿಗೆ ಪದವಿಯೊಂದಿಗೆ ಬಿ.ಎಡ್. ಹಾಗೂ ವಿಶೇಷ ಶಿಕ್ಷಣದಲ್ಲಿ (ದೃಷ್ಟಿದೋಷ, ಶ್ರವಣದೋಷ, ಬುದ್ಧಿಮಾಂದ್ಯ & ಸ್ಪಾಸ್ಟಿಕ್) ಡಿಪ್ಲೋಮಾ ಅಥವಾ ಪದವಿಯೊಂದಿಗೆ ವಿಶೇಷ ಶಿಕ್ಷಣದಲ್ಲಿ (ದೃಷ್ಟಿದೋಷ, ಶ್ರವಣದೋಷ, ಬುದ್ಧಿಮಾಂದ್ಯ & ಸ್ಪಾಸ್ಟಿಕ್) ಬಿ.ಎಡ್. ಹೊಂದಿರಬೇಕು.
7. 4 ರಿಂದ 6 ವರ್ಷದೊಳಗಿನ ಶ್ರವಣದೋಷ/ಬುದ್ಧಿಮಾಂದ್ಯ ಮತ್ತು ಸ್ಪಾಸ್ಟಿಕ್ ಮಕ್ಕಳಿಗೆ ಶಾಲಾ ಪೂರ್ವದಲ್ಲಿ ಅವರನ್ನು ಶೈಕ್ಷಣಿಕವಾಗಿ ಸಿದ್ದತೆಗೊಳಿಸಲು 2 ವರ್ಷದ ಶಾಲಾ ಪೂರ್ವ ಶಿಕ್ಷಣ ನೀಡಲು ಪ್ರತ್ಯೇಕ ವಿಭಾಗವನ್ನು ಶಾಲೆಯಲ್ಲಿ ನಡೆಸಬಹುದಾಗಿದೆ. ಈ ವಿಭಾಗದಲ್ಲಿ ಕನಿಷ್ಠ 7 ಮಕ್ಕಳ ದಾಖಲಾಗಿರಬೇಕು ಹಾಗೂ ಈ ವಿಭಾಗದ ಶಿಕ್ಷಕರಿಗೂ ಪಿ.ಯು.ಸಿ. ಹಾಗೂ ವಿಶೇಷ ಶಿಕ್ಷಣದಲ್ಲಿ ಡಿಪ್ಲೋಮಾ ಶಿಕ್ಷಣಿಕ ಅರ್ಹತೆಯನ್ನು ಹೊಂದಿರಬೇಕು.
8. ಪ್ರತಿ ವಿಶೇಷ ಶಾಲೆಯಲ್ಲಿನ ಅಂಗವಿಕಲ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ದೃಷ್ಟಿಯಲ್ಲಿ ವೃತ್ತಿಪರ ಶಿಕ್ಷಣ ನೀಡುವ ಅಗತ್ಯತೆಯನ್ನು ಮನಗಂಡು ಅಂಗವಿಕಲತೆಗನುಸಾರ ಸೂಕ್ತವಾದ ವೃತ್ತಿಗಳಲ್ಲಿ ತರಬೇತಿಯನ್ನು ನೀಡಲು ಅವಕಾಶ ನೀಡಿದೆ. ಪ್ರತಿ ವಿಶೇಷ ಶಾಲೆಗೆ ಇಬ್ಬರು ವೃತ್ತಿಪರ ಶಿಕ್ಷಕರನ್ನು ಗೌರವಧನ ಆಧಾರದ ಮೇಲೆ ನೇಮಿಸಿಕೊಳ್ಳಬಹುದಾಗಿದೆ. ವೃತ್ತಿಪರ ಶಿಕ್ಷಕರು ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಹಾಗೂ ಸಂಬಂಧಪಟ್ಟ ವೃತ್ತಿಯಲ್ಲಿ ಸರ್ಟಿಫಿಕೇಟ್/ಡಿಪ್ಲೋಮಾ ಶೈಕ್ಷಣಿಕ ಅರ್ಹತೆಯನ್ನು ಹೊಂದಿರಬೇಕಿದೆ. (ವೃತ್ತಿಪರ ಕೋರ್ಸ್‌ನ್ನು ಅನುಬಂಧದಲ್ಲಿ ಲಗತ್ತಿಸಿದೆ).
9. ವಿಶೇಷ ಶಾಲೆಗಳಿಗೆ ಅಂಗವಿಕಲತೆಯನುಸಾರ ನಿಗದಿಗೊಳಿಸಿರುವ ಅನುದಾನದ ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಮಂಜೂರಾತಿ ಪ್ರಾಧಿಕಾರ :

ಸಹಾಯಧನದ ಮಂಜೂರಾತಿ ಅಧಿಕಾರವು ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಒಳಪಟ್ಟಿರುತ್ತದೆ ಹಾಗೂ ನಿರ್ದೇಶಕರ ಮತ್ತು ಸರ್ಕಾರದ ವಿವೇಚನಾಧಿಕಾರದಲ್ಲಿ ಸಹಾಯಧನವನ್ನು ಮಂಜೂರು ಮಾಡಲಾಗುವುದು.

ಸಹಾಯಧನವನ್ನು ಅನುಬಂಧದಲ್ಲಿ ತಿಳಿಸಿರುವ ಐಟಂವಾರು ಅಂಶಗಳಿಗೆ ವಿದ್ಯಾರ್ಥಿಗಳ ಸಂಖ್ಯೆಗಳನ್ನು ಆಧರಿಸಿ ಮಂಜೂರು ಮಾಡಲಾಗುವುದು.

ಪ್ರತಿ ಅಂಗವಿಕಲತೆಯ ಶಾಲೆಯಲ್ಲಿ ಕನಿಷ್ಠ 25 ಅಂಗವಿಕಲ ಮಕ್ಕಳಿದ್ದಲ್ಲಿ ಮಾತ್ರ ಈ ಸಹಾಯಧನಕ್ಕೆ ಪರಿಗಣಿಸಲಾಗುವುದು. ವಸತಿರಹಿತ ಶಾಲೆಯಾದಲ್ಲಿ ಒಂದು ಮಗುವಿಗೆ ಮಾಹೆಯಾನ ರೂ.2000/– ರಂತೆ ವಸತಿಯುತ ಶಾಲೆಯಾದಲ್ಲಿ ಒಂದು ಮಗುವಿಗೆ ಮಾಹೆಯಾನ ರೂ.2500/– ರಂತೆ ಅನುದಾನವನ್ನು ನೀಡಲಾಗುವುದು. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನೀಡುವ ಈ ಸಹಾಯಧನದಲ್ಲಿಯೇ ಎಲ್ಲಾ ವೆಚ್ಚವನ್ನು ಭರಿಸತಕ್ಕದ್ದು. (ಈ ವೆಚ್ಚಕ್ಕೆ ಸಂಬಂಧಿಸಿದ ವಿವರಗಳನ್ನು ಅನುಬಂಧ–1 ರಲ್ಲಿ ನಮೂದಿಸಿದೆ).

ವೈದ್ಯಕೀಯ ವೆಚ್ಚವನ್ನು ಮಕ್ಕಳಿಗೆ ವೈದ್ಯೋಪಚಾರಗಳನ್ನು ನೀಡಿರುವ ಬಗ್ಗೆ ಸೂಕ್ತ ವೈದ್ಯಕೀಯ ದಾಖಲೆಗಳನ್ನು ನಿರ್ವಹಿಸಿ ಸಲ್ಲಿಸಿದಲ್ಲಿ ಮಾತ್ರ ಈ ಬಗ್ಗೆ ನಿಗದಿಗೊಳಿಸಿರುವ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು. ಪ್ರತಿ ಮಗುವಿಗೆ ತಗಲುವ ಸಾರಿಗೆ ಹಾಗೂ ಸಮವಸ್ತ್ರ ವೆಚ್ಚವನ್ನು ಪೋಷಕರ ಹಾಗೂ ಮಗುವಿನ ಹೆಸರಿನಲ್ಲಿ ಜಂಟಿ ಖಾತೆಯನ್ನು ಬ್ಯಾಂಕಿನಲ್ಲಿ ತೆರೆಸಿ ಅಲ್ಲಿಗೆ ಜಮಾ ಮಾಡತಕ್ಕದ್ದು.

ಪಠ್ಯವಸ್ತು :

ದೃಷ್ಟಿದೋಷ ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಾಲೆಗಳಲ್ಲಿ ಶಿಕ್ಷಣ ಇಲಾಖೆಯಿಂದ ನಿಗದಿಗೊಳಿಸಲಾದ ಪಠ್ಯವಸ್ತುವನ್ನು ಹಾಗೂ ಪರೀಕ್ಷಾ ಕ್ರಮವನ್ನು ಅನುಸರಿಸತಕ್ಕದ್ದು. ಬುದ್ಧಿಮಾಂದ್ಯ & ಸ್ಪ್ಯಾಸ್ಟಿಕ್ ಮಕ್ಕಳ ವಿಶೇಷ ಶಾಲೆಗಳಲ್ಲಿ ಪಠ್ಯವಸ್ತು ಹಾಗೂ ಪರೀಕ್ಷಾ ಕ್ರಮವನ್ನು ಆರ್.ಸಿ.ಐ. ದೆಹಲಿ ಅಥವಾ ಎನ್.ಐ.ಎಂ.ಹೆಚ್. (ರಾಷ್ಟ್ರೀಯ ಬುದ್ದಿಮಾಂದ್ಯ ಮಕ್ಕಳ ಸಂಸ್ಥೆ) ಹೈದರಾಬಾದ್ ರವರು ನಿಗದಿಗೊಳಿಸಿದಂತೆ ಅನುಸರಿಸತಕ್ಕದ್ದು.

ಸಹಾಯಧನ ಪರಾಮರ್ಶೆ:

ಸಹಾಯಧನದ ಮೊತ್ತವನ್ನು 05 ವರ್ಷಕ್ಕೊಮ್ಮೆ ಪರಿಶೀಲಿಸಿ ಸಹಾಯಧನದ ಮೊತ್ತವನ್ನು ಪರಾಮರ್ಶಿಸಲಾಗುವುದು.

ಅರ್ಜಿಗಳನ್ನು ಸಲ್ಲಿಸುವ ವಿಧಾನ :

1. ಸಹಾಯಧನಕ್ಕೆ ಅರ್ಜಿಗಳನ್ನು ಸಲ್ಲಿಸುವ ಮೊದಲು ಸಂಸ್ಥೆಯು ಶಾಲೆಯನ್ನು ಪ್ರಾರಂಭಿಸಲು ನಿರ್ದೇಶಕರು ಅಂಗವಿಕಲರ ಕಲ್ಯಾಣ ಇಲಾಖೆ ಬೆಂಗಳೂರು ರವರಿಂದ ಅನುಮತಿ ಪಡೆದಿರಬೇಕು.
2. ಈ ಯೋಜನೆಗೆ ಲಗತ್ತಿಸಿರುವ ಅರ್ಜಿ ನಮೂನೆಯಲ್ಲಿ ಅನುದಾನದ ಅರ್ಜಿಯನ್ನು ಅಗತ್ಯವಾದ ಎಲ್ಲಾ ದಾಖಲೆಗಳೊಂದಿಗೆ ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು.
3. ಸಹಾಯಧನದ ಅರ್ಜಿಗೆ ಈ ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ಲಗತ್ತಿಸಿರಬೇಕು.
   ಅ. ಸಂಸ್ಥೆಯ ಧ್ಯೇಯೋದ್ದೇಶದ ಪ್ರತಿಗಳು.
   ಆ. ಆಡಳಿತ ಮಂಡಳಿಯ ಸಂವಿಧಾನ, ಹಾಲಿ ಇರುವ ಸದಸ್ಯರ ಪಟ್ಟಿ, ಇತರೆ ವಿವರ.
   ಇ. ಹಿಂದಿನ 02 ವರ್ಷಗಳ ವಾರ್ಷಿಕ ವರದಿ ಹಾಗೂ ಆಡಿಟ್ ವರದಿ.
   ಈ. ಶಿಕ್ಷಕರ ವಿವರ ಪಟ್ಟಿ, ಮಕ್ಕಳ ವಿವರಗಳ ಪಟ್ಟಿ, ಶಾಲೆಯಲ್ಲಿರುವ ಮೂಲಭೂತ ಸೌಕರ್ಯಗಳ ಲಭ್ಯತೆ ಪಟ್ಟಿ, ಕಟ್ಟಡದ ನಕ್ಷೆ, ಬಾಡಿಗೆ ಕರಾರು ಪತ್ರ, ಇತ್ಯಾದಿ.)

ಸಂಸ್ಥೆಯು ನಿರ್ವಹಿಸಬೇಕಾದ ಲೆಕ್ಕ ಪತ್ರ ಮತ್ತಿತರ ದಾಖಲೆಗಳು :

1. ಫಲಾನುಭವಿಗಳ ಭಾವಚಿತ್ರ, ದಿನಾಂಕದ ದೃಢೀಕರಣ ಪತ್ರ ಮುಂತಾದವುಗಳನ್ನು ಒಳಗೊಂಡ ವೈಯಕ್ತಿಕ ಕಡತಗಳು.
2. ನಗದು ವಹಿ ಅನುದಾನದ ವಹಿ, ವೋಚರುಗಳು ಸಾರ್ವಜನಿಕರಿಂದ ವಂತಿಗೆ ಸ್ವೀಕರಿಸುತ್ತಿದ್ದಲ್ಲಿ ರಶೀದಿ ಪುಸ್ತಕಗಳು.
3. ಆಹಾರ ಸಾಮಗ್ರಿ ಮತ್ತು ದಾಸ್ತಾನು ವಿತರಣಾ ವಹಿ.
4. ಗೌರವಧನ ಬಟವಾಡೆ ವಹಿ.
5. ಸಾದಿಲ್ವಾರು ವೆಚ್ಚಗಳ ವಹಿ.
6. ದಾಸ್ತಾನು ವಹಿ.
7. ಶಾಲಾ ಮಕ್ಕಳ ದಾಖಲಾತಿ ವಹಿ.
8. ಹಾಜರಾತಿ ವಹಿ.
9. ಸಂಸ್ಥೆಯ ನೋಂದಣಿ ವಹಿ.
10. ಗ್ರಂಥಾಲಯ ಪುಸ್ತಕಗಳ ದಾಸ್ತಾನು ವಹಿ.

ಸಂಸ್ಥೆಯು ಸಹಾಯಧನ ಪ್ರಸ್ತಾವನೆಯನ್ನು ಸಲ್ಲಿಸುವಾಗ ಈ ಕೆಳಕಂಡಂತೆ ಪ್ರಮಾಣೀಕರಿಸಬೇಕು :

1. ಸಂಸ್ಥೆಯ ಆಡಳಿತ ಮತ್ತು ಆರ್ಥಿಕ ಸುಸ್ಥಿತಿಯ ಬಗ್ಗೆ ಪ್ರಮಾಣೀಕರಿಸಿರಬೇಕು.
2. ಸಹಾಯಧನವನ್ನು ಮಕ್ಕಳ ಶೈಕ್ಷಣಿಕ ಕಾರ್ಯಕ್ರಮಕ್ಕೆ ಮಾತ್ರ ಉಪಯೋಗಿಸುತ್ತೇವೆಂದು ಪ್ರಮಾಣೀಕರಿಸಬೇಕು.
3. ಸಹಾಯಧನ ದುರುಪಯೋಗವಾದ ಬಗ್ಗೆ ಆಗಲೀ ಅಥವಾ ಸರ್ಕಾರದ ಸೂಚನೆಗಳನ್ನು/ನಿರ್ದೇಶಕರು ನೀಡುವ ಸೂಚನೆಗಳನ್ನು ಪಾಲಿಸದೇ ಇರುವುದು ಕಂಡುಬಂದಲ್ಲಿ ತೆಗೆದುಕೊಂಡ ಸಹಾಯಧನವನ್ನು ಹಿಂದಿರುಗಿಸಲು ಸಿದ್ದರಿರುವುದಾಗಿ ಪ್ರಮಾಣೀಕರಿಸಿರಬೇಕು.
4. ಅನುದಾನವು ಮೇಲ್ಕಂಡ ಅಂಶಗಳನುಸಾರ ವಿದ್ಯಾರ್ಥಿಗಳ ಸಂಖ್ಯೆಯನ್ನಾಧರಿಸಿ ಬಿಡುಗಡೆ ಮಾಡಲಾಗುವುದು. ಸಂಸ್ಥೆಗೆ ಬಿಡುಗಡೆ ಆಗುವ ಅನುದಾನಕ್ಕಿಂತ ಹೆಚ್ಚಿನ ಅನುದಾನದ ಅವಶ್ಯಕತೆ ಇದ್ದಲ್ಲಿ ಸಂಸ್ಥೆಯು ತನ್ನ ಸಂಪನ್ಮೂಲದಿಂದಲೇ ಭರಿಸಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದಾಗಿ ಹಾಗೂ ಯಾವುದೇ ಕಾರಣಕ್ಕೂ ಅಂಗವಿಕಲ ವಿದ್ಯಾರ್ಥಿಗಳಿಗೆ ನೀಡುವ ಶೈಕ್ಷಣಿಕ ಗುಣಮಟ್ಟದ ಸೇವೆ ಸೌಲಭ್ಯಗಳನ್ನು ಕಡಿಮೆ ಮಾಡುವುದಿಲ್ಲವೆಂಬುದಾಗಿ ಪ್ರಮಾಣೀಕರಿಸಬೇಕು.

ಸಂಸ್ಥೆಗಳನ್ನು ರಾಜ್ಯ ಸಹಾಯಧನದಡಿ ಸೇರ್ಪಡೆ ಮಾಡಲು ಅನುಸರಿಸುವ ವಿಧಾನ :

1. ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಸ್ಥಳೀಯ ದಿನಪತ್ರಿಕೆ ಅಥವಾ ಇತರೆ ಮಾಧ್ಯಮಗಳ ಮೂಲಕ ಜಾಹೀರಾತು ನೀಡಿ ಸೂಕ್ತ ಹಾಗೂ ಆರ್ಥಿಕ ದೃಢತೆ ಹೊಂದಿರುವ 2005 ಮತ್ತು ಅದಕ್ಕಿಂತ ಮುಂಚೆ ಇಲಾಖೆಯಡಿ ವಿಶೇಷ ಶಾಲೆಗಳನ್ನು ನಡೆಸಲು ಅನುಮತಿ ಪಡೆದಂತಹ ಸಂಸ್ಥೆಗಳಿಂದ ನಿಗದಿತ ಅರ್ಜಿ ನಮೂನೆಗಳಲ್ಲಿ ನಿಗದಿಗೊಳಿಸಿದಂತಹ ದಿನಾಂಕದೊಳಗೆ ಸ್ವೀಕರಿಸುವುದು.
2. ಅರ್ಜಿಗಳನ್ನು ಜೇಷ್ಠತೆ ಹಾಗೂ ಸಂಸ್ಥೆಯು ಹೊಂದಿರುವ ಮೂಲಭೂತ ಸೌಕರ್ಯ, ಶಿಕ್ಷಕರ ಲಭ್ಯತೆ ಹಾಗೂ ಇತರೆ ಅಂಶಗಳನ್ನು ಗಮನದಲ್ಲಿರಿಸಿ ಪ್ರಸ್ತಾವನೆಯನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯ ಪರಿಶೀಲನೆಗಾಗಿ ಸಲ್ಲಿಸಿ ನಂತರ ಸಮಿತಿಯ ಶಿಫಾರಸ್ಸಿನೊಂದಿಗೆ ನಿಗದಿತ ದಿನಾಂಕದೊಳಗೆ ನಿರ್ದೇಶನಾಲಯಕ್ಕೆ ಸಲ್ಲಿಸಬೇಕಾಗುತ್ತದೆ.
3. ಜಿಲ್ಲಾ ಮಟ್ಟದ ಸಮಿತಿಯು ಕೆಳಕಂಡಂತೆ ರಚಿತವಾಗಿರುತ್ತದೆ.

ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್	–	ಅಧ್ಯಕ್ಷರು
ಉಪ ನಿರ್ದೇಶಕರು, ಸರ್ವ ಶಿಕ್ಷ ಅಭಿಯಾನ	–	ಸದಸ್ಯರು
ಜಿಲ್ಲಾ ಆರೋಗ್ಯಾಧಿಕಾರಿಗಳು, ಆರೋಗ್ಯ ಇಲಾಖೆ	–	ಸದಸ್ಯರು
ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು	–	ಸದಸ್ಯ ಕಾರ್ಯದರ್ಶಿ
ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು	–	03 ಸದಸ್ಯರು (ಅಂಗವಿಕಲತೆ ಅನುಸಾರ–ದೃಷ್ಟಿದೋಷ, ಬುದ್ಧಿಮಾಂದ್ಯತೆ, ಶ್ರವಣದೋಷ)

ಜಿಲ್ಲಾ ಸಮಿತಿಯಲ್ಲಿ ಸ್ವಯಂ ಸೇವಾ ಸಂಸ್ಥೆಯ ಸದಸ್ಯರನ್ನು ನೇಮಕ ಮಾಡಲು ಆಯಾ ಕ್ಷೇತ್ರದಲ್ಲಿ ಕನಿಷ್ಠ 5 ರಿಂದ 10 ವರ್ಷ ಅನುಭವ ಹೊಂದಿರುವಂತಹ ಹಾಗೂ ಉತ್ತಮ ಸೇವಾ ಹಿರಿತನದ ಹಿನ್ನೆಲೆಯುಳ್ಳ ಸಂಸ್ಥೆಯ ಸದಸ್ಯರನ್ನು ಮಾತ್ರ ಆಯ್ಕೆ ಮಾಡುವುದು ಸಮಿತಿಯ ಅಧ್ಯಕ್ಷರ ವಿವೇಚನೆಗೆ ಒಳಪಟ್ಟಿರುತ್ತದೆ. ಈ ಸದಸ್ಯರುಗಳ ಸದಸ್ಯತ್ವದ ಅವಧಿಯು 03 ವರ್ಷದವರೆಗೆ ಇರುತ್ತದೆ.

4. ಜಿಲ್ಲಾ ಸಮಿತಿಯಿಂದ ಸ್ವೀಕೃತಗೊಂಡಂತಹ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದಲ್ಲಿ ರಚಿತವಾದ ಸಮಿತಿಯು ಪುನರ್ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಅನುಮೋದನೆಗೆ ಸಲ್ಲಿಸುವುದು. ರಾಜ್ಯ ಮಟ್ಟದ ಸಮಿತಿಯು ಕೆಳಕಂಡ ಸದಸ್ಯರನ್ನು ಹೊಂದಿರುತ್ತದೆ.

ನಿರ್ದೇಶಕರು, ಅಂಗವಿಕಲರ & ಹಿರಿಯ ನಾಗರಿಕರ ಕಲ್ಯಾಣ ಇಲಾಖೆ	–	ಅಧ್ಯಕ್ಷರು
ಉಪ ನಿರ್ದೇಶಕರು, ಅಂಗವಿಕಲರ & ಹಿರಿಯ ನಾಗರಿಕರ ಕಲ್ಯಾಣ ಇಲಾಖೆ	–	ಸದಸ್ಯರು
ಸಹಾಯಕ ನಿರ್ದೇಶಕರು, ಅಂಗವಿಕಲರ & ಹಿರಿಯ ನಾಗರಿಕರ ಕಲ್ಯಾಣ ಇಲಾಖೆ	–	ಸದಸ್ಯ ಕಾರ್ಯದರ್ಶಿ
ಜಂಟಿ ನಿರ್ದೇಶಕರು, ಸರ್ವ ಶಿಕ್ಷ ಅಭಿಯಾನ, ಶಿಕ್ಷಣ ಇಲಾಖೆ	–	ಸದಸ್ಯರು
ಮನಶಾಸ್ತ್ರಜ್ಞರು, ನಿಮ್ಹಾನ್ಸ್, ಬೆಂಗಳೂರು	–	ಸದಸ್ಯರು

ವಿಶೇಷ ಸೂಚನೆ : ಯೋಜನೆಗೆ ಸಂಬಂಧಿಸಿದಂತೆ ಇತರೆ ವಿವರಗಳನ್ನು ಅನುಬಂಧ–1 ರಿಂದ 6 ರಲ್ಲಿ ವಿವರಿಸಿದೆ.

ಅನುಬಂಧ–1

1. ಶೈಕ್ಷಣಿಕ ಕಲಿಕೆಗೆ ಒಳಪಡುವ ಬುದ್ಧಿಮಾಂದ್ಯ ಮಕ್ಕಳ ವಿಶೇಷ ವಸತಿಯುತ ಶಾಲೆ (Special school for Educable Mentally Retarded)

ಮಕ್ಕಳ ಸಂಖ್ಯೆ – 50

ಶಿಕ್ಷಕರ ಮಕ್ಕಳ ಅನುಪಾತ 1:7

ಕ್ರ ಸಂ.	ವಿವರ	ಶೈಕ್ಷಣಿಕ ಅರ್ಹತೆ	ಸಿಬ್ಬಂದಿಗಳ ಸಂಖ್ಯೆ	ಗೌರವಧನ ರೂ.	ಒಟ್ಟು ವಾರ್ಷಿಕ ಮೊತ್ತ ರೂ.
1.	ಮುಖ್ಯೋಪಾಧ್ಯಾಯರು	ಪದವಿಯೊಂದಿಗೆ ಡಿಪ್ಲೊಮಾ ಇನ್ ಎಂ.ಆರ್.	01	8500	102000
2.	ಸಹಾಯಕ ಶಿಕ್ಷಕರು (ಪೂರ್ವ ಶಾಲಾ ಶಿಕ್ಷಣ–15 ಫಲಾನುಭವಿಗಳು)	ಪಿ.ಯು.ಸಿ. ಡಿಪ್ಲೊಮಾ ಇನ್ ಎಂ.ಆರ್.	02	6000	144000
3.	ಸಹಾಯಕ ಶಿಕ್ಷಕರು	ಪಿ.ಯು.ಸಿ. ಡಿಪ್ಲೊಮಾ ಇನ್ ಎಂ.ಆರ್.	04	6000	288000
4.	ಸ್ಪೀಚ್ ಥೆರಪಿಸ್ಟ್ ಅರೆಕಾಲಿಕ, 01 ಭೇಟಿಗೆ ರೂ.500/– ವಾರಕ್ಕೆ 02 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿ ನಿರತರು	01	4000	48000
5.	ಫಿಜಿಯೋಥೆರಪಿಸ್ಟ್ ಅರೆಕಾಲಿಕ, 01 ಭೇಟಿಗೆ ರೂ.500/– ವಾರಕ್ಕೆ 02 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿ ನಿರತರು	01	4000	48000
6.	ಆಕ್ಯುಪೇಷನಲ್ ಥೆರಪಿಸ್ಟ್ ಅರೆಕಾಲಿಕ, 01 ಭೇಟಿಗೆ ರೂ.500/– ವಾರಕ್ಕೆ 02 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿ ನಿರತರು	01	4000	48000

7.	ಮನೋವೈದ್ಯರು ಅರೆಕಾಲಿಕ, 01 ಭೇಟಿಗೆ ರೂ.500/- ವಾರಕ್ಕೆ 02 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿ ನಿರತರು	01	4000	48000
8.	ವೈದ್ಯರು ಅರೆಕಾಲಿಕ, 01 ಭೇಟಿಗೆ ರೂ.500/- ವಾರಕ್ಕೆ 01 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿ ನಿರತರು	01	2000	24000
		ವಸತಿ ವಿಭಾಗ			
1.	ವಾರ್ಡನ್ (50 ಫಲಾನುಭವಿಗಳಿಗೆ) ಇರುವ ಒಬ್ಬ ಸಿಬ್ಬಂದಿಗೆ ಹೆಚ್ಚುವರಿ ಭತ್ಯೆ ಮಾಹೆಯಾನ ರೂ. 1000/-		01	1000	12000
2.	ಅಡಿಗೆಯವರು (50 ಫಲಾನುಭವಿಗಳಿಗೆ)		01	3750	45000
3.	ಆಯಾ (ವಸತಿಯುತ ಶಾಲೆಗೆ 25 ಫಲಾನುಭವಿಗಳಿಗೆ ಒಬ್ಬರಂತೆ)	4ನೇ ತರಗತಿ	02	3500	84000
4.	ಸ್ವೀಪರ್	4ನೇ ತರಗತಿ	01	3500	42000
5.	ವಸತಿಯುತ ಮಕ್ಕಳ ನಿರ್ವಹಣಾ ವೆಚ್ಚ-ಮಾಹೆಯಾನ ರೂ. 600*25*10		50		300000
6.	ಯೂನಿಫಾರಂ (ಐವತ್ತು ಫಲಾನುಭವಿಗಳಿಗೆ 600X50)		50		30000
7.	ವೈದ್ಯಕೀಯ ವೆಚ್ಚ (ಐವತ್ತು ಫಲಾನುಭವಿಗಳಿಗೆ 1000X50)		50		50000
		ವಸತಿ ರಹಿತ ಫಲಾನುಭವಿಯ ಖರ್ಚು			
1.	ಶಿಕ್ಷಕರ ಗೌರವಧನ				1080000
2.	ಸಾರಿಗೆ ವೆಚ್ಚ	50*150*10			75000
3.	ಉಪಹಾರ ವೆಚ್ಚ	250*10*50			125000
4.	ಯೂನಿಫಾರಂ	600*50			30000
5.	ವೈದ್ಯಕೀಯ ವೆಚ್ಚ	500*50			25000

2. ದೃಷ್ಟಿದೋಷವುಳ್ಳ ಮಕ್ಕಳ ವಿಶೇಷ ಶಾಲೆ

ಮಕ್ಕಳ ಸಂಖ್ಯೆ - 50+25

ಶಿಕ್ಷಕರ ಮಕ್ಕಳ ಅನುಪಾತ 1:12

ಕ್ರ ಸಂ.	ವಿವರ	ಶೈಕ್ಷಣಿಕ ಅರ್ಹತೆ	ಸಿಬ್ಬಂದಿಗಳ ಸಂಖ್ಯೆ	ಗೌರವಧನ ರೂ.	ಒಟ್ಟು ವಾರ್ಷಿಕ ಮೊತ್ತ ರೂ.
1.	ಮುಖ್ಯೋಪಾಧ್ಯಾಯರು 1 ರಿಂದ 7ನೇ ತರಗತಿ	ಪದವಿಯೊಂದಿಗೆ ಡಿಪ್ಲೊಮಾ ಇನ್ ವಿ.ಐ.	01	8500	102000
2.	ಸಹಾಯಕ ಶಿಕ್ಷಕರು	ಪಿ.ಯು.ಸಿ. ಡಿಪ್ಲೊಮಾ ಇನ್ ವಿ.ಐ.	04	6000	288000
3.	ಬ್ರೈಲ್ ಶಿಕ್ಷಕರು	ಪಿ.ಯು.ಸಿ. ಡಿಪ್ಲೊಮಾ ಇನ್ ವಿ.ಐ.	01	6000	72000
4.	ಚಲನವಲನ ಬೋಧಕರು (50 ಫಲಾನುಭವಿಗಳಿಗೆ)	ಪಿ.ಯು.ಸಿ. ಚಲನವಲನ ತರಬೇತಿಯೊಂದಿಗೆ	01	6000	72000
5.	ಸಂಗೀತ ಶಿಕ್ಷಕರು	ಪಿ.ಯು.ಸಿ. ಸಂಗೀತದಲ್ಲಿ ಸೀನಿಯರ್ ಪರೀಕ್ಷೆ	01	6000	72000
6.	ಫಿಜಿಯೋಥೆರಪಿಸ್ಟ್ ಅರೆಕಾಲಿಕ, 01 ಭೇಟಿಗೆ ರೂ.500/- ವಾರಕ್ಕೆ 02 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿಪರ	01	4000	48000
7.	ಯೋಗ/ದೈಹಿಕ ಶಿಕ್ಷಕರು, ಅರೆಕಾಲಿಕ, 01 ಭೇಟಿಗೆ ರೂ.250/- ವಾರಕ್ಕೆ 04 ಭೇಟಿ (50 ಫಲಾನುಭವಿಗಳಿಗೆ)	ಪಿ.ಯು.ಸಿ. ಹಾಗೂ ಯೋಗ/ದೈಹಿಕ ಶಿಕ್ಷಣದಲ್ಲಿ ತರಬೇತಿ	01	4000	48000

8.	ವೈದ್ಯರು ಅರೆಕಾಲಿಕ, 01 ಭೇಟಿಗೆ ರೂ.500/- ವಾರಕ್ಕೆ 01 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿಪರ	01	2000	24000
9.	ಲೆಕ್ಕ ಸಹಾಯಕರು	ಪಿ.ಯು.ಸಿ./ಪದವಿಯೊಂದಿಗೆ ಕಂಪ್ಯೂಟರ್ ಜ್ಞಾನ	01	5000	60000
10.	ಗ್ರೂಪ್-ಡಿ ಮತ್ತು ಸ್ವೀಪರ್	4ನೇ ತರಗತಿ	02	3500	84000
ಪ್ರೌಢಶಾಲಾ ವಿಭಾಗ (25 ಮಕ್ಕಳಿಗೆ)					
1.	ಮುಖ್ಯೋಪಾಧ್ಯಾಯರು 8 ರಿಂದ 10ನೇ ತರಗತಿ	ಪದವಿ+ಬಿ.ಎಡ್. ಹಾಗೂ ಡಿಪ್ಲೋಮಾ ಇನ್ ವಿ.ಐ. ಅಥವಾ ಪದವಿ+ಬಿ.ಎಡ್. ವಿ.ಐ.	01	11000	132000
2.	ಪದವೀಧರ ಸಹಾಯಕ ಶಿಕ್ಷಕರು	ಪದವಿ (ವಿಷಯವಾರು) + ಬಿ.ಎಡ್. ಹಾಗೂ ಡಿಪ್ಲೋಮಾ ಇನ್ ವಿ.ಐ. ಅಥವಾ ಪದವಿ + ಬಿ.ಎಡ್. ವಿ.ಐ.	03	8500	306000
3.	ವೃತ್ತಿ ಶಿಕ್ಷಕರು ಭೇಟಿಗೆ, ರೂ.250/- ವಾರಕ್ಕೆ 04 ಭೇಟಿ (50 ಫಲಾನುಭವಿಗಳಿಗೆ)	ಎಸ್.ಎಸ್.ಎಲ್.ಸಿ./ ಪಿ.ಯು.ಸಿ. ಸಂಬಂಧಪಟ್ಟ ವೃತ್ತಿಯಲ್ಲಿ ಸರ್ಟಿಫಿಕೇಟ್/ಡಿಪ್ಲೊಮಾ	02	4000	96000
ವಸತಿಯುತ ಶಾಲೆ (ಪ್ರೌಢಶಾಲೆಯೊಂದಿಗೆ)					
1.	ವಾರ್ಡನ್ (50 ಫಲಾನುಭವಿಗಳಿಗೆ) ಇರುವ ಒಬ್ಬ ಸಿಬ್ಬಂದಿಗೆ ಹೆಚ್ಚುವರಿ ಭತ್ಯೆ ಮಾಹೆಯಾನ ರೂ.1000/-		01	1000	12000
2.	ಅಡುಗೆಯವರು (50 ಫಲಾನುಭವಿಗಳಿಗೆ)		01	3750	45000
3.	ಆಯಾ (ವಸತಿಯುತ ಶಾಲೆಗೆ) 25:1	4ನೇ ತರಗತಿ	02	3500	74000
4.	ವಸತಿಯುತ ಮಕ್ಕಳ ನಿರ್ವಹಣಾ ವೆಚ್ಚ ಮಾಹೆಯಾನ ರೂ. 600*75*10		75		450000
5.	ಯೂನಿಫಾರಂ (ಐವತ್ತು ಫಲಾನುಭವಿಗಳಿಗೆ 600X75)		75		45000
6.	ವೈದ್ಯಕೀಯ ವೆಚ್ಚ (ಐವತ್ತು ಫಲಾನುಭವಿಗಳಿಗೆ 500X75)		75		37500
ವಸತಿ ರಹಿತ ಪ್ರೌಢಶಾಲೆಯೊಂದಿಗೆ					
4.	ಶಿಕ್ಷಕರ ಗೌರವಧನ				1404000
2.	ಸಾರಿಗೆ ವೆಚ್ಚ	150*10*75			112500
3.	ಉಪಹಾರ ವೆಚ್ಚ	250*10*75			187500
4.	ಯೂನಿಫಾರಂ	600*75			45000
5.	ವೈದ್ಯಕೀಯ ವೆಚ್ಚ	500*75			37500

3. ಶ್ರವಣದೋಷ ಮಕ್ಕಳ ವಿಶೇಷ ಶಾಲೆ

ಮಕ್ಕಳ ಸಂಖ್ಯೆ -- 50+25

ಶಿಕ್ಷಕರ ಮಕ್ಕಳ ಅನುಪಾತ 1:10

ಕ್ರ. ಸಂ.	ವಿವರ	ಶೈಕ್ಷಣಿಕ ಅರ್ಹತೆ	ಸಿಬ್ಬಂದಿಗಳ ಸಂಖ್ಯೆ	ಗೌರವಧನ ರೂ.	ಒಟ್ಟು ವಾರ್ಷಿಕ ಮೊತ್ತ ರೂ.
1.	ಮುಖ್ಯೋಪಾಧ್ಯಾಯರು 1 ರಿಂದ 7ನೇ ತರಗತಿಯವರೆಗೆ	ಪದವಿಯೊಂದಿಗೆ ಡಿಪ್ಲೊಮಾ ಇನ್ ಹೆಚ್.ಐ.	01	8500	102000
2.	ಸಹಾಯಕ ಶಿಕ್ಷಕರು	ಪಿ.ಯು.ಸಿ. ಡಿಪ್ಲೊಮಾ ಇನ್ ಹೆಚ್.ಐ.	03	6000	216000
	ಸಹಾಯಕ ಶಿಕ್ಷಕರು (ಪೂರ್ವ ಶಾಲಾ ಶಿಕ್ಷಣ-15 ಫಲಾನುಭವಿಗಳು)	ಪಿ.ಯು.ಸಿ. ಡಿಪ್ಲೊಮಾ ಇನ್ ಎಂ.ಆರ್.	02	6000	144000
3.	ಸ್ಪೀಚ್ ಥೆರಪಿಸ್ಟ್ (50 ಫಲಾನುಭವಿಗಳಿಗೆ) ಅರೆಕಾಲಿಕ, 01 ಭೇಟಿಗೆ ರೂ.500/- ವಾರಕ್ಕೆ 02 ಭೇಟಿ	ಬಿ.ಎಸ್.ಸಿ., ಸ್ಪೀಚ್ & ಹಿಯರಿಂಗ್	02	8000	96000

4.	ಕಿವಿ ಮೂಗು ಮತ್ತು ಗಂಟಲಿನ ತಜ್ಞರು (50 ಫಲಾನುಭವಿಗಳಿಗೆ) ಅರೆಕಾಲಿಕ, 01 ಭೇಟಿಗೆ ರೂ.500/- ವಾರಕ್ಕೆ 02 ಭೇಟಿ	ವೃತ್ತಿಪರ	01	4000	48000
5.	ಕರಕುಶಲ ಶಿಕ್ಷಕರು, ಅರೆಕಾಲಿಕ, 01 ಭೇಟಿಗೆ ರೂ.250/- ವಾರಕ್ಕೆ 04 ಭೇಟಿ	ಎಸ್.ಎಸ್.ಎಲ್.ಸಿ., ಡಿಪ್ಲೋಮಾ ಇನ್ ಕ್ರಾಫ್ಟ್	01	4000	48000
6.	ದೈಹಿಕ ಶಿಕ್ಷಕರು, ಅರೆಕಾಲಿಕ, 01 ಭೇಟಿಗೆ ರೂ.250/- ವಾರಕ್ಕೆ 04 ಭೇಟಿ (50 ಫಲಾನುಭವಿಗಳಿಗೆ)	ಪಿ.ಯು.ಸಿ. ಡಿಪ್ಲೋಮಾ ಇನ್ ಪಿ.ಟಿ.		4000	48000
7.	ವೈದ್ಯರು, ಅರೆಕಾಲಿಕ, 01 ಭೇಟಿಗೆ ರೂ.500/- ವಾರಕ್ಕೆ 01 ಭೇಟಿ (50 ಫಲಾನುಭವಿಗಳಿಗೆ)			2000	24000
8.	ಲೆಕ್ಕ ಸಹಾಯಕರು	ಪಿ.ಯು.ಸಿ./ಪದವಿಯೊಂದಿಗೆ ಕಂಪ್ಯೂಟರ್ ಜ್ಞಾನ	01	5000	60000
9.	ಗ್ರೂಪ್-ಡಿ	4ನೇ ತರಗತಿ	01	3500	42000
10.	ಸ್ವೀಪರ್		01	3500	42000
	ಪ್ರೌಢಶಾಲಾ ವಿಭಾಗ				
1.	ಮುಖ್ಯೋಪಾಧ್ಯಾಯರು 8 ರಿಂದ 10ನೇ ತರಗತಿ	ಪದವಿ+ಬಿ.ಎಡ್. ಹಾಗೂ ಡಿಪ್ಲೋಮಾ ಇನ್ ಹೆಚ್.ಐ. ಅಥವಾ ಪದವಿ+ಬಿ.ಎಡ್. ಹೆಚ್.ಐ.	01	11000	132000
2.	ಪದವೀಧರ ಸಹಾಯಕ ಶಿಕ್ಷಕರು	ಪದವಿ (ವಿಷಯವಾರು) + ಬಿ.ಎಡ್. ಹಾಗೂ ಡಿಪ್ಲೋಮಾ ಇನ್ ಹೆಚ್.ಐ. ಅಥವಾ ಪದವಿ + ಬಿ.ಎಡ್. ಹೆಚ್.ಐ.	03	8500	306000
3.	ವೃತ್ತಿ ಶಿಕ್ಷಕರು ಭೇಟಿಗೆ, ರೂ.250/- ವಾರಕ್ಕೆ 04 ಭೇಟಿ (50 ಫಲಾನುಭವಿಗಳಿಗೆ)	ಎಸ್.ಎಸ್.ಎಲ್.ಸಿ./ ಪಿ.ಯು.ಸಿ. ಸಂಬಂಧಪಟ್ಟ ವೃತ್ತಿಯಲ್ಲಿ ಸರ್ಟಿಫಿಕೇಟ್/ಡಿಪ್ಲೊಮಾ	02	4000	96000
	ವಸತಿಯುತ ಶಾಲೆ				
1.	ವಾರ್ಡನ್ (50 ಫಲಾನುಭವಿಗಳಿಗೆ) ಇರುವ ಒಬ್ಬ ಸಿಬ್ಬಂದಿಗೆ ಹೆಚ್ಚುವರಿ ಭತ್ಯೆ ಮಾಹೆಯಾನ ರೂ.1000/-		01	1000	12000
2.	ಅಡುಗೆಯವರು (50 ಫಲಾನುಭವಿಗಳಿಗೆ)		01	3750	45000
3.	ಆಯಾ (ವಸತಿಯುತ ಶಾಲೆಗೆ) 25:1	4ನೇ ತರಗತಿ	02	3500	84000
4.	ವಸತಿಯುತ ಮಕ್ಕಳ ನಿರ್ವಹಣಾ ವೆಚ್ಚ ಮಾಹೆಯಾನ ರೂ. 600*75*10		75		450000
5.	ಯೂನಿಫಾರಂ (ಐವತ್ತು ಫಲಾನುಭವಿಗಳಿಗೆ 600X75)		75		45000
6.	ವೈದ್ಯಕೀಯ ವೆಚ್ಚ (ಐವತ್ತು ಫಲಾನುಭವಿಗಳಿಗೆ 500X75)		75		37500
	ವಸತಿ ರಹಿತ ಶಾಲೆ				
1.	ಶಿಕ್ಷಕರ ಗೌರವಧನ				1404000
2.	ಸಾರಿಗೆ ವೆಚ್ಚ	150*10*75			112500
3.	ಉಪಹಾರ ವೆಚ್ಚ	250*10*75			187500
4.	ಯೂನಿಫಾರಂ	600*75			45000
5.	ವೈದ್ಯಕೀಯ ವೆಚ್ಚ	500*75			37500

4. ಸ್ಪಾಸ್ಟಿಕ್ ಮಕ್ಕಳ ವಿಶೇಷ ಶಾಲೆ

ಮಕ್ಕಳ ಸಂಖ್ಯೆ – 50

ಶಿಕ್ಷಕರ ಮಕ್ಕಳ ಅನುಪಾತ 1:7

ಕ್ರ. ಸಂ.	ವಿವರ	ಶೈಕ್ಷಣಿಕ ಅರ್ಹತೆ	ಸಿಬ್ಬಂದಿಗಳ ಸಂಖ್ಯೆ	ಗೌರವಧನ ರೂ.	ಒಟ್ಟು ವಾರ್ಷಿಕ ಮೊತ್ತ ರೂ.
1.	ಮುಖ್ಯೋಪಾಧ್ಯಾಯರು	ಪದವಿಯೊಂದಿಗೆ ಡಿಪ್ಲೊಮಾ ಇನ್ ಎಂ.ಆರ್.	01	8500	102000
2.	ಸಹಾಯಕ ಶಿಕ್ಷಕರು (ಪೂರ್ವ ಶಾಲಾ ಶಿಕ್ಷಣ – (15 ಫಲಾನುಭವಿಗಳಿಗೆ)	ಪಿ.ಯು.ಸಿ. ಡಿಪ್ಲೊಮಾ ಇನ್ ಎಂ.ಆರ್.	02	6000	144000
3.	ಸಹಾಯಕ ಶಿಕ್ಷಕರು	ಪಿ.ಯು.ಸಿ. ಡಿಪ್ಲೊಮಾ ಇನ್ ಎಂ.ಆರ್.	04	6000	288000
4.	ಸ್ಪೀಚ್ ಥೆರಪಿಸ್ಟ್ ಅರೆಕಾಲಿಕ, 01 ಭೇಟಿಗೆ ರೂ.500/– ವಾರಕ್ಕೆ 02 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿ ನಿರತರು	01	4000	48000
5.	ಫಿಜಿಯೋಥೆರಪಿಸ್ಟ್ ಅರೆಕಾಲಿಕ, 01 ಭೇಟಿಗೆ ರೂ.500/– ವಾರಕ್ಕೆ 02 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿ ನಿರತರು	01	4000	48000
6.	ಆಕ್ಯುಪೇಷನಲ್ ಥೆರಪಿಸ್ಟ್ ಅರೆಕಾಲಿಕ, 01 ಭೇಟಿಗೆ ರೂ.500/– ವಾರಕ್ಕೆ 02 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿ ನಿರತರು	01	4000	48000
7.	ಮನೋವೈದ್ಯರು ಅರೆಕಾಲಿಕ, 01 ಭೇಟಿಗೆ ರೂ.500/– ವಾರಕ್ಕೆ 02 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿ ನಿರತರು	01	4000	48000
8.	ವೈದ್ಯರು ಅರೆಕಾಲಿಕ, 01 ಭೇಟಿಗೆ ರೂ.500/– ವಾರಕ್ಕೆ 01 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿ ನಿರತರು	01	2000	24000
9.	ವೃತ್ತಿ ಶಿಕ್ಷಕರು ಭೇಟಿಗೆ, ರೂ.250/– ವಾರಕ್ಕೆ 04 ಭೇಟಿ (50 ಫಲಾನುಭವಿಗಳಿಗೆ)	ಎಸ್.ಎಸ್.ಎಲ್.ಸಿ./ ಪಿ.ಯು.ಸಿ. ಸಂಬಂಧಪಟ್ಟ ವೃತ್ತಿಯಲ್ಲಿ ಸರ್ಟಿಫಿಕೇಟ್/ಡಿಪ್ಲೊಮಾ	02	4000	96000
10.	ದೈಹಿಕ/ಯೋಗ ಶಿಕ್ಷಕರು, ಭೇಟಿಗೆ ರೂ.250/– ವಾರಕ್ಕೆ 04 ಭೇಟಿ (50 ಫಲಾನುಭವಿಗಳಿಗೆ)		01	4000	12000
11.	ಲೆಕ್ಕ ಸಹಾಯಕರು	ಪಿ.ಯು.ಸಿ./ಪದವಿಯೊಂದಿಗೆ ಕಂಪ್ಯೂಟರ್ ಜ್ಞಾನ	01	5000	60000
12.	ಗ್ರೂಪ್–ಡಿ	4ನೇ ತರಗತಿ	01	3500	42000
13.	ಆಯಾ (25 ಫಲಾನುಭವಿಗಳಿಗೆ) ಒಬ್ಬರಂತೆ 25:1		02	3500	84000
		ವಸತಿ ವಿಭಾಗ			
1.	ವಾರ್ಡನ್ (50 ಫಲಾನುಭವಿಗಳಿಗೆ) ಇರುವ ಒಬ್ಬ ಸಿಬ್ಬಂದಿಗೆ ಹೆಚ್ಚುವರಿ ಭತ್ಯೆ ಮಾಹೆಯಾನ ರೂ.1000/–		01	1000	12000
2.	ಅಡುಗೆಯವರು (50 ಫಲಾನುಭವಿಗಳಿಗೆ)		01	3750	45000
3.	ಆಯಾ (ವಸತಿಯುತ ಶಾಲೆಗೆ 15 ಫಲಾನುಭವಿಗಳಿಗೆ ಒಬ್ಬರಂತೆ)	4ನೇ ತರಗತಿ	02	3500	84000
4.	ಸ್ವೀಪರ್	4ನೇ ತರಗತಿ	01	3500	42000
5.	ವಸತಿಯುತ ಮಕ್ಕಳ ನಿರ್ವಹಣಾ ವೆಚ್ಚ ಮಾಹೆಯಾನ ರೂ. 600*75*10 (25 ಫಲಾನುಭವಿಗಳಿಗೆ ಡೇಸ್ಕಾಲರ್ ಮಧ್ಯಾಹ್ನದ ಊಟ ಮಾಹೆಯಾನ ರೂ.150)		50		300000

5.	ಯೂನಿಫಾರಂ (ಐವತ್ತು ಫಲಾನುಭವಿಗಳಿಗೆ 600X50)		50		30000
6.	ವೈದ್ಯಕೀಯ ವೆಚ್ಚ (ಐವತ್ತು ಫಲಾನುಭವಿಗಳಿಗೆ 1000X50)		50		50000
		ವಸತಿ ರಹಿತ ಶಾಲೆ			
1.	ಶಿಕ್ಷಕರ ಗೌರವಧನ				1080000
2.	ಸಾರಿಗೆ ವೆಚ್ಚ	50*150*10			75000
3.	ಉಪಹಾರ ವೆಚ್ಚ	250*10*50			125000
4.	ಯೂನಿಫಾರಂ	600*50			30000
5.	ವೈದ್ಯಕೀಯ ವೆಚ್ಚ	500*50			25000

5. ವೃತ್ತಿಪರ ತರಬೇತಿ ಕೇಂದ್ರ (ಮಾನಸಿಕ ಅಸ್ವಸ್ಥರಿಗೆ, ಕುಷ್ಠರೋಗ ನಿವಾರಿತರಿಗೆ, ತರಬೇತಿಗೊಳಪಡುವ ಬುದ್ಧಿಮಾಂದ್ಯರಿಗೆ)

ಮಕ್ಕಳ ಸಂಖ್ಯೆ – 50

ಶಿಕ್ಷಕರ ಮಕ್ಕಳ ಅನುಪಾತ 1:10

ಯೋಜನೆಯ ಗಾತ್ರ :

1. ಪ್ರತಿ ತರಬೇತಿ ಕೇಂದ್ರದಲ್ಲಿ ಕನಿಷ್ಠ 25 ಗರಿಷ್ಠ 50 ಫಲಾನುಭವಿಗಳು ದಾಖಲಾಗಿರಬೇಕು.
2. ಗರಿಷ್ಠ 3 ವೃತ್ತಿಗಳಲ್ಲಿ ತರಬೇತಿಯನ್ನು ನೀಡಲು ಅವಕಾಶ ಮಾಡಿಕೊಡತಕ್ಕದ್ದು.
3. ವೃತ್ತಿಯು ಅಂಗವಿಕಲತೆಗನುಸಾರ ತರಬೇತಿ ನೀಡಲು ಸೂಕ್ತವಾಗಿರಬೇಕು.
4. ಆಯ್ಕೆ ಮಾಡಲು ವಿವಿಧ ವೃತ್ತಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
5. ತರಬೇತಿಯ ಅವಧಿಯು ನಿಗದಿಗೊಳಿಸಿದ ಅವಧಿಗಿಂತ ಹೆಚ್ಚಿಗೆ ಇರಬಾರದು ಹಾಗೂ ತರಬೇತಿಯು ಎನ್.ಸಿ.ವಿ.ಟಿ./ಎಸ್.ಸಿ.ವಿ.ಟಿ. ಸಂಸ್ಥೆಯಿಂದ ಅಂಗೀಕೃತವಾಗಿರಬೇಕು.
6. ತರಬೇತಿಯನ್ನು 18 ರಿಂದ 40 ವರ್ಷದೊಳಗಿನ ಅಂಗವಿಕಲರಿಗೆ ಈ ಯೋಜನೆಯಡಿ ಕಲ್ಪಿಸಬಹುದಾಗಿದೆ.
7. ತರಬೇತಿಯ ಪಠ್ಯವಸ್ತು, ಅವಧಿ ಮುಂತಾದ ಆಡಳಿತಾತ್ಮಕ ವಿಷಯಗಳನ್ನು ಉದ್ಯೋಗ & ತರಬೇತಿ ಇಲಾಖೆಯಿಂದ ಮಾಹಿತಿ ಪಡೆದು ಆ ಪ್ರಕಾರ ನಡೆಸುವುದು.

ಕ್ರ ಸಂ.	ವಿವರ	ಶೈಕ್ಷಣಿಕ ಅರ್ಹತೆ	ಸಿಬ್ಬಂದಿಗಳ ಸಂಖ್ಯೆ	ಗೌರವಧನ ರೂ. ಮಾಹೆಯಾನ	ಒಟ್ಟು ವಾರ್ಷಿಕ ಮೊತ್ತ ರೂ.
1.	ಅಧೀಕ್ಷಕರು/ಯೋಜನಾ ಸಂಯೋಜಕರು	ಪದವಿಯೊಂದಿಗೆ ಯಾವುದಾದರೂ ವೃತ್ತಿಯಲ್ಲಿ ಡಿಪ್ಲೊಮಾ	01	11000	132000
2.	ವೃತ್ತಿ ಬೋಧಕರು	ಪಿ.ಯು.ಸಿ. ಯಾವುದಾದರೂ ವೃತ್ತಿಯಲ್ಲಿ ಡಿಪ್ಲೊಮಾ	03	8000	288000
3.	ಲೆಕ್ಕಿಗರು	ಪಿ.ಯು.ಸಿ./ಪದವಿಯೊಂದಿಗೆ ಕಂಪ್ಯೂಟರ್ ಜ್ಞಾನ	01	5000	60000
5.	ಗ್ರೂಪ್–ಡಿ	4ನೇ ತರಗತಿ	01	3500	42000
6.	ಮನೋವೈದ್ಯರು ಅರೆಕಾಲಿಕ, 01 ಭೇಟಿಗೆ ರೂ.500/– ವಾರಕ್ಕೆ 02 ಭೇಟಿ (50 ಬುದ್ಧಿಮಾಂದ್ಯ ಫಲಾನುಭವಿಗಳಿಗೆ)	ವೃತ್ತಿ ನಿರತರು	01	4000	48000
7.	ವೈದ್ಯರು ಅರೆಕಾಲಿಕ, 01 ಭೇಟಿಗೆ ರೂ.500/– ವಾರಕ್ಕೆ 01 ಭೇಟಿ (50 ಫಲಾನುಭವಿಗಳಿಗೆ)	ವೃತ್ತಿ ನಿರತರು	01	2000	24000
		ವಸತಿ ವಿಭಾಗ			
1.	ವಾರ್ಡನ್ (50 ಫಲಾನುಭವಿಗಳಿಗೆ) ಇರುವ ಒಬ್ಬ ಸಿಬ್ಬಂದಿಗೆ ಹೆಚ್ಚುವರಿ ಭತ್ಯೆ ಮಾಹೆಯಾನ ರೂ.1000/–		01	1000	12000
2.	ಅಡುಗೆಯವರು (50 ಫಲಾನುಭವಿಗಳಿಗೆ)		01	3750	45000
3.	ಆಯಾ (ವಸತಿಯುತ ಶಾಲೆಗೆ 15 ಫಲಾನುಭವಿಗಳಿಗೆ ಒಬ್ಬರಂತೆ)	4ನೇ ತರಗತಿ	02	3500	84000

4.	ಸ್ಲೀಪರ್	4ನೇ ತರಗತಿ	01	3500	42000
5.	ವಸತಿಯುತ ಮಕ್ಕಳ ನಿರ್ವಹಣಾ ವೆಚ್ಚ – ಮಾಹೆಯಾನ ರೂ. 600*50*10 (50 ಫಲಾನುಭವಿಗಳಿಗೆ)		50		300000
6.	ಯೂನಿಫಾರಂ (ಐವತ್ತು ಫಲಾನುಭವಿಗಳಿಗೆ 600X50)		50		30000
7.	ವೈದ್ಯಕೀಯ ವೆಚ್ಚ (ಐವತ್ತು ಫಲಾನುಭವಿಗಳಿಗೆ 1000X50)		50		50000
	ವಸತಿ ರಹಿತ ಶಾಲೆ				
1.	ಶಿಕ್ಷಕರ ಗೌರವಧನ				594000
2.	ಸಾರಿಗೆ ವೆಚ್ಚ	50*150*10			75000
3.	ಉಪಹಾರ ವೆಚ್ಚ	250*10*50			125000
4.	ಯೂನಿಫಾರಂ	600*50			30000
5.	ವೈದ್ಯಕೀಯ ವೆಚ್ಚ	500*50			25000

ಅನುಬಂಧ-2

ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ವಿಶೇಷ ಶಾಲೆಗಳಿಗೆ ರಾಜ್ಯ ಸಹಾಯಧನಕ್ಕಾಗಿ ಅರ್ಜಿ ನಮೂನೆ

ಭಾಗ-1

1.	ಸಂಸ್ಥೆಯ ಹೆಸರು ಮತ್ತು ವಿಳಾಸ (ದೂರವಾಣಿ ಸಂಖ್ಯೆಯೊಂದಿಗೆ)	
2.	ಸಂಸ್ಥೆಯು ನಡೆಸುತ್ತಿರುವ ವಿಶೇಷ ಶಾಲೆಯ ಹೆಸರು ಮತ್ತು ವಿವರ ಎ. ಸಂಸ್ಥೆಯು ಶಾಲೆಯನ್ನು ಪ್ರಾರಂಭಿಸಿದ ದಿನಾಂಕ ಬಿ. ಸಂಸ್ಥೆಯು ಶಾಲೆಯನ್ನು ನಡೆಸಲು ಮಾನ್ಯತೆಯನ್ನು ಪಡೆದಂತಹ ದಿನಾಂಕ	
3.	ಸಂಸ್ಥೆಯು ಶಾಸನದಡಿ ನೋಂದಣಿ ಮಾಡಿರುವ ಸಂಖ್ಯೆ ಮತ್ತು ದಿನಾಂಕ ಸಂಸ್ಥೆಯು ಆಡಳಿತ ಮಂಡಳಿಯ ಪಟ್ಟಿ ಹಾಗೂ ನೋಂದಣಿ ಪ್ರಮಾಣ ಪತ್ರ ಟ್ರಸ್ಟ್ ಡೀಡ್ ವಿವರವನ್ನು ಲಗತ್ತಿಸುವುದು	
4.	ಸಂಸ್ಥೆಯು ಅಂಗವಿಕಲರ ಅಧಿನಿಯಮ-1995ರಡಿ ಮಾಡಿರುವ ನೋಂದಣಿ ಸಂಖ್ಯೆ & ದಿನಾಂಕ	
5.	ಸಂಸ್ಥೆಯು ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಿಂದ ಅನುಮತಿ ಪಡೆದಂತಹ ದಿನಾಂಕ : ಎಷ್ಟು ತರಗತಿಗಳನ್ನು ನಡೆಸಲು ಅನುಮತಿಯನ್ನು ಪಡೆಯಲಾಗಿದೆ?	
6.	ಸಂಸ್ಥೆಯು ಸ್ವಂತ ಕಟ್ಟಡ/ನಿವೇಶನವನ್ನು ಹೊಂದಿದೆಯೇ? ವಿವರವನ್ನು ನೀಡುವುದು.	
7.	ಸಂಸ್ಥೆಯು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದಲ್ಲಿ ಈ ಬಗ್ಗೆ ವಿವರ	
8.	ಸಂಸ್ಥೆಯು ಶಾಲೆಯನ್ನು ನಡೆಸುತ್ತಿರುವ ಕಟ್ಟಡದಲ್ಲಿರುವ ಸೌಲಭ್ಯ ಸಂಪೂರ್ಣ ಕಟ್ಟಡದ ಛಾಯಾಚಿತ್ರವನ್ನು ಲಗತ್ತಿಸುವುದು ಕಟ್ಟಡದಲ್ಲಿ ತಡೆರಹಿತ ವಾತಾವರಣವನ್ನು ನಿರ್ಮಿಸಿರುವ ಬಗ್ಗೆ ವಿವರಣೆ ನೀಡುವುದು	
	1. ತರಗತಿ ಕೊಠಡಿಗಳ ಸಂಖ್ಯೆ ➢ ಪ್ರತಿ ಕೊಠಡಿಯಲ್ಲಿರುವ ಸ್ಥಳಾವಕಾಶ ನಮೂದಿಸುವುದು ➢ ಕೊಠಡಿಗಳಲ್ಲಿ ಗಾಳಿ ಬೆಳಕಿನ ವ್ಯವಸ್ಥೆ ➢ ಕೊಠಡಿಗಳಲ್ಲಿ ಮಕ್ಕಳಿಗೆ ಒದಗಿಸಿರುವ ಪೀಠೋಪಕರಣ ವಿವರ ಕೊಠಡಿಗಳು ಅಂಗವಿಕಲ ಸ್ನೇಹಿ ಆಗಿದೆಯೇ ಎಂಬ ವಿವರ	
	2. ಗ್ರಂಥಾಲಯ ➢ ಗ್ರಂಥಾಲಯದಲ್ಲಿ ಒದಗಿಸಿರುವ ಸ್ಥಳಾವಕಾಶ ➢ ವಿವಿಧ ವಿಷಯಗಳ ಬೋಧನೆಗೆ ಸಂಬಂಧಿಸಿದಂತೆ ಪುಸ್ತಕಗಳ ಸಂಖ್ಯೆ, ವಿವರ, ಪಟ್ಟಿ ಲಗತ್ತಿಸುವುದು ವಿದ್ಯಾರ್ಥಿಗಳ ಅಧ್ಯಯನಕ್ಕೆ ಸಹಾಯಕವಾಗುವ ಪುಸ್ತಕಗಳು, ಮ್ಯಾಪ್, ಸಿ.ಡಿ. ಚಾರ್ಟ್ ಮುಂತಾದ ಪರಿಕರಗಳ ವಿವರ	

	3. ಪ್ರಯೋಗಾಲಯ ಪ್ರಯೋಗಾಲಯ ಕೊಠಡಿಯ ಸ್ಥಳಾವಕಾಶ ಹಾಗೂ ಕೊಠಡಿಯಲ್ಲಿ ಒದಗಿಸಿರುವ ಸಾಮಗ್ರಿಗಳ ವಿವರ	
	4. ಮುಖ್ಯೋಪಾಧ್ಯಾಯರ/ಶಿಕ್ಷಕರ ಕೊಠಡಿ ➢ ಶಿಕ್ಷಕರಿಗೆ ಹಾಗೂ ಮುಖ್ಯೋಪಾಧ್ಯಾಯರಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಇದೆಯೇ? ಈ ಕೊಠಡಿಗಳಲ್ಲಿನ ವ್ಯವಸ್ಥೆ	
	5. ಶೌಚಾಲಯಗಳು ➢ ಶೌಚಾಲಯಗಳ ಸಂಖ್ಯೆ ➢ ಗಂಡು ಮಕ್ಕಳಿಗೆ ಪ್ರತ್ಯೇಕವಾಗಿ ಇರುವ ಶೌಚಾಲಯಗಳ ಸಂಖ್ಯೆ ➢ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಇರುವ ಶೌಚಾಲಯಗಳ ಸಂಖ್ಯೆ ➢ ಶೌಚಾಲಯಗಳಿಗೆ ನೀರಿನ ವ್ಯವಸ್ಥೆ ಸಮರ್ಪಕವಾಗಿದೆಯೇ ➢ ಅಂಗವಿಕಲ ಸ್ನೇಹಿಯಾಗಿದೆಯೇ?	
	6. ಸಂಪನ್ಮೂಲ ಕೊಠಡಿ ➢ ಕಲಿಕೆಗೆ ಉಪಯೋಗವಾಗುವ ಸಾಮಗ್ರಿಗಳ ವಿವರ ➢ ರೂ.6000/- ಅಥವಾ ಅದಕ್ಕಿಂತ ಹೆಚ್ಚಿನ ಬೆಲೆ ಉಪಕರಣಗಳಿದ್ದಲ್ಲಿ ವಿವರ ರೂ.3000/- ಅಥವಾ ಅದಕ್ಕಿಂತ ಹೆಚ್ಚಿನ ಬೆಲೆ ಉಪಕರಣಗಳಿದ್ದಲ್ಲಿ ವಿವರ	
	7. ಸಂಸ್ಥೆಯು ಮಕ್ಕಳಿಗೆ ಶಾಲೆಯಲ್ಲಿ ಒದಗಿಸಿರುವ ಇತರೆ ವ್ಯವಸ್ಥೆ ➢ ಕುಡಿಯುವ ನೀರಿನ ವ್ಯವಸ್ಥೆ ➢ ಸಾರಿಗೆ ವ್ಯವಸ್ಥೆ ➢ ಸಮವಸ್ತ್ರ ವ್ಯವಸ್ಥೆ ➢ ತಡೆರಹಿತ ವಾತಾವರಣ	
	8. ಒಳಾಂಗಣ ಕ್ರೀಡೆಗಳಿಗೆ ವ್ಯವಸ್ಥೆ	
	9. ಆಟದ ಮೈದಾನ (ಮೈದಾನದ ಬಗ್ಗೆ ಇರುವ ಸ್ಥಳಾವಕಾಶ ಛಾಯಾಚಿತ್ರದೊಂದಿಗೆ)	
9.	ವಸತಿಯುತ ಶಾಲೆಯಾದಲ್ಲಿ ➢ ವಸತಿ ಸೌಲಭ್ಯವನ್ನು ಪಡೆಯುತ್ತಿರುವ ಮಕ್ಕಳ ಸಂಖ್ಯೆ ➢ ಮಕ್ಕಳಿಗೆ ಈ ಕೆಳಕಂಡಂತೆ ವ್ಯವಸ್ಥೆಯನ್ನು ಒದಗಿಸಲಾಗಿದೆಯೇ ➢ ಮಲಗುವ ಕೊಠಡಿಗಳ ಸಂಖ್ಯೆ ಹಾಗೂ ಸ್ಥಳಾವಕಾಶ ➢ ಗಾಳಿ & ಬೆಳಕಿನ ವ್ಯವಸ್ಥೆ ➢ ಮಕ್ಕಳಿಗೆ ಒದಗಿಸಿರುವ ಹಾಸಿಗೆ ಹೊದಿಕೆಗಳ ವ್ಯವಸ್ಥೆ ➢ ಮಕ್ಕಳು ತಮ್ಮ ವಸ್ತುಗಳನ್ನು ಸಂರಕ್ಷಿಸಲು ಒದಗಿಸಿರುವ ಕಪಾಟುಗಳ ಸಂಖ್ಯೆ ➢ ಗಂಡು ಮಕ್ಕಳಿಗೆ ಪ್ರತ್ಯೇಕವಾದ ವಸತಿ ಒದಗಿಸಿರುವ ಬಗ್ಗೆ ವಿವರ ➢ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ವಸತಿ ಒದಗಿಸಿರುವ ಬಗ್ಗೆ ವಿವರ ➢ ಗಂಡು ಮಕ್ಕಳಿಗೆ ಇರುವ ಶೌಚಾಲಯಗಳ ಸಂಖ್ಯೆ ➢ ಹೆಣ್ಣು ಮಕ್ಕಳಿಗೆ ಇರುವ ಶೌಚಾಲಯಗಳ ಸಂಖ್ಯೆ ➢ ಊಟದ ಕೋಣೆಯಲ್ಲಿನ ಸ್ಥಳಾವಕಾಶ ➢ ಅಡಿಗೆ ಮನೆಯಲ್ಲಿನ ಸ್ಥಳಾವಕಾಶ ➢ ವಸತಿ ಮಕ್ಕಳಿಗೆ ಮನೋರಂಜನೆಗೆ ಇರುವ ಸ್ಥಳಾವಕಾಶ ಹಾಗೂ ಸೌಲಭ್ಯ ಅಂಗವಿಕಲರಿಗೆ ಒದಗಿಸಿರುವ ತಡೆರಹಿತ ವಾತಾವರಣ	
	ಭಾಗ-2	
1.	ಸಂಸ್ಥೆಯಲ್ಲಿ ನಡೆಸುತ್ತಿರುವ ಒಟ್ಟು ತರಗತಿಗಳು	
2.	ತರಗತಿವಾರು ಮಕ್ಕಳ ಸಂಖ್ಯೆ	
3.	ಸಂಸ್ಥೆಯಲ್ಲಿ ವಿಶೇಷ ಶಿಕ್ಷಣ ನೀಡಲು ಅಗತ್ಯವಿರುವ ಕಲಿಕಾ ಸಾಮಗ್ರಿಗಳು (ವಿವರಪಟ್ಟಿ ಲಗತ್ತಿಸುವುದು)	

4.	ಸಂಸ್ಥೆಯಲ್ಲಿ ವಿಶೇಷ ಶಿಕ್ಷಣ ಬೋಧಿಸಲು ಇರುವ ಬೋಧನಾ ಸಾಮಗ್ರಿಗಳ ವಿವರ	
5.	ಶಿಕ್ಷಕರ ಸಂಖ್ಯೆ (ಸಂಪೂರ್ಣ ವಿವರ ಪಟ್ಟಿ ಲಗತ್ತಿಸುವುದು)	
	1. ಅವಶ್ಯಕ ತರಬೇತಿ ಹೊಂದಿರುವ ಶಿಕ್ಷಕರ ಸಂಖ್ಯೆ	
	2. ಶಿಕ್ಷಕೇತರರ ಸಂಖ್ಯೆ ವಾರ್ಡನ್ ಲೆಕ್ಕ ಸಹಾಯಕರು ಅಡುಗೆಯವರು ಸ್ವೀಪರ್ ಜವಾನ/ವಾಚ್‌ಮನ್ ಆಯಾಗಳು 3. ವಿಶೇಷ ತಜ್ಞರ ಸಂಖ್ಯೆ	
6.	ಕಳೆದ 5 ವರ್ಷಗಳಲ್ಲಿ ಶಾಲೆಯಲ್ಲಿನ ಮಕ್ಕಳ ಪ್ರಗತಿ ವರದಿ ತರಗತಿವಾರು	
7.	ಸಂಸ್ಥೆಯು ಸಾಮಾನ್ಯ ಮಕ್ಕಳಿಗೆ ಶಾಲೆಯನ್ನು ನಡೆಸುತ್ತಿದೆಯೆ? ಇದ್ದಲ್ಲಿ ಈ ಬಗ್ಗೆ ವಿವರ	
8.	ಸಂಸ್ಥೆಯು ತನ್ನದೇ ಸ್ವಂತ ವಾಹನವನ್ನು ಹೊಂದಿದೆಯೇ? ವಿವರ	
	ಭಾಗ-3	
1.	ಸಂಸ್ಥೆಯ ಇತ್ತೀಚಿನ 02 ವರ್ಷಗಳ ಆಡಿಟ್ ವರದಿ	
2.	ಸಂಸ್ಥೆಯ ಆರ್ಥಿಕ ಸಂಪನ್ಮೂಲ – ಸಂಸ್ಥೆಯು ಯಾವ ಮೂಲಗಳಿಂದ ಧನ ಸಹಾಯ ಪಡೆಯುತ್ತಿದೆ – ಸಂಸ್ಥೆಯು ಹೊರದೇಶಗಳಿಂದ ಈ ಕಾರ್ಯಕ್ರಮಕ್ಕೆ ಧನಸಹಾಯ ಪಡೆಯುತ್ತಿದೆಯೇ? – ಸಂಸ್ಥೆಯು ರಾಜ್ಯ/ಕೇಂದ್ರ/ಸ್ಥಳೀಯ ಸಂಸ್ಥೆ/ ಇತರೆ ಖಾಸಗಿ ಸಂಸ್ಥೆಗಳಿಂದ ಅನುದಾನ ಪಡೆಯುತ್ತಿದೆಯೇ?	
3.	ಸಂಸ್ಥೆಯ 02 ವರ್ಷಗಳ ವಾರ್ಷಿಕ ವರದಿ ಲಗತ್ತಿಸಿದೆಯೇ?	
4.	ಸಂಸ್ಥೆಯು ಯಾವ ಬ್ಯಾಂಕ್ ಖಾತೆ ಹೊಂದಿದೆ ವಿವರ?	
5.	ಸಂಸ್ಥೆಯು ಈ ಯೋಜನೆಯನ್ನು ಹೊರತುಪಡಿಸಿ ಬೇರೆ ಯಾವ ಕಾರ್ಯಕ್ರಮಗಳನ್ನು ನಡೆಸುತ್ತಿವೆ? ಈ ಕಾರ್ಯಕ್ರಮಗಳಿಗೆ ಯಾವ ಮೂಲಗಳಿಂದ ಧನಸಹಾಯ ಪಡೆಯುತ್ತಿವೆ?	
6.	ಸಂಸ್ಥೆಯ ಇತರೆ ವಿಶೇಷ ಸಾಧನೆ	
7.	ಸಂಸ್ಥೆಗೆ ರಾಜ್ಯ ಸರ್ಕಾರದಿಂದ ಕಾರಣಾಂತರದಿಂದ ಧನಸಹಾಯವು ಲಭ್ಯವಾಗದಿದ್ದಲ್ಲಿ ಸಂಸ್ಥೆಯು ತನ್ನ ಸಂಪನ್ಮೂಲದಿಂದ ಶಾಲೆಯನ್ನು ನಡೆಸಲು ಶಕ್ತವಾಗಿದೆಯೇ?	

ಅನುಬಂಧ-3

ವಿಶೇಷ ಶಾಲೆಗಳಿಗೆ ಅನುದಾನ ಶಿಫಾರಸ್ಸು ಮಾಡುವ ಮೌಲ್ಯಮಾಪನ/ ತನಿಖಾ ವರದಿ ನಮೂನೆ

1.	ತನಿಖಾಧಿಕಾರಿಗಳ ಹೆಸರು ಮತ್ತು ಪದನಾಮ (ಜಂಟಿ ತನಿಖೆ ನಡೆಸಿದಲ್ಲಿ ತಂಡದ ಸದಸ್ಯರ ಹೆಸರು & ಪದನಾಮ)	
2.	ತನಿಖೆ ನಡೆಸಿದ ದಿನಾಂಕ	
3.	ಸಂಸ್ಥೆಯು ನಡೆಸುತ್ತಿರುವ ವಿಶೇಷ ಶಾಲೆಯ ಹೆಸರು ಮತ್ತು ವಿವರ (ದೂರವಾಣಿ ಸಂಖ್ಯೆಯೊಂದಿಗೆ) ಅ. ಸಂಸ್ಥೆಯು ಶಾಲೆಯನ್ನು ಪ್ರಾರಂಭಿಸಿದ ದಿನಾಂಕ ಆ. ಸಂಸ್ಥೆಯು ಶಾಲೆಯನ್ನು ನಡೆಸಲು ಅನುಮತಿ ಪಡೆದಂತಹ ದಿನಾಂಕ	
3.	ಸಂಸ್ಥೆಯು ಶಾಸನದಡಿ ನೋಂದಣಿ ಮಾಡಿಸಿದೆಯೇ? ನೋಂದಣಿ ಸಂಖ್ಯೆ ಮತ್ತು ದಿನಾಂಕ ನಮೂದಿಸುವುದು ಸಂಸ್ಥೆಯು ಆಡಳಿತ ಮಂಡಳಿಯ ಪಟ್ಟಿ ಹಾಗೂ ನೋಂದಣಿ ಪ್ರಮಾಣ ಪತ್ರ ಟ್ರಸ್ಟ್ ಡೀಡ್ ವಿವರವನ್ನು ಲಗತ್ತಿಸುವುದು	

4.	ಸಂಸ್ಥೆಯು ಅಂಗವಿಕಲರ ಅಧಿನಿಯಮ-1995ರಡಿ ಮಾಡಿರುವ ನೋಂದಣಿ ಆಗಿದೆಯೇ? ಸಂಖ್ಯೆ ಮತ್ತು ದಿನಾಂಕ	
5.	ಸಂಸ್ಥೆಯು ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯಿಂದ ಅನುಮತಿ ಪಡೆದಂತಹ ದಿನಾಂಕ : ಎಷ್ಟು ತರಗತಿಗಳನ್ನು ನಡೆಸಲು ಅನುಮತಿಯನ್ನು ಪಡೆಯಲಾಗಿದೆ? ವಿವರಗಳನ್ನು ನೀಡುವುದು.	
6.	ಸಂಸ್ಥೆಯು ಸ್ವಂತ ಕಟ್ಟಡ/ನಿವೇಶನವನ್ನು ಹೊಂದಿದೆಯೇ? ವಿವರವನ್ನು ನೀಡುವುದು.	
7.	ಸಂಸ್ಥೆಯು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿದ್ದಲ್ಲಿ ಈ ಬಗ್ಗೆ ವಿವರ	
8.	ಸಂಸ್ಥೆಯು ಕಟ್ಟಡದಲ್ಲಿ ಅಂಗವಿಕಲರಿಗೆ ತಡೆರಹಿತ ವಾತಾವರಣ ಕಲ್ಪಿಸಲಾಗಿದೆಯೇ? ವಿವರಗಳನ್ನು ನೀಡುವುದು	
9.	ಸಂಸ್ಥೆಯು ಶಾಲೆಯನ್ನು ನಡೆಸುತ್ತಿರುವ ಕಟ್ಟಡದಲ್ಲಿರುವ ಸೌಲಭ್ಯ ಸಂಪೂರ್ಣ ಕಟ್ಟಡದ ಛಾಯಾಚಿತ್ರವನ್ನು ಲಗತ್ತಿಸುವುದು ಕಟ್ಟಡದಲ್ಲಿ ತಡೆರಹಿತ ವಾತಾವರಣವನ್ನು ನಿರ್ಮಿಸಿರುವ ಬಗ್ಗೆ ವಿವರಣೆ ನೀಡುವುದು	
1.	ತರಗತಿ ಕೊಠಡಿಗಳ ಸಂಖ್ಯೆ ➢ ಪ್ರತಿ ಕೊಠಡಿಯಲ್ಲಿರುವ ಸ್ಥಳಾವಕಾಶ ನಮೂದಿಸುವುದು ➢ ಕೊಠಡಿಗಳಲ್ಲಿ ಗಾಳಿ ಬೆಳಕಿನ ವ್ಯವಸ್ಥೆ ➢ ಕೊಠಡಿಗಳಲ್ಲಿ ಮಕ್ಕಳಿಗೆ ಒದಗಿಸಿರುವ ಪೀಠೋಪಕರಣ ವಿವರ ➢ ಕೊಠಡಿಗಳು ಅಂಗವಿಕಲ ಸ್ನೇಹಿ ಆಗಿದೆಯೇ ಎಂಬ ವಿವರ ಕೊಠಡಿಗಳು ತರಗತಿಗಳ ಸಂಖ್ಯೆಗನುಗುಣ ವಾಗಿರುತ್ತದೆಯೇ?	
2.	ಗ್ರಂಥಾಲಯ ➢ ಗ್ರಂಥಾಲಯದಲ್ಲಿ ಒದಗಿಸಿರುವ ಸ್ಥಳಾವಕಾಶ ➢ ವಿವಿಧ ವಿಷಯಗಳ ಬೋಧನೆಗೆ ಸಂಬಂಧಿಸಿದಂತೆ ಪುಸ್ತಕಗಳ ಸಂಖ್ಯೆ ವಿವರ, ಪಟ್ಟಿ ಲಗತ್ತಿಸುವುದು ವಿದ್ಯಾರ್ಥಿಗಳ ಅಧ್ಯಯನಕ್ಕೆ ಸಹಾಯಕವಾಗುವ ಪುಸ್ತಕಗಳು, ಮ್ಯಾಪ್, ಸಿ.ಡಿ. ಚಾರ್ಟ್ ಮುಂತಾದ ಪರಿಕರಗಳ ವಿವರ	
	3. ಪ್ರಯೋಗಾಲಯ ಪ್ರಯೋಗಾಲಯ ಕೊಠಡಿಯ ಸ್ಥಳಾವಕಾಶ ಹಾಗೂ ಕೊಠಡಿಯಲ್ಲಿ ಒದಗಿಸಿರುವ ಸಾಮಗ್ರಿಗಳ ವಿವರ	
	4. ಮುಖ್ಯೋಪಾಧ್ಯಾಯರ/ಶಿಕ್ಷಕರ ಕೊಠಡಿ ➢ ಶಿಕ್ಷಕರಿಗೆ ಹಾಗೂ ಮುಖ್ಯೋಪಾಧ್ಯಾಯರಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಇದೆಯೇ? ಈ ಕೊಠಡಿಗಳಲ್ಲಿನ ವ್ಯವಸ್ಥೆ	
	5. ಶೌಚಾಲಯಗಳು ➢ ಶೌಚಾಲಯಗಳ ಸಂಖ್ಯೆ ➢ ಗಂಡು ಮಕ್ಕಳಿಗೆ ಪ್ರತ್ಯೇಕವಾಗಿ ಇರುವ ಶೌಚಾಲಯಗಳ ಸಂಖ್ಯೆ ➢ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಇರುವ ಶೌಚಾಲಯಗಳ ಸಂಖ್ಯೆ ➢ ಶೌಚಾಲಯಗಳಿಗೆ ನೀರಿನ ವ್ಯವಸ್ಥೆ ಸಮರ್ಪಕವಾಗಿದೆಯೇ ➢ ಅಂಗವಿಕಲ ಸ್ನೇಹಿಯಾಗಿದೆಯೇ?	
	6. ಸಂಪನ್ಮೂಲ ಕೊಠಡಿ ➢ ಕಲಿಕೆಗೆ ಉಪಯೋಗವಾಗುವ ಸಾಮಗ್ರಿಗಳ ವಿವರ ಈ ಕೊಠಡಿಯನ್ನು ಮಕ್ಕಳ ಬೋಧನೆಗೆ ಉಪಯೋಗಿಸ ಲಾಗುತ್ತಿದೆಯೇ?	
	7. ಸಂಸ್ಥೆಯು ಮಕ್ಕಳಿಗೆ ಶಾಲೆಯಲ್ಲಿ ಒದಗಿಸಿರುವ ಇತರೆ ವ್ಯವಸ್ಥೆ ➢ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಇದೆಯೇ? ➢ ಸಾರಿಗೆ ವ್ಯವಸ್ಥೆ ಇದೆಯೇ? ➢ ಸಮವಸ್ತ್ರ ವ್ಯವಸ್ಥೆ ಇದೆಯೇ? ತಡೆರಹಿತ ವಾತಾವರಣ ಇದೆಯೇ?	
	8. ಒಳಾಂಗಣ ಕ್ರೀಡೆಗಳಿಗೆ ವ್ಯವಸ್ಥೆ	
	9. ಆಟದ ಮೈದಾನ (ಮೈದಾನದ ಬಗ್ಗೆ ಇರುವ ಸ್ಥಳಾವಕಾಶ)	

9.	ವಸತಿಯುತ ಶಾಲೆಯಾದಲ್ಲಿ ➢ ವಸತಿ ಸೌಲಭ್ಯವನ್ನು ಪಡೆಯುತ್ತಿರುವ ಮಕ್ಕಳ ಸಂಖ್ಯೆ ಗಂಡು/ಹೆಣ್ಣು ಮಕ್ಕಳ ಸಂಖ್ಯೆಯನ್ನು ಪ್ರತ್ಯೇಕವಾಗಿ ನೀಡುವುದು ➢ ಮಲಗುವ ಕೊಠಡಿಗಳ ಸಂಖ್ಯೆ ಎಷ್ಟು? ಹಾಗೂ ಸ್ಥಳಾವಕಾಶ ➢ ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಇರುತ್ತದೆಯೇ ➢ ಮಕ್ಕಳಿಗೆ ಒದಗಿಸಿರುವ ಮಂಚ, ಹಾಸಿಗೆ ಹೊದಿಕೆಗಳ ವ್ಯವಸ್ಥೆ ಸೂಕ್ತವಾಗಿದೆಯೇ? ➢ ಮಕ್ಕಳು ತಮ್ಮ ವಸ್ತುಗಳನ್ನು ಸಂರಕ್ಷಿಸಲು ಒದಗಿಸಿರುವ ಕಪಾಟುಗಳ ಸಂಖ್ಯೆ ಸಾಕಷ್ಟಿದೆಯೇ? ➢ ಗಂಡು ಮಕ್ಕಳಿಗೆ ಪ್ರತ್ಯೇಕವಾದ ವಸತಿ ಒದಗಿಸಿರುವ ಬಗ್ಗೆ ವಿವರ ➢ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ವಸತಿ ಒದಗಿಸಿರುವ ಬಗ್ಗೆ ವಿವರ ➢ ಒಟ್ಟು ಶೌಚಾಲಯಗಳ ಸಂಖ್ಯೆ ➢ ಗಂಡು ಮಕ್ಕಳಿಗೆ ಇರುವ ಶೌಚಾಲಯಗಳ ಸಂಖ್ಯೆ ➢ ಹೆಣ್ಣು ಮಕ್ಕಳಿಗೆ ಇರುವ ಶೌಚಾಲಯಗಳ ಸಂಖ್ಯೆ ➢ ಒಟ್ಟು ಸ್ನಾನದ ಗೃಹಗಳ ಸಂಖ್ಯೆ ➢ ಗಂಡು ಮಕ್ಕಳಿಗೆ ಇರುವ ಸ್ನಾನದ ಗೃಹಗಳ ಸಂಖ್ಯೆ ➢ ಹೆಣ್ಣು ಮಕ್ಕಳಿಗೆ ಇರುವ ಸ್ನಾನದ ಗೃಹಗಳ ಸಂಖ್ಯೆ ➢ ಮಕ್ಕಳ ಸಂಖ್ಯೆಗನುಗುಣವಾಗಿ ಊಟದ ಕೋಣೆಯಲ್ಲಿನ ಸ್ಥಳಾವಕಾಶ ಕಲ್ಪಿಸಲಾಗಿದೆಯೇ ➢ ಪ್ರತ್ಯೇಕವಾದ ಅಡಿಗೆ ಮನೆಯನ್ನು ಒದಗಿಸಲಾಗಿದೆಯೇ ➢ ಆಹಾರ ತಯಾರಿಸಲು ಸಾಕಷ್ಟು ಅಡಿಗೆ ಪರಿಕರಗಳನ್ನು ಒದಗಿಸಲಾಗಿದೆಯೇ ➢ ಅಡಿಗೆ ಮನೆಯಲ್ಲಿ ಸುರಕ್ಷಿತ ಕ್ರಮಗಳನ್ನು ಯಾವ ರೀತಿ ಕೈಗೊಳ್ಳಲಾಗಿದೆ. ➢ ಅಡಿಗೆ ಮನೆಯಲ್ಲಿ ಸ್ವಚ್ಛತೆ ನಿರ್ವಹಿಸಲಾಗುತ್ತಿದೆಯೇ ➢ ವಸತಿ ಮಕ್ಕಳಿಗೆ ಮನೋರಂಜನೆಗೆ ಇರುವ ಸ್ಥಳಾವಕಾಶ ಹಾಗೂ ಸೌಲಭ್ಯವನ್ನು ವಿವರಿಸುವುದು ➢ ಮಕ್ಕಳಿಗೆ ಸೂಕ್ತವಾಗಿ ಚಲಿಸಲು ತಡೆರಹಿತ ವಾತಾವರಣ ನಿರ್ಮಿಸಲಾಗಿದೆಯೇ? ನೀರಿನ ವ್ಯವಸ್ಥೆ : ➢ ವಸತಿ ವಿಭಾಗದಲ್ಲಿ ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಒದಗಿಸಲಾಗಿದೆಯೇ? ಮಕ್ಕಳ ಇತರ ಚಟುವಟಿಕೆಗಳಿಗೆ ಸಾಕಷ್ಟು ನೀರಿನ ವ್ಯವಸ್ಥೆ ಒದಗಿಸಲಾಗಿದೆಯೇ?	
	ಭಾಗ-2	
1.	ಶಾಲೆಗೆ ದಾಖಲಾಗಿರುವ ಒಟ್ಟು ಮಕ್ಕಳ ಸಂಖ್ಯೆ ಅನುಬಂಧ-6 ರಂತೆ ವಿವರ ನೀಡುವುದು	
2.	ಶಾಲೆಗೆ ಯಾವ ವಯಸ್ಸಿನಲ್ಲಿ ಮಕ್ಕಳನ್ನು ದಾಖಲಿಸಲಾಗುತ್ತಿದೆ ➢ ದಾಖಲಾತಿಗೆ ಅನುಸರಿಸುವ ಮಾರ್ಗಸೂಚಿಯೇನು? ➢ ಮಕ್ಕಳನ್ನು ದಾಖಲಿಸುವಾಗ ಭಾವಚಿತ್ರವನ್ನು ಪಡೆದು ದಾಖಲಿಸಲಾಗಿದೆಯೇ ➢ ದಾಖಲಾತಿ ಸಮಯದಲ್ಲಿ ಎಲ್ಲಾ ಜಾತಿ/ಪಂಗಡಗಳಿಗೆ ಪರಿಗಣಿಸಲಾಗುತ್ತಿದೆಯೆ? ➢ ದಾಖಲಾತಿ ಸಮಯದಲ್ಲಿ ಅಂಗವಿಕಲರ ಪ್ರಮಾಣ ಪತ್ರ ಪಡೆಯಲಾಗುತ್ತಿದೆಯೇ? ➢ ಪೂರ್ವ ಪ್ರಾಥಮಿಕ ತರಗತಿಯನ್ನು ನಡೆಸಲಾಗುತ್ತಿದೆಯೇ ➢ ಮಕ್ಕಳ ವೈಯಕ್ತಿಕ ಕಡತ ನಿರ್ವಹಿಸಲಾಗುತ್ತಿದೆಯೇ?	

3.	ಸಂಸ್ಥೆಯಲ್ಲಿ ವಿಶೇಷ ಶಿಕ್ಷಣ ಬೋಧಿಸಲು ಇರುವ ಬೋಧನಾ/ ಕಲಿಕಾ ಸಾಮಗ್ರಿಗಳ ವಿವರ, ಪಟ್ಟಿ ಲಗತ್ತಿಸುವುದು	
4.	ಶಿಕ್ಷಕರ/ಶಿಕ್ಷಕೇತರ ಸಂಖ್ಯೆ ಎಷ್ಟು (ಅನುಬಂಧ-5 ರಂತೆ ವಿವರ ಲಗತ್ತಿಸುವುದು) ಇವರಲ್ಲಿ :	
	1. ಅವಶ್ಯಕ ತರಬೇತಿ ಹೊಂದಿರುವ ಶಿಕ್ಷಕರ ಸಂಖ್ಯೆ ಎಷ್ಟು?	
	2. ಶಿಕ್ಷಕೇತರರ ಸಂಖ್ಯೆ ಎಷ್ಟು? ವಾರ್ಡನ್ ಲೆಕ್ಕ ಸಹಾಯಕರು ಅಡುಗೆಯವರು ಸ್ವೀಪರ್ ಜವಾನ/ವಾಚ್‌ಮನ್ ಆಯಾಗಳು	
	3. ವಿಶೇಷ ತಜ್ಞರ ಸಂಖ್ಯೆ (ಶಾಲೆಯ ಅವಶ್ಯಕತೆಗನುಸಾರ) ಅ. ಫಿಜಿಯೋಥೆರಪಿಸ್ಟ್ ಆ. ಆಕ್ಯುಪೇಷನಲ್ ಥೆರಪಿಸ್ಟ್ ಇ. ವಾಕ್ ಮತ್ತು ಶ್ರವಣ ತಜ್ಞರು ಈ. ಯೋಗ/ದೈಹಿಕ ಶಿಕ್ಷಕರು ಉ. ಮನೋವೈದ್ಯರು, ಮನಃಶಾಸ್ತ್ರಜ್ಞರು	
5.	ಸಂಸ್ಥೆಯು ಶಿಕ್ಷಣ ನೀಡಲು ಹೊಂದಿರುವ ಇತರೆ ವ್ಯವಸ್ಥೆ	
6.	ಸಂಸ್ಥೆಯು ನಡೆಸುತ್ತಿರುವ ಇತರೆ ಶೈಕ್ಷಣಿಕ ಚಟುವಟಿಕೆಗಳ ವಿವರ	
7.	ಸಂಸ್ಥೆಯು ವಸತಿ ಶಾಲೆಯನ್ನು ನಡೆಸುತ್ತಿದ್ದಲ್ಲಿ ಪ್ರತ್ಯೇಕ ವಸತಿ ಸೌಕರ್ಯವನ್ನು ನಿರ್ವಹಿಸುತ್ತಿದೆಯೇ?	
8.	ವಸತಿ ಶಾಲೆಯಾದಲ್ಲಿ ಮಕ್ಕಳಿಗೆ ನೀಡುತ್ತಿರುವ ಊಟ/ಉಪಚಾರದ ವ್ಯವಸ್ಥೆ. ಅ. ಮಕ್ಕಳಿಗೆ ಪೌಷ್ಠಿಕಾಂಶ ಒಳಗೊಂಡ ಆಹಾರ ನೀಡಲಾಗುತ್ತಿದೆಯೇ ಆ. ಮೆನುಕಾರ್ಡನ್ನು ತಯಾರಿಸಿ ಪಾಲಿಸಲಾಗುತ್ತಿದೆಯೇ? ಇ. ಮಕ್ಕಳಿಗೆ ಸಾಕಷ್ಟು ಬಟ್ಟೆ, ಸೋಪು, ಎಣ್ಣೆ ಇತರೆ ಸೌಲಭ್ಯ ನೀಡಲಾಗುತ್ತಿದೆಯೇ ಈ. ಯಾವ ರೀತಿಯಲ್ಲಿ ಕುಡಿಯುವ ನೀರನ್ನು ಒದಗಿಸಿದೆ ಉ. ಶಾಲೆಯ ನಂತರದ ಸಮಯದಲ್ಲಿ ಪೂರಕ ಬೋಧನೆಯನ್ನು ನೀಡಲಾಗುತ್ತಿದೆಯೇ? ಊ. ಮಕ್ಕಳಿಗೆ ಮನೋರಂಜನಾ ಕಾರ್ಯಕ್ರಮ ನೀಡಲು ಯಾವ ವ್ಯವಸ್ಥೆ ಒದಗಿಸಲಾಗಿದೆ.	
2.	ಸಂಸ್ಥೆಯ ಆರ್ಥಿಕ ದೃಢತೆಯ ಬಗ್ಗೆ ಪರಿಶೀಲಿಸಲಾಗಿದೆಯೇ ವಿವರಣೆ ನೀಡುವುದು: – ಸಂಸ್ಥೆಯು ಯಾವ ಮೂಲಗಳಿಂದ ಧನಸಹಾಯ ಪಡೆಯುತ್ತಿದೆ – ಸಂಸ್ಥೆಯು ರಾಜ್ಯ/ಕೇಂದ್ರ/ಸ್ಥಳೀಯ ಸಂಸ್ಥೆ/ ಇತರೆ ಖಾಸಗಿ ಸಂಸ್ಥೆಗಳಿಂದ ಅನುದಾನ ಪಡೆಯುತ್ತಿದೆಯೇ? – ಸಂಸ್ಥೆಯು ಇತ್ತೀಚಿನ ವಾರ್ಷಿಕ ವರದಿಯನ್ನು ಲಗತ್ತಿಸಿದೆಯೇ? – ಸಂಸ್ಥೆಯು ನಡೆಸುತ್ತಿರುವ ಇತರ ಮುಖ್ಯ ಕಾರ್ಯಕ್ರಮಗಳ ವಿವರ	
3.	ಸಂಸ್ಥೆಯು ಹೊಂದಿರುವ ಬ್ಯಾಂಕ್ ಖಾತೆ ವಿವರ? ಯಾರ ಹೆಸರಿನಲ್ಲಿ ಹೊಂದಿದೆ	
4.	ತಪಾಸಣಾ ವೇಳೆಯಲ್ಲಿ ಸಂಸ್ಥೆಯ ಆರ್ಥಿಕ ಸ್ಥಿತಿ	
5.	ಸಂಸ್ಥೆಯು ಶಾಲೆಯನ್ನು ಉತ್ತಮ ರೀತಿಯಲ್ಲಿ ನಡೆಸುವಲ್ಲಿ ಯಾವ ಯಾವ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿರುತ್ತದೆ ಮತ್ತು ಯಾವ ರೀತಿಯ ಸಹಾಯವನ್ನು ಪಡೆಯುತ್ತಿದೆ	
6.	ತಪಾಸಣಾ ವೇಳೆಯಲ್ಲಿ ಸಂಸ್ಥೆಯ ಶಾಲೆಯ ನಿರ್ವಹಣೆ ಬಗ್ಗೆ ಗಮನಿಸಲಾದ ಮುಖ್ಯ ಅಂಶಗಳು	

7.	ಸಂಸ್ಥೆಯ ಕಾರ್ಯನಿರ್ವಹಣೆಯನ್ನು ಇನ್ನೂ ಉತ್ತಮಗೊಳಿಸುವ ಬಗ್ಗೆ ನೀಡಬಹುದಾದ ಸಲಹೆಗಳು	
8.	ಶಾಲೆಯ ನಿರ್ವಹಣೆ ಬಗ್ಗೆ ತನಿಖಾಧಿಕಾರಿಗಳ ಅಭಿಪ್ರಾಯ	
9.	ಶಾಲೆಗೆ ತಪಾಸಣಾ ವರ್ಷದಲ್ಲಿ ಯೋಜನೆ ಅನುಸಾರ ಶಿಫಾರಸ್ಸು ಮಾಡಬಹುದಾದ ಅನುದಾನ. ಐಟಂವಾರು ವಿವರ ಒದಗಿಸುವುದು	

ತಪಾಸಣಾಧಿಕಾರಿಗಳ ಸಹಿ/ಮೊಹರಿನೊಂದಿಗೆ

ಅನುಬಂಧ-4

ವಿಶೇಷ ಶಾಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ / ಶಿಕ್ಷಕೇತರ ನೌಕರರ ವಿವರ

ಕ್ರ ಸಂ.	ನೌಕರರ ಹೆಸರು ಮತ್ತು ಪದನಾಮ	ಜನ್ಮ ದಿನಾಂಕ	ನೇಮಕಾತಿ ದಿನಾಂಕ	ಶೈಕ್ಷಣಿಕ ಅರ್ಹತೆ/ವಿಶೇಷ ಶಿಕ್ಷಣದ ತರಬೇತಿಯೊಂದಿಗೆ	ಜಾತಿ/ಧರ್ಮ

ತಪಾಸಣಾಧಿಕಾರಿಗಳ ಸಹಿ/ಮೊಹರಿನೊಂದಿಗೆ

ಅನುಬಂಧ-5

ವಿಶೇಷ ಶಾಲೆಯಲ್ಲಿ ದಾಖಲಾಗಿರುವ ಅಂಗವಿಕಲ ಮಕ್ಕಳ ವಿವರ

ಕ್ರ ಸಂ.	ವಿದ್ಯಾರ್ಥಿಗಳ ಹೆಸರು ಮತ್ತು ವಿಳಾಸ	ದಾಖಲಾತಿ ದಿನಾಂಕ	ಕಲಿಯುತ್ತಿರುವ ತರಗತಿ	ಅಂಗವಿಕಲತೆ ವಿಧ	ಶೇಕಡಾವಾರು	ವಸತಿಯುತ/ ವಸತಿರಹಿತ

ತಪಾಸಣಾಧಿಕಾರಿಗಳ ಸಹಿ/ಮೊಹರಿನೊಂದಿಗೆ

ಅನುಬಂಧ-6

ಇತರೆ ಸರ್ಕಾರೇತರ ಸಂಸ್ಥೆಗಳಿಂದ (ಮೂರನೇ ವ್ಯಕ್ತಿಗಳಿಂದ) ಮೌಲ್ಯಮಾಪನಕ್ಕೆ ಆಯ್ಕೆ ಮಾಡುವ ಬಗ್ಗೆ ವಿವರ

1. ಇಲಾಖೆಯು ಯಾವುದೇ ಸಂದರ್ಭದಲ್ಲಿ ವಿಶೇಷ ಶಾಲೆಗಳ ಕಾರ್ಯನಿರ್ವಹಣೆಯನ್ನು ಇತರೆ ಸರ್ಕಾರೇತರ ಸಂಸ್ಥೆಗಳಿಂದ ಮೌಲ್ಯಮಾಪನ ಮಾಡಿಸಬಹುದಾಗಿದೆ.
2. ಈ ಮೌಲ್ಯಮಾಪನಕ್ಕೆ ಇಬ್ಬರು ಸದಸ್ಯರ ತಂಡವನ್ನು ರಚಿಸಬಹುದಾಗಿದೆ.
3. ಈ ತಂಡದಲ್ಲಿ ವಿಶೇಷ ಶಿಕ್ಷಣದಲ್ಲಿ ಪರಿಣಿತಿ ಹಾಗೂ ಅನುಭವ ಹೊಂದಿರುವವರನ್ನು ಓರ್ವ ಸದಸ್ಯರನ್ನಾಗಿ ಹಾಗೂ ಆಡಳಿತಾಧಿಕಾರಿಯೊಬ್ಬರನ್ನು ಇತರ ಸದಸ್ಯರನ್ನಾಗಿ ನೇಮಿಸಬಹುದಾಗಿದೆ.
4. ಈ ಸದಸ್ಯರಿಗೆ ಸರ್ಕಾರದಿಂದ ನಿಗದಿಪಡಿಸಿದ ಗೌರವ ಧನ ಹಾಗೂ ಪ್ರಯಾಣ ವೆಚ್ಚವನ್ನು ನೀಡಬಹುದು.
5. ಈ ತಂಡವು ಇಲಾಖೆಯು ಸೂಚಿಸುವಂತಹ ಶಾಲೆಗಳಿಗೆ ಭೇಟಿ ನೀಡಿ ಮೌಲ್ಯಮಾಪನ ವರದಿಯನ್ನು ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರಿಗೆ ಸಲ್ಲಿಸುವುದು.
6. ಈ ಕೆಳಕಂಡಂತಹ ಸಂಸ್ಥೆಗಳಿಗೆ ಪ್ರತಿನಿಧಿಗಳನ್ನು ನಿರ್ದೇಶಕರು ಆಯ್ಕೆ ಮಾಡಿ ಸೂಕ್ತ ನಿರ್ದೇಶನ ನೀಡಬಹುದಾಗಿದೆ.

ಮೌಲ್ಯಮಾಪನಕ್ಕೆ ಆಯ್ಕೆ ಮಾಡಬಹುದಾದ ಸರ್ಕಾರೇತರ ಸಂಸ್ಥೆಗಳು :

1. ನಿಮ್ಹಾನ್ಸ್, ಬೆಂಗಳೂರು
2. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು
3. ಕರ್ನಾಟಕ ಮಾನಸಿಕ ಆರೋಗ್ಯ ಪ್ರಾಧಿಕಾರ, ಬೆಂಗಳೂರು
4. ಸರ್ಕಾರಿ ವಿಶೇಷ ಶಾಲೆಗಳ ಶಿಕ್ಷಕರ ತರಬೇತಿ ಕೇಂದ್ರ, ಮೈಸೂರು
5. ಡಿ.ಎಸ್.ಇ.ಆರ್.ಟಿ. ಬೆಂಗಳೂರು
6. ಸರ್ವಶಿಕ್ಷ ಅಭಿಯಾನ, ಬೆಂಗಳೂರು
7. ಮೊಬಿಲಿಟಿ ಇಂಡಿಯಾ, ಬೆಂಗಳೂರು
8. ಕರ್ನಾಟಕ ಪೇರೆಂಟ್ಸ್ ಅಸೋಸಿಯೇಷನ್ ಫಾರ್ ಮೆಂಟಲಿ ಚಾಲೆಂಜ್ಡ್, ಬೆಂಗಳೂರು
9. ಮಿತ್ರಜ್ಯೋತಿ, ಬೆಂಗಳೂರು
10. ಸೇವಾ ಇನ್ ಆಕ್ಷನ್, ಬೆಂಗಳೂರು
11. ಸಿ.ಬಿ.ಆರ್. ನೆಟ್‌ವರ್ಕ್, ಬೆಂಗಳೂರು
12. ಎನೇಬಲ್ ಇಂಡಿಯಾ, ಬೆಂಗಳೂರು
13. ಆಕ್ಷನ್ ಏಡ್ ಸಂಸ್ಥೆ, ಬೆಂಗಳೂರು
14. ಚೆಶೈರ್ ಇಂಟರ್‌ನ್ಯಾಷನಲ್, ಬೆಂಗಳೂರು

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಬೋರಗಾಂವ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ : 1) ಮುಖ್ಯ ಇಂಜನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನಿ(ಉ) ವಲಯ/ಬಿಜೆಪಿ/ಎಇ-1/2010-11/6171 ದಿನಾಂಕ 22.11.2010.

2) ಸರ್ಕಾರದ ಆದೇಶ ಸಂಖ್ಯೆ: ಸನೀಇ 10 ನಯೋಕಾ 2007 ದಿನಾಂಕ 13.05.2008.

3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ 27.11.2010 ರ ಪತ್ರ ಸಂಖ್ಯೆ: ಮುಸದ / ಆಪ್ತಶಾಖೆ/ ಟೆಂಡರ್ / 08-09/3440.

ಪ್ರಸ್ತಾವನೆ :

ನಬಾರ್ಡ್ ಆರ್‌ಐಡಿಎಫ್-13 ಯೋಜನೆಯಡಿ ಅನುಮೋದನೆಗೊಂಡಿರುವ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಬೋರಗಾಂವ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯ ರೂ. 469 ಲಕ್ಷಗಳ ಅಂದಾಜು ಪಟ್ಟಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಗಳನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	07.07.2010
ಕರ್ನಾಟಕ ರಾಜ್ಯ ಪತ್ರ	22.07.2010
ಸಂಯುಕ್ತ ಕರ್ನಾಟಕ ಮತ್ತು ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್	09.07.2010

ದಿನಾಂಕ 21.08.2010 ರಂದು ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಏಕೈಕ ಗುತ್ತಿಗೆದಾರರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು 28.10.2010 ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 4,35,27,857/-
ಪ್ರಸಕ್ತ ಸಾಲಿನ ದರಗಳಿಗೆ (2007-08ನೇ ಸಾಲಿನ ದರಗಳು 2010-11 ನೇ ಸಾಲಿಗೆ ಮುಂದುವರೆಸಿದಂತೆ) ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 6,56,86,009/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಶ್ರೀ ಪದ್ಮಾವತಿ ಮೋತಿಲಾಲ ಕೊಟೇಚಾ (ಮೆ. ತಾಪಿ ಪ್ರಿಸ್ಟ್ರೆಸಡ್ ಪ್ರೊಡಕ್ಟ್ಸ್ ಲಿಮಿಟೆಡ್) ಪ್ರಥಮ ದರ್ಜೆ ಗುತ್ತಿಗೆದಾರರು	6,39,39,001/-	46.89 ಹೆಚ್ಚು	2.66 ಕಡಿಮೆ

ಮೇಲ್ಕಂಡಂತೆ ಶ್ರೀ ಪದ್ಮಾವತಿ ಮೋತಿಲಾಲ ಕೊಟೇಚಾ (ಮೆ. ತಾಪಿ ಪ್ರಿಸ್ಟ್ರೆಸಡ್ ಪ್ರೊಡಕ್ಟ್ಸ್ ಲಿಮಿಟೆಡ್) 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಭಾಗವಹಿಸಿದ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿರುತ್ತಾರೆ. ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 2.66 ರಷ್ಟು ಕಡಿಮೆಯಾಗಿರುತ್ತದೆ. ಇವರ ಟೆಂಡರನ್ನು ಅಂಗೀಕರಿಸಲು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 25/11/2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ (2007-08 ನೇ ಸಾಲಿನ ದರಗಳು 2010-11 ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 6,56,86,009/- ಗಳ ಮೇಲೆ ಶೇಕಡ 2.66 ರಷ್ಟು ಕಡಿಮೆ ದರಗಳಿಗೆ ಅಂದರೆ ರೂ. 6,39,39,001/- ಗಳಿಗೆ ಕಾಮಗಾರಿಯನ್ನು ಶ್ರೀ ಪದ್ಮಾವತಿ ಮೋತಿಲಾಲ ಕೊಟೇಚಾ, (ಮೆ. ತಾಪಿ ಪ್ರಿಸ್ಟ್ರೆಸಡ್ ಪ್ರೊಡಕ್ಟ್ಸ್ ಲಿಮಿಟೆಡ್) 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 53 ಏನೀಯೋ 2010, ಬೆಂಗಳೂರು, ದಿನಾಂಕ: 5ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಬೋರಗಾಂವ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ (2007-08 ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ

ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 6,56,86,009/– ಗಳ ಮೇಲೆ ಶೇಕಡ 2.66 ರಷ್ಟು ಕಡಿಮೆ ದರಗಳಿಗೆ ಅಂದರೆ ರೂ. 6,39,39,001/– (ರೂ. ಆರು ಕೋಟಿ ಮೂವತ್ತೊಂಬತ್ತು ಲಕ್ಷ ಮೂವತ್ತೊಂಬತ್ತು ಸಾವಿರದ ಒಂದು ಮಾತ್ರ) ಕಾಮಗಾರಿಯನ್ನು ಶ್ರೀ ಪದ್ಮಾವತಿ ಮೋತಿಲಾಲ ಕೋಟೇಚಾ (ಮೆ. ತಾಪಿ ಪ್ರಿಸ್ಟ್ರೆಸಡ್ ಪ್ರೊಡಕ್ಟ್ಸ್ ಲಿಮಿಟೆಡ್) 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1) ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

2) ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

3) ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. ನಂ. 201

ಜಲಸಂಪನ್ಮೂಲ ಸಚಿವಾಲಯ

ವಿಷಯ : ಆರ್.ಆರ್.ಆರ್. ಯೋಜನೆಯಡಿ ಧಾರವಾಡ ಜಿಲ್ಲೆಯ ಪ್ಯಾಕೇಜ್–04 (ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕಿನ ಸಂಗಮೇಶ್ವರ ಟ್ಯಾಂಕ್ ಸರ್ವೆ ನಂ 71/37) ಕಾಮಗಾರಿಯ ಟೆಂಡರ್ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ.

ಓದಲಾಗಿದೆ : 1) ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನೀ(ಉ) ವಲಯ/ಬಿಜೆಪಿ/ಎಇ–3/2010–11/5867 ದಿನಾಂಕ 02.11.2010.

2) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ 27–11–2010 ರ ಪತ್ರ ಸಂಖ್ಯೆ: ಮುಸದ. ಆಪ್ತಶಾಖೆ/ ಟೆಂಡರ್/08–09/3440.

ಪ್ರಸ್ತಾವನೆ :

ಕೇಂದ್ರ ಸರ್ಕಾರದಿಂದ ಆರ್.ಆರ್. ಮತ್ತು ಆರ್ ಯೋಜನೆಯಡಿಯಲ್ಲಿ ಅನುಮೋದನೆ ನೀಡಲಾಗಿರುವ 375 ಕಾಮಗಾರಿಗಳಲ್ಲಿ ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿನ ಸಂಗಮೇಶ್ವರ ಟ್ಯಾಂಕ್ ಸರ್ವೆ ನಂ 71/37 ಕಾಮಗಾರಿಯೂ ಸಹ ಒಂದಾಗಿದ್ದು ಈ ಕಾಮಗಾರಿಯ ರೂ. 200.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜನೀಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಗಳನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು (2ನೇ ಕರೆ) ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	28.08.2010
ಜಿಲ್ಲಾ ಟೆಂಡರ್ ಬುಲೆಟಿನ್	28.08.2010
ಸಂಯುಕ್ತ ಕರ್ನಾಟಕ ದಿನಪತ್ರಿಕೆ	31.08.2010
ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನಪತ್ರಿಕೆ	31.08.2010

ದಿನಾಂಕ 15.09.2010 ರಂದು ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಮೂರು ಜನ ಗುತ್ತಿಗೆದಾರರ ಪೈಕಿ ಒಬ್ಬರು ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು 08.10.2010 ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 1,53,90,744/–
ಪ್ರಸಕ್ತ ಸಾಲಿನ ದರಗಳಿಗೆ (2007–08 ನೇ ಸಾಲಿನ ದರಗಳು 2010–11 ನೇ ಸಾಲಿಗೆ ಮುಂದುವರೆಸಿದಂತೆ) ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 1,45,87,724/–
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಶ್ರೀ ಬಿ.ಎಸ್. ಗಾಂವಕರ್, ಪ್ರಥಮ ದರ್ಜೆ ಗುತ್ತಿಗೆದಾರರು	1,98,34,169/–	28.87 ಹೆಚ್ಚು	35.97 ಕಡಿಮೆ

ಮೇಲ್ಕಂಡಂತೆ ಶ್ರೀ ಬಿ.ಎಸ್. ಗಾಂವಕರ್ 1ನೇ ದರ್ಜೆ ಗುತ್ತಿಗೆದಾರರು ಇವರು ಅರ್ಹತೆ ಹೊಂದಿರುವ ಏಕೈಕ ಗುತ್ತಿಗೆದಾರರಾಗಿರುತ್ತಾರೆ. ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 35.97 ರಷ್ಟು ಹೆಚ್ಚಾಗಿದ್ದು,

ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 25/11/2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ (2007-08 ನೇ ಸಾಲಿನ ದರಗಳು 2010-11 ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,45,87,724/- ಗಳ ಮೇಲೆ ಶೇಕಡ 14.50 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,67,02,944/- ಗಳಿಗೆ ಕಾಮಗಾರಿಯನ್ನು ಶ್ರೀ ಬಿ.ಎಸ್. ಗಾಂವಕರ್ 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 91 ಕೆಜಿದು 2010, ಬೆಂಗಳೂರು, ದಿನಾಂಕ: 5ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆರ್.ಆರ್..ಆರ್. ಯೋಜನೆಯಡಿ ಧಾರವಾಡ ಜಿಲ್ಲೆಯ ಪ್ಯಾಕೇಜ್ -04 (ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕಿನ ಸಂಗಮೇಶ್ವರ ಟ್ಯಾಂಕ್ ಸರ್ವೆ ನಂ 71/37) ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ (2007-08 ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,45,87,724/- ಗಳ ಮೇಲೆ ಶೇಕಡ 14.50 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,67,02,944/- (ರೂ. ಒಂದು ಕೋಟಿ ಅರವತ್ತೇಳು ಲಕ್ಷ ಎರಡು ಸಾವಿರದ ಒಂಭೈನೂರ ನಲವತ್ತನಾಲ್ಕು ಮಾತ್ರ) ಕಾಮಗಾರಿಯನ್ನು ಶ್ರೀ ಬಿ.ಎಸ್. ಗಾಂವಕರ್ 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1) ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2) ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3) ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. ನಂ. 202

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಣ್ಣ ನೀರಾವರಿ ಕೆರೆಗಳ ಸುಧಾರಣೆ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ : 1) ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನಿ(ಉ) ವಲಯ/ಬಿಜೆಪಿ/ಎಇ-1/2010-11/6224 ದಿನಾಂಕ 23.11.2010.

2) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ 27-11-2010 ರ ಪತ್ರ ಸಂಖ್ಯೆ: ಮುಸದ/ ಆಪ್ತಶಾಖೆ/ ಟೆಂಡರ್/08-09/3440.

ಪ್ರಸ್ತಾವನೆ :

ಆರ್.ಆರ್.ಆರ್ ಕಾರ್ಯಕ್ರಮದಡಿ ಭಾರತ ಸರ್ಕಾರದ ಅನುಮೋದನೆ ದೊರಕಿರುವ 375 ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳ ಪೈಕಿ ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಕೆಳಕಂಡ ಕಾಮಗಾರಿಗಳು ಸೇರಿದ್ದು, ಅವುಗಳಿಗೆ ನೀಡಲಾಗಿರುವ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ವಿವರಗಳು ಕೆಳಕಂಡಂತಿವೆ.

ಕ್ರ. ಸಂ.	ಕಾಮಗಾರಿ ಹೆಸರು	ಭಾರತ ಸರ್ಕಾರದಿಂದ ಅನುಮೋದನೆ ಯಾಗಿರುವ ಮೊತ್ತ	ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದ ಪ್ರಾಧಿಕಾರ	ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುವ ವಿವರ
1	ಕಡತನಾಳ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ	45.00	ಅಧೀಕ್ಷಕ ಇಂಜಿನಿಯರ್ ಸ.ನೀ.ವೃತ್ತ, ಬೆಳಗಾವಿ	ರೂ. 45.00 ಲಕ್ಷ ರಿ.ಸಂಖ್ಯೆ: 36/6-2010
2	ಮಾಚಿಕೂಲವಳ್ಳಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ	20.00	ಅಧೀಕ್ಷಕ ಇಂಜಿನಿಯರ್ ಸ.ನೀ.ವೃತ್ತ, ಬೆಳಗಾವಿ	ರೂ. 20.00 ಲಕ್ಷ ರಿ.ಸಂಖ್ಯೆ: 20/6-2010
3	ಮರಿಗೇರಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ	26.00	ಅಧೀಕ್ಷಕ ಇಂಜಿನಿಯರ್ ಸ.ನೀ.ವೃತ್ತ, ಬೆಳಗಾವಿ	ರೂ. 26.00 ಲಕ್ಷ ರಿ. ಸಂಖ್ಯೆ 43/6-2010

4	ಪರಸನಟ್ಟಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ	34.00	ಅಧೀಕ್ಷಕ ಇಂಜನಿಯರ್ ಸ.ನೀ.ವೃತ್ತ, ಬೆಳಗಾವಿ	ರೂ. 34.00 ಲಕ್ಷ ರಿ. ಸಂಖ್ಯೆ 42/6-2010
5	ಹಣಬರಟ್ಟಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ	24.00	ಅಧೀಕ್ಷಕ ಇಂಜನಿಯರ್ ಸ.ನೀ.ವೃತ್ತ, ಬೆಳಗಾವಿ	ರೂ. 37.00 ಲಕ್ಷ ರಿ. ಸಂಖ್ಯೆ 24/6-2010
6	ಸಿದ್ದಸಮುದ್ರ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ	47.00	ಅಧೀಕ್ಷಕ ಇಂಜನಿಯರ್ ಸ.ನೀ.ವೃತ್ತ, ಬೆಳಗಾವಿ	ರೂ. 47.00 ಲಕ್ಷ ರಿ. ಸಂಖ್ಯೆ 19/6-2010.
	ಒಟ್ಟು	196.00		

ಈ ಕಾಮಗಾರಿಗಳನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು (4ನೇ ಕರೆ) ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	20.10.2010
ಜಿಲ್ಲಾ ಟೆಂಡರ್ ಬುಲೆಟಿನ್	18.10.2010
ಸಂಯುಕ್ತ ಕರ್ನಾಟಕ ದಿನಪತ್ರಿಕೆ	21.10.2010
ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನಪತ್ರಿಕೆ	20.10.2010

ದಿನಾಂಕ 8.11.2010 ರಂದು ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್‌ಅನ್ನು 18.11.2010 ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 1,56,40,746/-
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 1,98,29,192/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಶ್ರೀ ಎ.ಎಸ್. ಸವಸುದ್ದಿ ಪ್ರಥಮ ದರ್ಜೆ ಗುತ್ತಿಗೆದಾರರು	2,58,09,309/-	65.01 ಹೆಚ್ಚು	30.16 ಹೆಚ್ಚು

ಮೇಲ್ಕಂಡಂತೆ ಶ್ರೀ ಎ.ಎಸ್. ಸವಸುದ್ದಿ 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು. ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 30.16 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 25/11/2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,98,29,192/- ಗಳ ಮೇಲೆ ಶೇಕಡ 5.00 ರಷ್ಟು ಹೆಚ್ಚಿನ ದರಗಳಿಗೆ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 2 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ. ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ, ಟೆಂಡರನ್ನು ಪರಿಷ್ಕೃತ ಮೊತ್ತದ ಮೇಲೆ ಶೇಕಡ 1.00 ರಷ್ಟು ಹೆಚ್ಚಿನ ದರಗಳಲ್ಲಿ ಅಂದರೆ ರೂ. 2.00,27,484/-ಗಳಿಗೆ ಕಾಮಗಾರಿಯನ್ನು ಶ್ರೀ ಎ.ಎಸ್.ಸವಸುದ್ದಿ, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 98 ಕೆಜಿದು 2010, ಬೆಂಗಳೂರು, ದಿನಾಂಕ: 5ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆರ್.ಆರ್..ಆರ್. ಯೋಜನೆಯಡಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಣ್ಣ ನೀರಾವರಿ ಕೆರೆಗಳ ಸುಧಾರಣೆ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,98,29,192/- ಗಳ ಮೇಲೆ ಶೇಕಡ 1.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 2,00,27,484/- ಗಳಿಗೆ(ರೂ. ಎರಡು ಕೋಟಿ ಇಪ್ಪತ್ತೇಳು ಸಾವಿರದ ನಾಲ್ಕು ನೂರ ಎಂಬತ್ತು ನಾಲ್ಕು ಮಾತ್ರ) ಕಾಮಗಾರಿಯನ್ನು ಶ್ರೀ ಎ.ಎಸ್.ಸವಸುದ್ದಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1) ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2) ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3) ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. ನಂ. 203

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಬೀಡಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ : 1) ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನಿ(ಉ) ವಲಯ/ಬಿಜೆಪಿ/ಎಇ-1/2010-11/6068 ದಿನಾಂಕ 15.11.2010.

2) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ 27-11-2010 ರ ಪತ್ರ ಸಂಖ್ಯೆ: ಮುಸದ. ಆಪ್ತಶಾಖೆ/ ಟೆಂಡರ್/08-09/3440.

ಪ್ರಸ್ತಾವನೆ :

ವಿಶೇಷ ಘಟಕ ಯೋಜನೆ ಕಾರ್ಯಕ್ರಮದಡಿ ಅನುಮೋದನೆ ಗೊಂಡಿರುವ ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಬೀಡಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ರೂ. 20.00 ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಬೆಳಗಾವಿರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಗಳನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	04.10.2010
ಸಂಯುಕ್ತ ಕರ್ನಾಟಕ/ಪ್ರಜಾವಣಿ ದಿನಪತ್ರಿಕೆ	08.10.2010

ದಿನಾಂಕ 20.10.2010 ರಂದು ಟೆಂಡರನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 18,94,712/-
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 25,72,608/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ
ಶ್ರೀ ರಾಜು ಡಿ. ಪದ್ಮಣ್ಣವರ, ಪ್ರಥಮ ದರ್ಜೆ ಗುತ್ತಿಗೆದಾರರು	28,04,448/-	48.01 ಹೆಚ್ಚು	9.01 ಹೆಚ್ಚು

ಮೇಲ್ಕಂಡಂತೆ ಶ್ರೀ ರಾಜು ಡಿ. ಪದ್ಮಣ್ಣವರ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು. ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 9.01 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 25/11/2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 25,72,608/- ಗಳ ಮೇಲೆ ಶೇಕಡ 5.00 ರಷ್ಟು ಹೆಚ್ಚಿನ ದರಗಳಿಗೆ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 2 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ. ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ, ಟೆಂಡರನ್ನು ಪರಿಷ್ಕೃತ ಮೊತ್ತದ ಮೇಲೆ ಶೇಕಡ 1.00 ರಷ್ಟು ಹೆಚ್ಚಿನ ದರಗಳಲ್ಲಿ ಅಂದರೆ ರೂ. 25,98,334/-ಗಳಿಗೆ ಕಾಮಗಾರಿಯನ್ನು ಶ್ರೀ ರಾಜು ಡಿ. ಪದ್ಮಣ್ಣವರ, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 95 ಕೆಜಿದು 2010, ಬೆಂಗಳೂರು, ದಿನಾಂಕ: 5ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಬೀಡಿ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆಗಳ ಸುಧಾರಣೆ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 25,72,608/- ಗಳ ಮೇಲೆ ಶೇಕಡ 1.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 25,98,334/- (ರೂ. ಇಪ್ಪತ್ತೈದು ಲಕ್ಷ ತೊಂಬತ್ತೆಂಟು ಸಾವಿರದ ಮೂರು ನೂರ ಮುವತ್ತ ನಾಲ್ಕು ಮಾತ್ರ) ಕಾಮಗಾರಿಯನ್ನು ಶ್ರೀ ರಾಜು ಡಿ. ಪದ್ಮಣ್ಣವರ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1) ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

2) ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

3) ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. ನಂ. 206

ಜಲಸಂಪನ್ಮೂಲ ಸಚಿವಾಲಯ

ವಿಷಯ : ಹಾಸನ ಜಿಲ್ಲೆ, ಹಾಸನ ತಾಲ್ಲೂಕು ರಾವುತ್ತನಹಳ್ಳಿ ಏತನೀರಾವರಿ ಯೋಜನೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಕಾಮಗಾರಿಯ ಟೆಂಡರ್ ಕುರಿತು.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಸನೀಇ 10 ನಯೋಕಾ 2007 ದಿನಾಂಕ: 13.05.2008.

2) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ: ಮುಸದ/ತಾಂ.–2/ಸಇಂ.2/ಹಾಸನ/ಟೆಂಡರ್/2010/3359– ದಿನಾಂಕ 23.11.2010.

3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ 27–11–2010 ರ ಪತ್ರ ಸಂಖ್ಯೆ: ಮುಸದ. ಆಪ್ತಶಾಖೆ/ ಟೆಂಡರ್/08–09/3440

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ನಬಾರ್ಡ ಆರ್.ಐ.ಡಿ.ಎಫ್–13 ಯೋಜನೆಯಡಿ ರೂ. 9036.60 ಲಕ್ಷ ಅಂದಾಜು ಮೊತ್ತದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುವ 162 ಕಾಮಗಾರಿಗಳ ಪೈಕಿ ರೂ. 86.00 ಲಕ್ಷ ಅಂದಾಜು ಮೊತ್ತದ ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ರಾವುತ್ತನಹಳ್ಳಿ ಏತನೀರಾವರಿ ಯೋಜನೆ ಅಭಿವೃದ್ಧಿ ಕಾಮಗಾರಿಯು ಸೇರಿದ್ದು, ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ಬೆಂಗಳೂರುರವರ ನೋಂದಣಿ ಸಿ.ಇ.ಆರ್. ಸಂಖ್ಯೆ: 39/2009ರಲ್ಲಿ ಅಂದಾಜಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಹಾಸನ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	17.07.2010
ಹಾಸನ ಜಿಲ್ಲಾ ಟೆಂಡರ್ ಬುಲೆಟಿನ್	17.07.2010
ವಿಜಯ ಕರ್ನಾಟಕ ಹಾಗೂ ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆ	17.07.2010
ಉದಯವಾಣಿ ದಿನ ಪತ್ರಿಕೆ	18.07.2010

ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬ ಗುತ್ತಿಗೆದಾರರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿದ್ದು ಹಾಗೂ ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು 15.09.2010ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 83,10,617/–
ಪರಿಷ್ಕೃತ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 99,98,692/–
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರೀಷ್ಕೃತ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಶ್ರೀ ಗೋಪಾಲ್ ಸುಂದರ್ ರಾವ್, (ಟ್ರೈಗಾನ್ ಎಂಜಿನಿಯರಿಂಗ್ ಕಂ) 1ನೇ ದರ್ಜೆ ಗುತ್ತಿಗೆದಾರರು	1,11,67,169/–	34.37 ಹೆಚ್ಚು	11.686 ಹೆಚ್ಚು

ಮೇಲ್ಕಂಡಂತೆ ಶ್ರೀ ಗೋಪಾಲ್ ಸುಂದರ್ ರಾವ್, (ಟ್ರೈಗಾನ್ ಎಂಜಿನಿಯರಿಂಗ್ ಕಂ) 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 11.686 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 25/11/2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪ್ರಸಕ್ತ ಸಾಲಿನ ದರಗಳಿಗೆ (2007–08 ನೇ ಸಾಲಿನ ದರಗಳು 2010–11ನೇ ಸಾಲಿಗೆ ಮುಂದುವರೆಸಿದಂತೆ) ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 99,98,692/– ಗಳ ಮೇಲೆ ಶೇಕಡ 11.686 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,11,67,169/– ಗಳಿಗೆ ಕಾಮಗಾರಿಯನ್ನು ಶ್ರೀ ಗೋಪಾಲ್ ಸುಂದರ್ ರಾವ್ (ಟ್ರೈಗಾನ್ ಎಂಜಿನಿಯರಿಂಗ್ ಕಂ) 1ನೇ ದರ್ಜೆ ಗುತ್ತಿಗೆದಾರರು

ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 63 ಏನೀಯೋ 2010, ಬೆಂಗಳೂರು, ದಿನಾಂಕ: 5ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ರಾವುತ್ತನಹಳ್ಳಿ ಏತನೀರಾವರಿ ಯೋಜನೆ ಅಭಿವೃದ್ಧಿ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 99,98,692/- ಗಳ ಮೇಲೆ ಶೇಕಡ 11.686 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 1,11,67,169/- ಗಳಿಗೆ (ರೂ. ಒಂದು ಕೋಟಿ ಹನ್ನೊಂದು ಲಕ್ಷ ಅರವತ್ತೇಳು ಸಾವಿರದ ನೂರ ಅರವತ್ತೊಂಬತ್ತು ಮಾತ್ರ) ಕಾಮಗಾರಿಯನ್ನು ಶ್ರೀ ಗೋಪಾಲ್ ಸುಂದರ್ ರಾವ್ ((ಟ್ರೈಗಾನ್ ಎಂಜಿನಿಯರಿಂಗ್ ಕಂ) 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1) ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

2) ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

3) ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. ನಂ. 207

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ : ಮುಇಂ/ಸನಿ(ಉ)ವಲಯ/ಬಿಜೆಪಿ/ಎಇ-1/2010-11/6069 ದಿನಾಂಕ : 15-11-2010.
2. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ : 27-11-2010 ರ ಪತ್ರ ಸಂಖ್ಯೆ : ಮುಸದ/ಆಪ್ತಶಾಖೆ/ಟೆಂಡರ್/08-09/3440.

ಪ್ರಸ್ತಾವನೆ :

ವಿಶೇಷ ಘಟಕ ಯೋಜನೆ ಕಾರ್ಯಕ್ರಮದಡಿ ಅನುಮೋದನೆಗೊಂಡಿರುವ ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯ ರೂ. 30.00 ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಬೆಳಗಾವಿರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಗಳನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	04-10-2010
ಸಂಯುಕ್ತ ಕರ್ನಾಟಕ/ಪ್ರಜಾವಾಣಿ ದಿನಪತ್ರಿಕೆಗಳು	08-10-2010

ದಿನಾಂಕ : 20-10-2010 ರಂದು ಟೆಂಡರ್‌ಅನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 28,40,542/-
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 37,66,972/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ ಮೆಸರ್ಸ್ ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ
ಶ್ರೀ ರಾಜು ಡಿ. ಪದ್ಮಣ್ಣವರ, ಪ್ರಥಮದರ್ಜೆ ಗುತ್ತಿಗೆದಾರರು	42,03,907/-	47.99 ಹೆಚ್ಚು	11.60 ಹೆಚ್ಚು

ಮೇಲ್ಕಂಡಂತೆ ಶ್ರೀ ರಾಜು ಡಿ. ಪದ್ಮಣ್ಣವರ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 11.60 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 25-11-2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 37,66,972/–ಗಳ ಮೇಲೆ ಶೇಕಡ 5.00 ರಷ್ಟು ಹೆಚ್ಚಿನ ದರಗಳಿಗೆ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 2 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ. ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ, ಟೆಂಡರನ್ನು ಪರಿಷ್ಕೃತ ಮೊತ್ತದ ಮೇಲೆ ಶೇಕಡ 1.00 ರಷ್ಟು ಹೆಚ್ಚಿನ ದರಗಳಲ್ಲಿ ಅಂದರೆ ರೂ. 38,04,642/–ಗಳಿಗೆ ಕಾಮಗಾರಿಯನ್ನು ಶ್ರೀ ರಾಜು ಡಿ. ಪದ್ಮಣ್ಣವರ, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 94 ಕೆಜಿದು 2010, ಬೆಂಗಳೂರು, ದಿನಾಂಕ : 5ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಹೆಬ್ಬಾಳ ಗ್ರಾಮದ ಹತ್ತಿರ ಸಣ್ಣ ನೀರಾವರಿ ಕೆರೆ ಸುಧಾರಣೆ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 37,66,972/–ಗಳ ಮೇಲೆ ಶೇಕಡ 1.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 38,04,642/– ಗಳಿಗೆ (ರೂ ಮುವತ್ತೆಂಟು ಲಕ್ಷ ನಾಲ್ಕು ಸಾವಿರದ ಆರು ನೂರ ನಲವತ್ತೆರಡು ಮಾತ್ರ) ಕಾಮಗಾರಿಯನ್ನು ಶ್ರೀ ರಾಜು ಡಿ. ಪದ್ಮಣ್ಣವರ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20–01–2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ. ಆರ್. 208 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಶಿರಗುಪ್ಪಿ ಗ್ರಾಮದ ಹತ್ತಿರ ಇಂಗು ಕೆರೆ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ : ಮುಇಂ/ಸನಿ(ಉ)ವಲಯ/ಬಿಜೆಪಿ/ಎಇ–1/2010–11/5869 ದಿನಾಂಕ : 2–11–2010.
2. ಸರ್ಕಾರದ ಆದೇಶ ಸಂಖ್ಯೆ : ಸನೀಇ 06 ನಯೋಕಾ 2009 ದಿನಾಂಕ : 06–01–2010
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ : 27–11–2010 ರ ಪತ್ರ ಸಂಖ್ಯೆ : ಮುಸದ/ಆಪ್ತಶಾಖೆ/ಟೆಂಡರ್/08–09/3440.

ಪ್ರಸ್ತಾವನೆ :

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಶಿರಗುಪ್ಪಿ ಗ್ರಾಮದ ಹತ್ತಿರ ಇಂಗು ಕೆರೆ ನಿರ್ಮಾಣ ಕಾಮಗಾರಿಯ ರೂ. 50.00 ಲಕ್ಷಗಳ ಅಂದಾಜು ಪಟ್ಟಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಗಳನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	13–09–2010
ಸಂಯುಕ್ತ ಕರ್ನಾಟಕ / ವಿಜಯ ಕರ್ನಾಟಕ ದಿನಪತ್ರಿಕೆಗಳು	14–09–2010

ದಿನಾಂಕ : 28–09–2010 ರಂದು ಟೆಂಡರ್‌ಅನ್ನು ತೆರೆದು ಪರಿಶೀಲಿಸಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಒಬ್ಬರು ಗುತ್ತಿಗೆದಾರರು ಅರ್ಹತೆ ಹೊಂದಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 40,59,144/–
ಪ್ರಸಕ್ತ ಸಾಲಿನ ದರಗಳಿಗೆ (2007–08ನೇ ಸಾಲಿನ ದರಗಳು 2010–11ನೇ ಸಾಲಿಗೆ ಮುಂದುವರೆಸಿದಂತೆ)	ರೂ. 40,18,144/–

ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ದರಗಳ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ
ಶ್ರೀ ಸೈಫುದ್ದೀನ್ ಅಪ್ಪಾಲಾಲ ಮುಲ್ಲಾ, ಪ್ರಥಮ ದರ್ಜೆ ಗುತ್ತಿಗೆದಾರರು	50,75,802/-	25.05 ಹೆಚ್ಚು	26.32 ಹೆಚ್ಚು

ಮೇಲ್ಕಂಡಂತೆ ಶ್ರೀ ಸೈಫುದ್ದೀನ್ ಅಪ್ಪಾಲಾಲ ಮುಲ್ಲಾ, ಪ್ರಥಮ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಭಾಗವಹಿಸಿದ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿರುತ್ತಾರೆ. ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 26.32 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 25-11-2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 40,18,144/-ಗಳ ಮೇಲೆ ಶೇಕಡ 14.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 45,80,684/-ಗಳಿಗೆ ಕಾಮಗಾರಿಯನ್ನು ಶ್ರೀ ಸೈಫುದ್ದೀನ್ ಅಪ್ಪಾಲಾಲ ಮುಲ್ಲಾ, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 16 ಹೊಕೆನಿ 2010, ಬೆಂಗಳೂರು, ದಿನಾಂಕ : 5ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಶಿರಗುಪ್ಪಿ ಗ್ರಾಮದ ಹತ್ತಿರ ಇಂಗು ಕೆರೆ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 40,18,144/-ಗಳ ಮೇಲೆ ಶೇಕಡ 14 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 45,80,684/-ಗಳಿಗೆ (ರೂ. ನಲವತ್ತೈದು ಲಕ್ಷ ಎಂಬತ್ತು ಸಾವಿರದ ಆರು ನೂರ ಎಂಬತ್ತನಾಲ್ಕು ಮಾತ್ರ) ಕಾಮಗಾರಿಯನ್ನು ಶ್ರೀ ಸೈಫುದ್ದೀನ ಅಪ್ಪಾಲಾಲ ಮುಲ್ಲಾ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20-01-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ. ಆರ್. 209

ಜಲಸಂಪನ್ಮೂಲ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಕೊಳಗಿನಬೈಲು ದಿಂಡಿನಕೆರೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಕುರಿತು.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ರವರ ಪತ್ರದ ಸಂಖ್ಯೆ : ಮುಸ(ದ)/ತಾಂ.3/ಸ.ಇಂ.8/ಶಿವಮೊಗ್ಗ/ಇ-ಟೆಂಡರ್/2010-11/ ದಿನಾಂಕ : 25-11-2010.

2. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ : 27-11-2010 ರ ಪತ್ರ ಸಂಖ್ಯೆ : ಮುಸದ/ಆಪ್ತಶಾಖೆ/ಟೆಂಡರ್/08-09/3440.

ಪ್ರಸ್ತಾವನೆ :

ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ ಬೆಂಗಳೂರು ರವರು ವಿಶೇಷ ಘಟಕ ಯೋಜನೆಯಡಿ ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಕೊಳಗಿನಬೈಲು ದಿಂಡಿನಕೆರೆ ಅಭಿವೃದ್ಧಿ ಕಾಮಗಾರಿಯ ರೂ. 12.00 ಲಕ್ಷ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಗಳನ್ನು ಕೈಗೊಳ್ಳಲು ಶಿವಮೊಗ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಶಿವಮೊಗ್ಗ ಜಿಲ್ಲಾ ಟೆಂಡರ್ ಬುಲೆಟಿನ್	18–09–2010
ವಿಜಯ ಕರ್ನಾಟಕ ಹಾಗು ದಿ ಟೈಮ್ಸ್ ಆಫ್ ಇಂಡಿಯಾ ದಿನ ಪತ್ರಿಕೆ	21–09–2010

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಹಾಗೂ ಅರ್ಹತೆ ಹೊಂದಿದ್ದು ಇವರ ಟೆಂಡರ್‌ಗಳನ್ನು 30–09–2010ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 11,73,664/–
ಸಿಮೆಂಟ್ ಮತ್ತು ಉಕ್ಕಿನ ಪ್ರಸಕ್ತ ಮಾರುಕಟ್ಟೆ ದರಗಳನ್ನು ಪರಿಗಣಿಸಿದಂತೆ ಪರಿಷ್ಕೃತ ಟೆಂಡರಿಗೆ ಇಡಲಾದ ಮೊತ್ತ	ರೂ. 11,52,512/–

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ	ಪರಿಷ್ಕೃತ ದರಗಳ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ
1	ಎಸ್. ಕೆ. ಧರ್ಮೇಶ್, 1ನೇ ದರ್ಜೆ ಗುತ್ತಿಗೆದಾರರು, ತೀರ್ಥಹಳ್ಳಿ	12,30,864/–	6.16 ಹೆಚ್ಚು	6.79 ಹೆಚ್ಚು
2	ಆರ್. ರಾಜ್ ಕುಮಾರ್, 1ನೇ ದರ್ಜೆ ಗುತ್ತಿಗೆದಾರರು,	17,14,062/–	47.84 ಹೆಚ್ಚು	48.72 ಹೆಚ್ಚು

ಮೇಲ್ಕಂಡಂತೆ ಶ್ರೀ ಎಸ್. ಕೆ. ಧರ್ಮೇಶ್, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 6.79ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 25–11–2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 11,52,512/–ಗಳ ಮೇಲೆ ಶೇಕಡ 6.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 12,27,425/–ಗಳಿಗೆ ಕಾಮಗಾರಿಯನ್ನು ಶ್ರೀ ಎಸ್. ಕೆ. ಧರ್ಮೇಶ್, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 2 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 99 ಕೆಜಿದು 2010, ಬೆಂಗಳೂರು, ದಿನಾಂಕ : 5ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕು, ಕೊಳಗಿನಬೈಲು ದಿಂಡಿನಕೆರೆ ಅಭಿವೃದ್ಧಿ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 11,52,512/–ಗಳ ಮೇಲೆ ಶೇ. 6.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 12,27,425/–ಗಳಿಗೆ (ರೂ. ಹನ್ನೆರಡು ಲಕ್ಷ ಇಪ್ಪತ್ತೇಳು ಸಾವಿರದ ನಾಲ್ಕುನೂರ ಇಪ್ಪತ್ತೈದು) ಕಾಮಗಾರಿಯನ್ನು ಶ್ರೀ ಎಸ್. ಕೆ. ಧರ್ಮೇಶ್, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20–01–2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ. ಆರ್. 210

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಹಾಗಲೂರು ಹೊಸಹಳ್ಳಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ : 1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ ರವರ ಪತ್ರದ ಸಂಖ್ಯೆ : ಮುಇಂ/ಸನಿ(ಉ)ವ/ಬಿಜೆಪಿ/ಪಿಬಿ-12/2010-11/5978 ದಿನಾಂಕ : 09-11-2010.

2. ಸರ್ಕಾರದ ಆದೇಶ ಸಂಖ್ಯೆ : ಸನೀಇ 06 ನಯೋಕಾ 2009 ದಿನಾಂಕ : 06-01-2010

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ : 27-11-2010 ರ ಪತ್ರ ಸಂಖ್ಯೆ : ಮುಸದ/ಆಪ್ತಶಾಖೆ/ಟೆಂಡರ್/08-09/3440.

ಪ್ರಸ್ತಾವನೆ :

ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಹಾಗಲೂರು ಹೊಸಹಳ್ಳಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯ ರೂ. 211.00 ಲಕ್ಷಗಳ ಅಂದಾಜು ಪಟ್ಟಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಳ್ಳಾರಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	24-7-2010
ಸಂಯುಕ್ತ ಕರ್ನಾಟಕ/ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಗಳು	26-07-2010

ದಿನಾಂಕ : 08-09-2010ರಂದು ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಮೂರು ಜನ ಗುತ್ತಿಗೆದಾರರ ಪೈಕಿ ಇಬ್ಬರು ಗುತ್ತಿಗೆದಾರರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು 28-09-2010ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 1,96,27,581/-
ಪ್ರಸಕ್ತ ಸಾಲಿನ ದರಗಳಿಗೆ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 2,36,60,898/-

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ
1	ಶ್ರೀ ಎಂ. ಸಿದ್ದರಾಮಣ್ಣ ಗೌಡ, ಪ್ರಥಮ ದರ್ಜೆ ಗುತ್ತಿಗೆದಾರರು,	2,73,68,406/-	39,438 ಹೆಚ್ಚು	15.67 ಹೆಚ್ಚು
2	ಶ್ರೀ ದೊಡ್ಡ ಹನುಮಂತಪ್ಪ, ಪ್ರಥಮ ದರ್ಜೆ ಗುತ್ತಿಗೆದಾರರು	3,47,85,284/-	7723 ಹೆಚ್ಚು	47.02 ಹೆಚ್ಚು

ಮೇಲ್ಕಂಡಂತೆ ಶ್ರೀ, ಎಂ. ಸಿದ್ದರಾಮಣ್ಣ ಗೌಡ 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು. ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 15.67ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 25-11-2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 2,36,60,898/-ಗಳ ಮೇಲೆ ಶೇಕಡ 15.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 2,72,10,033/-ಗಳಿಗೆ ಕಾಮಗಾರಿಯನ್ನು ಎಂ. ಸಿದ್ದರಾಮಣ್ಣ ಗೌಡ, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 2 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 51 ಏನೀಯೋ 2010, ಬೆಂಗಳೂರು, ದಿನಾಂಕ : 5ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಹಾಗಲೂರು ಹೊಸಹಳ್ಳಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ (2007-08 ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 2,36,60,898/-ಗಳ ಮೇಲೆ ಶೇಕಡ 15.00 ರಷ್ಟು ಹೆಚ್ಚಿನ

ದರಗಳಿಗೆ ಅಂದರೆ ರೂ. 2,72,10,033/- ಗಳಿಗೆ (ರೂ. ಎರಡು ಕೋಟಿ ಎಪ್ಪತ್ತೆರಡು ಲಕ್ಷ ಹತ್ತು ಸಾವಿರದ ಮೂವತ್ತಮೂರು ಮಾತ್ರ) ಕಾಮಗಾರಿಯನ್ನು ಎಂ. ಸಿದ್ದರಾಮಣ್ಣ ಗೌಡ, 1ನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20-01-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ. ಆರ್. 211 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕಲೂತಿ (ಸೈಟ್-2) ಗ್ರಾಮದ ಹತ್ತಿರ ಅಗ್ರಾಣಿ ಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ : ಮುಇಂ/ಸನಿ(ಉ)ವಲಯ/ಬಿಜೆಪಿ/ಎಇ-1/2010-11/5875 ದಿನಾಂಕ : 02-11-2010.
2. ಸರ್ಕಾರದ ಆದೇಶ ಸಂಖ್ಯೆ : ಸನೀಇ 236 ಮಸಾವಿ 2009(6) ದಿನಾಂಕ : 24-12-2009
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರುರವರ ದಿನಾಂಕ : 27-11-2010 ರ ಪತ್ರ ಸಂಖ್ಯೆ : ಮುಸದ/ಆಪ್ತಶಾಖೆ/ಟೆಂಡರ್/08-09/3440.

ಪ್ರಸ್ತಾವನೆ :

ಎ.ಐ.ಬಿ.ಪಿ. ಕಾರ್ಯಕ್ರಮದಡಿ ಅನುಮೋದನೆಗೊಂಡಿರುವ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕಲೂತಿ (ಸೈಟ್-2) ಗ್ರಾಮದ ಹತ್ತಿರ ಅಗ್ರಾಣಿ ಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ರೂ. 156.00 ಲಕ್ಷಗಳ ಅಂದಾಜು ಪಟ್ಟಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿದೆ.

ಈ ಕಾಮಗಾರಿಗಳನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	21-08-2010
ಜಿಲ್ಲಾ ಟೆಂಡರ್ ಬುಲೆಟಿನ್	23-08-2010
ಪ್ರಜಾವಾಣಿ ದಿನಪತ್ರಿಕೆಗಳು	28-08-2010
ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನಪತ್ರಿಕೆ	28-08-2010

ದಿನಾಂಕ : 05-10-2010ರಂದು ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಇಬ್ಬರೂ ಗುತ್ತಿಗೆದಾರರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು 12-10-2010ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 1,35,34,205/-
ಪ್ರಸಕ್ತ ಸಾಲಿನ ದರಗಳಿಗೆ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 1,29,50,653/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡವಾರು ಹೆಚ್ಚಳ/ಕಡಿಮೆ
ಶ್ರೀ ಜಯಶೀಲ ನಾರಾಯಣ ಶೆಟ್ಟಿ, ಪ್ರಥಮ ದರ್ಜೆ ಗುತ್ತಿಗೆದಾರರು	1,55,66,347/-	15.01 ಹೆಚ್ಚು	20.20 ಹೆಚ್ಚು
ಶ್ರೀ ಎ.ಎಂ. ಹೆಬ್ಬಾಳ, ಪ್ರಥಮ ದರ್ಜೆ ಗುತ್ತಿಗೆದಾರರು	1,57,14,380/-	16.11 ಹೆಚ್ಚು	21.34 ಹೆಚ್ಚು

ಮೇಲ್ಕಂಡಂತೆ ಶ್ರೀ ಜಯಶೀಲ ನಾರಾಯಣ ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ಕನಿಷ್ಠ ದರಗಳನ್ನು ನಮೂದಿಸಿದ್ದು, ಈ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ

ಹೋಲಿಸಿದಾಗ ಶೇಕಡ 20.20 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನೀಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 25-11-2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,29,50,653/-ಗಳ ಮೇಲೆ ಶೇಕಡ 14 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,47,63,744/-ಗಳಿಗೆ ಕಾಮಗಾರಿಯನ್ನು ಶ್ರೀ ಜಯಶೀಲ ನಾರಾಯಣ ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 46 ಅಪಿಬಂ 2010, ಬೆಂಗಳೂರು, ದಿನಾಂಕ : 5ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೋಕಿನ ಕಲೂತಿ (ಸೈಟ್-2) ಗ್ರಾಮದ ಹತ್ತಿರ ಅಗ್ರಾಣಿ ಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,29,50,653/-ಗಳ ಮೇಲೆ ಶೇಕಡ 14 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,47,63,744/- ಗಳಿಗೆ (ರೂ. ಒಂದು ಕೋಟಿ ನಲವತ್ತೇಳು ಲಕ್ಷ ಅರವತ್ಮೂರು ಸಾವಿರದ ಏಳುನೂರ ನಲವತ್ತ ನಾಲ್ಕು ಮಾತ್ರ) ಕಾಮಗಾರಿಯನ್ನು ಶ್ರೀ ಜಯಶೀಲ ನಾರಾಯಣ ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ : 20-01-2003 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ. ಆರ್. 212

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ವರವಿ ಗ್ರಾಮದ ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ:
1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನಿ(ಉ)/ವಲಯ/ಬಿಜೆಪಿ/ಎಇ-3/2010-11/5863, ದಿ:02-11-2010
2) ಸರ್ಕಾರದ ಆದೇಶ ಸಂಖ್ಯೆ: ಸನೀಇ 236 ಮಸಾವಿ 2009(3) ದಿ:24-12-2009.
3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿ:27-11-2010 ರ ಪತ್ರ ಸಂಖ್ಯೆ: ಮುಸದ/ಆಪ್ತ ಶಾಖೆ /ಟೆಂಡರ್/08-09/3440

ಪ್ರಸ್ತಾವನೆ :

ಎ.ಐ.ಬಿ.ಪಿ. ಕಾರ್ಯಕ್ರಮದಡಿ ಅನುಮೋದನೆಗೊಂಡಿರುವ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ವರವಿ ಗ್ರಾಮದ ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ರೂ.120.00 ಲಕ್ಷಗಳ ಅಂದಾಜು ಪಟ್ಟಿಗೆ ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿದೆ.

ಈ ಕಾಮಗಾರಿಗಳನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	13-09-2010
ಜಿಲ್ಲಾ ಟೆಂಡರ್ ಬುಲೆಟಿನ್	21-09-2010
ಸಂಯುಕ್ತ ಕರ್ನಾಟಕ ದಿನಪತ್ರಿಕೆ	23-09-2010
ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನಪತ್ರಿಕೆ	23-09-2010

ದಿನಾಂಕ 29-09-2010ರಂದು ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಭಾಗವಹಿಸಿದ್ದ 3 ಜನ ಗುತ್ತಿಗೆದಾರರ ಪೈಕಿ ಏಕೈಕ ಗುತ್ತಿಗೆದಾರರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ನ್ನು 11-10-2010ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ.1,06,06,006/-
ಪ್ರಸಕ್ತ ಸಾಲಿನ ದರಗಳಿಗೆ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ.99,59,729/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಶ್ರೀ ಆರ್.ವಿ.ಶೆಟ್ಟಿ ಪ್ರಥಮ ದರ್ಜೆ ಗುತ್ತಿಗೆದಾರರು	1,25,71,445/-	18.53 ಹೆಚ್ಚು	26.22 ಹೆಚ್ಚು

ಮೇಲ್ಕಂಡಂತೆ ಶ್ರೀ ಆರ್.ವಿ. ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಭಾಗವಹಿಸಿದ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿರುತ್ತಾರೆ ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತಕ್ಕೆ ಹೋಲಿಸಿದಾಗ ಶೇಕಡ 26.22 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 25-11-2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.99,59,729/-ಗಳ ಮೇಲೆ ಶೇಕಡ 14.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,13,54,091/-ಗಳಿಗೆ ಕಾಮಗಾರಿಯನ್ನು ಶ್ರೀ ಆರ್.ವಿ.ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 47 ಅಪಿಬಂ 2010, ಬೆಂಗಳೂರು ದಿನಾಂಕ: 5ನೇ ಜನವರಿ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ವರವಿ ಗ್ರಾಮದ ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.99,59,729/-ಗಳ ಮೇಲೆ ಶೇಕಡ 14.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,13,54,091/-ಗಳಿಗೆ (ರೂ. ಒಂದು ಕೋಟಿ ಹದಿಮೂರು ಲಕ್ಷ ಐವತ್ತನಾಲ್ಕು ಸಾವಿರದ ತೊಂಭತ್ತೊಂದು ಮಾತ್ರ) ಕಾಮಗಾರಿಯನ್ನು ಶ್ರೀ ಆರ್.ವಿ.ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿ.ಆರ್.213

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಮಂಗಸೂಳಿ ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ: 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನಿ(ಉ)/ವಲಯ/ಬಿಜೆಪಿ/ಎಇ-1/2010-11/5874, ದಿ:02-11-2010

2) ಸರ್ಕಾರದ ಆದೇಶ ಸಂಖ್ಯೆ: ಸನೀಇ 236 ಮಸಾವಿ 2009(6) ದಿ:24-12-2009.

3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿ:27-11-2010 ರ ಪತ್ರ ಸಂಖ್ಯೆ: ಮುಸದ/ಆಪ್ತ ಶಾಖೆ /ಟೆಂಡರ್/08-09/3440

ಪ್ರಸ್ತಾವನೆ :

ಎ.ಐ.ಬಿ.ಪಿ. ಕಾರ್ಯಕ್ರಮದಡಿ ಅನುಮೋದನೆಗೊಂಡಿರುವ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಮಂಗಸೂಳಿ ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ರೂ.72.30 ಲಕ್ಷಗಳ ಅಂದಾಜು ಪಟ್ಟಿಗೆ ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ

ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿದೆ.

ಈ ಕಾಮಗಾರಿಗಳನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	23-08-2010
ಸಂಯುಕ್ತ ಕರ್ನಾಟಕ ಹಾಗೂ ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ	28-08-2010

ದಿನಾಂಕ 04-10-2010ರಂದು ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಏಕೈಕ ಗುತ್ತಿಗೆದಾರರು ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ನ್ನು 12-10-2010ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ.62,90,915/-
ಪ್ರಸಕ್ತ ಸಾಲಿನ ದರಗಳಿಗೆ (2007-08 ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ.60,15,358/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಶ್ರೀ ಹೆಚ್.ಬಿ. ದಳವಾಯಿ, ಪ್ರಥಮ ದರ್ಜೆ ಗುತ್ತಿಗೆದಾರರು	72,01,950/-	14.48 ಹೆಚ್ಚು	19.73 ಹೆಚ್ಚು

ಮೇಲ್ಕಂಡಂತೆ ಶ್ರೀ ಹೆಚ್.ಬಿ. ದಳವಾಯಿ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಭಾಗವಹಿಸಿದ ಅರ್ಹತೆ ಹೊಂದಿರುವ ಗುತ್ತಿಗೆದಾರರಾಗಿರುತ್ತಾರೆ. ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 19.73 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 25-11-2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.60,15,358/-ಗಳ ಮೇಲೆ ಶೇಕಡ 14.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 68,57,508/-ಗಳಿಗೆ ಕಾಮಗಾರಿಯನ್ನು ಶ್ರೀ ಹೆಚ್.ಬಿ. ದಳವಾಯಿ, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 49 ಅಪಿಬಂ 2010, ಬೆಂಗಳೂರು ದಿನಾಂಕ: 5ನೇ ಜನವರಿ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಮಂಗಸೂಳಿ ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ (2007-08ನೇ ಸಾಲಿನ ದರಗಳು 2010-11ನೇ ಸಾಲಿಗೆ ಮುಂದುವರೆಸಿದಂತೆ) ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.60,15,358/-ಗಳ ಮೇಲೆ ಶೇಕಡ 14.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 68,57,508/-ಗಳಿಗೆ (ರೂ. ಅರವತ್ತೆಂಟು ಲಕ್ಷ ಐವತ್ತೇಳು ಸಾವಿರದ ಐದು ನೂರ ಎಂಟು ಮಾತ್ರ) ಕಾಮಗಾರಿಯನ್ನು ಶ್ರೀ ಹೆಚ್.ಬಿ. ದಳವಾಯಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.214

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಬೆಳಗಲಿ ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ: 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನಿ(ಉ)/ವಲಯ/ಬಿಜೆಪಿ/ಎಇ-1/2010-11/6215, ದಿ:23-11-2010

2) ಸರ್ಕಾರದ ಆದೇಶ ಸಂಖ್ಯೆ: ಸನೀಇ 06 ನಯೋಕಾ 2009 ದಿ:06-01-2010.

3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿ:27-11-2010 ರ ಪತ್ರ ಸಂಖ್ಯೆ: ಮುಸದ/ಆಪ್ತ ಶಾಖೆ /ಟೆಂಡರ್/08-09/3440

ಪ್ರಸ್ತಾವನೆ :

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಬೆಳಗಲಿ ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ರೂ.57.00 ಲಕ್ಷಗಳ ಅಂದಾಜು ಪಟ್ಟಿಗೆ ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ನಬಾರ್ಡ್‌ನ ಆರ್.ಐ.ಡಿ.ಎಫ್.-15ರಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಗಳನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	04-10-2010
ಸಂಯುಕ್ತ ಕರ್ನಾಟಕ ದಿನಪತ್ರಿಕೆ	08-10-2010
ವಿಜಯ ಕರ್ನಾಟಕ ದಿನಪತ್ರಿಕೆ	07-10-2010

ದಿನಾಂಕ 18-10-2010ರಂದು ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿದ್ದು ಇವರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್‌ನ್ನು 29-10-2010ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ.54,03,217/-
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ.62,83,352/-
ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
ಶ್ರೀ ದರೆಪ್ಪಾ ರೇವಪ್ಪಾ ಪಿಡಾಯಿ, ಪ್ರಥಮ ದರ್ಜೆ ಗುತ್ತಿಗೆದಾರರು	67,27,005/-	24.50 ಹೆಚ್ಚು	7.06 ಹೆಚ್ಚು
ಶ್ರೀ ವಿ.ಎಮ್. ಹೆಬ್ಬಾಳ ಪ್ರಥಮ ದರ್ಜೆ ಗುತ್ತಿಗೆದಾರರು	75,86,328/- ಹೆಚ್ಚು	40.40 ಹೆಚ್ಚು	20.74 ಹೆಚ್ಚು

ಮೇಲ್ಕಂಡಂತೆ ಶ್ರೀ ದರೆಪ್ಪಾ ರೇವಪ್ಪಾ ಪಿಡಾಯಿ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 7.06 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರ್‌ನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 25-11-2010 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.62,83,352/-ಗಳ ಮೇಲೆ ಶೇಕಡ 5.00 ರಷ್ಟು ಹೆಚ್ಚಿನ ದರಗಳಿಗೆ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ. ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ, ಟೆಂಡರ್‌ನ್ನು ಪರಿಷ್ಕೃತ ಮೊತ್ತದ ಮೇಲೆ ಶೇಕಡ 3.00 ರಷ್ಟು ಹೆಚ್ಚಿನ ದರಗಳಲ್ಲಿ ಅಂದರೆ ರೂ.64,71,853/- ಗಳಿಗೆ ಕಾಮಗಾರಿಯನ್ನು ಶ್ರೀ ದರೆಪ್ಪಾ ರೇವಪ್ಪಾ ಪಿಡಾಯಿ, 1ನೇ ದರ್ಜೆ ಗುತ್ತಿಗೆದಾರರಿಗೆ ವಹಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 51 ಅಪಿಬಂ 2010, ಬೆಂಗಳೂರು ದಿನಾಂಕ: 5ನೇ ಜನವರಿ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಬೆಳಗಲಿ ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.62,83,352/-ಗಳ ಮೇಲೆ ಶೇಕಡ 3.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 64,71,853/-ಗಳಿಗೆ (ರೂ. ಅರವತ್ತ ನಾಲ್ಕು ಲಕ್ಷ ಎಪ್ಪತ್ತೊಂದು ಸಾವಿರದ ಎಂಟು ನೂರ ಐವತ್ತ ಮೂರು ಮಾತ್ರ) ಕಾಮಗಾರಿಯನ್ನು ಶ್ರೀ ದರೆಪ್ಪಾ ರೇವಪ್ಪಾ ಪಿಡಾಯಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.215

ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಮೆ: ಕಾರಿಗನೂರು ಐರನ್ ಅಂಡ್ ಸ್ಟೀಲ್ ಪ್ರೈ.ಲಿ., ರವರಿಗೆ ತೋರಣಗಲ್ಲು ಗ್ರಾಮದಲ್ಲಿ ಮಂಜೂರು ಮಾಡಿದ ಜಮೀನಿಗೆ ಸಂಬಂಧಿಸಿದಂತೆ ಲೀಸ್ ಕಂ ಸೇಲ್ ಒಪ್ಪಂದ ಪತ್ರವನ್ನು ಮೆ: ಜೆಎಸ್‌ಡಬ್ಲ್ಯು ಸ್ಟೀಲ್ ಲಿ., ರವರಿಗೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಸಿಐ 51 ಎಸ್‌ಪಿಐ 2003 ದಿ:27-10-2004
2. ಸರ್ಕಾರದ ಆದೇಶ ಸಂಖ್ಯೆ: ಸಿಐ 262 ಎಸ್‌ಪಿಐ 2009, ದಿ:28-10-2009
3. ಮೆ: ಕಾರಿಗನೂರು ಐರನ್ ಅಂಡ್ ಸ್ಟೀಲ್ ಪ್ರೈ.ಲಿ., ಮತ್ತು ಮೆ: ಜೆಎಸ್‌ಡಬ್ಲ್ಯು ಸ್ಟೀಲ್ ಲಿ., ರವರ ಜಂಟಿ ನಿವೇದನೆ.

ಪ್ರಸ್ತಾವನೆ :

ಬಳ್ಳಾರಿ ಜಿಲ್ಲೆ, ಸಂಡೂರು ತಾಲ್ಲೂಕಿನ ತೋರಣಗಲ್ಲು ಗ್ರಾಮದಲ್ಲಿ ಸರ್ವೆ ನಂ. 88 ರಿಂದ 152 ರವರೆಗಿನ 39 ಎಕರೆ ಜಮೀನನ್ನು ಮೆ: ಕಾರಿಗನೂರು ಐರನ್ ಅಂಡ್ ಸ್ಟೀಲ್ ಪ್ರೈ.ಲಿ., (ಕೆಐಎಸ್‌ಪಿಎಲ್) ಅವರಿಗೆ ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶ ಸಂಖ್ಯೆ ಸಿಐ 51 ಎಸ್‌ಪಿಐ 2003 ದಿನಾಂಕ 27-10-2004ರ ಪ್ರಕಾರ ಹಂಚಿಕೆ ಮಾಡಲಾಗಿರುತ್ತದೆ. ಈ ಜಮೀನಿನಲ್ಲಿ ಕೆಐಎಸ್‌ಪಿಎಲ್ ನವರು ಸ್ಪಾಂಜ್ ಐರನ್ ಘಟಕವನ್ನು ಸ್ಥಾಪಿಸಿರುತ್ತಾರೆ.

ಮೆ:ಜೆಎಸ್‌ಡಬ್ಲ್ಯೂ ಸ್ಟೀಲ್ ಲಿ., ಅವರು ಸುಮಾರು 8000 ಎಕರೆಯ ಈಗಿರುವ ಫ್ಯಾಕ್ಟರಿ ಆವರಣದಲ್ಲಿ ತಮ್ಮ ಉಕ್ಕು ಘಟಕದ ಸಾಮರ್ಥ್ಯವನ್ನು 10 ಎಂಟಿಪಿಎ ನಿಂದ 16 ಎಂಟಿಪಿಎ ಗೆ ಹೆಚ್ಚಿಸಿಕೊಳ್ಳಲು ಉಲ್ಲೇಖ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಅನುಮೋದನೆ ಪಡೆದುಕೊಂಡಿರುತ್ತಾರೆ.

ಮೆ:ಜೆಎಸ್‌ಡಬ್ಲ್ಯೂ ಸ್ಟೀಲ್ ಲಿ., ಅವರು ತಮ್ಮ ವಿಸ್ತರಣಾ ಯೋಜನೆಗೆ ಸಂಬಂಧಿಸಿದಂತೆ ನಕ್ಷೆಯನ್ನು ತಯಾರಿಸುತ್ತಿದ್ದು, ಅವರ ವಿಸ್ತರಣಾ ಯೋಜನೆಗೆ ಮೆ:ಕೆಐಎಸ್‌ಪಿಎಲ್ ಅವರ ಘಟಕದ ಅಸ್ತಿತ್ವವು ಅನಾನುಕೂಲತೆಯನ್ನು ಉಂಟುಮಾಡುವ ಸಂಭಾವ್ಯವಿರುತ್ತದೆ. ಆದುದರಿಂದ ಮೆ: ಜೆಎಸ್‌ಡಬ್ಲ್ಯೂ ಸ್ಟೀಲ್ ಲಿ., ಅವರು ನೇರವಾಗಿ ಮೆ:ಕೆಐಎಸ್‌ಪಿಎಲ್ ಅವರನ್ನು ಸಂಪರ್ಕಿಸಿ ಚರ್ಚಿಸಿರುತ್ತಾರೆ. ಮೆ:ಕೆಐಎಸ್‌ಪಿಎಲ್ ಅವರು ತಮ್ಮ ಘಟಕವಿರುವ 39 ಎಕರೆಯ ಲೀಸ್‌ನ್ನು ಮೆ:ಜೆಎಸ್‌ಡಬ್ಲ್ಯೂ ಸ್ಟೀಲ್ ಲಿ., ಅವರಿಗೆ ಇದ್ದ ಪರಿಸ್ಥಿತಿಯಲ್ಲಿ ಹಸ್ತಾಂತರಿಸಲು ಸಿದ್ಧವಿರುವುದಾಗಿ ತಿಳಿಸಿರುತ್ತಾರೆ.

ಅದರಂತೆ ಮೇಲೆ (3)ರಲ್ಲಿ ಓದಲಾದ ದಿನಾಂಕ 21-10-2010 ರ ಮೆ: ಜೆಎಸ್‌ಡಬ್ಲ್ಯೂ ಸ್ಟೀಲ್ ಲಿ., ಮತ್ತು ಮೆ:ಕೆಐಎಸ್‌ಪಿಎಲ್ ಅವರು ಜಂಟಿಯಾಗಿ ನೀಡಿದ ನಿವೇದನೆಯಲ್ಲಿ, ಮೆ: ಕೆಐಎಸ್‌ಪಿಎಲ್ ಅವರಿಗೆ ಲೀಸ್ ಕಮ್ ಸೇಲ್ ಆಧಾರದ ಮೇಲೆ ನೀಡಲಾದ 39 ಎಕರೆ ಜಮೀನಿನ ಲೀಸ್‌ನ್ನು ಇದ್ದ ಪರಿಸ್ಥಿತಿಯಲ್ಲಿ ಈಗಾಗಲೇ ಇರುವ ಷರತ್ತಿನ ಪ್ರಕಾರ ಮೆ:ಜೆಸ್‌ಡಬ್ಲ್ಯೂ ಸ್ಟೀಲ್ ಲಿ., ಅವರಿಗೆ ಹಸ್ತಾಂತರಿಸಲು ಒಡಂಬಡಿಕೆ ಮಾಡಿಕೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಲೀಸ್ ಅವಧಿ ಮುಗಿದ ನಂತರ ಮೆ:ಜೆಎಸ್‌ಡಬ್ಲ್ಯೂ ಸ್ಟೀಲ್ ಲಿ., ಅವರಿಗೆ ಕ್ರಯಪತ್ರವನ್ನು ನೋಂದಣಿ ಮಾಡಿಕೊಳ್ಳಲು ಅನುಮತಿಯನ್ನು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 51 ಎಸ್‌ಪಿಐ 2003, ಬೆಂಗಳೂರು ದಿನಾಂಕ: 14ನೇ ಜನವರಿ 2011.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಮೆ:ಕಾರಿಗನೂರು ಐರನ್ ಅಂಡ್ ಸ್ಟೀಲ್ ಪ್ರೈ.ಲಿ., ಅವರಿಗೆ ಲೀಸ್ ಕಂ. ಸೇಲ್ ಆಧಾರದ ಮೇಲೆ ಸ್ಪಾಂಜ್ ಐರನ್ ಘಟಕದ ಸ್ಥಾಪನೆಗೆ ಬಳ್ಳಾರಿ ಜಿಲ್ಲೆಯ ತೋರಣಗಲ್ಲು ಗ್ರಾಮದ ಸರ್ವೆ 88 ರಿಂದ 152ರಲ್ಲಿ ಮಂಜೂರು ಮಾಡಲಾದ ಒಟ್ಟು 39 ಎಕರೆ ಜಮೀನಿನ ಲೀಸ್‌ನ್ನು ಇದ್ದ ಹಾಗೆ ಇದ್ದ ಪರಿಸ್ಥಿತಿಯಲ್ಲಿ, ಈಗಾಗಲೇ ವಿಧಿಸಿರುವ ಷರತ್ತುಗಳನ್ವಯ ಮೆ:ಜೆಎಸ್‌ಡಬ್ಲ್ಯೂ ಸ್ಟೀಲ್ ಲಿ., ರವರಿಗೆ ಹಸ್ತಾಂತರಿಸಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆ. ಲೀಸ್ ಅವಧಿ (10-02-2011) ಮುಗಿದ ನಂತರ ಮೆ:ಜೆಎಸ್‌ಡಬ್ಲ್ಯೂ ಸ್ಟೀಲ್ ಲಿ., ರವರಿಗೆ ಕ್ರಯ ಪತ್ರವನ್ನು ನೋಂದಣಿ ಮಾಡಿಕೊಳ್ಳಲು ಸಹ ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.216

ಎ.ವಿ. ಶ್ರೀನಿವಾಸ ದೀಕ್ಷಿತ್
ಪೀಠಾಧಿಕಾರಿ (ತಾಂತ್ರಿಕ ಕೋಶ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

FOREST, ECOLOGY AND ENVIRONMENT SECRETARIAT

Sub: Diversion of 2.388 ha. of forest land in Kolar and Bangalore Rural Division for widening of 4/6 lane from 237 to 318 Kms. In NH 4 (Bangalore-Kolar-Mulabagil Section) in favour of National Highway Authority of India, Bangalore.

Read:
1. Letter No. A5(5)GFL.CR-29/08-09, dated : 8-2-2010 of Principal Chief Conservator of Forests Bangalore.
2. State Government letter No. FEE 29 FLL 2010, dated : 20-3-2010.
3. Letter No. 4-KRB696/2010-BAN/6934, dated : 9-4-2010. of Govenrment of India, Ministry of Environment and Forests, Regional Office (Southern Zone), Bangalore.
4. Letter No. A5(4)GFL.CR-29/08-09, dated : 17-8-2010 of Principal Chief Conservator of Forests, Bangalore.
5. State Government letter No. FEE 29 FLL 2010, dated : 11-10-2010.
6. Letter No. 4-KRB696/2010-BAN/8161, dated 11-11-2010 of Govenrment of India, Ministry of Environment and Forests, Regional Office (Southrn Zone), Bangalore.

PREAMBLE:

The Principal Chief Conservator of Forests, Bangalore vide his letter dated : 8-2-2010 read at (1) above has submitted a proposal to State Government to obtain approval of Government of India under Section 2 of the Forest (Conservation) Act, 1980 for diversion of 2.388 ha. of forest land in Kolar and Bangalore Rural Division for widening of 4/6 lane from 237 to 318 Kms. in NH 4 (Bangalore-Kolar-Mulabagil Section) in favour of National Highway Authority of India, Bangalore subject to certain conditions.

Accordingly, the proposal was recommended to Government of India Ministry of Environment and Forests, Regional Office (Southern Zone), Bangalore vide State Government letter dated : 20-3-2010 read at (2) above.

After careful consideration of the proposal of the State Government, Government of India vide its letter dated : 9-4-2010 read at (3) above has agreed in-principle (Stage-I) approval subject to the fulfillment of certain conditions.

In compliance of the conditions stipulated by Government of India vide its letter dated : 9-4-2010 the Principal Chief Conservator of Forests vide his letter dated : 17-8-2010 read at (4) above has sent his compliance report. This compliance report was forwarded to Government of India vide State Government letter dated : 11-10-2010 read at (5) above.

Government of India vide its letter dated : 11-11-2010 read at (6) above has conveyed its final approval (Stage-II) under Section 2 of The Forest (Conservation) Act, 1980 for diversion of 2.388 ha. of forest land in Kolar and Bangalore Rural Division for widening of 4/6 lane from 237 to 318 Kms. in NH 4 (Bangalore-Kolar-Mulabagil Section) in favour of National Highway Authority of India, Bangalore subject to certain conditions.

The proposal has been examined in detail and hence the order.

GOVERNMENT ORDER NO: FEE 29 FLL 2010, BANGALORE DATED; 27th December 2010

In the circumstances explained in the preamble above, Government is pleased to accord approval under Section 2 of The Forest (Conservation) Act, 1980 for diversion of 2,388 ha. of forest land in Kolar and Bangalore Rural Division for widening of 4/6 lane from 237 to 318 Kms. in NH 4 (Bangalore-Kolar-Mulabagilu Section) in favour of National Highway Authority of India, Bangalore subject to the following conditions.

1. The legal status of the forest land shall remain unchanged.
2. The demarcation of the proposed forest area shall be carried out by erecting cement concrete pillars duly numbered at an interval of 20 meters at the cost of user agency.
3. The compensatory afforestation shall be raised over 2.388 ha. identified non-forest land in Sy. No. 10 of Chaluvanahalli village, Vakkaleri Hobli, Kolar Taluk, Kolar District at the cost of user agency. The State Government shall obtain prior permission of Central Government for change of location and schedule of compensatory afforestation, if any.
4. A venue plantation shall be raised on either side of the road at the cost of user agency.
5. The additional amount of the Net Present Value (NPV) of the diverted forest land if any becoming due after revision of the same by the Hon'ble Supreme Court of India in future, shall be charged by the State Government from the user agency and the same shall be transferred to Ad-hoc CAMPA in account No. CA-1582 of Corporation Bank, Block-II, CGO Complex, Phase-I, Lodhi Road, New Delhi-110 003.
6. Non-forest land for compensatory afforestation shall be notified by the State Government as P.F/R.F and Nodal Officer (FCA) shall report the compliance with in six months.
7. The total forest area utilized for the project shall not exceed 2.388 ha. In case the land is not taken over by the user agency or the same is not used for the stipulated purpose within a period of two years, then the area shall be taken back by the Forest Department.
8. The lease is for a period of 20 years.
9. If the land is not utilized for the purpose within 2 years and also if any violation is found of the stipulated conditions, the forest land shall revert back to Department after due approval from Government, by the Conservator of Forests under Section 82 (read with Rule 69 of Karnataka Forest Rules 1969) of Karnataka Forest Act 1963.

10. Whenever in future the subject land will no more required for the intended purpose, then it should automatically revert back to the Forest Department.
11. The user agency has to pay the lease rent as fixed by the Government at the time of sanction and any subsequent orders in this regard.
12. The Karnataka Forest Act 1963 and Rule 1969 will be applicable for any violation.
13. Only minimum number of trees shall be cut out of the enumerated list based on actual requirement of the project.
14. The user agency shall pay the extraction and transportation charges of trees as estimated by the Deputy Conservator of Forests from the proposed land.
ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಡಾ॥ ಆರ್. ಸರಸ್ವತಿ ಉಪನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರನ್ನು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಆಯುಷ್ ಇಲಾಖೆಯ (ಬೋಧಕ ವೃಂದ)/ಔಷಧ ನಿಯಂತ್ರಣ ಇಲಾಖೆಯ ಬೋಧಕ ವೃಂದದ ಅಧಿಕಾರಿಗಳಿಗೆ ಸಂಬಂಧಿಸಿದಂತೆ 'ಎ' ವರ್ಗದ ಹಿರಿಯ/ಕಿರಿಯ ಶ್ರೇಣಿ ಅಧಿಕಾರಿಗಳಿಗೆ ಬಡ್ತಿ ನೀಡಲು ನಡೆಸುವ ಇಲಾಖಾ ಮುಂಬಡ್ತಿ ಸಮಿತಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರನ್ನಾಗಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ಇಟಗಿ
ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 237

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಯ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ ತಡೆಹಿಡಿಯುವ ಬಗ್ಗೆ.

ಓದಲಾಗಿದೆ : 1. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 1277 ವೆಚ್ಚ–5/2010 ದಿನಾಂಕ 27–10–2010
2. ಯೋಜನಾ ಇಲಾಖೆಯ ಟಿಪ್ಪಣಿ ದಿನಾಂಕ: 9–11–2010.
3. ಸಚಿವ ಸಂಪುಟದ ನಿರ್ಣಯ ಸಂಖ್ಯೆ: ಸಿ/623/2010 ದಿನಾಂಕ: 3–1–2011.

ಪ್ರಸ್ತಾವನೆ:

ಕರ್ನಾಟಕ ರಾಜ್ಯವು ಜನಸಮುದಾಯಕ್ಕೆ ಸಮಗ್ರವಾಗಿ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಒದಗಿಸುವಲ್ಲಿ ದೇಶದಲ್ಲೇ ನೈಪುಣ್ಯತೆ ಹೊಂದಿದ ರಾಜ್ಯವಾಗಿರುತ್ತದೆ. "ಚಿಕಿತ್ಸಾತ್ಮಕ", "ಉತ್ತೇಜಕ" ಹಾಗೂ "ಪುನರ್‌ವಸತಿ" ಆರೋಗ್ಯ ಸೇವೆಗಳನ್ನು ರಾಜ್ಯದ ಜನತೆಗೆ ಒದಗಿಸುವ ಸಲುವಾಗಿ ಆರೋಗ್ಯ

ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಉಪ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು (PHCs) ಸಮುದಾಯ ಆರೋಗ್ಯ ಕೇಂದ್ರಗಳ (CHCs), ತಾಲ್ಲೂಕು ಆಸ್ಪತ್ರೆಗಳು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಸ್ಥಾಪಿಸಿದೆ. ಸದರಿ ಆರೋಗ್ಯ ಸೇವೆಗಳನ್ನು ಇಲಾಖೆಯು ಅನೇಕ ರಾಷ್ಟ್ರೀಯ ಮತ್ತು ರಾ ಕಾರ್ಯಕ್ರಮಗಳ ಮೂಲಕ ಒದಗಿಸುತ್ತಿದೆ.

ಪ್ರಸ್ತುತ ರಾಜ್ಯದಲ್ಲಿ 8,870 ಉಪ ಕೇಂದ್ರಗಳು, 2,310 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 180 ಸಮುದಾಯ ಆರೋಗ್ಯ ಕೇಂದ್ರಗಳು, 14 ತಾಲ್ಲೂಕು ಆಸ್ಪತ್ರೆಗಳು ಮತ್ತು 30 ಜಿಲ್ಲಾ ಆಸ್ಪತ್ರೆಗಳು (ಆ ಪೈಕಿ, 17 ಜಿಲ್ಲಾ ಆಸ್ಪತ್ರೆಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಇವೆ) ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲದೆ, ಬೆಂಗಳೂರಿನಲ್ಲಿ (1) ಕೆ.ಸಿ. ಜನರಲ್ ಆಸ್ಪತ್ರೆ, ಮಲ್ಲೇಶ್ವರಂ (2) ಜಯನಗರ ಸಾರ್ವಜನಿಕ ಆಸ್ಪತ್ರೆ (3 ಹೆಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆ, ಶಿವಾಜಿನಗರ (4) ಸಾಂಕ್ರಾಮಿಕ ರೋಗಗಳ ನಿಯಂತ್ರಣ ಆಸ್ಪತ್ರೆ, ಇಂದಿರಾನಗರ ಮತ್ತು (5) ಸಂಜಯ ಗಾಂ ಅಸ್ಥಿ ಮತ್ತು ಚಿಕಿತ್ಸಾ ಸಂಸ್ಥೆ ಇವುಗಳು ಸಹ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿವೆ.

ಸಮತಟ್ಟು ಪ್ರದೇಶಗಳಲ್ಲಿ 5,000 ಜನಸಂಖ್ಯೆ ಹಾಗೂ ಗುಡ್ಡಗಾಡು ಹಾಗೂ ಗಿರಿಜನ ಪ್ರದೇಶಗಳಲ್ಲಿ 3,000 ಜನಸಂಖ್ಯೆಗೆ ಒಂದರಂತೆ ಉ ಕೇಂದ್ರವನ್ನು ಮಂಜೂರು ಮಾಡಲು ಮಾನದಂಡವನ್ನು ಅನುಸರಿಸಲಾಗುತ್ತಿದೆ. ಪ್ರಸ್ತುತ, ರಾಜ್ಯದಲ್ಲಿ 8,870 ಉಪ ಕೇಂದ್ರಗಳು ಅಸ್ತಿತ್ವದಲ್ಲಿ ಮಾರ್ಗಸೂಚಿಗಳ ಪ್ರಕಾರ 7,769 ಉಪ ಕೇಂದ್ರಗಳು ರಾಜ್ಯಕ್ಕೆ ಅವಶ್ಯವಿದ್ದು, 1,101 ಉಪ ಕೇಂದ್ರಗಳು ಹೆಚ್ಚುವರಿಯಾಗಿವೆ. ಅದರಂತೆಯೇ, ಸಮತ ಪ್ರದೇಶಗಳಲ್ಲಿ 30,000 ಜನಸಂಖ್ಯೆ ಹಾಗೂ ಗುಡ್ಡಗಾಡು ಹಾಗೂ ಗಿರಿಜನ ಪ್ರದೇಶಗಳಲ್ಲಿ 20,000 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋ ಕೇಂದ್ರವನ್ನು ಮಂಜೂರು ಮಾಡಲು ಮಾರ್ಗಸೂಚಿಗಳಲ್ಲಿ ಅವಕಾಶವಿದೆ. ಮಾರ್ಗಸೂಚಿಗಳ ಪ್ರಕಾರ, 1,259 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವಶ್ಯಕ ಇದ್ದು, 1,051 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹೆಚ್ಚುವರಿಯಾಗಿವೆ. ಇವುಗಳ ಜೊತೆಗೆ, ಸುಮಾರು 83 ಪ್ರಾಥಮಿಕ ಆರೋಗ್ಯ ಕೇಂದ್ರಗಳು (2007 ರ ಮಂಜೂರಾದ 200 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ) ಇನ್ನೂ ಪ್ರಾರಂಭವಾಗಬೇಕಿದೆ. ಸಮತಟ್ಟು ಪ್ರದೇಶಗಳಲ್ಲಿ 1,20,000 ಜನಸಂಖ್ಯೆ ಒಂದರಂತೆ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಅಂದರೆ, ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒಂದು ಸಮುದಾಯ ಆರೋ ಕೇಂದ್ರದಂತೆ, ಮಂಜೂರು ಮಾಡಲು ಮಾರ್ಗಸೂಚಿಗಳಲ್ಲಿ ಅವಕಾಶವಿದೆ. ಇದುವರೆವಿಗೆ, 146 ತಾಲ್ಲೂಕು ಆಸ್ಪತ್ರೆಗಳು ಸೇರಿದಂತೆ ಒಟ್ಟು 32 ಸಮುದಾಯ ಆರೋಗ್ಯ ಕೇಂದ್ರಗಳಿವೆ. ಒಟ್ಟು 318 ಸಮುದಾಯ ಆರೋಗ್ಯ ಕೇಂದ್ರಗಳು/ತಾಲ್ಲೂಕು ಆಸ್ಪತ್ರೆಗಳ ಅವಶ್ಯಕತೆ ಇದ್ದು, 8 ಕೇಂದ್ರಗಳ ಹೆಚ್ಚುವರಿಯಾಗಿವೆ. ಈ ಹಿಂದೆ, ಇಂತಹ ಕೇಂದ್ರಗಳನ್ನು ಮಂಜೂರು ಮಾಡುವಾಗ ವಿವಿಧ ಕಾರಣಗಳಿಂದ ನಿಗದಿಪಡಿಸಿದ ಮಾರ್ಗಸೂಚಿಗಳನ ಅನುಸರಿಸದೇ ಇರುವುದು ಸದರಿ ಹೆಚ್ಚುವರಿಗೆ ಕಾರಣವಾಗಿದೆ.

2005-06 ಮತ್ತು 2009-10 ನೇ ಸಾಲುಗಳ ಅಂತರದಲ್ಲಿ 911 ಆಸ್ಪತ್ರೆಗಳನ್ನು ಮಂಜೂರ ಮಾಡಲಾಗಿದೆ/ಮೇಲ್ದರ್ಜೆಗೇರಿಸಲಾಗಿದೆ. ಆ ಪೈಕಿ, 4 ಜಿಲ್ಲಾ ಆಸ್ಪತ್ರೆಗಳು, 113 ತಾಲ್ಲೂಕು ಆಸ್ಪತ್ರೆಗಳು, 74 ಸಮುದಾಯ ಆರೋಗ್ಯ ಕೇಂದ್ರಗಳು ಮತ 720 ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿವೆ. ಹೊಸದಾಗಿ ಮಂಜೂರು ಮಾಡಲ್ಪಟ್ಟ/ಮೇಲ್ದರ್ಜೆಗೇರಿಸಲ್ಪಟ್ಟ ಆಸ್ಪತ್ರೆಗಳ ಹಾಸಿಗೆ ಸಾಮರ್ಥ್ಯಕ್ಕೆ ಅನುಗುಣವಾ ಅವಶ್ಯವಿರುವ ಔಷಧಿಗಳನ್ನು ಪೂರೈಸಲಾಗಿದ್ದರೂ, ಅವುಗಳಿಗೆ ಖಾಯಂ ಕಟ್ಟಡಗಳನ್ನು ಮತ್ತು ಸಿಬ್ಬಂದಿಯನ್ನು ನಿರೀಕ್ಷಿತ ಮಟ್ಟಕ್ಕೆ ಒದಗಿಸಲಾಗಿಲ್ಲ ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಮೇಲ್ಮಟ್ಟದ ಆಸ್ಪತ್ರೆಗಳಿಗೆ ಸಾಕಷ್ಟು ಸಂಖ್ಯೆಯ ತಜ್ಞ ವೈದ್ಯರ ಅವಶ್ಯಕತೆ ಇದೆ. ಮಾಸಿಕ ರೂ. 65,000 ದವರೆ ಸಂಭಾವನೆಯನ್ನು ಎನ್.ಆರ್.ಹೆಚ್.ಎಂ. ಅಡಿಯಲ್ಲಿ ನೀಡುವ ಮೂಲಕ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದರೂ ಸಹ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸಲು ಸಾಕಷ್ಟು ಸಂಖ್ಯೆಯ ತಜ್ಞ ವೈದ್ಯರನ್ನು ಆಕರ್ಷಿಸಲು ಸಾಧ್ಯವಾಗಿರುವುದಿಲ್ಲ. ಇದಕ್ಕೆ ಪ್ರಮು ಕಾರಣವೆಂದರೆ, ಮಾರುಕಟ್ಟೆಯಲ್ಲಿ ತಜ್ಞ ವೈದ್ಯರಿಗೆ ಅಪಾರ ಬೇಡಿಕೆ ಇರುವುದು.

ಸರ್ಕಾರಿ ಆಸ್ಪತ್ರೆಗಳಿಗೆ ಮೂಲ ಸೌಕರ್ಯ ಒದಗಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಆಸ್ಪತ್ರೆಗಳ ಕಟ್ಟಡ ನಿರ್ಮಾ ಕಾರ್ಯವನ್ನು ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ನೆರವಿನ ಜೊತೆಗೆ ಇತರೆ ಅನೇಕ ಕಾರ್ಯಕ್ರಮಗಳ ಅಡಿಯಲ್ಲಿ ಅಂದರೆ ಎನ್.ಆರ್.ಹೆಚ್.ಎಂ. (ಭಾರತ ಸರ್ಕಾರದ ಕಾರ್ಯಕ್ರಮ), ಕೆ.ಹೆಚ್.ಎಸ್.ಡಿ.ಆರ್.ಪಿ. (ವಿಶ್ವ ಬ್ಯಾಂಕಿನ ನೆರವಿನ ಯೋಜನೆ), ಕೆ.ಎಫ್.ಡಬ್ಲ್ಯೂ. (ಜರ್ಮನ ನೆರವು), ಆರ್.ಐ.ಡಿ.ಎಫ್. (ನಬಾರ್ಡ್ ನೆರವು) ತೆಗೆದುಕೊಂಡಿದೆ. 2310 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ, 1,052 ಕೇಂದ್ರಗಳಿಗೆ ಸ್ವ ಕಟ್ಟಡಗಳಿದ್ದು, 1258 ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇರುವುದಿಲ್ಲ. ಇವುಗಳಲ್ಲಿ 264 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ನಿರ್ಮಾಣವನ ತೆಗೆದುಕೊಳ್ಳಲಾಗಿದೆ. ಅದರಂತೆಯೇ, 180 ಸಮುದಾಯ ಆರೋಗ್ಯ ಕೇಂದ್ರಗಳ ಪೈಕಿ 52 ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇದ್ದು, 128 ಕ್ಕೆ ಸ್ವಂತ ಕಟ್ಟಡಗಳ ಇರುವುದಿಲ್ಲ, ಇವುಗಳಲ್ಲಿ, 110 ಸಮುದಾಯ ಆರೋಗ್ಯ ಕೇಂದ್ರ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. 146 ತಾಲ್ಲೂಕು ಆಸ್ಪತ್ರೆಗಳಿ ಸಂಬಂಧಿಸಿದಂತೆ 24 ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳು ಇದ್ದು, 122 ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳು ಇರುವುದಿಲ್ಲ. ಇವುಗಳಲ್ಲಿ 66 ಆಸ್ಪತ್ರೆ ಕಟ್ಟಡ ನಿರ್ಮಾ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ. 17 ಜಿಲ್ಲಾ ಆಸ್ಪತ್ರೆಗಳಿಗೆ ಸಂಬಂಧಪಟ್ಟಂತೆ, 10 ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳಿದ್ದು, 7 ಆಸ್ಪತ್ರೆಗಳಿಗೆ ಸ್ವಂ ಕಟ್ಟಡಗಳಿರುವುದಿಲ್ಲ. ಆ ಪೈಕಿ, 3 ಆಸ್ಪತ್ರೆಗಳ ಕಟ್ಟಡ, ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ. ಅದರಂತೆಯೇ, 8,870 ಉಪ ಕೇಂದ್ರಗಳ ಪೈ 4,557 ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿದ್ದು, 4,313 ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇರುವುದಿಲ್ಲ. ಆ ಪೈಕಿ, 286 ಉಪ ಕೇಂದ್ರಗಳ ಕಟ್ಟಡ ನಿರ್ಮಾ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ. ಚಾಲ್ತಿಯಲ್ಲಿರುವ ಕಟ್ಟಡ ಕಾಮಗಾರಿಗಳಿಗಾಗಿ ಸುಮಾರು ರೂ. 516 ಕೋಟಿಗಳ ಅನುದಾನದ ಅವಶ್ಯಕತೆ ಇದೆ. ಉಳಿ ಕಟ್ಟಡ ಕಾಮಗಾರಿಗಳನ್ನು ತೆಗೆದುಕೊಳ್ಳಲು ರೂ. 1,200 ಕೋಟಿಗಳ ಅನುದಾನದ ಅವಶ್ಯಕತೆ ಇದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಶ್ಲೇಷಣೆ ಮಾಡಿದ ಪ್ರಕಾರ, 2009 ನೇ ಕ್ಯಾಲೆಂಡರ್ ವರ್ಷಕ್ಕೆ ಸಂಬಂಧಿಸಿದಂತೆ ಸರ್ಕಾ ಆಸ್ಪತ್ರೆಗಳಲ್ಲಿನ ಅಸ್ತಿತ್ವದಲ್ಲಿರುವ ಹಾಸಿಗೆಗಳ ಸಾಮರ್ಥ್ಯದ ಬಳಕೆ ಪ್ರಮಾಣ ಕೇವಲ ಶೇ. 48.86 ರಷ್ಟು ಆಗಿದೆ. ಅಲ್ಲದೆ, ಗರಿಷ್ಠ ಪ್ರಮಾಣದ ಉಪಯುಕ್ತ ಬಹುತೇಕ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಆಗಿದೆ ಎಂಬುದನ್ನು ಸಹ ಗಮನಿಸಲಾಗಿದೆ. ಅಸ್ತಿತ್ವದಲ್ಲಿರುವ ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿನ ಹಾಸಿಗೆಗಳ ಬಳಕೆ ಪ್ರಮಾಣ ಬಹಳ ಕಡಿಮೆ ಇದೆ.

ಇತ್ತೀಚೆಗೆ, ವಿವಿಧ ಮೂಲಗಳಿಂದ ಅಂದರೆ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳಿಂದ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು, ಅಸ್ತಿತ್ವದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಸಾರ್ವಜನಿಕ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ರಾಜ್ಯದಲ್ಲಿ ಸ್ಥಾಪಿಸಬೇಕೆಂದು ಅನೇಕ ಮನವಿಗಳು ಬರುತ್ತಿವೆ. ಮಾರ್ಗಸೂಚಿಗಳ ಪ್ರಕಾರ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳು/ಸಮುದಾಯ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಅಲ್ಲದೆ, ಅಸ್ತಿತ್ವದಲ್ಲಿರುವ

ಅನೇಕ ಕೇಂದ್ರಗಳು/ಆಸ್ಪತ್ರೆಗಳಲ್ಲಿನ ಪ್ರಸ್ತುತ ಹಾಸಿಗೆ ಸಾಮರ್ಥ್ಯದ ಉಪಯುಕ್ತತೆ ಬಹಳ ಕಡಿಮೆ ಮಟ್ಟದಲ್ಲಿದೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ತೃತೀಯ ಹಂತದ ಆರೋಗ್ಯ ಸೇವೆ ನೀಡುವರಿತಹದಾಗಿದ್ದು, ಸಾಮಾನ್ಯವಾಗಿ ಅದು ಜಿಲ್ಲಾ ಆಸ್ಪತ್ರೆಗಿಂತ ಮೇಲ್ಮಟ್ಟದ್ದಾಗಿದೆ. ಅನೇಕ ತಜ್ಞ ವೈದ್ಯರನ್ನು ಒದಗಿಸುವುದರ ಜೊತೆಗೆ ಕಟ್ಟಡ ಮತ್ತು ಉಪಕರಣಗಳ ಮೇಲೆ ಹೆಚ್ಚಿನ ಬಂಡವಾಳ ಅದಕ್ಕಾಗಿ ಬೇಕಾಗುತ್ತದೆ. ಅಲ್ಲದೆ, ಪ್ರಾಥಮಿಕ ಮತ್ತು ದ್ವಿತೀಯ ಹಂತದ ಆರೋಗ್ಯ ಸೇವೆಯನ್ನು ಒದಗಿಸುವ ಜವಾಬ್ದಾರಿಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೇಲಿದ್ದು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸಿ ತೃತೀಯ ಹಂತದ ಆರೋಗ್ಯ ಸೇವೆಯನ್ನು ಒದಗಿಸುವ ಸ್ಥಿತಿಯಲ್ಲಿ ಅದು ಇರುವುದಿಲ್ಲ.

ರಾಜ್ಯಾದ್ಯಂತ ಜಾರಿಗೊಳಿಸುತ್ತಿರುವ ಆರೋಗ್ಯ ಕವಚ ಆಂಬ್ಯುಲೆನ್ಸ್ ಸೌಲಭ್ಯದ ಯೋಜನೆ ಮತ್ತು ಗುಲ್ಬರ್ಗಾ ವಿಭಾಗದ 6 ಜಿಲ್ಲೆಗಳಲ್ಲಿ ಜಾರಿಗೊಳಿಸುತ್ತಿರುವ ವಾಜಪೇಯಿ ಆರೋಗ್ಯಶ್ರೀ ಯೋಜನೆಗಳು ತುರ್ತು ಚಿಕಿತ್ಸೆ ಮತ್ತು ಆಘಾತಕಾರಿ ಖಾಯಿಲೆಗಳನ್ನು ನಿಭಾಯಿಸಲು ಸಹಕಾರಿಯಾಗಿವೆ. ವಾಜಪೇಯಿ ಆರೋಗ್ಯಶ್ರೀ ಯೋಜನೆಯನ್ನು ಬೆಳಗಾಂ ವಿಭಾಗದ 7 ಜಿಲ್ಲೆಗಳಿಗೆ ಇತ್ತೀಚೆಗೆ ವಿಸ್ತರಿಸಲಾಗಿದೆ.

ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಯ ಮೇಲ್ದರ್ಜೆಗೇರಿಸುವಿಕೆಯನ್ನು ಕನಿಷ್ಠ ಮೂರು ವರ್ಷಗಳ ಅವಧಿಗೆ ಒಂದು ನೀತಿ ನಿರ್ಣಯವಾಗಿ ತಡೆಹಿಡಿಯುವ ಅಗತ್ಯತೆ ಇದೆ. ಅಂತಹ ಕ್ರಮದಿಂದಾಗಿ ಅಸ್ತಿತ್ವದಲ್ಲಿರುವ ಕೇಂದ್ರಗಳು/ಆಸ್ಪತ್ರೆಗಳಲ್ಲಿನ ಜನಶಕ್ತಿ ಮತ್ತು ಮೂಲ ಸೌಕರ್ಯದ ಬಲವರ್ಧನೆಯ ಕಡೆ ಗಮನಹರಿಸಲು ಸಹಾಯಕಾರಿಯಾಗುತ್ತದೆ. ನಮ್ಮ ನೆರೆ ರಾಜ್ಯಗಳಾದ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳಲ್ಲಿ ಕರ್ನಾಟಕಕ್ಕಿಂತ ಹೆಚ್ಚಿನ ಜನಸಂಖ್ಯೆ ಇದ್ದರೂ, ಅಲ್ಲಿ ಕಡಿಮೆ ಸಂಖ್ಯೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು/ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಉದಾಹರಣೆಗೆ, ಆಂಧ್ರ ಪ್ರದೇಶದಲ್ಲಿ 1,924 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವಶ್ಯಕತೆ ಇದ್ದರೂ, 1,570 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಅದರಂತೆಯೇ, ತಮಿಳುನಾಡಿನಲ್ಲೂ ಸಹ 1,215 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವಶ್ಯಕತೆಗೆ ಎದುರಾಗಿ 1,173 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಆ ರಾಜ್ಯಗಳಲ್ಲಿ ಹೊಸ ಆಸ್ಪತ್ರೆಗಳನ್ನು ಪ್ರಾರಂಭಿಸುವುದಕ್ಕೆ ಬದಲಾಗಿ ಅಸ್ತಿತ್ವದಲ್ಲಿರುವ ಆಸ್ಪತ್ರೆಗಳ ಬಲವರ್ಧನೆಗೆ ಹೆಚ್ಚು ಗಮನಹರಿಸಲಾಗುತ್ತಿದೆ. ಆದುದರಿಂದ, ಅಲ್ಲಿನ ಆರೋಗ್ಯ ಸೂಚ್ಯಾಂಕಗಳಲ್ಲಿ ಅದರಲ್ಲೂ ವಿಶೇಷವಾಗಿ ಶಿಶು ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣದಲ್ಲಿ ಗಣನೀಯ ಸುಧಾರಣೆಯಾಗಿದೆ. ಈ ಕುರಿತು ಕರ್ನಾಟಕವು ಅವರನ್ನು ಇನ್ನೂ ಅನುಸರಣೆ ಮಾಡಬೇಕಿದೆ.

ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಯ ಮೇಲ್ದರ್ಜೆಗೇರಿಸುವಿಕೆಯನ್ನು ಕನಿಷ್ಠ ಮೂರು ವರ್ಷಗಳ ಅವಧಿಗೆ ಒಂದು ನೀತಿ ನಿರ್ಣಯವಾಗಿ ತಡೆಹಿಡಿಯುವ ಅಗತ್ಯತೆ ಇದೆ. ಆದುದರಿಂದ, ಸದರಿ ಪ್ರಸ್ತಾವನೆಯನ್ನು ಆರ್ಥಿಕ ಮತ್ತು ಯೋಜನಾ ಇಲಾಖೆಗಳ ಜೊತೆ ಸಮಾಲೋಚಿಸಲಾಗಿದ್ದು, ಮೇಲೆ (2) ಮತ್ತು (3) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಗಳಲ್ಲಿ ಸದರಿ ಇಲಾಖೆಗಳು ಕೆಲವು ಸಲಹೆಗಳನ್ನು ನೀಡುತ್ತಾ ಒಟ್ಟಾರೆ ಪ್ರಸ್ತಾವನೆಗೆ ಸಹಮತಿ ವ್ಯಕ್ತಪಡಿಸಿವೆ. ಮುಂದುವರೆದು, ಈ ಪ್ರಸ್ತಾವನೆಯನ್ನು ಸಚಿವ ಸಂಪುಟದ ಮುಂದೆ ಮಂಡಿಸಲಾಗಿ, ಮೇಲೆ (3) ರಲ್ಲಿ ಓದಲಾದ ನಿರ್ಣಯದಲ್ಲಿ ಸಚಿವ ಸಂಪುಟವು ಅನುಮೋದನೆ ನೀಡಿದೆ.

ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 350 ಸಿಜಿಎಂ 2010 ಬೆಂಗಳೂರು, ದಿನಾಂಕ 11ನೇ ಜನವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಯ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಮೂರು ವರ್ಷಗಳ ಅವಧಿಗೆ ಸರ್ಕಾರವು ತಡೆಹಿಡಿದಿದೆ.

ಈ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆಗಳ ಸಹಮತಿಯನ್ನು ಕ್ರಮವಾಗಿ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 1277 ವೆಚ್ಚ-5/2010 ದಿನಾಂಕ: 27-10-2010 ಹಾಗೂ ಟಿಪ್ಪಣಿ ಸಂಖ್ಯೆ: ಇಲ್ಲ ದಿನಾಂಕ: 9-11-2010 ರಲ್ಲಿ ಸಹಮತಿ ಪಡೆದು ಹಾಗೂ ದಿನಾಂಕ: 3-1-2011 ನಡೆದ ಸಚಿವ ಸಂಪುಟದ ವಿಷಯ ಸಂಖ್ಯೆ: ಸಿ: 623/2010 ರಲ್ಲಿ ನೀಡಿರುವ ಅನುಮೋದನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಸ್ವಾಮಿ

ಪಿ.ಆರ್. 238 ಸರ್ಕಾರದ ಜಂಟಿ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ಬಾಗಲಕೋಟ ಜಿಲ್ಲಾ, ಹುನಗುಂದ ತಾಲ್ಲೂಕು, ಬರ್ಡ್ ಸರ್ಕಾರೇತರ ಸಂಸ್ಥೆಯ ವ್ಯಾಪ್ತಿಗೆ ಬರುವ ಸರ್ಕಾರೇತರ ಸಂಸ್ಥೆಗಳಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ

ಓದಲಾಗಿದೆ :
1. ಸರ್ಕಾರದ ಪತ್ರ ದಿನಾಂಕ: 09-12-2009.
2. ಸಹಕಾರ ಸಂಘಗಳ ಉಪ ನಿಬಂಧಕರು, ಬಾಗಲಕೋಟೆ ಜಿಲ್ಲೆ ಇವರ ಪತ್ರ ಸಂಖ್ಯೆ: ಡಿಆರ್‌ಬಿಜಿಕೆ/ನೋಂದಣಿ/ಸಿಆರ್/595/08-09/3920, ದಿನಾಂಕ: 15-02-2010.
3. ಸಹಕಾರ ಸಂಘಗಳ ನಿಬಂಧಕರದವರ ಪತ್ರ ಸಂಖ್ಯೆ: ಆರ್‌ಸಿಎಸ್/203/ಎಸ್‌ಓಆರ್/2008-09, ದಿನಾಂಕ: 03.03.2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ: 09.12.2009 ರ ಪತ್ರದಲ್ಲಿ ಬಾಗಲಕೋಟ ಜಿಲ್ಲಾ ಹುನಗುಂದ ತಾಲ್ಲೂಕು ಬರ್ಡ್ ಸರ್ಕಾರೇತರ ಸಂಸ್ಥೆಯ ವ್ಯಾಪ್ತಿಗೆ ಬರುವ ಎಲ್ಲಾ ಸಂಸ್ಥೆಗಳಲ್ಲಿ (10) 6 ಸಂಸ್ಥೆಗಳು 2005 ರಲ್ಲಿ ನೀಡಿದ ನೋಟೀಸುಗಳನ್ನು ನಿರಾಕರಿಸಿದ್ದು ಎರಡು

ಸಂಸ್ಥೆಗಳು ಉತ್ತರ ನೀಡಿದ್ದು ಇನ್ನೆರಡು ಸಂಸ್ಥೆಗಳು ಉತ್ತರ ನೀಡಿಲ್ಲವೆಂಬುದು ಕಂಡುಬಂದದ್ದು ಈ ಎಲ್ಲಾ ಸಂಸ್ಥೆಗಳು ಈಗ ವಾಸ್ತವಿಕವ ಅಸ್ತಿತ್ವದಲ್ಲಿವೆಯೇ? ಆಡಳಿತಾಧಿಕಾರಿ ನೇಮಿಸಲು ನೋಟೀಸನ್ನು ನೀಡಬೇಕಾಗಿರುವುದರಿಂದ, ಹಿಂದೆ ನೋಟೀಸುಗಳನ್ನು ಕೆಲವು ಸಂಸ್ಥೆಗ ನಿರಾಕರಿಸಿರುತ್ತವೆ. ಹೀಗಿರುವಲ್ಲಿ ಆಡಳಿತಾಧಿಕಾರಿಗಳನ್ನು ನೇಮಿಸುವುದು ಅವಶ್ಯಕವೇ ಅಥವಾ ಬೇರೆ ರೀತಿ ಯಾವುದಾದರೂ ಕ್ರಮ ತೆಗೆದುಕೊಳ್ಳುವ ಬ ಸಹಕಾರ ಸಂಘಗಳ ನಿಬಂಧಕರಿಗೆ ವರದಿ ನೀಡಲು ಪತ್ರ ಬರೆಯಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ದಿನಾಂಕ: 15.02.2010 ರ ಪತ್ರದಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು, ಬಾಗಲಕೋಟ ಇವರು ತಮ್ಮ ವರದಿಯಲ್ಲಿ ಬಾಗಲಕೋಟ ಜಿಲ್ಲಾ, ಹುನಗುಂದ ತಾಲ್ಲೂಕು, ಬರ್ಡ್ಸ್ ಸರ್ಕಾರೇತರ ಸಂಸ್ಥೆಯ ವ್ಯಾಪ್ತಿಗೆ ಬರುವ ಸರ್ಕಾರೇತರ ಸಂಸ್ಥೆಗ ಆಡಳಿತಾಧಿಕಾರಿಯನ್ನು ನೇಮಿಸಲು ಕಲಂ 27(ಎ)ದ ಪ್ರಕಾರ ಆಡಳಿತಾಧಿಕಾರಿಯನ್ನು ನೇಮಿಸದೇ ಇದ್ದರೂ ಕಲಂ 25(2) ರ ಪ್ರಕಾರ ಸಂಸ್ಥೆ ವ್ಯವಹಾರಗಳ ಬಗ್ಗೆ ವಿಚಾರಣೆಗೆ ಆದೇಶ ಹೊರಡಿಸಿ ವಿಚಾರಣೆಯ ವರದಿಯನ್ನು ಪಡೆದು ಕಲಂ 27(ಎ)ರ ಪ್ರಕಾರ ಕ್ರಮ ಜರುಗಿಸ ಅವಕಾಶವಿದೆಯೆಂದು ವಿವರಿಸಿರುತ್ತಾರೆ. ಸದರಿ ಎಲ್ಲಾ 10 ಸಂಘಗಳು ದಿನಾಂಕ: 16.10.1995 ರಂದು ನೋಂದಣಿಯಾಗಿದ್ದು ಅವುಗಳ ವಿವರಣೆ ಕೆಳಕಂಡಂತೆ ಇರುತ್ತದೆ.

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ನೋಂದಣಿ ಸಂಖ್ಯೆ ಮತ್ತು ದಿನಾಂಕ
1	ಜೈಕಿಸಾನ ಜಲಾನಯನ ಅಭಿವೃದ್ಧಿ ಸಂಸ್ಥೆ ಇಸ್ಲಾಂಪುರ	ಎಸ್‌ಟಿ.ವಾಯ್/187/95–96 ದಿ. 16–10–95
2	ಕಲ್ಪವೃಕ್ಷ ಜಲಾನಯನ ಅಭಿವೃದ್ಧಿ ಸಂಸ್ಥೆ ಕರಡಿ ನ:1	ಎಸ್‌ಟಿ.ವಾಯ್/189/95–96 ದಿ. 16–10–95
3	ಅನ್ನದಾತ ಜಲಾನಯನ ಅಭಿವೃದ್ಧಿ ಸಂಸ್ಥೆ ಕರಡಿ	ಎಸ್‌ಟಿ.ವಾಯ್/188/95–96 ದಿ. 16–10–95
4	ಭೂದೇವಿ ಜಲಾನಯನ ಅಭಿವೃದ್ಧಿ ಸಂಸ್ಥೆ ಪೋಚಾಪುರ	ಎಸ್‌ಟಿ.ವಾಯ್/191/95–96 ದಿ. 16–10–95
5	ಡಾ॥ ಬಿ.ಆರ್. ಅಂಬೇಡ್ಕರ್ ಜಲಾನಯನ ಅಭಿವೃದ್ಧಿ ಸಂಸ್ಥೆ ಕರಡಿ	ಎಸ್‌ಟಿ.ವಾಯ್/198/95–96 ದಿ. 16–10–95
6	ಶ್ರೀ ಮಾರುತೇಶ್ವರ ಜಲಾನಯನ ಅಭಿವೃದ್ಧಿ ಸಂಸ್ಥೆ ಬೆನಕನಡೋಣಿ	ಎಸ್‌ಟಿ.ವಾಯ್/194/95–96 ದಿ. 16–10–95
7	ಶ್ರೀ ಬಸವೇಶ್ವರ ಜಲಾನಯನ ಅಭಿವೃದ್ಧಿ ಸಂಸ್ಥೆ ಕರಡಿ	ಎಸ್‌ಟಿ.ವಾಯ್/197/95–96 ದಿ. 16–10–95
8	ರೈತಾಪಿ ಜಲಾನಯನ ಅಭಿವೃದ್ಧಿ ಸಂಸ್ಥೆ ಅಮರವಾಡಗಿ	ಎಸ್‌ಟಿ.ವಾಯ್/196/95–96 ದಿ. 16–10–95
9	ಧರಿತ್ರಿ ಜಲಾನಯನ ಅಭಿವೃದ್ಧಿ ಸಂಸ್ಥೆ ಚಿನ್ನಾಪೂರ	ಎಸ್‌ಟಿ.ವಾಯ್/193/95–96 ದಿ. 16–10–95
10.	ಶ್ರೀ ಸಂಗಮೇಶ್ವರ ಜಲಾನಯನ ಅಭಿವೃದ್ಧಿ ಸಂಸ್ಥೆ ಕರಡಿ	ಎಸ್‌ಟಿ.ವಾಯ್/195/95–96 ದಿ. 16–10–95

ಯಾವುದೇ ಒಂದು ಸಂಘ ಸಹ ಇದುವರೆಗೆ ಸಂಘಗಳ ನೋಂದಣಿ ಕಾಯ್ದೆ ಕಲಂ 11, 12 ಹಾಗೂ 13 ಪ್ರಕಾರ ಕಾರ್ಯನಿರ್ವಹಿಸ ಇರುವುದು ಹಾಗೂ ಸದರಿ ಸಂಘಗಳು ನೋಂದಣಿ ಆದಾಗಿನಿಂದ ಕಲಂ 13 ರ ಪ್ರಕಾರ ಸಂಘದ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿ ಫೈಲ್ ಮಾಡ ಸಲ್ಲಿಸಿರುವುದಿಲ್ಲ, ಮೇಲಾಗಿ ಕಛೇರಿಯ ಪತ್ರ ವ್ಯವಹಾರಗಳಿಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಿರುವುದಿಲ್ಲವೆಂತಲೂ ಕಲಂ 27(ಎ)ದ ಪ್ರಕಾರ ಕ್ರ ಜರುಗಿಸಿ ಆನಂತರ ಕಲಂ 25(2)ರ ಪ್ರಕಾರ ವಿಚಾರಣೆ ಜರುಗಿಸುವುದು ಸೂಕ್ತವಾಗಿರುತ್ತದೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (3) ರ ಸಹಕಾರ ಸಂಘಗಳ ನಿಬಂಧಕರ ದಿನಾಂಕ: 03.03.2010ರ ಪತ್ರದಲ್ಲಿ ಸಹಕಾರ ಸಂಘಗಳ ಉ ನಿಬಂಧಕರು, ಬಾಗಲಕೋಟೆ ಜಿಲ್ಲೆ ಇವರ ಅಭಿಪ್ರಾಯದಂತೆ ಕ್ರಮವಿಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಸಂಸ್ಥೆಗೆ ಸಂಘಗಳ ನೋಂದಣಿ ಕಾಯ್ದೆಯ 1960 ರ ಕಲಂ 27–ಎ ರನ್ವ ಆಡಳಿತಾಧಿಕಾರಿಯನ್ನು ನೇಮಿಸಲು ತೀರ್ಮಾನಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಇ 32 ಸಿಎಸ್‌ಆರ್ 2008 ಬೆಂಗಳೂರು, ದಿನಾಂಕ: 04-01-2011

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಬಾಗಲಕೋಟ ಜಿಲ್ಲಾ, ಹುನಗುಂದ ತಾಲ್ಲೂಕು, ಬರ್ಡ್ಸ್ ಸರ್ಕಾರೇತರ ಸಂಸ್ಥೆ ವ್ಯಾಪ್ತಿಗೆ ಬರುವ ಸರ್ಕಾರೇತರ ಸಂಸ್ಥೆಗಳಲ್ಲಿ ಸಂಘಗಳ ನೋಂದಣಿ ಕಾಯ್ದೆ ಕಲಂ 11, 12 ಮತ್ತು 13 ರ ಪ್ರಕಾರ ಕಾರ್ಯನಿರ್ವಹಿಸದೇ ಇರುವುದರಿ ಹಾಗೂ ಸದರಿ ಸಂಘಗಳು ನೋಂದಣಿ ಆದಾಗಿನಿಂದ ಕಲಂ 13ರ ಪ್ರಕಾರ ಸಂಘದ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿ ಫೈಲ್ ಮಾಡ ಸಲ್ಲಿಸಿರುವುದಿಲ್ಲವಾದ್ದರಿಂದ ಮೇಲಾಗಿ ಕಛೇರಿ ಪತ್ರ ವ್ಯವಹಾರಗಳಿಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲದ ಕಾರಣ ಸಂಘದ ಸದಸ್ಯತ್ವದ ಸವ ಬಗೆಹರಿಸಲು ಚುನಾವಣೆಯ ಮೂಲಕ ಹೊಸ ಪದಾಧಿಕಾರಿಗಳನ್ನು ನೇಮಿಸಬೇಕಾಗಿರುವುದರಿಂದ ಈ ಸಂಸ್ಥೆಗಳ ಹಿತದೃಷ್ಟಿಯಿಂದ ಈ ಕೆಳಕ ಸಂಸ್ಥೆಗಳಿಗೆ,–

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ನೋಂದಣಿ ಸಂಖ್ಯೆ ಮತ್ತು ದಿನಾಂಕ
1	ಜೈಕಿಸಾನ ಜಲಾನಯನ ಅಭಿವೃದ್ಧಿ ಸಂಸ್ಥೆ ಇಸ್ಲಾಂಪುರ	ಎಸ್‌ಟಿ.ವಾಯ್/187/95-96 ದಿ. 16-10-95
2	ಕಲ್ಪವೃಕ್ಷ ಜಲಾನಯನ ಅಭಿವೃದ್ಧಿ ಸಂಸ್ಥೆ ಕರಡಿ ನ:1	ಎಸ್‌ಟಿ.ವಾಯ್/189/95-96 ದಿ. 16-10-95
3	ಅನ್ನದಾತ ಜಲಾನಯನ ಅಭಿವೃದ್ಧಿ ಸಂಸ್ಥೆ ಕರಡಿ	ಎಸ್‌ಟಿ.ವಾಯ್/188/95-96 ದಿ. 16-10-95
4	ಭೂದೇವಿ ಜಲಾನಯನ ಅಭಿವೃದ್ಧಿ ಸಂಸ್ಥೆ ಪೋಚಾಪುರ	ಎಸ್‌ಟಿ.ವಾಯ್/191/95-96 ದಿ. 16-10-95
5	ಡಾ॥ ಬಿ.ಆರ್. ಅಂಬೇಡ್ಕರ್ ಜಲಾನಯನ ಅಭಿವೃದ್ಧಿ ಸಂಸ್ಥೆ ಕರಡಿ	ಎಸ್‌ಟಿ.ವಾಯ್/198/95-96 ದಿ. 16-10-95
6	ಶ್ರೀ ಮಾರುತೇಶ್ವರ ಜಲಾನಯನ ಅಭಿವೃದ್ಧಿ ಸಂಸ್ಥೆ ಬೆನಕನಡೋಣಿ	ಎಸ್‌ಟಿ.ವಾಯ್/194/95-96 ದಿ. 16-10-95
7	ಶ್ರೀ ಬಸವೇಶ್ವರ ಜಲಾನಯನ ಅಭಿವೃದ್ಧಿ ಸಂಸ್ಥೆ ಕರಡಿ	ಎಸ್‌ಟಿ.ವಾಯ್/197/95-96 ದಿ. 16-10-95
8	ರೈತಾಪಿ ಜಲಾನಯನ ಅಭಿವೃದ್ಧಿ ಸಂಸ್ಥೆ ಅಮರವಾಡಗಿ	ಎಸ್‌ಟಿ.ವಾಯ್/196/95-96 ದಿ. 16-10-95
9	ಧರಿತ್ರಿ ಜಲಾನಯನ ಅಭಿವೃದ್ಧಿ ಸಂಸ್ಥೆ ಚಿನ್ನಾಪೂರ	ಎಸ್‌ಟಿ.ವಾಯ್/193/95-96 ದಿ. 16-10-95
10.	ಶ್ರೀ ಸಂಗಮೇಶ್ವರ ಜಲಾನಯನ ಅಭಿವೃದ್ಧಿ ಸಂಸ್ಥೆ ಕರಡಿ	ಎಸ್‌ಟಿ.ವಾಯ್/195/95-96 ದಿ. 16-10-95

ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27(ಎ) ರಲ್ಲಿ ಪದತ್ತವಾದ ಅಧಿಕಾರವನ್ನು ಚಲಾಯಿಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬಾಗಲಕೋಟ ಉಪವಿಭಾಗ, ಬಾಗಲಕೋಟ ಇವರನ್ನು ಆಡಳಿತಾಧಿಕಾರಿಯನ್ನಾಗಿ ಆರು (6) ತಿಂಗಳ ಅವಧಿಗೆ ಅಥವಾ ಸದರಿ ಸಂಸ್ಥೆಗೆ ಚುನಾವಣೆ ನಡೆಸಿ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿದೆ.

ಆಡಳಿತಾಧಿಕಾರಿಗಳು, ಸದರಿ ಅವಧಿಯಲ್ಲಿ ಸಂಘಗಳಲ್ಲಿ ಹಾಲಿ ನೋಂದಾಯಿತವಾಗಿರುವ ಸದಸ್ಯರುಗಳಿಂದ ಚುನಾವಣೆ ನಡೆಸಿ ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 239

ನಂಜುಂಡಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಸಹಕಾರ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ರೂ. 25.00 ಕೋಟಿಗಿಂತ ಕಡಿಮೆ ಠೇವಣಿ ಹೊಂದಿರುವ ಪಟ್ಟಣ ಸಹಕಾರಿ ಬ್ಯಾಂಕುಗಳ ಶಾಸನಬದ್ಧ ಲೆಕ್ಕಪರಿಶೋಧನಾ ಶುಲ್ಕ ನಿಗದಿಪಡಿಸುವ ಬಗ್ಗೆ

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸಿಒ 31 ಸಿಎಲ್‌ಎಂ 2005, ಬೆಂಗಳೂರು, ದಿನಾಂಕ: 02-12-2005.

2. ಸರ್ಕಾರದ ಆದೇಶ ಸಂಖ್ಯೆ: ಸಿಎಂಡಬ್ಲ್ಯೂ 99 ಸಿಎಲ್‌ಎಂ 2002, ದಿನಾಂಕ: 27-09-2004

3. ಸರ್ಕಾರದ ಆದೇಶ ಸಂಖ್ಯೆ: ಸಿಒ 09 ಸಿಎಲ್‌ಎಂ 2007, ಬೆಂಗಳೂರು, ದಿನಾಂಕ: 08.03.2007.

ಪ್ರಸ್ತಾವನೆ:

ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ಸಂಸ್ಥೆಗಳ ಲೆಕ್ಕಪರಿಶೋಧನೆಗೆ ಅವುಗಳ "ದುಡಿಯುವ ಬಂಡವಾಳ" ಅಥವಾ "ವ್ಯಾಪಾರ ವಹಿವಾಟು" ಇವರೆಡರಲ್ಲಿ ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಲೆಕ್ಕಪರಿಶೋಧನಾ ಶುಲ್ಕವನ್ನು ಆಕರಿಸುವ ದರ ಮತ್ತು ವಿಧಾನಗಳನ್ನು ನಿಗದಿಗೊಳಿಸಲಾಗಿದೆ. ಕೆಲವೊಂದು ಪಟ್ಟಣ ಸಹಕಾರಿ ಬ್ಯಾಂಕುಗಳು ರಿಟ್ ಅರ್ಜಿ ಸಂಖ್ಯೆ: 13223 ರಿಂದ 13233/2009 (ಸಿಎಸ್-ಆರ್‌ಇಎಸ್)ರಲ್ಲಿ ರೂ. 25.00 ಕೋಟಿಗೂ ಮೇಲ್ಪಟ್ಟು ಠೇವಣಿ ಹೊಂದಿರುವ ಪಟ್ಟಣ ಸಹಕಾರಿ ಬ್ಯಾಂಕುಗಳ ಲೆಕ್ಕಪರಿಶೋಧನಾ ಶುಲ್ಕ ನಿಗದಿಪಡಿಸಿದ ಉಲ್ಲೇಖ(3)ರ ಆದೇಶ ಹಾಗೂ ರೂ. 25.00 ಕೋಟಿಗಳಿಗಿಂತ ಕಡಿಮೆ ಠೇವಣಿ ಹೊಂದಿದ ಬ್ಯಾಂಕುಗಳ ಲೆಕ್ಕಪರಿಶೋಧನಾ ಶುಲ್ಕ ನಿಗದಿಪಡಿಸಿದ ಉಲ್ಲೇಖ(1)ರ ಆದೇಶ ಪಾವತಿ ಶುಲ್ಕಕ್ಕೂ ತಾರತಮ್ಯವಿದೆಯೆಂದೂ ಇದನ್ನು ಸರಿಪಡಿಸಿ ತಮಗೂ ನ್ಯಾಯ ಒದಗಿಸಬೇಕೆಂದು ಕೋರಿರುತ್ತಾರೆ. ಈ ಅಂಶವನ್ನು ಪರಿಶೀಲಿಸಿ ಗೌರವ ಉಚ್ಚ

ನ್ಯಾಯಾಲಯವು ಉಲ್ಲೇಖ(1)ರಲ್ಲಿ ಈಗಾಗಲೇ ನಿಗದಿಪಡಿಸಿದ ಲೆಕ್ಕಪರಿಶೋಧನಾ ಶುಲ್ಕದ ದರ ಪಟ್ಟಿಯನ್ನು ಪುನಃ ಪರಿಶೀಲಿಸಿ ಹಾಗೂ ಅರ್ಜಿದಾ ಮನವಿಗಳನ್ನು ಪರಿಶೀಲಿಸಿ ಪರಿಷ್ಕೃತ ದರಗಳನ್ನು ನಿಗದಿಪಡಿಸಲು ನಿರ್ದೇಶಕರು, ಸಹಕಾರ ಲೆಕ್ಕಪರಿಶೋಧನಾ ಇಲಾಖೆ ಇವರಿಗೆ ಆದೇಶಿಸಿರುತ್ತದೆ. ಮನವಿಗಳನ್ನು ಪರಿಶೀಲಿಸಿ ಸಹಕಾರ ಲೆಕ್ಕ ಪರಿಶೋಧನಾ ನಿರ್ದೇಶಕರು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸರ್ಕಾರವು ಪಟ್ಟಣ ಸಹಕ ಬ್ಯಾಂಕುಗಳ ವತಿಯಿಂದ ಸಲ್ಲಿಸಲಾದ ಮನವಿಗಳನ್ನು ಹಾಗೂ ನಿರ್ದೇಶಕರು, ಲೆಕ್ಕಪರಿಶೋಧನಾ ಇಲಾಖೆ ಇವರ ಪ್ರಸ್ತಾವನೆಯನ್ನು ಕೂಲಂಕಷವ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಒ 198 ಸಿಎಲ್ಎಂ 2010 ದಿನಾಂಕ: 04.01.2011

ಮೇಲೆ ಓದಲಾದ ಉಲ್ಲೇಖ(1)ರ ಆದೇಶವನ್ನು ಭಾಗಶಃ ಮಾರ್ಪಡಿಸಿ, ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2010-11ರಿ ಜಾರಿಗೆ ಬರುವಂತೆ ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ಲೆಕ್ಕಪರಿಶೋಧನಾ ಶುಲ್ಕ ಆಕರಿಸುವ ದರ ಮತ್ತು ವಿಧಾನಗಳನ್ನು ಉಲ್ಲೇಖ(1 ಆದೇಶದ ಕಂಡಿಕೆ (V)ರ ನಂತರ ಕಂಡಿಕೆ (vi) ಅನ್ನು ಈ ಕೆಳಕಂಡಂತೆ ಸೇರ್ಪಡೆ ಮಾಡಲಾಗಿದೆ.

(vi) ಠೇವಣಿ ಮೊಬಲಗು ರೂ. 25.00 ಕೋಟಿಗಿಂತ ಕಡಿಮೆ ಇರುವ ಎಲ್ಲಾ ಪಟ್ಟಣ ಸಹಕಾರಿ ಬ್ಯಾಂಕುಗಳು ಏಕರೂಪವ ಲೆಕ್ಕಪರಿಶೋಧನಾ ಶುಲ್ಕ ರೂ. 75,000.00 ವನ್ನು ಪಾವತಿಸತಕ್ಕದ್ದು ಹಾಗೂ ಸದರಿ ಬ್ಯಾಂಕುಗಳು ಒಂದಕ್ಕಿಂತ ಹೆಚ್ಚಿನ ಶಾಖೆಗಳನ್ನು ಹೊಂದಿದ್ದಲ್ಲಿ ಶಾಖೆಗೆ ರೂ. 12,000.00 ಗಳಂತೆ ಶಾಖೆಗಳ ಸಂಖ್ಯೆಗಳಿಗನುಗುಣವಾಗಿ (ಕೇಂದ್ರ ಕಛೇರಿಗೆ ಹೊಂದಿಕೊಂಡ ಶಾಖೆಯನ್ನು ಹೊರತುಪಡಿ ಲೆಕ್ಕಪರಿಶೋಧನಾ ಶುಲ್ಕವನ್ನು ಪಾವತಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 444 ವೆಚ್ಚ 2/10 ದಿನಾಂಕ: 20.12.2010 ರಲ್ಲಿ ನೀಡಿರುವ ಸಹಮತಿ ಮೇ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿ.ಆರ್. 240

ಸಹಕಾರ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಸಇ 145 ಸಂಮಾಸ 2010 ಬೆಂಗಳೂರು, ದಿನಾಂಕ: 6-1-2011

ಸರ್ಕಾರಿ ಆದೇಶ ಸಂಖ್ಯೆ: ಸಇ 145 ಸಂಮಾಸ 2010 ರ ದಿನಾಂಕ: 4-12-2010 ರ ಆದೇಶದ ಕಂಡಿಕೆ 1 ರ ನಂತರದ ಉಪ ಕಂಡಿಕೆ ರಲ್ಲಿ 2010-11ನೇ ಸಾಲಿನ ಲೆಕ್ಕಶೀರ್ಷಿಕೆ "2425-00-108-0-30-423" ರ ಬದಲಾಗಿ ಲೆಕ್ಕಶೀರ್ಷಿಕೆ "2425-00-108-0-39-423-ಗಿರಿ ಉಪಯೋಜನೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

ಪಿ.ಆರ್. 241

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 2010-11ನೇ ಸಾಲಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಲಾದ ಅನುದಾನದ ಖರ್ಚು ವೆಚ್ಚಗಳ ಬಗ್ಗೆ ಲೆಕ್ಕ ತಪಾಸಣೆ ಮಾಡಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ವಿಯಇ 33 ವಿತ್ರಮ 2009, ದಿನಾಂಕ: 21/05/2010
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇವರ ಟಿಪ್ಪಣಿ ಸಂಖ್ಯೆ: ಪಿಆರ್ 67/2010, ದಿನಾಂಕ 15.12.2010
3) ಕಾರ್ಯನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ, ಇವರ ಪತ್ರ ಸಂಖ್ಯೆ: ವಿಜಿಎಸ್‌ಟಿ/ ಆಡಿಟ್/2010-11/446 ದಿ: 01/12/2010.
4) ಸರ್ಕಾರದ ಆದೇಶ ಸಂಖ್ಯೆ: ವಿಯಇ 71 ವಿತ್ರಮ 2010, ದಿನಾಂಕ: 31.08.2010.

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿನ ಸರ್ಕಾರಿ ಆದೇಶದಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹಕ್ಕೆ 2010-11ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 3425-60-600-0-02(059) (ಯೋಜ ಅಡಿಯಲ್ಲಿ ದಾರ್ಶನಿಕ ಸಮೂಹದ ಯೋಜನೆಗಳಿಗಾಗಿ ಕಲ್ಪಿಸಲಾದ ರೂ. 10.00 ಕೋಟಿಗಳ ಸಹಾಯಾನುದಾನಕ್ಕೆ ಆಡಳಿತಾತ್ಮಕ ಮಂಜೂರ ನೀಡಲಾಗಿದೆ.

ಮೇಲೆ ಓದಲಾದ (2) ರಲ್ಲಿನ ಟಿಪ್ಪಣಿಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿರವರು ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಕಾರ್ಯ ಯೋಜನೆಗಳ ಅನುಷ್ಠಾನಕ್ಕಾಗಿ ರೂ. 1500.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಇದರ ಸಮರ್ಪಕ ಬಳಕೆಯ

ಖಚಿತಪಡಿಸಿಕೊಳ್ಳುವುದು ಅತ್ಯವಶ್ಯಕವಾಗಿರುವುದರಿಂದ, ದಾರ್ಶನಿಕ ಸಮೂಹಕ್ಕೆ ಬಿಡುಗಡೆ ಮಾಡಲಾದ ರೂ. 1500.00 ಲಕ್ಷಗಳ ವೆಚ್ಚಕ್ಕೆ ಸಂಬಂಧಿಸಿದಂತೆ C & AG empanelled Auditors ಥವರಿಂದ ಲೆಕ್ಕ ತಪಾಸಣೆ ನಡೆಸುವಂತೆ ತಿಳಿಸಿರುತ್ತಾರೆ.

ಮೇಲೆ ಓದಲಾದ (3) ರಲ್ಲಿನ ಪತ್ರದಲ್ಲಿ ಕಾರ್ಯನಿರ್ವಾಹಕ ಕಾರ್ಯದರ್ಶಿ, ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಇವರು, C & AG empanelled Auditors ಆದ M/s MNS & Co. Bangalore ಈ ಸಂಸ್ಥೆಯವರು ದಾರ್ಶನಿಕ ಸಮೂಹದ ಕಾರ್ಯಯೋಜನೆಗಳಿಗೆ ಮಾಡಲಾದ ಖರ್ಚು ವೆಚ್ಚಗಳ ಕುರಿತು ತಪಾಸಣೆ ಮಾಡಲು ಒಪ್ಪಿಗೆ ನೀಡಿ, ಈ ತಪಾಸಣಾ ಕಾರ್ಯ ನಿರ್ವಹಿಸಲು The Council of the Institute of Chartered Accountants of India, ರವರು 2010–11ನೇ ಸಾಲಿನಲ್ಲಿ ನಿಗದಿಪಡಿಸಿದ ತಪಾಸಣಾ ಶುಲ್ಕವನ್ನು (Audit Charges) ಆಧರಿಸಿ ರೂ. 2.00 ಲಕ್ಷಗಳನ್ನು (ಸೇವಾ ತೆರಿಗೆ ಪ್ರತ್ಯೇಕ) ಈ ತಪಾಸಣಾ ಕಾರ್ಯಕ್ಕೆ ಒದಗಿಸಲು ಸರ್ಕಾರದ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿ ಕೋರಿರುತ್ತಾರೆ.

ಮೇಲೆ ಓದಲಾದ (4) ರಲ್ಲಿನ ಸರ್ಕಾರಿ ಆದೇಶದಲ್ಲಿ ದಾರ್ಶನಿಕ ಸಮೂಹದ ಆಡಳಿತಾತ್ಮಕ ವೆಚ್ಚವನ್ನು ಭರಿಸಲು ರೂ. 40.00 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದು, ದಾರ್ಶನಿಕ ಸಮೂಹದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಿಯಇ 39 ವಿತ್ರಮ 2010, ಬೆಂಗಳೂರು, ದಿನಾಂಕ: 07-01-2011

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಕಾರ್ಯಯೋಜನೆಗಳಿಗೆ ಬಿಡುಗಡೆ ಮಾಡಲಾದ ರೂ. 1500.00 ಲಕ್ಷಗಳ ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ M/s MNS & Co. Bangalore ರವರಿಂದ ಲೆಕ್ಕ ತಪಾಸಣೆ ನಡೆಸಲು 2010–11ನೇ ಸಾಲಿನಲ್ಲಿ ನಿಗದಿಪಡಿಸಿದ ತಪಾಸಣಾ ಶುಲ್ಕವನ್ನು (Audit Charges) ಆಧರಿಸಿ ರೂ. 2.00 ಲಕ್ಷಗಳನ್ನು (ಸೇವಾ ತೆರಿಗೆ ಪ್ರತ್ಯೇಕ) ಈ ತಪಾಸಣಾ ಕಾರ್ಯಕ್ಕೆ ಸಂಭಾವನೆಯಾಗಿ ನೀಡಲು ಹಾಗೂ 2009–10ನೇ ಸಾಲಿನ ಲೆಕ್ಕ ತಪಾಸಣೆಗೆ ರೂ. 60,000/–ಗಳನ್ನು ನಿಗದಿಗೊಳಿಸಿ ಮೇಲೆ ತಿಳಿಸಿರುವ ಸಂಸ್ಥೆಗೆ ಲೆಕ್ಕ ಶೀರ್ಷಿಕೆ 3425–60–600–0–02(059) (ಯೋಜನೆ) ಅಡಿಯಲ್ಲಿ ಭರಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಅಲ್ಲದೆ ಈ ಲೆಕ್ಕತಪಾಸಣೆಗೆ ಸಂಬಂಧಿಸಿದಂತೆ ಕೈಗೊಳ್ಳಲಾಗುವ ಪ್ರಯಾಣ ಮುಂತಾದ ವೆಚ್ಚಗಳನ್ನು ವಾಸ್ತವಿಕತೆಯನ್ನಾಧರಿಸಿ ಹಿಂಭರಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

1. ಈ ವೆಚ್ಚವನ್ನು ದಾರ್ಶನಿಕ ಸಮೂಹದ ಲೆಕ್ಕ ಶೀರ್ಷಿಕೆ 3425–60–600–0–02(059) (ಯೋಜನೆ) ಅಡಿಯಲ್ಲಿ ಸರ್ಕಾರಿ ಆದೇಶ ಸಂಖ್ಯೆ:–ವಿಯಇ 71 ವಿತ್ರಮ 2010 ರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ಆಡಳಿತಾತ್ಮಕ ವೆಚ್ಚಕ್ಕೆ ಬಿಡುಗಡೆ ಮಾಡಿರುವ ರೂ. 40.00 ಲಕ್ಷಗಳಲ್ಲಿ ಭರಿಸತಕ್ಕದ್ದು.
2. ಈ ತಪಾಸಣಾ ಕಾರ್ಯಕ್ಕೆ 2010–11ನೇ ಸಾಲಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳಲು ಅನುದಾನ ಬಿಡುಗಡೆ ಮಾಡಿದ ಸಂಬಂಧಪಟ್ಟ ಸರ್ಕಾರಿ ಆದೇಶಗಳನ್ನು ಒಳಗೊಂಡಂತೆ ವಿವಿಧ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾದ ಅನುದಾನದ ಖರ್ಚು ವೆಚ್ಚಗಳಿಗೆ ಸಂಬಂಧಿಸಿದ ವೋಚರ್, ಬ್ಯಾಂಕ್ ತಃಖ್ತೆಗಳ ಪರಿಶೀಲನೆ, ಮುಂತಾದವುಗಳನ್ನು ನಿಗದಿತ ಅವಧಿಯಲ್ಲಿ ನಿರ್ವಹಿಸಿ, ಸಂಪೂರ್ಣ ರೂ. 1500.00 ಲಕ್ಷಗಳ ಮೊತ್ತದ ವೆಚ್ಚಕ್ಕೆ ಸಂಬಂಧಿಸಿದಂತೆ ಸಮಗ್ರ ತಪಾಸಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಬೋರಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 242

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಬಿ.ಸಿ. ಪ್ರದೀಪ್ ಕುಮಾರ್, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರನ್ನು ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ಬಗ್ಗೆ.

ಓದಲಾಗಿದೆ :
1. ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11(4)ರ ಮೇರೆಗಿನ ತಿಳುವಳಿಕೆ ಪತ್ರ ಸಂಖ್ಯೆ : ಆಇ 10 ವಾತೆತ 2007, ದಿನಾಂಕ : 1–7–2008.
2. ಶ್ರೀ ಬಿ.ಸಿ. ಪ್ರದೀಪ್ ಕುಮಾರ್‌ರವರ ಸಮಜಾಯಿಷಿ ದಿನಾಂಕ : 26–8–2008.
3. ಸರ್ಕಾರಿ ಆದೇಶ ಸಂಖ್ಯೆ : ಆಇ 10 ವಾತೆತ 2007 ದಿನಾಂಕ : 17–10–2008.
4. ವಿಚಾರಣಾ ವರದಿ ದಿನಾಂಕ : 20–3–2009.
5. ಸರ್ಕಾರದ 2ನೇ ಕಾರಣ ಕೇಳುವ ನೋಟೀಸು ಸಂಖ್ಯೆ : ಆಇ 10 ವಾತೆತ 2007, ದಿನಾಂಕ : 21–4–2009.
6. ಶ್ರೀ ಪ್ರದೀಪ್ ಕುಮಾರ್‌ರವರ ಸಮಜಾಯಿಷಿ ದಿನಾಂಕ : 1–6–2009.
7. ವಾಣಿಜ್ಯ ತೆರಿಗೆ ಆಯುಕ್ತರ ಪತ್ರ ಸಂಖ್ಯೆ : ಸಿಆರ್/ಜಿಎಜಡ್/ಸಿಆರ್–75/2005–2006, ದಿನಾಂಕ: 23–7–2009.
8. ಸರ್ಕಾರದ ಪತ್ರ ಸಂಖ್ಯೆ : ಆಇ 10 ವಾತೆತ 2007, ದಿನಾಂಕ : 24–12–2009.
9. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗರವರ ಪತ್ರ ಸಂಖ್ಯೆ : ಪಿಎಸ್‌ಸಿ 171 ಸಿಎನ್‌ಎಸ್ 10 ದಿನಾಂಕ : 23–10–2010.

ಪ್ರಸ್ತಾವನೆ :

ಶ್ರೀ ಬಿ.ಸಿ. ಪ್ರದೀಪ್ ಕುಮಾರ್‌ರವರು ವಿಭಾಗೀಯ ಮೌಲ್ಯವರ್ಧಿತ ತೆರಿಗೆ ಬೆಂಗಳೂರು ನಗರ ವಿಭಾಗ–1, ಟಿ.ಪಿ.ಎಸ್–12 ಕಛೇರಿಯ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರಾಗಿದ್ದಾಗ, ದಿನಾಂಕ : 29–5–2006 ರಿಂದ ಗೈರುಹಾಜರಾಗಿರುತ್ತಾರೆ. ಅಧಿಕಾರಿಯು ಯಾವುದೇ ರಜೆ ಅರ್ಜಿ ಸಲ್ಲಿಸದೇ

ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಗೈರುಹಾಜರಾಗಿದ್ದ ಕಾರಣ, ಬೆಂಗಳೂರು ನಗರ-1ರ ವಿಭಾಗೀಯ ಮೌಲ್ಯವರ್ಧಿತ ತೆರಿಗೆ ಕಛೇರಿ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು ಸದರಿ ಅಧಿಕಾರಿಗೆ ಸೂಚನಾ ಪತ್ರ ಸಂಖ್ಯೆ : ಸಿಬ್ಬಂದಿ/ಎ/ಸಿಆರ್-2/06-07 ದಿನಾಂಕ : 31-5-2006 ನ್ನು ನೀ ಗೈರುಹಾಜರಿಗೆ ವಿವರಣೆ ನೀಡಲು ಸೂಚಿಸಿದ್ದರು. ಈ ಸೂಚನಾ ಪತ್ರಕ್ಕೆ ಅಧಿಕಾರಿಯು ವಿವರಣೆಯನ್ನು ಸಲ್ಲಿಸದೇ ಅನಧಿಕೃತ ಗೈರುಹಾಜರಿಯ ಮುಂದುವರೆಸಿ ದುರ್ನಡತೆ ಎಸಗಿರುವ ಆರೋಪಕ್ಕಾಗಿ, ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (1)ರ ತಿಳುವಳಿಕೆ ಪತ್ರವನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (2)ರ ಪತ್ರದಲ್ಲಿ ಅಧಿಕಾರಿಯವರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಧಿಕಾರಿಯು ನೀಡಿರುವ ಕಾರಣ ಸಮಂಜಸವಾಗಿರುವುದಿಲ್ಲ. ಆದುದರಿಂದ ಸದರಿ ಅಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಎಂ.ಜೆ. ಇಂದ್ರಕುಮಾರ್, ನಿವೃತ್ತ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು, ಅವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಶ್ರೀ ಜಿ.ಎ. ರಾಮಚಂದ್ರ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, (ಆಡಿಟ್)-11, ಡಿ.ವಿ.ಓ-11, ಬೆಂಗಳೂರು, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಮೇಲೆ ಓದಲಾಗಿ ಕ್ರಮ ಸಂಖ್ಯೆ : (3)ರ ಆದೇಶವನ್ನು ಹೊರಡಿಸಲಾಗಿತ್ತು.

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (4)ರ ವಿಚಾರಣಾ ವರದಿಯಲ್ಲಿ ಆರೋಪಿತ ಅಧಿಕಾರಿಯವರ ವಿರುದ್ಧ ಮಾಡಲಾಗಿರುವ ಆರೋಪ ಸಾಬೀತಾಗಿದೆ ಎಂದು ವಿಚಾರಣಾಧಿಕಾರಿಯವರು ನಿರ್ಣಯಿಸಿರುತ್ತಾರೆ. ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (5) ರಲ್ಲಿ ಆರೋಪಿತ ಅಧಿಕಾರಿಯವ ವಿಚಾರಣಾ ವರದಿಯ ಪ್ರತಿಯೊಂದನ್ನು ಲಗತ್ತಿಸಿ 2ನೇ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು. ಮೇಲೆ ಓದಲಾಗಿರುವ ಕ್ರಮ ಸಂಖ್ಯೆ (6)ರ ದಿನಾಂಕ : 1-6-2009 ರ ಪತ್ರದಲ್ಲಿ ಅಧಿಕಾರಿಯವರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

ಆಪಾದಿತ ಅಧಿಕಾರಿಯವರು ದಿನಾಂಕ : 2-2-2006 ರಿಂದ 27-5-2006 ರವರೆಗೆ ಗಳಿಕೆ ರಜೆ ಪಡೆದಿದ್ದು, ದಿನಾಂಕ : 28-5-20 ರಂದು ಸಾರ್ವಜನಿಕ ರಜೆಯ ನಿಮಿತ್ತ ದಿನಾಂಕ : 29-5-2006 ರಂದು ಕರ್ತವ್ಯಕ್ಕೆ ಹಾಜರಾಗಬೇಕಿತ್ತು. ರಜೆ ಮುಂದುವರಿಕೆಯ ಬಗ್ಗೆ ರಜೆ ಅ ಸಲ್ಲಿಸದೇ ದಿನಾಂಕ : 29-5-2006 ಮತ್ತು 30-5-2006 ರಂದು ಅನಧಿಕೃತವಾಗಿ ಗೈರುಹಾಜರಾದ ಕಾರಣ ದಿನಾಂಕ : 31-5-2006 ರಂದು ಕಾ ಕೇಳುವ ನೋಟೀಸ್ ನೀಡಲಾಗಿದ್ದು, ಮತ್ತೆ ದಿನಾಂಕ : 29-9-2006 ರಂದು ವಿವರಣೆ ಕೇಳಿ ನೋಟಿಸು ನೀಡಲಾಗಿತ್ತು. ಇದಾದ ನಂತರ ಆಪಾ ಅಧಿಕಾರಿಯು ದಿನಾಂಕ : 28-11-2006 ರಂದು ಪ್ರಭಾರ ವರ್ಗಾವಣೆ ಪತ್ರ ಮತ್ತು ದಿನಾಂಕ : 30-5-2006 ರಿಂದ ಅನ್ವಯವಾಗುವಂತೆ ಸ್ವಯಂ ನಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಪ್ರಭಾರ ವರ್ಗಾವಣೆ ಪ್ರಮಾಣ ಪತ್ರದಲ್ಲಿ ಕೇವಲ ತಮಗೆ ಅನ್ವಯಿಸುವ ಅಂಶಗಳನ್ನು ಭರ್ತಿ ಮಾಡಿ, ಪ್ರಭ ವರ್ಗಾವಣೆಯನ್ನು ಯಾರಿಗೂ ವಹಿಸಿರುವುದಿಲ್ಲ. ವಿಚಾರಣಾಧಿಕಾರಿಯವರು, ಆಪಾದಿತ ಅಧಿಕಾರಿಯವರ ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿದ್ದರೂ ಸ ಅನಧಿಕೃತ ಗೈರುಹಾಜರಾಗಿರುವುದು ಕಾನೂನು ಬಾಹಿರವಾಗಿದ್ದು, ಅನಧಿಕೃತ ಗೈರು ಹಾಜರಾದ ಬಗ್ಗೆ ಇಲಾಖೆಯಿಂದ ನೀಡಿರುವ ನೋಟೀಸುಗ ಉತ್ತರವನ್ನು ನೀಡದೇ ಅನಧಿಕೃತ ಗೈರುಹಾಜರಾತಿಯನ್ನು ಮುಂದುವರೆಸಿಕೊಂಡು ಬಂದಿರುವುದು, ರಜೆಯ ಮೇಲೆ ತೆರಳುವಾಗ ಅಧಿಕೃತ ಮೇಲಾಧಿಕಾರಿಗಳಾಗಲೀ ಅಥವಾ ತನ್ನ ಸಮಾನ ಅಧಿಕಾರಿಗಳಿಗಾಗಲೀ ಪ್ರಭಾರವನ್ನು ಹಸ್ತಾಂತರಿಸದೇ ಇರುವುದು ಮತ್ತು ದಿನಾಂಕ : 29-5-2006 ರಿ ಇಲ್ಲಿಯವರೆವಿಗೂ ಕಛೇರಿಯ ಕರ್ತವ್ಯಕ್ಕೆ ಹಾಜರಾಗದೇ ಇರುವುದು, ಸರ್ಕಾರಿ ಅಧಿಕಾರಿ/ನೌಕರನು ಸಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನ ಎಸಗಿರುತ್ತಾರೆ.

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (8)ರ ಸರ್ಕಾರದ ದಿನಾಂಕ : 24-12-2009 ರ ಪತ್ರದಲ್ಲಿ ಅಧಿಕಾರಿಯವರ ವಿರುದ್ಧ ಅನಧಿ ಗೈರುಹಾಜರಿ ಆರೋಪ ಸಾಬೀತಾದ್ದರಿಂದ ಸೇವೆಯಿಂದ ತೆಗೆದುಹಾಕುವ ದಂಡನೆ ವಿಧಿಸುವ ಬಗ್ಗೆ ಕರ್ನಾಟಕ ಲೋಕಾಸೇವಾ ಆಯೋ ಸಹಮತಿಯನ್ನು ಕೋರಲಾಗಿತ್ತು. ಮೇಲೆ ಓದಲಾಗಿರುವ ಕ್ರಮ ಸಂಖ್ಯೆ : (8)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಆರೋ ಅಧಿಕಾರಿಯನ್ನು ಸೇವೆಯಿಂದ ತೆಗೆದುಹಾಕುವ ದಂಡನೆಯ ಬದಲಾಗಿ, ಕಡ್ಡಾಯ ನಿವೃತ್ತಿಯ ದಂಡನೆ ವಿಧಿಸಲು ಶಿಫಾರಸ್ಸು ಮಾಡಿದೆ.

ವಿಚಾರಣಾ ವರದಿ ದಿನಾಂಕ : 20-3-2009 ಮತ್ತು ಕರ್ನಾಟಕ ಲೋಕಸೇವಾ ಆಯೋಗದ ಶಿಫಾರಸ್ಸು ದಿನಾಂಕ : 23-10-2010ರ ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 10 ವಾತೆತ 2007, ಬೆಂಗಳೂರು, ದಿನಾಂಕ : 7-1-2011.

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಕರ್ನಾಟಕ ಲೋಕಸೇವಾ ಆಯೋಗದ ಸಲಹೆಯನ್ನು ಒಪ್ಪಿ, ಕರ್ನಾ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(vi)ರ ಪ್ರಕಾರ ಶ್ರೀ ಬಿ.ಸಿ. ಪ್ರದೀಪ್ ಕುಮಾ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಆರ್. ಚಂದ್ರಶೇಖರಾರಾಧ್ಯ

ಪೀಠಾಧಿಕಾರಿ,

ಪಿ. ಆರ್. 261 ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ-2)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಅಧಿಸೂಚನೆ ಸಂಖ್ಯೆ: ಗ್ರಾಅಪ 230 ಜಿಪಸ 2005, ದಿನಾಂಕ : 1-9-2006.
2. ಸರ್ಕಾರಿ ಅಧಿಸೂಚನೆ ಸಂಖ್ಯೆ: ಗ್ರಾಅಪ 2 ಜಿಪಸ 2011, ದಿನಾಂಕ : 10-1-2011.
3. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 10 ಜಿಪಸ 2011, ದಿನಾಂಕ : 14-1-2011.

ಪ್ರಸ್ತಾವನೆ :

ಮೇಲೆ (3) ರಲ್ಲಿ ಓದಲಾದ ದಿನಾಂಕ : 14-1-2011 ರ ಸರ್ಕಾರಿ ಆದೇಶದಲ್ಲಿನ ಎರಡನೇ ಕಂಡಿಕೆಯಲ್ಲಿ ಅವಧಿ ಮುಕ್ತಾಯಗೊಂಡ ತಾಲ್ಲೂ ಪಂಚಾಯತಿಗಳಿಗೆ ಆಯಾ ಉಪ ವಿಭಾಗಾಧಿಕಾರಿಯನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀ

ಆದೇಶಿಸಲಾಗಿತ್ತು. ಎಲ್ಲಾ ತಾಲ್ಲೂಕು ಪಂಚಾಯತಿಗಳಿಗೆ ಉಪ ವಿಭಾಗಾಧಿಕಾರಿಗಳನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಿಸಿದಲ್ಲಿ ಉಪ ವಿಭಾಗಾಧಿಕಾರಿಗಳಿಗೆ ಕಾರ್ಯ ಒತ್ತಡ ಹೆಚ್ಚಾಗುವುದರಿಂದ, ಉಪ ವಿಭಾಗಾಧಿಕಾರಿ ಅಥವಾ ಸಮಾನ ಶ್ರೇಣಿಯ ಇತರೇ ಅಧಿಕಾರಿಗಳನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲು ನಿರ್ಧರಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 10 ಜಿಪಸ 2011, ಬೆಂಗಳೂರು, ದಿನಾಂಕ : 18-01-2011.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 321 ರಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರದನ್ವಯ ಅವಧಿ ಮುಕ್ತಾಯವಾಗುವ ತಾಲ್ಲೂಕು ಪಂಚಾಯತಿಗಳಿಗೆ ಅವಧಿ ಮುಕ್ತಾಯವಾದ ದಿನಾಂಕದಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಆಯ್ಕೆ ಪ್ರಕ್ರಿಯೆ ಮುಗಿಯುವವರೆಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆಯಾ ಉಪ ವಿಭಾಗಾಧಿಕಾರಿಯಾಗಿ ಅಥವಾ ಉಪ ವಿಭಾಗಾಧಿಕಾರಿ ಹುದ್ದೆಯ ಸಮಾನಶ್ರೇಣಿ ಹೊಂದಿರುವ ಇತರೆ ಅಧಿಕಾರಿಗಳನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸ್ವರ್ಣಲತ ಎಂ. ಭಂಡಾರೆ
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ. ಆರ್. 262 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಗ್ರಾಅಪ 110 ಉಖಾಯೋ 2009, ಬೆಂಗಳೂರು, ದಿನಾಂಕ : 11-01-2011.

ವಿಷಯ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಒಂದು ಕಣವನ್ನು (Thresh yard) ನಿರ್ಮಿಸುವುದು ಮತ್ತು ಸರ್ಕಾರಿ ಅನುದಾನಿತ ಶಾಲೆಗಳ ಆಸ್ತಿಗಳಿಗೆ ರಕ್ಷಣಾ ಗೋಡೆಯನ್ನು ನಿರ್ಮಿಸುವ ಬಗ್ಗೆ.

ಓದಲಾಗಿದೆ : ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 110 ಉಖಾಯೋ 2009, ದಿನಾಂಕ : 3-12-2010.

ಸದರಿ ಆದೇಶದ ಪ್ರಸ್ತಾವನೆಯಲ್ಲಿ ಕಾಣಿಸಿಕೊಂಡ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಂದು ಕಣವನ್ನು ನಿರ್ಮಿಸುವ ಕಾಮಗಾರಿಯನ್ನು ಮತ್ತು ಸರ್ಕಾರಿ ಅನುದಾನಿತ ಶಾಲೆಗಳ ಆಸ್ತಿಗಳಿಗೆ ರಕ್ಷಣಾ ಗೋಡೆಗಳನ್ನು ನಿರ್ಮಿಸುವ ಕಾಮಗಾರಿಯನ್ನು ಯೋಜನೆಯ ಆದ್ಯತಾ ಕಾಮಗಾರಿಗಳ 5ನೇ ಪ್ರವರ್ಗದಡಿ ಪರಿಗಣಿಸಿ ಅನುಷ್ಠಾನಗೊಳಿಸಿ ಎನ್ನುವ ವಿಷಯಕ್ಕೆ ಬದಲಾಗಿ ಯೋಜನೆಯ ಆದ್ಯತಾ ಕಾಮಗಾರಿಗಳ 6ನೇ ಪ್ರವರ್ಗದಡಿ ಪರಿಗಣಿಸಿ ಅನುಷ್ಠಾನಗೊಳಿಸುವುದು ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಎಸ್. ಪ್ರಸನ್ನಕುಮಾರ್
ನಿರ್ದೇಶಕರು,
ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ
ಉದ್ಯೋಗ ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಪಿ. ಆರ್. 263 ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಶ್ರೀ ಎಸ್.ಎನ್. ಚನ್ನಗೌಡ್ರ, ನೋಟರಿ, ಬ್ಯಾಡಗಿ, ಇವರ ಕರ್ತವ್ಯ ಲೋಪದ ದೂರು ಬಗ್ಗೆ ಶಿಸ್ತು ಕ್ರಮ.

ಓದಲಾಗಿದೆ :
1. ಶ್ರೀ ಸುರೇಶ್‌ಗೌಡ್ರ, ಬಿ. ಪಾಟೀಲ, ಶಾಸಕರು, ಬ್ಯಾಡಗಿ ಮತಕ್ಷೇತ್ರ ಇವರ ಪತ್ರ ದಿನಾಂಕ : 5-7-2010.
2. ಸರ್ಕಾರದ ಪತ್ರ ಸಂಖ್ಯೆ : ಲಾ 167 ಎಲ್‌ಸಿಎಲ್ 2010, ದಿನಾಂಕ : 21-8-2010 ಮತ್ತು 22-9-2010.
3. ನೋಟರಿಯವರ ಲಿಖಿತ ಹೇಳಿಕೆ ದಿನಾಂಕ : 29-9-2010, 25-10-2010
4. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾವೇರಿ ಇವರ ಪತ್ರ ಸಂಖ್ಯೆ : ಆಡಳಿತ/2732/10, ದಿನಾಂಕ: 10-11-2010.

ಪ್ರಸ್ತಾವನೆ :

ಉಲ್ಲೇಖಿತ (1)ರ ದಿನಾಂಕ : 5-7-2010ರ ಪತ್ರದಲ್ಲಿ ಸ್ಥಳೀಯ ಶಾಸಕರು ಶ್ರೀ ಎಸ್.ಎನ್. ಚನ್ನಗೌಡ್ರ, ನೋಟರಿ, ಬ್ಯಾಡಗಿ ಇವರು ನೋಟರಿ ಮಾಡಿಕೊಡಲು ಅತೀ ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಸ್ಥಳೀಯರು ನೀಡಿರುವ ದೂರು ಬಗ್ಗೆ ಪರಿಶೀಲಿಸುವಂತೆ ಮಾನ್ಯ ಕಾನೂನು ಸಚಿವರಿಗೆ ಕೋರಿದ್ದರ ಮೇರೆಗೆ ಸ್ಥಳೀಯರಿಂದ ಸ್ವೀಕೃತವಾದ ದೂರು ಮನವಿಯನ್ನು ನೋಟರಿಯವರಿಗೆ ಹಾಗೂ ಸಕ್ಷಮ ಪ್ರಾಧಿಕಾರ, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ ಒದಗಿಸಿ ಆ ಬಗ್ಗೆ ಕ್ರಮವಾಗಿ ಲಿಖಿತ ಹೇಳಿಕೆಯನ್ನು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ ಹಾಗೂ ಸರ್ಕಾರಕ್ಕೆ ನೀಡುವಂತೆ ಉಲ್ಲೇಖಿತ (2) ರ ದಿನಾಂಕ : 21-8-2010 ಹಾಗೂ 22-9-2010ರ ಸರ್ಕಾರದ ಪತ್ರಗಳಲ್ಲಿ ಕೋರಲಾಗಿತ್ತು.

ಅದರಂತೆ ಉಲ್ಲೇಖಿತ (3)ರ ದಿನಾಂಕ : 29-9-2010 ಹಾಗೂ 25-10-2010ರ ಮನವಿಗಳಲ್ಲಿ ಶ್ರೀ ಎಸ್.ಎನ್. ಚನ್ನಗೌಡ್ರ, ನೋಟರಿ, ಬ್ಯಾಡಗಿ ಇವರು ಲಿಖಿತ ವಿವರಣೆ ಸಲ್ಲಿಸಿರುತ್ತಾರೆ ಮತ್ತು ಆ ಬಗ್ಗೆ ಉಲ್ಲೇಖಿತ (4)ರ ದಿನಾಂಕ : 10-11-2010ರ ಪತ್ರದೊಂದಿಗೆ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ಹಾವೇರಿ ಇವರು ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ಅದರಲ್ಲಿ ನೋಟರಿಯವರು ತಮ್ಮ ವಿರುದ್ಧ ದೂರು ಸಲ್ಲಿಸಿರುವ ವ್ಯಕ್ತಿಗಳು ಇಬ್ಬ ಅಗಿದ್ದು, ಅವರು ರಾಜಕೀಯ ದುರುದ್ದೇಶದಿಂದ ಸಂಬಂಧಪಟ್ಟ ಶಾಸಕರಿಗೆ ದೂರು ಸಲ್ಲಿಸಿದ್ದು, ತಾವು 2000 ದಿಂದ ಇಲ್ಲಿಯವರೆಗೂ ನೋಟರಿ ಮಾಡಿಕೊಂಡು ಬಂದಿದ್ದು, ತಮ್ಮ ಮೇಲೆ ಯಾವುದೇ ದೂರು ಬಂದಿರುವುದಿಲ್ಲ ಎಂದು ತಿಳಿಸಿದ್ದರ ಮೇರೆಗೆ ವಿವೇಚನೆಯುಕ್ತ ವಿಚಾರಣೆ ಮಾಡಿ ಮೇಲ್ನೋಟಕ್ಕೆ ಇದೊಂದು ದುರುದ್ದೇಶಪೂವಕ ದೂರು ಎಂದು ಭಾವಿಸಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ.

ಸಕ್ಷಮ ಪ್ರಾಧಿಕಾರ ಹಾಗೂ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ವಿಚಾರಣಾ ವರದಿ ಹಾಗೂ ಕರ್ತವ್ಯ ಲೋಪದ ಪ್ರಮಾಣವನ್ನು ಸರ್ಕಾ ಹಂತದಲ್ಲಿ ಪರಿಗಣಿಸಿ ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಲಾ 167 ಎಲ್‌ಸಿಎಲ್ 2010, ಬೆಂಗಳೂರು, ದಿನಾಂಕ : 12-1-2011.

ಶ್ರೀ ಎಸ್.ಎನ್. ಚನ್ನಗೌಡ್ರ, ನೋಟರಿ, ಬ್ಯಾಡಗಿ ಇವರ ಮೇಲಿನ ದೂರು ಮೇಲ್ನೋಟಕ್ಕೆ ದುರುದ್ದೇಶಪೂರಕವಾಗಿರುವುದರಿಂದ, ವಿಚಾರ ವರದಿಯನ್ನು ಒಪ್ಪಿ ಪ್ರಕರಣ ಮುಕ್ತಾಯಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ನಾ. ಮಹಾಲಕ್ಷ್ಮಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ. ಆರ್. 264

INFRASTRUCTURE DEVELOPMENT SECRETARIAT

Sub: Service charges payable to KSIIDC in respect of Rs. 150.00 crores loan availed by KSIIDC for procuring land for Bangalore International Airport Project-for the years 2009-10 and 2010-11.

Read :
1. G.O. No. IDD 47 DIA 06, dated 27-3-2007.
2. G.O. No. IDD 47 DIA 06 (P) dated 25-9-2007.
3. G.O. No. IDD 47 DIA 06, dated 7-9-2009.
4. Letter No. DGM (IPD-1)/2004/2010-11, dated 25-11-2010.

Preamble :

In G.O. dated 25-9-2007 read at Sl.No. (2) above, Government accorded sanction for release of Rs. 41.43 lakhs claimed KSIIDC as service charge for servicing the HUDCO loan obtained for Bangalore International Airport Project on behalf of Government of Karnataka, with condition that the same shall be adjusted towards Guarantee Commission payable by KSIIDC availing the loan facility on State Government Guarantee ; to the Head of Account 0075-00-108-0-01-Guarantee Fees without cash outgo in this regard.

2. In the G.O. dated 7-9-2009 read at Sl.No. (3) above, government has sanctioned Rs. 83.37 lakhs to KSIIDC towa service charges on HUDCO loan for the financial years 2007-08 and 2008-09 through book adjustment with the following conditions

"The outstanding Guarantee Commission with KSIIDC as on 31-3-2009 is Rs. 24.37 crore out of this.

(a) Expenditure of Rs. 83.87 lakhs of service charges on HUDCO loan for the financial year 2007-08 and 2008-09 is releas from the Head of Account 5465-01-190-1-04-240-Assistance to BIAP-Assistance for repayment of HUDCO loan wher provision of Rs. 25.99 crore is made during 2009-10. This expenditure is to be adjusted by crediting it to the Head Account "0075-00-108-0-01-Guarantee Fees".

(b) By this the total guarantee commission payable by KSIIDC as on 31-3-2009 on loans other than HUDCO loan of 15.79 crore would be reduced to the extent of Rs. 83.37 lakhs and Rs. 14.96 crore would still have to be remitted KSIIDC in cash.

(c) KSIIDC should work out a calendar for making this payment of guarantee commission on its other loans over the next year and submit to Govt., in F.D. and

(d) An amount of Rs. 8.58 crore Guarantee Commission for the HUDCO loan obtained for BIA project by KSIIDC on behal Government of Karnataka is to be paid through book adjustment already factored in the budget for the year 2009- under the Head of Account 5465-01-190-1-104-240-Assistance to BIAP-Assistance for repayment of HUDCO Loan. The is no cash outgo in this regard."

2. In the letter dated 25-11-2010 read at S.No. (4) above, the Deputy General Manager (IPD-1), KSIIDC has sen proposal for release of Rs. 61.43 lakhs towards service charges payable for 2009-10 and 2010-11 (i.e. 33.45 lakhs+27.98 lakhs) fr the Budgetary provision of Rs. 2599.00 lakhs under the Head of Account 5465-01-190-1-104-240-Assistance for repayment of HUD loan through book adjustments by crediting to the Head of Account 0075-00-108-0-01-Gaurantee fees payable by KSIIDC Government.

3. Government have considered the above proposal and hence the following order.

GOVERNMENT ORDER NO: IDD 33 DIA 2010, BANGALORE DATED : 17-01-2011

After careful examination of the proposal, sanction of the Government is hereby accorded for release of Rs. 61.43 lak (Rupees Sixty one lakh forty three thousands only) as service charges for the service rendered by KSIIDC for HUDCO loan d servicing under the Head of Account **"5465-01-190-1-04-(Plan)-BIAP Assistance for repayment of HUDCO loan-240 De Servicing"** out of the Budget Provision of Rs. 2599.00 lakhs in 2010-11.

2. This amount is to be adjusted against Guarantee commission by KSIIDC by crediting to the Head of Account "0075-00-108-0-01-Guarantee Fees" Accountant General will do book adjustment out of Rs. 1,810.63 lakhs available in Head of Account "5465-01-190-1-04-240 (plan).

3. This order is issued in concurrence of F.D. vide U.O. Note No. FD 2017 dated 18-12-2010.

By Order and in the name of the Governor of Karnataka,
C.A. Baburavindranath Patel
Under Secretary to Government,
Infrastructure Development Department.

P.R. 265

ಇಂಧನ ಸಚಿವಾಲಯ

ವಿಷಯ : ಮೆ॥ ಸರೋಜ್ ಎನರ್ಜಿ ಕಂಪನಿ ಪ್ರೈವೇಟ್ ಲಿಮಿಟೆಡ್ ಇವರ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 212 ಎನ್‌ಸಿಇ 2005, ದಿನಾಂಕ : 22-8-2005.
2. ಸರ್ಕಾರದ ಆದೇಶ ಸಂಖ್ಯೆ : ಇಎನ್ 132 ಎನ್‌ಸಿಇ 2006, ದಿನಾಂಕ : 16-3-2006.
3. ಸರ್ಕಾರಿ ಆದೇಶ ಸಂಖ್ಯೆ : ಇಎನ್ 394 ಎನ್‌ಸಿಇ 2009, ದಿನಾಂಕ : 16-2-2010.
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ : ಕೆಆರ್‌ಇಡಿ/06/ಎಸ್‌ಹೆಚ್-27/ಶಿಂಷಾ ಎಂಹೆಚ್‌ಎಸ್/2010/2913 ದಿನಾಂಕ:14/15-10-2010 ಮತ್ತು ಕೆಆರ್‌ಇಡಿ/06/ಎಸ್‌ಹೆಚ್-208/ಇಗ್ಗಲೂರು ಎಂಹೆಚ್‌ಎಸ್/2010/3008, ದಿನಾಂಕ : 22/25-10-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಸರೋಜ್ ಎನರ್ಜಿ ಕಂಪನಿ ಪ್ರೈವೇಟ್ ಲಿಮಿಟೆಡ್ ಇವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಇಗ್ಗಲೂರು ಗ್ರಾಮದ ಬಳಿ ಶಿಂಷಾ ನದಿಗೆ ಅಡ್ಡಲಾಗಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಸದರಿ ಯೋಜನೆಯ ಸಾಮರ್ಥ್ಯವನ್ನು 1.00 ಮೆಗಾ ವ್ಯಾಟ್‌ನಿಂದ 1.5 ಮೆಗಾ ವ್ಯಾಟ್‌ಗೆ ಹೆಚ್ಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಆದೇಶದಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ದಿನಾಂಕ : 30-6-2010 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ದಿನಾಂಕ : 1-7-2010 ರಿಂದ 30-6-2011 ರವರೆಗೆ ವಿಸ್ತರಿಸಲು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರದ ಆದೇಶ ಸಂಖ್ಯೆ : ಇಎನ್ 394 ಎನ್‌ಸಿಇ 2009, ಬೆಂಗಳೂರು, ದಿನಾಂಕ : 14-1-2011.

ಮೆ॥ ಸರೋಜ್ ಎನರ್ಜಿ ಕಂಪನಿ ಪ್ರೈವೇಟ್ ಲಿಮಿಟೆಡ್ ಇವರಿಗೆ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಇಗ್ಗಲೂರು ಗ್ರಾಮದ ಬಳಿ ಶಿಂಷಾ ನದಿಗೆ ಅಡ್ಡಲಾಗಿ ಹಂಚಿಕೆಯಾಗಿರುವ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಕಾಲಾವಕಾಶವನ್ನು ದಿನಾಂಕ : 1-7-2010 ರಿಂದ 30-6-2011 ರವರೆಗೆ ವಿಸ್ತರಿಸಲಾಗಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ. ಆರ್. 266

ಇಂಧನ ಸಚಿವಾಲಯ

ವಿಷಯ : ಮೆ॥ ಇಂಡೊವಿಂಡ್ ಎನರ್ಜಿ ಲಿಮಿಟೆಡ್ ಇವರಿಗೆ ಹಂಚಿಕೆಯಾಗಿದ್ದು, ರದ್ದುಪಡಿಸಲಾಗಿರುವ 9.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ರದ್ದತಿ ಆದೇಶವನ್ನು ಹಿಂಪಡೆಯುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಡಿಇ 133 ಎನ್‌ಸಿಇ 97 (4), ದಿನಾಂಕ : 20-4-1998.
2. ಸರ್ಕಾರದ ಆದೇಶ ಸಂಖ್ಯೆ : ಇಎನ್ 190 ಎನ್‌ಸಿಇ 2006, ದಿನಾಂಕ : 25-7-2006.
3. ಸರ್ಕಾರಿ ಆದೇಶ ಸಂಖ್ಯೆ : ಇಎನ್ 457 ಎನ್‌ಸಿಇ 2008, ದಿನಾಂಕ : 16-9-2009.
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ : ಕೆಆರ್‌ಇಡಿ/08/IWEL/2010/2278 ದಿನಾಂಕ : 27/31-7-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಡೆವಿಲಿನಾ ಪವರ್ (ಪಿ) ಲಿಮಿಟೆಡ್ ಇವರಿಗೆ ಚಿತ್ರದುರ್ಗ ಜಿಲ್ಲೆಯ ಪಲವಹಳ್ಳಿ, ಜೋಗಿಮಟ್ಟಿ ವಲಯ ಎಂಬಲ್ಲಿ 8.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಸದರಿ ಯೋಜನೆಯ ಮೆ॥ ಇಂಡೊವಿಂಡ್ ಎನರ್ಜಿ ಲಿಮಿಟೆಡ್ ಇವರಿಗೆ ವರ್ಗಾವಣೆ ಮಾಡಿ, ಯೋಜನೆಯ ಸಾಮರ್ಥ್ಯವನ್ನು 8.00 ಮೆಗಾ ವ್ಯಾಟ್‌ನಿಂದ 9.00 ಮೆಗಾ ವ್ಯಾಟ್‌ಗೆ ಹೆಚ್ಚಿಸಲಾಗಿತ್ತು.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರ ಯೋಜನೆ ಹಂಚಿಕೆಯ 12 ವರ್ಷ ಕಳೆದರೂ ಯೋಜನೆ ಕಮಿಷನ್ ಮಾಡದಿರುವುದರಿಂದ ಯೋಜನೆಯ ಹಂಚಿಕೆ ಆದೇಶ ರದ್ದುಗೊಳಿಸಲು ಶಿಫಾರಸ್ಸು ಮಾಡಿದ ಹಿನ್ನೆಲೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಸರ್ಕಾರಿ ಆದೇಶಗಳ ಸಂಖ್ಯೆ : ಡಿಇ 133 ಎನ್‌ಸಿಇ 97(4) ದಿನಾಂಕ : 20-4-1998 ಮತ್ತು ಇ 190 ಎನ್‌ಸಿಇ 2006 ದಿನಾಂಕ : 25-7-2006 ರಲ್ಲಿ ಮೆ॥ ಇಂಡೊವಿಂಡ್ ಎನರ್ಜಿ ಲಿಮಿಟೆಡ್ ಇವರಿಗೆ (ಮೆ॥ ದೇವಲಿನಾ ಪವರ್ ಪ್ರೈವೆ ಲಿಮಿಟೆಡ್) ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ ಎಂಬಲ್ಲಿ 8 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ರಿಂದ 9 ಮೆಗಾ ವ್ಯಾಟ್‌ಗೆ ಸಾಮರ್ಥ್ಯ ಹೆಚ್ಚಿಸಿ ಹೊರಡಿಸಲಾದ ಆದೇಶವನ್ನು ಹಾಗೂ ಈ ಸಂಬಂಧ ಸರ್ಕಾರದೊಂದಿಗೆ ಮಾಡಿಕೊಂಡಿ ಒಡಂಬಡಿಕೆಯನ್ನು ರದ್ದು ಪಡಿಸಲಾಗಿತ್ತು.

ಮೆ॥ ಇಂಡೊವಿಂಡ್ ಎನರ್ಜಿ ಲಿಮಿಟೆಡ್ ಇವರು ಯೋಜನೆಗೆ ಬೇಕಾದ 132.53 ಎಕರೆ ಜಮೀನನ್ನು ಖಾಸಗಿಯವರಿ ವಶಪಡಿಸಿಕೊಂಡಿದ್ದು ಹಾಗೂ ಯೋಜನೆಯನ್ನು ದಿನಾಂಕ : 31-3-2011ರೊಳಗಾಗಿ ಅನುಷ್ಠಾನಗೊಳಿಸುವುದಾಗಿ ಭರವಸೆ ನೀಡಿರುವುದರಿಂದ, ಈಗಾಗ ರದ್ದುಪಡಿಸಲಾಗಿರುವ 9.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ರದ್ದತಿ ಆದೇಶವನ್ನು ಹಿಂಪಡೆದು, ಯೋಜನೆಯ ಪೂರ್ವಸ್ಥಿತಿಗೆ ತರುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರದ ಆದೇಶ ಸಂಖ್ಯೆ : ಇಎನ್ 371 ಎನ್‌ಸಿಇ 2010, ಬೆಂಗಳೂರು, ದಿನಾಂಕ : 10-1-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರಿ ಆದೇಶ ಸಂಖ್ಯೆ : ಇಎನ್ 457 ಎನ್‌ಸಿಇ 2008 ದಿನಾಂಕ : 16-9-2 ರ ರದ್ದತಿ ಆದೇಶವನ್ನು ಹಿಂಪಡೆದು, ಯೋಜನೆಯನ್ನು ದಿನಾಂಕ : 31-3-2011ರೊಳಗಾಗಿ ಪ್ರಾರಂಭ ಮಾಡಬೇಕೆಂಬ (commissioni ಷರತ್ತಿಗೊಳಪಟ್ಟು, ಮೆ॥ ಇಂಡೊವಿಂಡ್ ಎನರ್ಜಿ ಲಿಮಿಟೆಡ್ ಇವರಿಗೆ ಚಿತ್ರದುರ್ಗ ಜಿಲ್ಲೆಯ ಪಲವನಹಳ್ಳಿ, ಜೋಗಿಮಟ್ಟಿ ವಲಯ ಎಂಬಲ್ಲಿ ಹ ಮಾಡಲಾಗಿದ್ದ 9.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಪೂರ್ವಸ್ಥಿತಿಗೆ ತರಲಾಗಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿನ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ. ಆರ್. 267

ಇಂಧನ ಸಚಿವಾಲಯ

ವಿಷಯ : ಮೆ॥ ಕೊಡಗು ಹೈಡಲ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಬೀದಳ್ಳಿ ಕಿರು ಜಲ ವಿದ್ಯುತ್ ಯೋಜನೆಯ ಕಾಲಾವಕಾಶ ವಿಸ್ತರಣೆ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 212 ಎನ್‌ಸಿಇ 2005, ದಿನಾಂಕ : 22-8-2005.

2. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ : ಕೆಆರ್‌ಇಡಿ/06/ಬೀದಳ್ಳಿ/ಎಂಹೆಚ್‌ಎಸ್/2010/1768 ದಿನಾಂಕ : 10/11-6-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ಕೊಡಗು ಹೈಡಲ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಬೀದಳ್ಳಿ ಗ್ರಾಮದ ಬಳಿ ಕುಮಾರಧಾರ ನದಿಗೆ ಅಡ್ಡಲಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಬೀದಳ್ಳಿ ಕಿರು ಜಲ ವಿದ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಸದರಿ ಯೋಜನೆಯ ಅನುಷ್ಠಾನದ ಅವಧಿಯು 3 ವರ್ಷಗಳಿಗೆ ಸೀಮಿತವಾಗಿದ್ದು, ಈ ಅವಧಿಯಲ್ಲಿ ಮೆ॥ ಪುಷ್ಪಗಿರಿ ಪವರ್ ಪ್ರೈವೆ ಲಿಮಿಟೆಡ್ ಇವರು ಈ ಯೋಜನೆಯ ವಿರುದ್ಧ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರಿಂದ ಪ್ರಗತಿಯು ಕುಂಠಿತಗೊಂಡಿದ್ದು, ನ್ಯಾಯಾಲಯದ ಪ್ರಕರಣವು ದಿನಾಂಕ : 18-9-2008 ರಂದು ವಿಲೇಯಾಗಿರುತ್ತದೆಯೆಂದು ತಿಳಿಸುತ್ತ, ಈ ಯೋಜನೆಯನ್ನು ಅನುಷ್ಠಾನ ಮಾ ಅಭಿವೃದ್ಧಿದಾರರು ಕ್ರಮವಹಿಸುತ್ತಿದ್ದು, ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ : 30-9-2011 ರವರೆಗೆ ವಿಸ್ತರಿಸಲು ಮೇಲೆ ಓದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಶಿಫಾರಸ್ಸು ಮ ಸರ್ಕಾರಕ್ಕೆ ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರದ ಆದೇಶ ಸಂಖ್ಯೆ : ಇಎನ್ 250 ಎನ್‌ಸಿಇ 2010, ಬೆಂಗಳೂರು, ದಿನಾಂಕ : 14-1-2011.

ಮೆ॥ ಕೊಡಗು ಹೈಡಲ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಬೀದಳ್ಳಿ ಗ್ರಾ ಬಳಿ ಕುಮಾರಧಾರ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಲಾದ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಬೀದಳ್ಳಿ ಕಿರು ಜಲ ವಿದ್ಯುತ್ ಯೋಜನೆಯ ಅನುಷ್ಠಾನ ಮಾಡಲು ಕಾಲಾವಕಾಶವನ್ನು ದಿನಾಂಕ : 30-9-2011 ರವರೆಗೆ ವಿಸ್ತರಿಸಲಾಗಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ. ಆರ್. 268

ಇಂಧನ ಸಚಿವಾಲಯ

ವಿಷಯ : M/s Mysore Mercantile Co. Ltd. ಇವರ 4.00 ಮೆಗಾ ವ್ಯಾಟ್ ಸಾಮರ್ಥ್ಯದ ವರಾಹಿ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 8.00 ಮೆಗಾ ವ್ಯಾಟ್‌ಗೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಇಎನ್ 302 ಎನ್‌ಸಿಇ 2007, ದಿನಾಂಕ : 19-5-2009.

2. ಸರ್ಕಾರದ ತಿದ್ದುಪಡಿ ಸಂಖ್ಯೆ : ಇಎನ್ 302 ಎನ್‌ಸಿಇ 2007, ದಿನಾಂಕ : 16-9-2009.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ : ಕೆಆರ್‌ಇಡಿ/06/ಎಸ್‌ಹೆಚ್-313/ವರಾಹಿ/2010/06 ದಿನಾಂಕ : 29-12-2010/1-1-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ M/s Mysore Mercantile Co. Ltd. ಇವರಿಗೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹೊಸಗದ್ದೆ ಗ್ರಾಮದ ಬಳಿ ವರಾಹಿ ನದಿಗೆ ಅಡ್ಡವಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ವರಾಹಿ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ತಿದ್ದುಪಡಿ ಆದೇಶದಲ್ಲಿ "ಹೊಸಗದ್ದೆ ಗ್ರಾಮ" ಎಂಬುದರ ಬದಲಾಗಿ "ಹೊಸಗದ್ದೆ ಹತ್ತಿರ ಕುಳಂಜೆ ಗ್ರಾಮ" ಎಂದು ತಿದ್ದುಪಡಿ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರು ಸದರಿ ಯೋಜನೆ ಸ್ಥಳದಲ್ಲಿ ಲಭ್ಯವಿರುವ 7.5 ಮೀಟರ್ ಹೆಡ್‌ನ್ನು ಅಳವಡಿಸಿಕೊಂಡು ಹಾಗೂ 134 ಕ್ಯುಮೆಕ್ಸ್ ನೀರಿನ ಹರಿವನ್ನು ಉಪಯೋಗಿಸಿಕೊಂಡು ಸಾಮರ್ಥ್ಯವನ್ನು 4.00 ಮೆಗಾ ವ್ಯಾಟ್‌ನಿಂದ 8.00 ಮೆಗಾ ವ್ಯಾಟ್‌ಗೆ ಹೆಚ್ಚಿಸಬಹುದೆಂದು ಅಭಿವೃದ್ಧಿದಾರರ ಕೋರಿಕೆಯ ಮೇರೆಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರದ ಆದೇಶ ಸಂಖ್ಯೆ : ಇಎನ್ 10 ಎನ್‌ಸಿಇ 2011, ಬೆಂಗಳೂರು, ದಿನಾಂಕ : 18-1-2011.

M/s Mysore Mercantile Co. Ltd. ಇವರಿಗೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹೊಸಗದ್ದೆ ಹತ್ತಿರ ಕುಳಂಜೆ ಗ್ರಾಮದ ಬಳಿ ವರಾಹಿ ನದಿಗೆ ಅಡ್ಡಲಾಗಿ ಹಂಚಿಕೆ ಮಾಡಲಾದ 4.00 ಮೆಗಾ ವ್ಯಾಟ್ ಸಾಮರ್ಥ್ಯದ ವರಾಹಿ ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 8.00 ಮೆಗಾ ವ್ಯಾಟ್‌ಗೆ ಹೆಚ್ಚಿಸಲಾಗಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ.

ಪಿ. ಆರ್. 269

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಪೂರಕ ಸಿಬ್ಬಂದಿಗಳೊಂದಿಗೆ ಮುಂದುವರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 642 ಸಅಸೇ 2009, ದಿನಾಂಕ : 18-1-2010.

2. ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆನಾಸ 380 ಇಭತ 2010, ದಿನಾಂಕ : 1-1-2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾಗಿರುವ ದಿನಾಂಕ : 18-1-2010 ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹುದ್ದೆಯನ್ನು ಪೂರಕ ಸಿಬ್ಬಂದಿ ಹುದ್ದೆಗಳೊಂದಿಗೆ ದಿನಾಂಕ : 1-1-2010 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಮುಂದುವರೆಸಲಾಗಿತ್ತು. ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾಗಿರುವ ದಿನಾಂಕ : 1-1-2011 ರ ಅನಧಿಕೃತ ಟಿಪ್ಪಣಿಯಲ್ಲಿ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಈ ಹುದ್ದೆಗಳನ್ನು ದಿನಾಂಕ : 1-1-2011 ರಿಂದ ಜಾರಿಗೆ ಬರುವಂತೆ ಮುಂದುವರಿಸುವಂತೆ ಕೋರಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 17 ಸಅಸೇ 2011, ಬೆಂಗಳೂರು, ದಿನಾಂಕ : 13ನೇ ಜನವರಿ 2011.

ಕರ್ನಾಟಕ ಸರ್ಕಾರ ಸಚಿವಾಲಯದ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಪೂರಕ ಸಿಬ್ಬಂದಿ ಹುದ್ದೆಗಳೊಂದಿಗೆ ದಿನಾಂಕ : 1-1-2011 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಮುಂದುವರಿಸಲಾಗಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ : 10-7-1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಆರ್. ವಿಜಯಾನಂದ ಶರ್ಮಾ

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3).

ಪಿ. ಆರ್. 270

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಂ. ಎನ್. ದೇವರಾಜು, ಮಾಜಿ ಪಿ.ಸಿ. ಸಿ.ಎ.ಆರ್. ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ : 1) ಶಿಸ್ತು ಪ್ರಾಧಿಕಾರಿ ಹಾಗೂ ಉಪ ಆರಕ್ಷಕ ಆಯುಕ್ತರು, ಸಿ.ಎ.ಆರ್. ಉತ್ತರ, ಬೆಂಗಳೂರು ಇವರ ಆದೇಶ ಸಂಖ್ಯೆ: ಡಿಇ04/2005-06, (ಓ.ಬಿ. 06/2006-07) ದಿನಾಂಕ 24-5-2006.

2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಪರ ಪೊಲೀಸ್ ಕಮೀಷನರ್, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: 04/ಅಪೀಲು 2/2008, ದಿನಾಂಕ 10-10-2008.

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 16-02-2010

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು (2)91/2009-10, ದಿನಾಂಕ 22-06-2010.

ಪ್ರಸ್ತಾವನೆ :

ಶ್ರೀ ಎಂ. ಎನ್. ದೇವರಾಜು, ಇವರು ಸಿ.ಎ.ಆರ್. (ಉತ್ತರ) ಬೆಂಗಳೂರಿನಲ್ಲಿ ಪಿ.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅನಧಿಕೃತವಾಗಿ ಗೈರುಹಾಜರಾಗಿ ಕರ್ತವ್ಯಕ್ಕೆ ಬೇಜವಾಬ್ದಾರಿತನ, ನಿರ್ಲಕ್ಷತೆ ತೋರಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

1. ನೀವು ದಿನಾಂಕ 14-5-2005 ರಿಂದ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿರುತ್ತೀರಿ. ನೀವು ಕರ್ತವ್ಯಕ್ಕೆ ಹಾಜರಾಗದೆ ಗೈರುಹಾಜರಾತಿಯಲ್ಲಿ ಮುಂದುವರೆದ ಕಾರಣ ಗೈರುಹಾಜರಾತಿ ಅವಧಿಯು 21 ದಿನಗಳು ಮೀರಿದ್ದರಿಂದ ಡಿ.ಸಿ.ಪಿ. ಸಿ.ಎ.ಆರ್. (ಉತ್ತರ) ರವರ ಕಛೇರಿಯಿಂದ ನಿಮ್ಮನ್ನು "ನಾಪತ್ತೆ ಆಸಾಮಿ" ಎಂದು ಪರಿಗಣಿಸಲಾಗಿದ್ದು, ಕರ್ತವ್ಯಕ್ಕೆ ಹಿಂದಿರುಗುವಂತೆ ಸೂಚಿಸಿ ಹೊರಡಿಸಿದ್ದ ಸೂಚನಾಪತ್ರ ಸಂಖ್ಯೆ: ಗೈ:ಹಾ: 38/2005-06 ದಿನಾಂಕ 07-7-2005ನ್ನು ದಿನಾಂಕ 19-6-2005 ರಂದು ಸಹಿಮಾಡಿ ಸ್ವೀಕರಿಸಿದ್ದಾಗ್ಯೂ ಸಹ ಈವರೆವಿಗೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.
2. ನಿಮ್ಮನ್ನು ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿ ಡಿ.ಸಿ.ಪಿ. ಸಿ.ಎ.ಆರ್. (ಉತ್ತರ)ರವರ ಕಛೇರಿಯಿಂದ ಜಾರಿಗೊಳಿಸಲಾದ ಅಂತಿಮ ಜ್ಞಾಪನ ಸಂಖ್ಯೆ: 84/2005-06, ದಿನಾಂಕ 02-8-2005ರ ಪ್ರತಿಯನ್ನು ದಿನಾಂಕ 07-8-2005 ರಂದು ಸಹಿಮಾಡಿ ಸ್ವೀಕರಿಸಿದ್ದಾಗ್ಯೂ ಸಹ ಈವರೆವಿಗೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ ಅನಧಿಕೃತವಾಗಿ ಗೈರುಹಾಜರಾತಿಯಲ್ಲಿ ಮುಂದುವರೆಯುತ್ತಿದ್ದೀರಿ.
3. ನಿಮ್ಮನ್ನು ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿ ಡಿ.ಸಿ.ಪಿ. ಸಿ.ಎ.ಆರ್. (ಉತ್ತರ) ರವರ ಕಛೇರಿಯಿಂದ ಜಾರಿಗೊಳಿಸಲಾದ ಜ್ಞಾಪನ ಸಂಖ್ಯೆ 84/2005-06, ದಿನಾಂಕ 25-8-2005ರ ಪ್ರತಿಯನ್ನು ದಿನಾಂಕ 29-8-2005 ರಂದು ಸಹಿಮಾಡಿ ಸ್ವೀಕರಿಸಿದಾಗ್ಯೂ ಸಹ ಈವರೆವಿಗೂ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಅನಧಿಕೃತವಾಗಿ ಗೈರುಹಾಜರಾತಿಯಲ್ಲಿ ಮುಂದುವರೆಯುತ್ತಿದ್ದೀರಿ.
4. ಡಿ.ಸಿ.ಪಿ. ಸಿ.ಎ.ಆರ್. (ಉತ್ತರ) ರವರ ಕಛೇರಿಯಿಂದ ಜಾರಿಗೊಳಿಸಲಾದ ಜ್ಞಾಪನ ಸಂಖ್ಯೆ: 84/2005-06 ದಿನಾಂಕ 25-8-2005ರಲ್ಲಿ ಸೂಚಿಸಿರುವಂತೆ ನೀವು ಜ್ಞಾಪನ ಸ್ವೀಕರಿಸಿದ 07 ದಿನಗಳೊಳಗಾಗಿ ಅನಧಿಕೃತ ಗೈರುಹಾಜರಾತಿಗೆ ಸಂಬಂಧಿಸಿದಂತೆ ಸಕಾರಣವನ್ನು ನೀಡಿ ವಿವರಣೆಯೊಂದಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಲಾಗಿತ್ತು. ತಪ್ಪಿದ್ದಲ್ಲಿ ನಿಮ್ಮನ್ನು ಇಲಾಖೆಯಿಂದ ವಜಾಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದಾಗಿ ಜ್ಞಾಪನದಲ್ಲಿ ತಿಳಿಸಲಾಗಿತ್ತು ಆದರ ಸಹ ಈವರೆವಿಗೂ ಕರ್ತವ್ಯಕ್ಕೆ ಹಾಜರಾಗದೆ, ತಮ್ಮ ಗೈರು ಹಾಜರಾತಿಯ ಬಗ್ಗೆ ಹಾಗೂ ತಮ್ಮ ಇರುವಿಕೆಯ ಬಗ್ಗೆ ಕಛೇರಿಗೆ ಯಾವುದೇ ಮಾಹಿತಿಯನ್ನು ನೀಡಲು ವಿಫಲರಾಗಿರುತ್ತೀರಿ."

ಕರ್ತವ್ಯಕ್ಕೆ ಅನಧಿಕೃತವಾಗಿ ದೀರ್ಘಾವಧಿಯಾಗಿ ಗೈರುಹಾಜರಾಗುವ ಮೂಲಕ ಶಿಸ್ತಿನ ಇಲಾಖೆಯಲ್ಲಿರುವ ನೀವು ಕರ್ತವ್ಯದಲ್ಲಿ ಬೇಜವಾಬ್ದಾರಿತನ, ನಿರ್ಲಕ್ಷತೆ, ನಿಯಮ ಉಲ್ಲಂಘನೆ, ಉದಾಸೀನತೆ ಹಾಗೂ ಕರ್ತವ್ಯ ಲೋಪವನ್ನು ತೋರ್ಪಡಿಸಿರುವುದನ್ನು ಎತ್ತಿ ತೋರಿಸುತ್ತದೆ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಉಪ ಆರಕ್ಷಕ ಆಯುಕ್ತರು, ಸಿ.ಎ.ಆರ್. ಉತ್ತರ, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 24-5-2006ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ದಿನಾಂಕ 14-5-2005 ರಿಂದ 15-01-06 ರವರೆಗಿನ ಗೈರು ಹಾಜರಾದ ಅವಧಿಯನ್ನು ವೇತನ ರಹಿತ ರಜೆಯಿಂದ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಪರ ಪೊಲೀಸ್ ಆಯುಕ್ತರು, ಸಿ.ಎ.ಆರ್. ಉತ್ತರ, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 10-10-2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 42 ಪೊಸಿಅ 2010, ಬೆಂಗಳೂರು, ದಿನಾಂಕ: 14-01-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಂ. ಎನ್. ದೇವರಾಜು, ಸಿ.ಎ.ಆರ್. (ಉತ್ತರ) ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ. ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. ನಂ. 278

ಒಳಾಡಳಿತ ಸಚಿವಾಲಯ

ವಿಷಯ : ಕುಮಾರಿ ಗೌರವ್ವ ಎಸ್. ಗಡಕೇರಿ, ದ್ವಿ.ದ.ಸ. ರವರ ಪರಿವೀಕ್ಷಣಾ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ : ಪೊಲೀಸ್ ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ: ಸಿಬ್ಬಂದಿ-6/66/2009-10, ದಿನಾಂಕ 06-02-2010 ಮತ್ತು 08-10-2010.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ ಕುಮಾರಿ ಗೌರವ್ವ ಎಸ್. ಗಡಕೇರಿ, ದ್ವಿದಸ, ಡಿಪಿಓ, ಬೆಳಗಾವಿ ರವರು ದಿನಾಂಕ 24-10-2005 ರಂದು ಅನುಕಂಪದ ಆಧಾರದ ಮೇಲೆ ಸೇವೆಗೆ ಸೇರಿದ್ದು, 2 ವರ್ಷಗಳ ಪರಿವೀಕ್ಷಣಾ ಅವಧಿಯಲ್ಲಿ ನಿಗಧಿಪಡಿಸಿರುವ ಅಕೌಂಟ್ಸ್ ಲೋಯರ್, ಪೊಲೀಸ್ ಮ್ಯಾನ್ಯುಯಲ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುತ್ತಾರೆ. ಮತ್ತು ಅವರಿಗೆ ಕನ್ನಡ ಭಾಷಾ ಪರೀಕ್ಷೆಯನ್ನು ತೆಗೆದುಕೊಳ್ಳುವುದರಿಂದ ವಿನಾಯಿತಿ ನೀಡಲಾಗಿರುತ್ತದೆ. ಆದರೆ, ಅವರ 2007-08ನೇ ಸಾಲಿನ ರಹಸ್ಯ ವರದಿಗಳಲ್ಲಿ ಪ್ರತಿಕೂಲ ಷರಾಗಳು ಇದ್ದುದರಿಂದ ಅವರ ಪರಿವೀಕ್ಷಣಾ ಅವಧಿಯನ್ನು ಕ.ನಾ.ಸೇ. (ಪರಿವೀಕ್ಷಣಾ) ನಿಯಮಗಳು, 1977ರ ನಿಯಮ 4(2) ರನ್ವಯ ದಿನಾಂಕ 24-10-2007 ರಿಂದ 23-10-2008 ರವರೆಗೆ ವಿಸ್ತರಿಸಲಾಗಿದ್ದು, ಈ ಅವಧಿ ಪೂರ್ಣಗೊಳ್ಳುವ ಪೂರ್ವದಲ್ಲಿ ಅವರ ವಾರ್ಷಿಕ ಬಡ್ತಿಯನ್ನು ಮುಂಬರುವ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷಗಳ ಕಾಲ ಮುಂದೂಡುವ ಶಿಕ್ಷೆಯನ್ನು ವಿಧಿಸಲಾಗಿದೆ.

ಸದರಿಯವರ ಕಾರ್ಯನಿರ್ವಹಣಾ ವರದಿಯ ಅನುಸಾರ ಅವರ ಸೇವೆ ತೃಪ್ತಿಕರವಾಗಿಲ್ಲವೆಂದು ಕಂಡು ಬಂದಿದ್ದರೂ ಇತ್ತೀಚೆಗೆ ಅವರ ಕರ್ತವ್ಯ ನಿರ್ವಹಣೆಯಲ್ಲಿ ಸುಧಾರಣೆಯಾಗಿರುವುದೆಂದು ಎಸ್.ಪಿ. ಬೆಳಗಾವಿ ರವರು ವರದಿ ನೀಡಿರುವುದರಿಂದ ಹಾಗೂ ಅವರು ಅಂಗವಿಕಲರಾಗಿದ್ದು, ಕುಟುಂಬದ ಸದಸ್ಯರು ಅವರ ಮೇಲೆ ಅವಲಂಬಿತರಾಗಿರುವುದರಿಂದ ಅವರಿಗೆ ಮತ್ತೊಂದು ಅವಕಾಶವನ್ನು ಕೊಡುವುದು ಸೂಕ್ತವಾಗಿರುತ್ತದೆ ಎಂದು ಮತ್ತು ಸದರಿಯವರ ಪರಿವೀಕ್ಷಣಾ ಅವಧಿಯನ್ನು ಕ.ನಾ.ಸೇ. (ಪರಿವೀಕ್ಷಣಾ) ನಿಯಮಗಳು 1977 ರ ನಿಯಮ 4(1)(I)ರನ್ವಯ ದಿನಾಂಕ 24-10-2008 ರಿಂದ 23-10-2009 (ಶಿಕ್ಷಾ ಅವಧಿ ಪೂರ್ಣಗೊಳ್ಳುವ ಅವಧಿ) ರವರೆಗೆ ವಿಸ್ತರಿಸುವಂತೆ ಡಿಜಿ ಮತ್ತು ಐಜಿಪಿ ರವರ ಪತ್ರ ದಿನಾಂಕ 06-02-2010ರಲ್ಲಿ ಕೋರಲಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಒಇ 24 ಪೊಸಿಲಿ 2010, ಬೆಂಗಳೂರು, ದಿನಾಂಕ: 17-01-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಗಣಿಸಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರಿ) ನಿಯಮಾವಳಿಗಳು, 1977ರ ನಿಯಮ 4(1)(i) ರನ್ವಯ ಕುಮಾರಿ ಗೌರವ್ವ ಎಸ್. ಗಡಕೇರಿ, ದ್ವಿದಸ, ಡಿಪಿಓ, ಬೆಳಗಾವಿ ರವರ ಪರೀಕ್ಷಾರ್ಥ ಅವಧಿಯನ್ನು ದಿನಾಂಕ 24-10-2008 ರಿಂದ 23-10-2009 ರವರೆಗೆ ವಿಸ್ತರಿಸಿ ಸರ್ಕಾರವು ಆದೇಶಿಸಿದೆ.

ವಿಸ್ತರಿಸಿದ ಪರಿವೀಕ್ಷಣ ಅವಧಿಗೆ ಕ.ನಾ.ಸೇ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗದಿಪಡಿಸುವುದು. ಹೀಗೆ ನಿಗದಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ. ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. ನಂ. 279

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಆಂಜನೇಯ, ಪಿ.ಎಸ್.ಐ. (ಸೇವಾನಿರತ) ಇವರ ಪರಿವೀಕ್ಷಣಾ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ : ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ: 95/ಸಿಬ್ಬಂದಿ-1/2008-09, ದಿನಾಂಕ 06-10-2009.

***

ಪ್ರಸ್ತಾವನೆ :

ಶ್ರೀ ಆಂಜನೇಯ, ಪಿ.ಎಸ್.ಐ. (ಸೇವಾನಿರತ) ರವರು ಪೊಲೀಸ್ ಇಲಾಖೆಯಲ್ಲಿ ಸೇವಾನಿರತ ಪಿ.ಎಸ್.ಐ. ಆಗಿ ನೇಮಕಾತಿ ಹೊಂದಿ, ದಿನಾಂಕ 30-12-2001 ರಂದು ಕರ್ತವ್ಯಕ್ಕೆ ವರದಿ ಮಾಡಿರುತ್ತಾರೆ. ಇವರು 2½ ವರ್ಷಗಳ ಪರಿವೀಕ್ಷಣಾ ಅವಧಿಯನ್ನು ದಿನಾಂಕ 30-06-2004 ರಂದು ಪೂರ್ಣಗೊಳಿಸಿದರೂ ಸದರಿ ಅವಧಿಯಲ್ಲಿ ಇವರ ಸೇವೆಯು ಅತೃಪ್ತಿಕರವಾಗಿದ್ದರಿಂದ ಮತ್ತು ಅಕೌಂಟ್ಸ್ ಹೈಯರ್ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದೇ ಇದ್ದುದರಿಂದ ಇವರ ಪರಿವೀಕ್ಷಣಾ ಅವಧಿಯನ್ನು ನೇಮಕಾತಿ ಪ್ರಾಧಿಕಾರವಾದ ಐ.ಜಿ.ಪಿ. ಪಶ್ಚಿಮ ವಲಯ ಇವರು ದಿನಾಂಕ 01-07-2004 ರಿಂದ 30-09-2005 ರವರೆಗೆ 1 ವರ್ಷ 3 ತಿಂಗಳ ಕಾಲ ವಿಸ್ತರಿಸಿ ದಿನಾಂಕ 26-12-2008 ರಂದು ಆದೇಶ ಹೊರಡಿಸಿರುತ್ತಾರೆ. ಸದರಿ

ಪಿ.ಎಸ್.ಐ. ರವರು ಅಕೌಂಟ್ಸ್ ಹೈಯರ್ ಪರೀಕ್ಷೆಯಲ್ಲಿ ದಿನಾಂಕ 04-02-2009 ರಂದು ಉತ್ತೀರ್ಣರಾಗಿರುತ್ತಾರೆ ಎಂದು ಮೇಲೆ ಓದಲಾದ ಡಿ.ಜಿ.ಪಿ.ರವರ ಪತ್ರದಲ್ಲಿ ವಿಷಧಪಡಿಸಿರುತ್ತಾರೆ.

ಇವರ ವಿರುದ್ಧ ಕಾರವಾರ ಲೋಕಾಯುಕ್ತ ಠಾಣೆಯಲ್ಲಿ ಮೊ.ಸಂ. 01/2007 ಕಲಂ 7, 13(1)(ಡಿ) ಜೊತೆ 13(2) ಲಂಚ ನಿರೋಧ ಕಾಯ್ದೆ 1988 ರ ಅಡಿಯಲ್ಲಿ ಪ್ರಕರಣ ದಾಖಲಾಗಿ ವಿಚಾರಣೆಯಲ್ಲಿರುತ್ತದೆ. ಅಲ್ಲದೆ, ಸರ್ಕಾರದ ಆದೇಶ ಸಂಖ್ಯೆ: ಒಇ/225/ಪೊಸಇ/2008, ದಿನಾಂಕ 09-01-2009ರಲ್ಲಿ ಜಂಟಿ ಇಲಾಖಾ ವಿಚಾರಣೆಯಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

"ಶ್ರೀ ಚಂದ್ರಕಾಂತ ಕೃಷ್ಣಾನಾಯ್ಕ, ಸಿಹೆಚ್‌ಸಿ-341 ರವರನ್ನು ದೋಷಮುಕ್ತಗೊಳಿಸಲಾಗಿದೆ. ಮುಂದುವರಿದು ಶ್ರೀ ಎನ್. ಆಂಜನೇಯ, ಪಿ.ಎಸ್.ಐ. ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಇವರಿಗೆ ಕರ್ನಾಟಕ ಪೊಲೀಸ್ ಕಾಯ್ದೆ, 1963ರ ಕಲಂ 23(1)(ಬಿ)(i) ರನ್ವಯ ಇವರ ವೇತನವನ್ನು ಇವರ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ವೇತನ ಹಂತಕ್ಕೆ ಎರಡು ವರ್ಷಗಳ ಕಾಲ ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿಯುವ ದಂಡನೆಯ್ನು ವಿಧಿಸಿ ಆದೇಶಿಸಿದೆ."

ಮುಂದುವರೆದು ಸದರಿ ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರಿ) ನಿಯಮಗಳು, 1977ರ ನಿಯಮ 4 ಮತ್ತು 5 (1)ರನ್ವಯ ಅವರು ಹೊಂದಿರುವ ಪಿ.ಎಸ್.ಐ. ಹುದ್ದೆಯ ಕಾರ್ಯಭಾರವನ್ನು ನಿರ್ವಹಿಸಲು ಸಮರ್ಥರಾಗಿರುತ್ತಾರೆ ಎಂದು ಹಾಗೂ ಇವರ ಖಾಯಂ ಪೂರ್ವ ಅವಧಿಯನ್ನು ದಿನಾಂಕ 30-09-2005 ರಿಂದ 29-09-2010 ರವರೆಗೆ ಅಥವಾ ದಂಡನಾ ಆದೇಶವು ಜಾರಿಯಲ್ಲಿರುವವರೆಗೆ ಕೆ.ಸಿ.ಎಸ್. (ಪ್ರೊಬೇಷನ್) ನಿಯಮಾವಳಿ, 1977ರ ನಿಯಮ 4(1)(i) ರನ್ವಯ ವಿಸ್ತರಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ

ಸರ್ಕಾರಿ ಆದೇಶ ಸಂಖ್ಯೆ: ಒಇ 363 ಪೊಸಇ 2010, ಬೆಂಗಳೂರು, ದಿನಾಂಕ: 14-01-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರಿ) ನಿಯಮಾವಳಿಗಳು, 1977ರ ನಿಯಮ 4(1)(i) ರನ್ವಯ ಶ್ರೀ ಆಂಜನೇಯ, ಪಿ.ಎಸ್.ಐ. (ಸೇವಾನಿರತ), ರವರ ಪರಿವೀಕ್ಷಣಾ ಅವಧಿಯನ್ನು ದಿನಾಂಕ 30-09-2005 ರಿಂದ 31-12-2010 ರವರೆಗೆ ವಿಸ್ತರಿಸಿ ಸರ್ಕಾರವು ಆದೇಶಿಸಿದೆ.

ವಿಸ್ತರಿಸಿದ ಪರಿವೀಕ್ಷಣ ಅವಧಿಗೆ ಕ.ನಾ.ಸೇ (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನೆ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗಧಿಪಡಿಸುವುದು. ಹೀಗೆ ನಿಗಧಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ. ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. ನಂ. 280 ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಕಂದಾಯ ಸಚಿವಾಲಯ

ವಿಷಯ : ಶ್ರೀ ಜಿ. ಶಿವರಾಜ, ವಿಶೇಷ ತಹಶೀಲ್ದಾರ್, ನಿಡಗುಂದಿ, ಬಿಜಾಪುರ ಜಿಲ್ಲೆ (ಪ್ರಸ್ತುತ ನಿವೃತ್ತ) ಇವರ ವಿರುದ್ಧ ಶಿಸ್ತು ಕ್ರಮ ಕುರಿತು ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 06 ಎಟಿಎಸ್ 2003, ದಿನಾಂಕ 22-5-2003
2) ಸರ್ಕಾರದ ಆದೇಶ ಸಂಖ್ಯೆ: ಕಂಇ 39 ಎಡಿಇ 2003, ದಿನಾಂಕ 29-8-2003
3) ಜಿಲ್ಲಾಧಿಕಾರಿಗಳು, ವಿಜಾಪುರ ಜಿಲ್ಲೆ ಇವರ ಪತ್ರ ಸಂಖ್ಯೆ: ಕವಿ/ಸಿಬ್ಬಂದಿ/1/ವಿವ/167/2003-04, ದಿನಾಂಕ 28-1-2004.
4) ಸರ್ಕಾರದ ಆದೇಶ ಸಂಖ್ಯೆ: ಕಂಇ 39 ಎಡಿಇ 2003, ದಿನಾಂಕ 14-5-2004
5) ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ: ಕಂಇ 39 ಎಡಿಇ 2003,ದಿನಾಂಕ 12-10-2004
6) ಶ್ರೀ ಜಿ. ಶಿವರಾಜ, ವಿಶೇಷ ತಹಶೀಲ್ದಾರ್ ಇವರ ಲಿಖಿತ ಹೇಳಿಕೆ ದಿನಾಂಕ 15-2-2010
7) ಜಿಲ್ಲಾಧಿಕಾರಿಗಳು, ಬಿಜಾಪುರ ಇವರ ಪತ್ರ ಸಂಖ್ಯೆ: ಕವಿ/ಸಿಬ್ಬಂದಿ/1/ವಿವ/167/2003-04, ದಿನಾಂಕ 28-7-2010.

***

ಪ್ರಸ್ತಾವನೆ :

ಕಂದಾಯ ಇಲಾಖೆಯಲ್ಲಿ ನೇಮಕಾತಿ ನಿರೀಕ್ಷಣೆಯಲಿದ್ದ ಶ್ರೀ ಬಿ. ಶಿವರಾಜ್ ಇವರನ್ನು ಬಿಜಾಪುರ ಜಿಲ್ಲೆ ವಿಶೇಷ ತಹಶೀಲ್ದಾರ್, ನಿಡಗುಂದಿ ಇಲ್ಲಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಸರ್ಕಾರದ ಅಧಿಸೂಚನೆ ದಿನಾಂಕ 22-05-03ರಲ್ಲಿ ನೇಮಿಸಲಾಗಿತ್ತು. ಆದರೆ ಸದರಿ ಅಧಿಕಾರಿಗಳು ಸ್ಥಳನಿಯುಕ್ತಿಗೊಳಿಸಿ ನೇಮಿಸಲಾಗಿದ್ದ ಹುದ್ದೆಯಲ್ಲಿ ಸುಮಾರು ಮೂರು ತಿಂಗಳು ಕಳೆದರೂ ಸಹ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ ಹಾಗೂ ಅಂತಹ ಗೈರು ಹಾಜರಾತಿಗೆ ಸಕಾರಣಗಳನ್ನೊಳಗೊಂಡ ಯಾವುದೇ ಅರ್ಜಿಯನ್ನು ಸಲ್ಲಿಸದೇ ಅನಧಿಕೃತವಾಗಿ ಗೈರು ಹಾಜರಾಗಿ ಕರ್ತವ್ಯ ಲೋಪ ಎಸಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರಿಂದ 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳ ನಿಯಮ 3ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಅವರ ವಿರುದ್ಧ ಇಲಾಖಾ ವಿಚಾರಣೆ ಹೂಡುವುದನ್ನು ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರನ್ನು ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ದಿನಾಂಕ 29-8-2003ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಲ್ಲಿ ಬಿಜಾಪುರ ಜಿಲ್ಲಾಧಿಕಾರಿಗಳ ದಿನಾಂಕ 28-1-2004ರ ಪತ್ರದಲ್ಲಿ ಶ್ರೀ ಜಿ. ಶಿವರಾಜ, ವಿಶೇಷ ತಹಶೀಲ್ದಾರ್ ಇವರು ದಿನಾಂಕ 14-08-2003ರ ಅರ್ಜಿಯನ್ವಯ ಮತ್ತು ದಿನಾಂಕ 22-5-2003ರ ಅಧಿಸೂಚನೆ ಮೇರೆಗೆ ದಿನಾಂಕ 14-8-2003 ರಂದು ಪೂರ್ವಾಹ್ನ ವಿಶೇಷ ತಹಶೀಲ್ದಾರ್ ನಿಡಗುಂದಿಗೆ ಹಾಜರಾಗುತ್ತಿದ್ದು ಹಾಜರಾಗಲು ಅನುಮತಿ ನೀಡಲು ಕೋರಿದ್ದರು. ಅವರು ಜಿಲ್ಲಾಧಿಕಾರಿಗಳಿಗೆ ಭೇಟಿಯಾಗಿ ಹಾಜರಾತಿಗೆ ಅನುಮತಿ ಪಡೆದುಕೊಳ್ಳದೇ ಕೇವಲ ವರದಿ ಸಲ್ಲಿಸಿ ಹೋಗಿದ್ದಾರೆ. ಅವರು ಜಿಲ್ಲಾಧಿಕಾರಿಗಳನ್ನು ಕಂಡು ಅನುಮತಿ ಪಡೆದು

ಚಾರ್ಜ್ ತೆಗೆದುಕೊಂಡ ಬಗ್ಗೆ ಸಿಟಿಸಿಯನ್ನು ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕಾಗಿತ್ತು ಆದರೆ ಹಾಗೆ ಮಾಡಿರುವುದಿಲ್ಲ ಹಾಗೂ ಅವರು ಕರ್ತವ್ಯ ನಿರ್ವಹಿಸುತ್ತಿರುವುದೂ ಸಹ ತಿಳಿದು ಬಂದಿರುವುದಿಲ್ಲ ಅನಂತರ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 39 ಎಡಿಇ 2003 ದಿನಾಂಕ 29-8-2003 ರನ್ವಯ ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ. ಇದನ್ನು ಅರಿತು ಅವರು ಅಮಾನತ್ತು ಆದೇಶ ತಲುಪುವ ಮೊದಲೇ ದಿನಾಂಕ 14-8-2003 ರಂದು ವಿಶೇಷ ತಹಶೀಲ್ದಾರ್ ನಿಡಗುಂದಿ ಹುದ್ದೆಯ ಪ್ರಭಾರ ವಹಿಸಿಕೊಂಡಿರುವುದಾಗಿ ಸಿಟಿಸಿಯನ್ನು ರುಜು ಮಾಡಿ ಕಳುಹಿಸಿರುತ್ತಾರೆ. ಈ ಸಿಟಿಸಿಯ ಪ್ರತಿಯು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ದಿನಾಂಕ 10-9-2003 ರಂದು ಸ್ವೀಕೃತವಾಗಿರುತ್ತದೆ. ಅಂದರೆ ಅವರು ತಾವು ಈ ಮೊದಲೇ ಪ್ರಭಾರ ವಹಿಸಿಕೊಂಡಿರುವುದಾಗಿ ನಿರೂಪಿಸಲು ದಿನಾಂಕ 29-8-2003 ರಂದು ತಮ್ಮನ್ನು ಅಮಾನತ್ತಿನಲ್ಲಿದ್ದಾರೆಂಬ ವಿಷಯ ಗೊತ್ತಾಗಿ ಈ ತರಹ ಮಾಡಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಮುಂದುವರೆಯುತ್ತಾ ಅವರು ಈವರೆಗೂ ಜಿಲ್ಲಾಧಿಕಾರಿಗಳಿಗೆ ಭೇಟಿಯಾಗಿ ವಿಷಯವನ್ನು ಚರ್ಚಿಸದೇ ಇರುವುದರಿಂದ ತಹಶೀಲ್ದಾರ್ ಬಸವನ ಬಾಗೇವಾಡಿ ಇವರನ್ನು ವರದಿ ಕೇಳಲಾಗಿ ಅವರು ದಿನಾಂಕ 23-12-2003 ರಂದು ಸಲ್ಲಿಸಿರುವ ವರದಿಯಲ್ಲಿ ಅವರು ವಿಶೇಷ ತಹಶೀಲ್ದಾರ್, ನಿಡಗುಂದಿ ಇವರ ಕಛೇರಿ ಸ್ಥಾಪನೆ ಹಾಗೂ ಕಾರ್ಯದ ಬಗ್ಗೆ ತಮ್ಮೊಂದಿಗೆ ಚರ್ಚಿಸಿರುವುದಿಲ್ಲ ಹಾಗೂ ಭೇಟಿ ಸಹ ಆಗಿರುವುದಿಲ್ಲ ಮತ್ತು ಅವರು ಕರ್ತವ್ಯ ನಿರ್ವಹಿಸಿದ ಬಗ್ಗೆ ದಿನಚರಿಯನ್ನು ಸಹ ಸಲ್ಲಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಅಧಿಕಾರಿಯವರು ಈವತ್ತಿನವರೆಗೂ ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿರುವುದಿಲ್ಲ ಹಾಗೂ ಹಾಜರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ವರದಿ ಹಾಗೂ ದಿನಚರಿಯನ್ನು ಸಲ್ಲಿಸಿರುವುದಿಲ್ಲ ಮತ್ತು ಅವರು ಕಾರ್ಯಾಲಯಕ್ಕೆ ಹಾಜರಾಗಿ ಅವರ ವೇತನ ಬಗ್ಗೆ ಹಾಗೂ ಅಂತಿಮ ವೇತನ ಪಟ್ಟಿ ಬರುವ ಬಗ್ಗೆ ಹಾಗೂ ಸೇವಾ ಪುಸ್ತಕ ಕುರಿತು ಯಾವುದನ್ನು ವಿಚಾರಿಸಿರುವುದಿಲ್ಲ. ಮುಖ್ಯವಾಗಿ ಅವರು ಜಿಲ್ಲಾಧಿಕಾರಿಗಳಿಗೆ ಭೇಟಿಯಾಗಿ ಅವರು ಕಛೇರಿ ಸ್ಥಾಪನೆ ಹಾಗೂ ಕಾರ್ಯದ ಬಗ್ಗೆ ಬೇಕಾಗುವ ಅವಶ್ಯಕ ಸಾಮಗ್ರಿಗಳ ಹಾಗೂ ಸಿಬ್ಬಂದಿ ಕೊಡುವ ಕುರಿತು ಯಾವುದನ್ನು ಚರ್ಚಿಸಿರುವುದಿಲ್ಲ. ಕಾರ್ಯಾಲಯದಲ್ಲಿನ ಅಧಿಕಾರಿಗಳಿಗೂ ಸಹ ಭೇಟಿಯಾಗಿ ಸಲಹೆಗಳನ್ನು ಪಡೆದಿರುವುದಿಲ್ಲ ಇದರಿಂದಾಗಿ ಅವರು ಕರ್ತವ್ಯ ನಿರ್ವಹಿಸಿದ್ದಾರೆ ಅನ್ನುವ ಕುರಿತು ಯಾವುದೇ ಪೂರಕ ದಾಖಲೆಗಳು ಇರುವುದಿಲ್ಲ ಹಾಗೂ ನಿರ್ದಿಷ್ಟವಾಗಿ ಹೇಳಲು ಬರಲಾರದು. ಈ ಎಲ್ಲಾ ಅಂಶಗಳ ಮೇಲಿಂದ ಅವರು ವಿಶೇಷ ತಹಶೀಲ್ದಾರ್ ಅಂತಾ ಹಾಜರಾತಿಯನ್ನು ಪರಿಗಣಿಸಿರುವುದಿಲ್ಲ ಎಂಬ ಅಭಿಪ್ರಾಯ ಪಟ್ಟು ವರದಿ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಸರ್ಕಾರದ ದಿನಾಂಕ 14-5-2004ರ ಆದೇಶದಲ್ಲಿ 1957ರ ಕ.ನಾ.ಸೇ. (ವ.ನಿ&ಮೇ) ನಿಯಮಾವಳಿಗಳ ನಿಯಮ 10(5)(ಸಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಜಿ. ಶಿವರಾಜ್ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ತಕ್ಷಣದಿಂದಲೇ ಜಾರಿಗೆ ಬರುವಂತೆ ಅವರ ಅಮಾನತ್ತಿನ ಆದೇಶವನ್ನು ರದ್ದುಪಡಿಸಿ ಅವರನ್ನು ಮುಂದಿನ ಆದೇಶದವರೆಗೆ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ, ಕೃಷ್ಣಾ ಮೇಲ್ದಂಡೆ ಯೋಜನೆ, ಆಲಮಟ್ಟಿ ಕಛೇರಿಯಲ್ಲಿನ ವಿಶೇಷ ತಹಶೀಲ್ದಾರ್ ಹುದ್ದೆಗೆ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (5) ದಿನಾಂಕ 12-10-2004ರ ಸರ್ಕಾರದ ಕಾರಣ ಕೇಳುವ ನೋಟೀಸಿನೊಂದಿಗೆ ಶ್ರೀ ಜಿ. ಶಿವರಾಜ್ ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ದೋಷಾರೋಪಣಾ ಪಟ್ಟಿಯನ್ನು ದಿನಾಂಕ 12-10-2004 ರಂದು ಕಳುಹಿಸಲಾಗಿತ್ತು. ಆದರೆ ಈ ಅಧಿಕಾರಿಯ ವಿವರಗಳು ಇಲ್ಲದೇ ಇರುವುದರಿಂದ ಅವರಿಗೆ ದೋಷಾರೋಪಣಾ ಪಟ್ಟಿ ಜಾರಿಯಾಗಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. ಸದರಿ ಅಧಿಕಾರಿಯು ದಿನಾಂಕ 28-2-2006 ರಂದು ವೈಯೋ ನಿವೃತ್ತರಾಗಿದ್ದು ನಂತರ ಈ ಅಧಿಕಾರಿಯು ದಿನಾಂಕ 11-02-2010 ರಂದು ಸಚಿವಾಲಯಕ್ಕೆ ಹಾಜರಾಗಿ ದೋಷಾರೋಪಣಾ ಪಟ್ಟಿಯನ್ನು ಸ್ವೀಕರಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರಲ್ಲಿ ಶ್ರೀ ಜಿ. ಶಿವರಾಜ್, ನಿವೃತ್ತ ವಿಶೇಷ ತಹಶೀಲ್ದಾರ್‌ರವರು ದಿನಾಂಕ 15-2-2010 ರಂದು ಸರ್ಕಾರದ ಕಾರಣಕೇಳುವ ನೋಟೀಸಿಗೆ ತಮ್ಮ ಲಿಖಿತ ಉತ್ತರವನ್ನು ಸಲ್ಲಿಸಿರುತ್ತಾರೆ. ಸದರಿ ಲಿಖಿತ ಹೇಳಿಕೆಯಲ್ಲಿ ನೋಟೀಸಿನ ಅನುಬಂಧ 1 ರಿಂದ 4 ರವರೆಗಿನ ಅನುಬಂಧಗಳಲ್ಲಿನ ತಮ್ಮ ವಿರುದ್ಧದ ಆರೋಪಿಸಿದ ವಿಷಯಗಳು ನಿಶ್ಚಿತವಾಗಿ ಅಲ್ಲಗಳೆದು ಕಾರಣ ಕೇಳುವ ನೋಟೀಸನ್ನು ಸ್ಥಗಿತಗೊಳಿಸಬೇಕೆಂದು ಕೋರಿರುತ್ತಾರೆ.

ಸರ್ಕಾರದ ದಿನಾಂಕ 12-10-2004ರ ಕಾರಣ ಕೇಳುವ ನೋಟೀಸಿಗೆ ಶ್ರೀ ಜಿ. ಶಿವರಾಜ್, ನಿವೃತ್ತ ವಿಶೇಷ ತಹಶೀಲ್ದಾರ್ ರವರು ಸಲ್ಲಿಸಿರುವ ದಿನಾಂಕ 15-2-2010ರ ಲಿಖಿತ ಉತ್ತರದ ಪ್ರತಿಯನ್ನು ಬಿಜಾಪುರ ಜಿಲ್ಲಾಧಿಕಾರಿಗಳಿಗೆ ದಿನಾಂಕ 26-2-2010 ರಂದು ಕಳುಹಿಸಿ, ವಿಷಯದ ಬಗ್ಗೆ ತಮ್ಮ ಅಭಿಪ್ರಾಯ/ವರದಿ ಕಳುಹಿಸುವಂತೆ ಕೋರಲಾಗಿತ್ತು. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಬಿಜಾಪುರ ಜಿಲ್ಲಾಧಿಕಾರಿಗಳ ದಿನಾಂಕ 28-7-2010ರ ಪತ್ರದಲ್ಲಿ ಶ್ರೀ ಜಿ. ಶಿವರಾಜ್, ನಿವೃತ್ತ ವಿಶೇಷ ತಹಶೀಲ್ದಾರ್ ಇವರು ಜಿಲ್ಲಾಧಿಕಾರಿಗಳಿಗೆ ಭೇಟಿಯಾಗಿ ವಿಷಯವನ್ನು ಚರ್ಚಿಸದೇ ಇರುವುದರಿಂದ ತಹಶೀಲ್ದಾರ್, ಬಸವನಬಾಗೇವಾಡಿ ಇವರಿಗೆ ವರದಿ ಕೇಳಲಾಗಿ ಅವರು ದಿನಾಂಕ 23-2-2003ರಲ್ಲಿ ಸಲ್ಲಿಸಿದ ವರದಿಯಲ್ಲಿ ಸದರಿ ವಿಶೇಷ ತಹಶೀಲ್ದಾರರು ಅವರ ಕಛೇರಿ ಸ್ಥಾಪನೆ ಹಾಗೂ ಕಾರ್ಯದ ಬಗ್ಗೆ ಭೇಟಿಯಾಗಿ ಯಾವುದನ್ನು ಚರ್ಚಿಸಿರುವುದಿಲ್ಲ ಮತ್ತು ಅವರು ಕರ್ತವ್ಯ ನಿರ್ವಹಿಸಿದ ಬಗ್ಗೆ ದಿನಚರಿಯನ್ನು ಸಹ ಸಲ್ಲಿಸಿರುವುದಿಲ್ಲ ಎಂದು ತಿಳಿಸಿ ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಅವರು ವಿಶೇಷ ತಹಶೀಲ್ದಾರ್, ನಿಡಗುಂದಿ ಅಂತಾ ಕರ್ತವ್ಯ ನಿರ್ವಹಿಸಿದ್ದಾರೆ ಅನ್ನುವ ಕುರಿತು ಯಾವುದೇ ಪೂರಕ ದಾಖಲೆಗಳು ಇರದೇ ಇರುವುದರಿಂದ ಅವರ ಹಾಜರಾತಿಯನ್ನು ಪರಿಗಣಿಸಿರುವುದಿಲ್ಲ ಎಂದು ಅಭಿಪ್ರಾಯ ನೀಡಿ ವರದಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಅವರ ಸರ್ಕಾರದ ಕಾರಣ ಕೇಳುವ ನೋಟೀಸಿಗೆ ದಿನಾಂಕ 15-2-2010 ರಂದು ಸರ್ಕಾರಕ್ಕೆ ನೀಡಿರುವ ಲಿಖಿತ ಹೇಳಿಕೆಯನ್ನು ಒಪ್ಪಲಾಗುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

ಪ್ರಕರಣದ ವಿವರಗಳನ್ನು ಪರಿಶೀಲಿಸಲಾಗಿ ಶ್ರೀ ಜಿ. ಶಿವರಾಜ್, ನಿವೃತ್ತ ತಹಶೀಲ್ದಾರ್, ಇವರು ಈ ಹಿಂದೆ ಬಿಜಾಪುರ ಜಿಲ್ಲೆ ವಿಶೇಷ ತಹಶೀಲ್ದಾರ್, ನಿಡಗುಂದಿ ಇಲ್ಲಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 06 ಎಟಿಎಸ್ 03: ದಿನಾಂಕ 22-05-03ರಲ್ಲಿ ನೇಮಿಸಲಾಗಿತ್ತು. ಸದರಿ ಅಧಿಕಾರಿಗಳು ದಿನಾಂಕ 14-08-03 ರಂದು ವಿಶೇಷ ತಹಶೀಲ್ದಾರ್, ನಿಡಗುಂದಿ ಇಲ್ಲಿಗೆ ಹಾಜರಾಗುತ್ತಿದ್ದು ಅನುಮತಿ ನೀಡುವಂತೆ ಅರ್ಜಿ ಸಲ್ಲಿಸಿ ಜಿಲ್ಲಾಧಿಕಾರಿಗಳ ಅನುಮತಿ ಪಡೆದುಕೊಳ್ಳದೆ, ಕೇವಲ ವರದಿ ಸಲ್ಲಿಸಿ ಹೋಗಿದ್ದಾರೆಂದು ಹಾಗೂ ಸದರಿ ಹುದ್ದೆಯ ಚಾರ್ಜ್ ತೆಗೆದುಕೊಂಡ ಬಗ್ಗೆ ಸಿ.ಟಿ.ಸಿ.ಯನ್ನು ಸಲ್ಲಿಸದೆ ಇರುವುದರಿಂದ, ಅವರು ಕರ್ತವ್ಯ ನಿರ್ವಹಿಸಿರುವ ಬಗ್ಗೆ ಅನುಮಾನ ಉಂಟಾಗಿದೆಯೆಂದು ಸರ್ಕಾರಕ್ಕೆ ವರದಿ ಸಲ್ಲಿಸಿದರ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 39 ಎಡಿಇ 03 ದಿನಾಂಕ 29-08-03 ರಂದು ಅವರನ್ನು ಅಮಾನತ್ತುಗೊಳಿಸಲಾಗಿದೆ. ಈ ಅಮಾನತ್ತು ಆದೇಶ ಅವರಿಗೆ ತಲುಪುವ ಮೊದಲೇ ದಿನಾಂಕ 14-08-03 ರಂದು ವಿಶೇಷ ತಹಶೀಲ್ದಾರ್, ನಿಡಗುಂದಿ ಅಂತಾ ಪ್ರಭಾರವಹಿಸಿಕೊಂಡಿರುವುದಾಗಿ ಸಿ.ಟಿ.ಸಿ.ಯನ್ನು ರುಜು ಮಾಡಿ ಕಳುಹಿಸಿರುತ್ತಾರೆ. ಈ ಸಿ.ಟಿ.ಸಿ.ಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ದಿನಾಂಕ 10-09-03 ರಂದು ಸ್ವೀಕೃತವಾಗಿದ್ದು ಇವರು ತಾವು

ಮೊದಲೇ ಪ್ರಭಾರವಹಿಸಿಕೊಂಡಿರುವುದಾಗಿ ನಿರೂಪಿಸಲು ದಿನಾಂಕ 29-08-03 ರಂದು ತಮ್ಮನ್ನು ಅಮಾನತ್ತಿನಲ್ಲಿ ಇಟ್ಟಿದ್ದಾರೆ ಎಂಬ ವಿಷಯ ಗೊತ್ತಾಗಿ ಈ ರೀತಿ ಮಾಡಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದರು.

ಈ ಮೇಲಿನ ಜಿಲ್ಲಾಧಿಕಾರಿಗಳ ವರದಿ ಆಧಾರದ ಮೇಲೆ ಶ್ರೀ ಜಿ. ಶಿವರಾಜ್, ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ದೋಷಾರೋಪಣಾ ಪಟ್ಟಿಯನ್ನು ದಿನಾಂಕ 12-10-04 ರಂದು ಕಳುಹಿಸಲಾಗಿತ್ತು. ಆದರೆ ಈ ಅಧಿಕಾರಿಯ ವಿವರಗಳು ಇಲ್ಲದೇ ಇರುವುದರಿಂದ ಅವರಿಗೆ ದೋಷಾರೋಪಣಾ ಪಟ್ಟಿ ಜಾರಿಯಾಗಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ. ನಂತರ ಈ ಅಧಿಕಾರಿಗೆ ದಿನಾಂಕ 11-02-2010 ರಂದು ಸಚಿವಾಲಯಕ್ಕೆ ಹಾಜರಾಗಿ ದೋಷಾರೋಪಣ ಪಟ್ಟಿಯನ್ನು ಸ್ವೀಕರಿಸಿರುವುದು ದಾಖಲೆಯಿಂದ ಕಂಡುಬರುತ್ತದೆ. ಪ್ರಕರಣದ ವಿವರಗಳನ್ನು ಪರಿಶೀಲಿಸಲಾಗಿ ಶ್ರೀ ಜಿ. ಶಿವರಾಜ್ ಇವರನ್ನು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 39 ಎಡಿಇ 03 ದಿನಾಂಕ 14-05-2004 ರಂದು ಇವರ ಅಮಾನತ್ತನ್ನು ತೆರವು ಗೊಳಿಸಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ ಕೃಷ್ಣಾ ಮೇಲ್ದಂಡೆ ಯೋಜನೆ ಆಲಮಟ್ಟಿ ಇಲ್ಲಿಗೆ ನೇಮಿಸಲಾಗಿದೆ. ಅದರಂತೆ, ಸದರಿ ಅಧಿಕಾರಿಯು ದಿನಾಂಕ 20-05-2004 ರಂದು ಕರ್ತವ್ಯಕ್ಕೆ ಹಾಜರಾಗಿರುವುದು ಸಿ.ಟಿ.ಸಿ. ಯಿಂದ ತಿಳಿದುಬರುತ್ತದೆ. ನಂತರ ಇವರು ದಿನಾಂಕ 28-02-2006 ರಂದು ವಯೋ ನಿವೃತ್ತಿ ಹೊಂದಿರುತ್ತಾರೆ. ಶ್ರೀ ಜಿ. ಶಿವರಾಜ್ ಇವರು ದೋಷಾರೊಪಣಾ ಪಟ್ಟಿಗೆ ವಿವರಣೆ ಸಲ್ಲಿಸಿ, ತಾವು ನಿಡಗುಂದಿ ತಹಶೀಲ್ದಾರ್ ಹುದ್ದೆಯಲ್ಲಿ ದಿನಾಂಕ 14-08-2003ರಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹಾಜರಾಗಲಾಯಿತೆಂದು ತಿಳಿಸಿ, ಅವರ ವಿರುದ್ಧದ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ. ಸದರಿಯವರ ಹೇಳಿಕೆ ಬಗ್ಗೆ ಬಿಜಾಪುರ ಜಿಲ್ಲಾಧಿಕಾರಿಗಳಿಂದ ಅಭಿಪ್ರಾಯ ಪಡೆದಿದ್ದು, ಸದರಿ ಅಧಿಕಾರಿಯ ಹೇಳಿಕೆಯನ್ನು ಒಪ್ಪಲಾಗುವುದಿಲ್ಲವೆಂದು ಜಿಲ್ಲಾಧಿಕಾರಿಗಳು ಅಭಿಪ್ರಾಯ ನೀಡಿರುತ್ತಾರೆ.

ಶ್ರೀ ಜಿ. ಶಿವರಾಜ್ ಇವರಿಗೆ ದಿನಾಂಕ 22-05-03 ರಂದು ವಿಶೇಷ ತಹಶೀಲ್ದಾರ್, ನಿಡಗುಂದಿ ಬಿಜಾಪುರ ಜಿಲ್ಲೆ ಇಲ್ಲಿಗೆ ಸ್ಥಳನಿಯುಕ್ತಿಗೊಳಿಸಿದ್ದರು ಹಾಜರಾಗಿರುವುದಿಲ್ಲ ಇವರು ಕರ್ತವ್ಯಕ್ಕೆ ಹಾಜರಾಗದ ಕಾರಣದಿಂದ ಸರ್ಕಾರದಲ್ಲಿ ಅಮಾನತ್ತುಗೊಳಿಸುವ ಕ್ರಮ ಜರುಗುತ್ತಿರುವುದನ್ನು ತಿಳಿದುಕೊಂಡು ದಿನಾಂಕ 14-08-2003ರಂದು ಹಾಜರಾಗುತ್ತಿರುವುದಾಗಿ ಹಿಂದಿನ ದಿನಾಂಕ ನಮೂದಿಸಿ ದಿನಾಂಕ 10-09-2003ರಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಇವರ ಮನವಿ ಸ್ವೀಕೃತ ವಾಗಿರುವುದೇ ಇವರ ಗೈರು ಹಾಜರಿಯನ್ನು ದೃಢಪಡಿಸುತ್ತದೆ. ಅಷ್ಟೊತ್ತಿಗಾಗಲೇ ಸದರಿ ಅಧಿಕಾರಿಯನ್ನು ಸರ್ಕಾರವು ದಿನಾಂಕ 29-08-2003 ರಂದು ಅಮಾನತ್ತುಗೊಳಿಸಿರುತ್ತದೆ. ಸ್ಥಳನಿಯುಕ್ತಿಗೊಳಿಸಿದ ಕಛೇರಿಯಲಿ ಹಾಜರಾಗಿ ಕಾರ್ಯನಿರ್ವಹಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಗೂ ಸಾಕ್ಷಿಗಳನ್ನು ಒದಗಿಸಿರುವುದಿಲ್ಲ ಹಾಗೂ ತಹಶೀಲ್ದಾರ್, ಬಸವನಬಾಗೇವಾಡಿ ಇವರು ನಿಡಗುಂದಿ ವಿಶೇಷ ತಹಶೀಲ್ದಾರ್ ಕಛೇರಿ ಸ್ಥಾಪನೆ ಹಾಗೂ ಸಿಬ್ಬಂದಿಯ ಬಗ್ಗೆ ಚರ್ಚಿಸಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಶ್ರೀ ಜಿ. ಶಿವರಾಜ್, ನಿವೃತ್ತ ವಿಶೇಷ ತಹಶೀಲ್ದಾರ್ ಇವರು ದಿನಾಂಕ 22-05-2003 ರಿಂದ ದಿನಾಂಕ 20-05-2004ರವರೆಗೆ ಅನಧಿಕೃತವಾಗಿ ಗೈರು ಹಾಜರಾಗಿರುವುದು ದೃಢಪಟ್ಟಿರುತ್ತದೆ. ಅಧಿಕಾರಿಯು ದಿನಾಂಕ 28-02-2006ರಲ್ಲಿ ವಯೋ ನಿವೃತ್ತಿ ಹೊಂದಿರುವುದರಿಂದ ಸಿಸಿಎ ನಿಯಮ 12 ರನ್ವಯ ಶಿಸ್ತು ಪ್ರಾಧಿಕಾರವು ಆಪಾದಿತ ಅಧಿಕಾರಿ ಸಲ್ಲಿಸಿದ ಹೇಳಿಕೆಯ ಮೇಲೆ Minor Penalty ವಿಧಿಸಲು ಅವಕಾಶವಿರುತ್ತದೆ. ಈ ನಿಯಮದಂತೆ ಆಪಾದಿತ ಅಧಿಕಾರಿಗೆ ದೋಷಾರೊಪಣಾಪಟ್ಟಿ ಜಾರಿ ಮಾಡಿ ಅವರ ಹೇಳಿಕೆ ಪಡೆಯಲಾಗಿದೆ. ಸದರಿ ಅಧಿಕಾರಿಯು ಸ್ಥಳನಿಯುಕ್ತಿಗೊಳಿಸಿದ ಸ್ಥಳದಲ್ಲಿ ಹಾಜರಾಗದೆ ಅನಧಿಕೃತ ಗೈರು ಹಾಜರಾಗಿರುವುದು ಜಿಲ್ಲಾಧಿಕಾರಿಗಳ ವರದಿಯಿಂದ ದೃಢಪಟ್ಟಿರುವುದರಿಂದ ಇವರ ದಿನಾಂಕ 22-05-2003 ರಿಂದ ದಿನಾಂಕ 20-05-2004 ರವರೆಗಿನ ಅವಧಿಯನ್ನು ಕೆ.ಸಿ.ಎಸ್.ಆರ್. ನಿಯಮ 106-ಎ ರನ್ವಯ ಗೈರು ಹಾಜರಿಯೆಂದು ಪರಿಗಣಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರಿ ಆದೇಶ ಸಂಖ್ಯೆ: ಕಂಇ 39 ಎಡಿಇ 2003, ಬೆಂಗಳೂರು, ದಿನಾಂಕ 4-01-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಜಿ. ಶಿವರಾಜ್, ನಿವೃತ್ತ ವಿಶೇಷ ತಹಶೀಲ್ದಾರ್ ರವರು ಸ್ಥಳನಿಯುಕ್ತಿಗೊಳಿಸಿದ ಸ್ಥಳದಲ್ಲಿ ಹಾಜರಾಗದೆ ಅನಧಿಕೃತ ಗೈರು ಹಾಜರಾಗಿರುವುದು ಜಿಲ್ಲಾಧಿಕಾರಿಗಳ ವರದಿಯಿಂದ ದೃಢಪಟ್ಟಿರುವುದರಿಂದ ಇವರು ದಿನಾಂಕ 22-05-2003 ರಿಂದ ದಿನಾಂಕ 20-05-2004 ರವರೆಗಿನ ಅವಧಿಯನ್ನು ಕೆ.ಸಿ.ಎಸ್.ಆರ್. ನಿಯಮ 106-ಎ ರನ್ವಯ ಗೈರುಹಾಜರಿಯೆಂದು ಪರಿಗಣಿಸಿ ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಬಿ ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. ನಂ. 281

ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಬೆಳಗಾವಿ ರಿ.ಸ.ನಂ. 1393 ಬ ನೇದ್ದಕ್ಕೆ ಸಂಬಂಧಿಸಿದಂತೆ, ಕಾನೂನು ವಿರುದ್ಧವಾಗಿ ಹಕ್ಕು ದಾಖಲೆ ಸಂಖ್ಯೆ: 3994 ನ್ನು ಮಂಜೂರು ಮಾಡಿದ ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸುವ ಕುರಿತು-ಆದೇಶ.

ಓದಲಾಗಿದೆ :

1) ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಪ್ರಸ್ತಾವನೆ ಸಂಖ್ಯೆ: ಕಂಶಾ/ಸಿಬ್ಬಂದಿ-1/ವಿವ/88/05-06, ದಿನಾಂಕ 21-1-2006
2) ಸರ್ಕಾರದ ಕಾರಣಕೇಳುವ ನೋಟೀಸು ಸಂಖ್ಯೆ: ಕಂಇ 07 ಎಡಿಇ 2006, ದಿನಾಂಕ 8-5-2007
3) ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ: ಕಂಇ 07 ಎಡಿಇ 2006, ದಿನಾಂಕ 12-3-2010.
4) ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ: ಕಂಇ 07 ಎಡಿಇ 2006, ದಿನಾಂಕ 12-3-2010
5) ಶ್ರೀ ಬಿ. ಆರ್. ಪಾಟೀಲ, ಶಿರಸ್ತೇದಾರ್ ಇವರ ಲಿಖಿತ ಹೇಳಿಕೆ ದಿನಾಂಕ 31-5-2010
6) ಶ್ರೀ ಅಶೋಕ್ ಪತ್ತಾರ್, ದ್ವಿ.ದ.ಸ. ಇವರ ಲಿಖಿತ ಹೇಳಿಕೆ ದಿನಾಂಕ 23-6-2010
7) ಶ್ರೀ ವಿ. ಪಿ. ಕಾಂಬಳೆ, ನಿವೃತ್ತ ತಹಶೀಲ್ದಾರ್ ಇವರ ಲಿಖಿತ ಹೇಳಿಕೆ ದಿನಾಂಕ 16-8-2010

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರಲ್ಲಿ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರ ದಿನಾಂಕ 21-1-2006ರ ಪ್ರಸ್ತಾವನೆಯಲ್ಲಿ, ಬೆಳಗಾವಿಯ ಮಾನ್ಯ ಪ್ರಿನ್ಸಿಪಲ್ ಸಿವಿಲ್ ಜಡ್ಜ್ (ಜೂನಿಯರ್ ಡಿವಿಜನ್) ಇವರ ನ್ಯಾಯಾಲಯದ ಅಪೀಲು ದಾವೆ ಸಂಖ್ಯೆ: 392/99 ರಡಿ ದಿನಾಂಕ 31-1-2000 ರಂದು ನೀಡಲಾದ ತೀರ್ಪನ್ನು ದುರುಪಯೋಗ ಪಡಿಸಿಕೊಂಡು ರಿ.ಸ.ನಂ. 1393 ಬ ನೇದ್ದರಲ್ಲಿ ಸರ್ಕಾರದ ಹೆಸರನ್ನು ಕಡಿಮೆ ಮಾಡಿ ಕಾನೂನು ವಿರುದ್ಧವಾಗಿ ಖಾಸಗಿ ವ್ಯಕ್ತಿ ಶ್ರೀಮತಿ ಯಲ್ಲೂಬಾಯಿ ಜಾಧವ ಲೊಂಡೆ ಇವರ ಹೆಸರನ್ನು ಕಂದಾಯ ದಾಖಲೆಗಳಲ್ಲಿ ದಾಖಲಿಸಲು ಈ ಕೆಳಗೆ ಕಾಣಿಸಿದ ಸಿಬ್ಬಂದಿಯು ಕಾರಣರಾಗಿರುತ್ತಾರೆ.

1) ಶ್ರೀ ಎನ್. ಎಂ. ಶಿರಹಟ್ಟಿ, ಹಿಂದಿನ ತಹಶೀಲ್ದಾರ್, ಬೆಳಗಾವಿ (ನಿವೃತ್ತ)
2) ಶ್ರೀ ವಿ. ಪಿ. ಕಾಂಬಳೆ, ಹಿಂದಿನ ತಹಶೀಲ್ದಾರ್, ಬೆಳಗಾವಿ
3) ಶ್ರೀ ಬಿ. ಆರ್. ಪಾಟೀಲ, ಹಿಂದಿನ ಶಿರಸ್ತೇದಾರ್, ತಹಶೀಲ್ದಾರ್ ಕಛೇರಿ, ಬೆಳಗಾವಿ
4) ಶ್ರೀ ಎ. ಎಸ್. ಪತ್ತಾರ್, ಹಿಂದಿನ ದ್ವಿ.ದ.ಸ. ತಹಶೀಲ್ದಾರ್ ಕಛೇರಿ, ಬೆಳಗಾವಿ

ಮೇಲ್ಕಂಡ ಸಿಬ್ಬಂದಿಗಳು ಅನಧಿಕೃತವಾಗಿ ಹಕ್ಕು ದಾಖಲೆ ಸಂಖ್ಯೆ: 3934ನ್ನು ಮಂಜೂರು ಮಾಡಿ ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ನಡೆದುಕೊಂಡು ಕ.ನಾ.ಸೇ. (ನಡತೆಗಳೂ) ನಿಯಮ 3(i)(ii)(iii) ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ದೃಢಪಡುತ್ತದೆ. ಈ ಪ್ರಕರಣದಲ್ಲಿ ಒಟ್ಟು ನಾಲ್ಕು ಜನ ಸಿಬ್ಬಂದಿ ಸಮಾವೇಶಗೊಂಡಿದ್ದು ಅದರಲ್ಲಿ ಇಬ್ಬರು ಪತ್ರಾಂಕಿತ ಅಧಿಕಾರಿಗಳಿದ್ದು ಅದರಲ್ಲಿ ಒಬ್ಬರು ಸೇವಾ ನಿವೃತ್ತರಾಗಿರುತ್ತಾರೆ. ಪತ್ರಾಂಕಿತ ಅಧಿಕಾರಿಗಳ ಹಾಗೂ ನಿವೃತ್ತ ಸಿಬ್ಬಂದಿಯ ವಿಷಯದಲ್ಲಿ ಶಿಸ್ತು ಕ್ರಮ ಜರುಗಿಸುವ ಅಧಿಕಾರ ಸರ್ಕಾರಕ್ಕೆ ಇರುವುದರಿಂದ ಈ ಎಲ್ಲಾ ಸಂಬಂಧಿಸಿದವರ ವಿರುದ್ಧ ಕ.ನಾ.ಸೇ (ವ.ನಿ ಮತ್ತು ಮೇ) ನಿಯಮಗಳು, 1957ರ ನಿಯಮ 11ರ ಮೇರೆಗೆ ಆಪಾದನಾ ಪಟ್ಟಿ ಅನುಬಂಧ-1 ರಿಂದ 4ನ್ನು ತಯಾರಿಸಿ ಸಂಬಂಧಿಸಿದ ದಾಖಲೆಗಳನ್ನು ಲಗತ್ತಿಸಿ, ಆರೋಪಿತ ಸಿಬ್ಬಂದಿಯ ವಿರುದ್ಧ ಕ.ನಾ.ಸೇ (ವ.ನಿ ಮತ್ತು ಮೇ) ನಿಯಮಗಳು, 1957ರ ನಿಯಮ 13ರಡಿಯಲ್ಲಿ ಜಂಟಿ ಇಲಾಖಾ ತನಿಖೆ ಜರುಗಿಸಿ ತಪ್ಪಿತಸ್ಥ ಸಿಬ್ಬಂದಿಯ ವಿರುದ್ಧ ಸೂಕ್ತ ಶಿಸ್ತು ಕ್ರಮ ಜರುಗಿಸುವಂತೆ ಕೋರುತ್ತಾ ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳು ಸಲ್ಲಿಸಿರುವ ದೋಷಾರೋಪಣಾ ಪಟ್ಟಿಗಳು ಸ್ಪಷ್ಟವಾಗಿಲ್ಲದೇ ಇದ್ದುದರಿಂದ ಅವುಗಳನ್ನು ಪರಿಶೀಲಿಸಿ ಪರಿಷ್ಕೃತ ದೋಷಾರೋಪಣಾ ಪಟ್ಟಿಗಳನ್ನು ಮತ್ತು ಇನ್ನಿತರ ಮಾಹಿತಿಗಳನ್ನು ಸರ್ಕಾರಕ್ಕೆ ಕಳುಹಿಸುವಂತೆ ದಿನಾಂಕ 22-4-2006ರ ಪತ್ರದಲ್ಲಿ ಜಿಲ್ಲಾಧಿಕಾರಿಗಳನ್ನು ಕೋರಲಾಗಿತ್ತು. ಅದರಂತೆ ಜಿಲ್ಲಾಧಿಕಾರಿಗಳು ತಮ್ಮ ದಿನಾಂಕ 26-10-2006 ರ ಪತ್ರದೊಂದಿಗೆ ಸರ್ಕಾರವು ಕೋರಿರುವ ಮಾಹಿತಿ ಮತ್ತು ಪರಿಷ್ಕೃತ ದೋಷಾರೋಪಣಾ ಪಟ್ಟಿಗಳನ್ನು ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ, ಅನುಬಂಧ-3ರಲ್ಲಿಯ ದಾಖಲೆಗಳನ್ನು ದೃಢೀಕರಿಸಿ, ದೋಷಾರೋಪಣೆ ಪಟ್ಟಿಗಳನ್ನು ದಿನಾಂಕ 12-12-2006 ರಂದು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸರ್ಕಾರವು ದಿನಾಂಕ 8-5-2007 ರಂದು ಶ್ರೀ ವಿ. ಪಿ. ಕಾಂಬಳೆ, ನಿವೃತ್ತ, ತಹಶೀಲ್ದಾರ್, ಖಾನಾಪುರ ಇವರಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ಜಿಲ್ಲಾಧಿಕಾರಿಗಳು ಕಳುಹಿಸಿರುವ ದೋಷಾರೋಪಣಾ ಪಟ್ಟಿಯ ಅನುಬಂಧ 1 ರಿಂದ 4 ಗಳನ್ನು ಜಾರಿಗೊಳಿಸಿ, ಸದರಿ ನೋಟೀಸು ಸ್ವೀಕರಿಸಿದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಗಳನ್ನು ಸಲ್ಲಿಸುವಂತೆ ತಪ್ಪಿದಲ್ಲಿ ನಿಮ್ಮ ಪ್ರತಿವಾದವೇನೂ ಇಲ್ಲವೆಂದು ಭಾವಿಸಿ, ಕ.ನಾ.ಸೇ. (ವ.ನಿ ಮತ್ತು ಮೇ) ನಿಯಮ 1957ರ ನಿಯಮ 11ನೇ ಮೇರೆಗೆ ಅವರ ಮೇಲೆ ಏಕಪಕ್ಷೀಯವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಲ್ಲಿ ಸರ್ಕಾರವು ದಿನಾಂಕ 12-3-2010ರಂದು, ಶ್ರೀ ಬಿ. ಆರ್. ಪಾಟೀಲ್, ಶಿರಸ್ತೇದಾರ್, ಉಪ ವಿಭಾಗಾಧಿಕಾರಿಗಳ ಕಛೇರಿ, ಬೆಳಗಾಂ ಜಿಲ್ಲೆ ಇವರಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ಜಿಲ್ಲಾಧಿಕಾರಿಗಳು ಕಳುಹಿಸಿರುವ ದೋಷಾರೋಪಣೆ ಪಟ್ಟಿಯ ಅನುಬಂಧ-1 ರಿಂದ 4 ಗಳನ್ನು ಜಾರಿಗೊಳಿಸಿ, ಸದರಿ ನೋಟೀಸು ಸ್ವೀಕರಿಸಿದ 15 ದಿನಗಳೊಳಗೆ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ತಪ್ಪಿದಲ್ಲಿ ನಿಮ್ಮ ಪ್ರತಿವಾದವೇನೂ ಇಲ್ಲವೆಂದು ಭಾವಿಸಿ, ಕ.ನಾ.ಸೇ (ವ.ನಿ ಮತ್ತು ಮೇ) ನಿಯಮ 1957ರ ನಿಯಮ 11ನೇ ಮೇರೆಗೆ ಅವರ ಮೇಲೆ ಏಕಪಕ್ಷೀಯವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗಿರುವುದು ಎಂದು ತಿಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (4)ರಲ್ಲಿ ಸರ್ಕಾರವು ದಿನಾಂಕ 12-3-2010 ರಂದು ಶ್ರೀ ಅಶೋಕ್ ಪತ್ತಾರ್, ದ್ವಿತೀಯ ದರ್ಜೆ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಬೆಳಗಾಂ ಇವರಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ಜಿಲ್ಲಾಧಿಕಾರಿಗಳು ಕಳುಹಿಸಿರುವ ದೋಷಾರೋಪಣೆ ಪಟ್ಟಿಯ ಅನುಬಂಧ 1 ರಿಂದ 4 ಗಳನ್ನು ಜಾರಿಗೊಳಿಸಿ, ಸದರಿ ನೋಟೀಸು ಸ್ವೀಕರಿಸಿದ 15 ದಿನಗಳೊಳಗೆ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ತಪ್ಪಿದಲ್ಲಿ ನಿಮ್ಮ ಪ್ರತಿವಾದವೇನೂ ಇಲ್ಲವೆಂದು ಭಾವಿಸಿ, ಕ.ನಾ.ಸೇ. (ವ.ನಿ. ಮತ್ತು ಮೇ) ನಿಯಮ 1957ರ ನಿಯಮ 11ನೇ ಮೇರೆಗೆ ಅವರ ಮೇಲೆ ಏಕಪಕ್ಷೀಯವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿರುತ್ತದೆ.

ಸರ್ಕಾರದ ಕಾರಣಕೇಳುವ ನೋಟೀಸಿಗೆ ಶ್ರೀ ಬಿ. ಆರ್. ಪಾಟೀಲ, ಶಿರಸ್ತೇದಾರ್ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: (5) ದಿನಾಂಕ 31-5-2010ರ ಲಿಖಿತ ಹೇಳಿಕೆಯಲ್ಲಿ, ತಮ್ಮ ವಿರುದ್ಧದ 4 ಆಪಾದನೆಗಳನ್ನು ಅಲ್ಲಗಳೆದು, ಆಪಾದನೆಗಳನ್ನು ದಯಮಾಡಿ ಕೈಬಿಡಬೇಕೆಂದು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಸರ್ಕಾರದ ಕಾರಣಕೇಳುವ ನೋಟೀಸಿಗೆ ಶ್ರೀ ಅಶೋಕ್ ಪತ್ತಾರ್, ದ್ವಿ.ದ.ಸ. ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: (6) ದಿನಾಂಕ 23-6-2010ರ ಲಿಖಿತ ಹೇಳಿಕೆಯಲ್ಲಿ ತಮ್ಮ ವಿರುದ್ಧದ 2 ಆಪಾದನೆಗಳನ್ನು ಅಲ್ಲಗಳೆದು, ತಮ್ಮ ಮೇಲಿನ ಅಪಾದನೆಗಳು ಆಧಾರರಹಿತವಾಗಿದ್ದು, ಕಾನೂನುಬಾಹಿರ ಸತ್ಯಕ್ಕೆ ದೂರವಾಗಿದ್ದು ಹಾಗೂ ಅಸಮಂಜಸವಾಗಿರುತ್ತದೆಯಾದ್ದರಿಂದ, ತಮ್ಮ ವಿರುದ್ಧದ ಆಪಾದನೆಗಳನ್ನು ದಯಮಾಡಿ ಕೈಬಿಡಬೇಕೆಂದು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಸರ್ಕಾರದ ಕಾರಣಕೇಳುವ ನೋಟೀಸಿಗೆ ಶ್ರೀ ವಿ. ಪಿ. ಕಾಂಬಳೆ, ನಿವೃತ್ತ ತಹಶೀಲ್ದಾರ್ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ: (7) ದಿನಾಂಕ 16-8-2010ರ ಲಿಖಿತ ಹೇಳಿಕೆಯಲ್ಲಿ ತಮ್ಮ ವಿರುದ್ಧ 5 ಆಪಾದನೆಗಳನ್ನು ಅಲ್ಲಗಳೆದು ಅವರು ಸಲ್ಲಿಸಿರುವ ಕಂಡಿಕೆವಾರು ಉತ್ತರವನ್ನು ಸಹಾನುಭೂತಿಯಿಂದ ಪರಿಶೀಲಿಸಿ, ದಿನಾಂಕ 31-5-2007 ರಂದು ನಿವೃತ್ತವಾದ ತಮ್ಮ ಮೇಲೆ ಯಾವುದೇ ಕ್ರಮ ಕೈಗೊಳ್ಳಬಾರದೆಂದು ತಮ್ಮ ಲಿಖಿತ ಹೇಳಿಕೆಯಲ್ಲಿ ವಿನಂತಿಸಿರುತ್ತಾರೆ.

ಮೇಲಿನ ಪ್ರಕರಣದಲ್ಲಿ ಆಪಾದಿತರು ತಮ್ಮ ಮೇಲಿನ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಅಕ್ರಮವಾಗಿ ಖಾತೆ ಮಾಡಿರುವುದನ್ನು ಉಪ ವಿಭಾಗಾಧಿಕಾರಿಗಳು ರದ್ದುಪಡಿಸಿದ್ದರೂ ಸದರಿ ಪ್ರಕರಣದ ವಿರುದ್ಧ ಅರ್ಜಿದಾರರು ನ್ಯಾಯಾಲಯಕ್ಕೆ ಹೋಗಿದ್ದು, ನ್ಯಾಯಾಲಯದಲ್ಲಿ ಬಾಕಿ ಇರುವುದಾಗಿ ಈಗಿನ ಬೆಳಗಾವಿ ತಹಶೀಲ್ದಾರರಿಂದ ತಿಳಿದುಕೊಳ್ಳಲಾಗಿದೆ. ಪ್ರಕರಣದಲ್ಲಿನ ಸತ್ಯಾಸತ್ಯತೆಯನ್ನು ತಿಳಿದುಕೊಂಡು ನಿರ್ಣಯ ತೆಗೆದುಕೊಳ್ಳುವ ಸಲುವಾಗಿ (1) ಶ್ರೀ ವಿ. ಪಿ. ಕಾಂಬಳೆ, ನಿವೃತ್ತ ತಹಶೀಲ್ದಾರ್ (2) ಶ್ರೀ ಬಿ. ಆರ್. ಪಾಟೀಲ, ಶಿರಸ್ತೇದಾರ್ (3) ಶ್ರೀ ಅಶೋಕ್ ಪತ್ತಾರ್, ದ್ವಿ.ದ.ಸ. ಇವರುಗಳ ವಿರುದ್ಧ ಬೆಳಗಾವಿ ಜಿಲ್ಲೆಯಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಶ್ರೀ ಎಫ್. ಸಿ. ಗುಡ್ಡಾಕಾರ್, ನಿವೃತ್ತ ನ್ಯಾಯಾಧೀಶಕರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ತಹಶೀಲ್ದಾರ್, ಬೆಳಗಾವಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 07 ಎಡಿಇ 2006, ಬೆಂಗಳೂರು, ದಿನಾಂಕ 4-1-2011

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 13 ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು (1) ಶ್ರೀ ವಿ. ಪಿ. ಕಾಂಬಳೆ, ನಿವೃತ್ತ ತಹಶೀಲ್ದಾರ್ (2) ಶ್ರೀ ಬಿ. ಆರ್. ಪಾಟೀಲ್, ಶಿರಸ್ತೇದಾರ್ (3) ಶ್ರೀ ಅಶೋಕ್ ಪತ್ತಾರ್, ದ್ವಿ.ದ.ಸ. ಇವರುಗಳ ವಿರುದ್ಧ ಬೆಳಗಾವಿ ಜಿಲ್ಲೆಯಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು ಶ್ರೀ ಎಫ್. ಸಿ. ಗುಡ್ಡಾಕಾರ್, ನಿವೃತ್ತ ನ್ಯಾಯಾಧೀಶಕರು, ಗಣಪತಿ ಗುಡಿ ಹತ್ತಿರ, ಸಂಗೊಳ್ಳಿ ರಾಯಣ್ಣ ನಗರ, ಧಾರವಾಡ 580 002 ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11(5)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ತಹಶೀಲ್ದಾರ್, ಬೆಳಗಾವಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

ವಿಚಾರಣಾಧಿಕಾರಿಗಳು ಈ ಪ್ರಕರಣದ ವಿಚಾರಣೆಯನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಕಚೇರಿಯ ಆವರಣದಲ್ಲಿ ಅಥವಾ ಅವರು ಗುರುತಿಸಿ ನಿಗದಿಪಡಿಸಿದ ಸ್ಥಳದಲ್ಲಿ ನಡೆಸತಕ್ಕದ್ದು. ಈ ಉದ್ದೇಶಕ್ಕಾಗಿ ಲಭ್ಯವಿರುವ ಕಛೇರಿಗಳಲ್ಲಿ ವಿಚಾರಣಾಧಿಕಾರಿಗಳಿಗೆ ಸ್ಥಳಾವಕಾಶ ಮಾಡುವುದು ಹಾಗೂ ಸಂಬಂಧಿಸಿದ ಕಛೇರಿಯಲ್ಲಿ ಲಭ್ಯವಿರುವ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸಹಾಯವನ್ನು ಹಾಗೂ ಲೇಖನ ಸಾಮಗ್ರಿಗಳನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರು ಒದಗಿಸತಕ್ಕದ್ದು.

ಈ ಪ್ರಕರಣದ ವಿಚಾರಣೆಗಾಗಿ ವಿಚಾರಣಾಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 22 ಸೇಇವಿ 2007 ದಿನಾಂಕ 11-4-2008 ರನ್ವಯ ರೂ. 8000/- (ಎಂಟು ಸಾವಿರ ರೂ.ಗಳು ಮಾತ್ರ)ಗಳ ಸಂಚಿತ ಸಂಭಾವನೆಯನ್ನು ಹಾಗೂ ರೂ. 1500/- (ಒಂದು ಸಾವಿರದ ಐನೂರು ರೂ.ಗಳು ಮಾತ್ರ) ಗಳ ವಾಹನ ಭತ್ಯೆ (ಕನ್ವೇಯನ್ಸ್ ಆಲೋಯನ್ಸ್) ಅನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರು ಪಾವತಿ ಮಾಡತಕ್ಕದ್ದು.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆಯನ್ನು ಮೇಲ್ಕಂಡ ನಿಯಮಗಳ ನಿಯಮ 11 ಮತ್ತು 11(ಎ) ರಲ್ಲಿನ ವಿಧಿವಿಧಾನವನ್ನು ಅನುಸರಿಸಿ, ಜರುಗಿಸಿ, ವಿಚಾರಣಾ ವರದಿಯನ್ನು ಎರಡು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಬಿ ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. ನಂ. 282

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸೆಲ್ ಜನರೇಟರನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಓದಲಾಗಿದೆ : ಗುಲ್ಬರ್ಗಾ ಜಿಲ್ಲಾಧಿಕಾರಿಗಳ ಪತ್ರ ಸಂ.ಭೂಸ್ವಾ.53/10-11, ದಿನಾಂಕ 04-09-2010

ಪ್ರಸ್ತಾವನೆ :

ಮೇಲೆ ಓದಲಾದ ಗುಲ್ಬರ್ಗಾ ಜಿಲ್ಲಾಧಿಕಾರಿಗಳ ಪತ್ರದಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆ ನಿರ್ಮಾಣಕ್ಕಾಗಿ ವಿದ್ಯುಚ್ಛಕ್ತಿ ವ್ಯತ್ಯಯ ಉಂಟಾದ ಗ್ರಾಮಗಳಲ್ಲಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ. ಈ ಡೀಸೆಲ್ ಜನರೇಟರ್‌ನಿಂದ ವಿದ್ಯುಚ್ಛಕ್ತಿ ಪಡೆದು ಮನೆ ನಿರ್ಮಾಣಕ್ಕೆ ನೀರನ್ನು ಒದಗಿಸಲಾಗಿರುತ್ತದೆ. ಆದುದರಿಂದ ಈ ಡೀಸೆಲ್ ಜನರೇಟರ್‌ನ ಬಾಡಿಗೆಯ ಹಣ ರೂ. 26,506/-ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 174(ಭಾ) ಟಿಎನ್‌ಆರ್ 2010, ಬೆಂಗಳೂರು, ದಿನಾಂಕ: 04-01-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ಡೀಸೆಲ್ ಜನರೇಟರ್‌ನ್ನು ಬಾಡಿಗೆ ಆಧಾರದ ಮೇಲೆ ಪಡೆದ ಬಾಬ್ತು ರೂ. 26,506/-(ರೂಪಾಯಿ ಇಪ್ಪತ್ತಾರು ಸಾವಿರದ ಐದುನೂರ ಆರು ಮಾತ್ರ) ನ್ನು ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ಇವರಿಗೆ ಬಿಡುಗಡೆ ಮಾಡಲಾಗಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ಅಡಿಯಲ್ಲಿ ಭರಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಡ್ರಾ ಮಾಡಲು ಪೇಯಿಸ್ ರಸೀದಿ (ಸಿಟಿಎಸ್-8) ಬಿಲ್ಲು ತಯಾರಿಸಿ, ಮೇಲು ಸಹಿ ಮಾಡಿ ಖಜಾನೆಗೆ ಸಲ್ಲಿಸಲು ಸೂಚಿಸಿದೆ.

ಈಗ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆ ಹಣ ಬಳಕೆ ಪತ್ರವನ್ನು ವೆಚ್ಚದ ವಿವರಗಳೊಂದಿಗೆ ಸಲ್ಲಿಸುವುದು ಹಾಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು ಸಹ ಸಲ್ಲಿಸುವುದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ. ಗಂಗಾಧರ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ. ಮತ್ತು ಸೇವೆಗಳು-2)

ಪಿ.ಆರ್. ನಂ. 283

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ವಿಷಯ : ರಾಷ್ಟ್ರೀಯ ಕೇಂದ್ರ ಪುರಸ್ಕೃತ ಪಿ.ಪಿ.ಆರ್. ರೋಗ ನಿಯಂತ್ರಣ ಕಾರ್ಯಕ್ರಮ (ಎನ್‌ಸಿಪಿಪಿಆರ್) ಅಡಿ ರಾಜ್ಯಮಟ್ಟದ ಸಮಿತಿಯನ್ನು ರಚಿಸುವ ಕುರಿತು.

ಓದಲಾಗಿದೆ : 1) ಭಾರತ ಸರ್ಕಾರದ ಪತ್ರ ಸಂಖ್ಯೆ: 53-102(ಕಟಿಕೆ) 2010 ಎಲ್‌ಡಿಟಿ(ಎಲ್‌ಹೆಚ್), ದಿನಾಂಕ 22-9-2010.

2) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 229 ಸಲೆವಿ 2010, ದಿನಾಂಕ 24-12-2010

3) ಪತ್ರ ಸಂಖ್ಯೆ: ಅಪ/ಸಂ/ಯೋಜನೆ-2/ವಿವ-29/2010-11, ದಿನಾಂಕ 03-01-2011

***

ಪ್ರಸ್ತಾವನೆ :

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ 22-9-2010ರ ಭಾರತ ಸರ್ಕಾರದ ಆದೇಶದಲ್ಲಿ ಕೇಂದ್ರ ಪುರಸ್ಕೃತ ಯೋಜನೆ ನ್ಯಾಷನಲ್ ಕಂಟ್ರೋಲ್ ಪ್ರೋಗ್ರಾಂ ಆನ್ ಪಿಪಿಆರ್ (ಎನ್‌ಸಿಪಿಪಿಆರ್) ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ ಹಾಗೂ ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ₹ 596.98 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇದೀಗ ಕ್ರಮಾಂಕ (3)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವೆಗಳು, ಬೆಂಗಳೂರು ರವರು ಕೇಂದ್ರ ಪುರಸ್ಕೃತ ಯೋಜನೆ ನ್ಯಾಷನಲ್ ಕಂಟ್ರೋಲ್ ಪ್ರೋಗ್ರಾಂ ಆನ್ ಪಿಪಿಆರ್ (ಎನ್‌ಸಿಪಿಪಿಆರ್) ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಯೋಜನೆಯ ಮೇಲ್ವಿಚಾರಣೆ, ಪರಿಶೀಲನೆ, ನಿರ್ವಹಣೆ ಮಾಡಲು ರಾಜ್ಯಮಟ್ಟದಲ್ಲಿ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಪರಿಶೀಲನಾ ಸಮಿತಿಯನ್ನು ರಚಿಸಲು ಹಾಗೂ ಇಲಾಖಾ ಅಧಿಕಾರಿಗಳ ಮತ್ತು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಯೋಜನೆ ನಿರ್ವಹಣೆ ಸಮಿತಿ, ಜಿಲ್ಲಾಮಟ್ಟದ ನಿರ್ವಹಣೆ ಸಮಿತಿ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಿ ಆಯುಕ್ತರು ತಿಳಿಸಿರುವಂತೆ ಕರ್ತವ್ಯಗಳನ್ನು ನಿರ್ವಹಿಸಲು ಸರ್ಕಾರದ ಅನುಮತಿಯನ್ನು ಕೋರಿದ್ದಾರೆ.

ಆದೇಶ ಸಂಖ್ಯೆ: ಪಸಂವೀ: 229:ಸಲೆವಿ 2010, ಬೆಂಗಳೂರು, ದಿನಾಂಕ: 07-01-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸರ್ಕಾರ, ಕೇಂದ್ರ ಪುರಸ್ಕೃತ ಯೋಜನೆಯಾದ ನ್ಯಾಷನಲ್ ಕಂಟ್ರೋಲ್ ಪ್ರೋಗ್ರಾಂ ಆನ್ ಪಿಪಿಆರ್ (ಎನ್‌ಸಿಪಿಪಿಆರ್) ಮೇಲ್ವಿಚಾರಣೆ, ಪರಿಶೀಲನೆ ಮತ್ತು ಮೌಲ್ಯಮಾಪನ ಮಾಡಲು ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ರಾಜ್ಯ ಮಟ್ಟದ ಪರಿಶೀಲನಾ ಸಮಿತಿ (Project Monitoring and Review Committee) ಯನ್ನು ರಚಿಸಲಾಗಿದ್ದು ಅದರ ಕೆಳಗೆ ಸದರಿ ಸಮಿತಿ ನಿರ್ವಹಿಸಬೇಕಾದ ಕರ್ತವ್ಯಗಳನ್ನು ಕೂಡ ನಿಗದಿಪಡಿಸಿದೆ.

ರಾಜ್ಯಮಟ್ಟದ ಪರಿಶೀಲನಾ ಮತ್ತು ಮೇಲ್ವಿಚಾರಣಾ ಸಮಿತಿ:

1. ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ... ಅಧ್ಯಕ್ಷರು
2. ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ... ಸದಸ್ಯರು
3. ನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ... ಸದಸ್ಯರು
4. ನಿರ್ದೇಶಕರು, ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ, ಬೆಂಗಳೂರು ... ಸದಸ್ಯರು
5. ಅಪರ ನಿರ್ದೇಶಕರು, (ಜಾನುವಾರು ಆರೋಗ್ಯ) ಆಯುಕ್ತಾಲಯ, ಬೆಂಗಳೂರು ... ಸದಸ್ಯರು
6. ಜಂಟಿ ನಿರ್ದೇಶಕರು (ಅಭಿವೃದ್ಧಿ) ಆಯುಕ್ತಾಲಯ, ಬೆಂಗಳೂರು ... ಸದಸ್ಯ ಕಾರ್ಯದರ್ಶಿ

ಸಮಿತಿಯ ಕರ್ತವ್ಯಗಳು:

1. ಯೋಜನೆಯ ಮೇಲ್ವಿಚಾರಣೆ, ಪ್ರಗತಿ ಪರಿಶೀಲನೆ ಮತ್ತು ಮೌಲ್ಯಮಾಪನ ಇತ್ಯಾದಿಗಳನ್ನೊಳಗೊಂಡಂತೆ ಯೋಜನೆ ಅನುಷ್ಠಾನದ ಬಗ್ಗೆ ಪರಿಶೀಲನೆ ಕೈಗೊಳ್ಳುವುದು.
2. ಯೋಜನೆಯ ಅನುಷ್ಠಾನ, ಸಂಸ್ಥೆಗಳಿಗೆ ಅನುಷ್ಠಾನದ ಬಗ್ಗೆ ಆಗಿಂದಾಗ್ಗೆ ಸಲಹೆ, ಸೂಚನೆ ನೀಡುವುದು
3. ಯೋಜನೆಯ ಬಗ್ಗೆ ಇನ್ನಿತರೆ ವಿಷಯಗಳ ಬಗ್ಗೆ ತೀರ್ಮಾನ ಕೈಗೊಳ್ಳುವುದು
4. ಪ್ರತಿ ತಿಂಗಳಿಗೊಮ್ಮೆ ಅಥವಾ ಸಂದರ್ಭಾನುಸಾರ ಸಭೆ ನಡೆಸಿ ಪರಿಶೀಲಿಸುವುದು

ಇನ್ನುಳಿದಂತೆ, ಇತರೆ ರಾಜ್ಯಮಟ್ಟದ ಯೋಜನಾ ನಿರ್ವಹಣೆ ಸಮಿತಿ, ಜಿಲ್ಲಾಮಟ್ಟದ ಯೋಜನೆ ನಿರ್ವಹಣಾ ಸಮಿತಿ ಹಾಗೂ ತಾಲ್ಲೂಕು ಮಟ್ಟದ ಯೋಜನಾ ನಿರ್ವಹಣೆ ಸಮಿತಿಗಳನ್ನು ಮತ್ತು ಅವುಗಳು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ಇವರು ಕ್ರಮಾಂಕ (3)ರಲ್ಲಿ ಓದಲಾದ ಪತ್ರದಲ್ಲಿ ನಮೂದಿಸಿರುವಂತೆ ಇಲಾಖೆಯ ವಿವಿಧ ಅಧಿಕಾರಿಗಳ ಹಾಗೂ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಿ ಸೂಕ್ತ ಆದೇಶಗಳನ್ನು ಇಲಾಖಾ ವತಿಯಿಂದಲೇ ಹೊರಡಿಸಲು ಅನುಮತಿ ನೀಡಲಾಗಿದೆ.

ಈ ಬಗ್ಗೆ ಒಂದು ವರ್ಷ ಮುಗಿದ ನಂತರ ಸದರಿ ಯೋಜನೆಯ ಕಾರ್ಯಕ್ರಮಗಳನ್ನು ಪುನರ್ ವಿಮರ್ಶಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಕೆ. ಶ್ರೀನಿವಾಸಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

ಪಿ.ಆರ್. ನಂ. 284

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಸಿಐ/461/ಎಸ್‌ಪಿಐ/2010, ಬೆಂಗಳೂರು, ದಿನಾಂಕ 31-12-2010

ವಿಷಯ : ಮೆ॥ ಟಾಟಾ ಮಾರ್ಕೊಪೋಲೊ ಮೋಟಾರ್ಸ್ ಲಿ., ರವರಿಗೆ (ಟಿಎಂಎಂಎಲ್) ಮೌಲ್ಯಾಧಾರಿತ ತೆರಿಗೆ ಮೇಲೆ ಮೃದುಸಾಲ ಒದಗಿಸುವ ಬಗ್ಗೆ

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ: ಸಿಐ/563/ಎಸ್‌ಪಿಐ/2005, ದಿನಾಂಕ 03-09-2007

2) ತಿದ್ದುಪಡಿ ಆದೇಶ ದಿನಾಂಕ 13-12-2010

3) ಜಂಟಿ ನಿರ್ದೇಶಕರು (ಕೈ.ಅ) ಇವರ ಪತ್ರ ಸಂಖ್ಯೆ: ಕೈಅ/ಇ1/74/ಟಿ.ಎಂ.ಎಂ.ಎಲ್./ ಧಾರಾ/10-11, ದಿನಾಂಕ 27-12-2010.

ಸರ್ಕಾರದ ಆದೇಶ ಸಂಖ್ಯೆ: ಸಿಐ 461 ಎಸ್‌ಪಿಐ 2010, ದಿನಾಂಕ 07-12-2010ರಂದು ಹೊರಡಿಸಿರುವ ಆದೇಶದ ಭಾಗದ ಕಂಡಿಕೆ 3ರಲ್ಲಿ ಲೆಕ್ಕ ಶೀರ್ಷಿಕೆ "6852-02-800-0-01" Loan against VAT payment to industrial units" ಬದಲಾಗಿ ಲೆಕ್ಕ ಶೀರ್ಷಿಕೆ "6852-02-800-0-01" Loan against VAT payment to industrial units" "Objective Code-394" plan ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎ. ವಿ. ಶ್ರೀನಿವಾಸ ದೀಕ್ಷಿತ್

ಪೀಠಾಧಿಕಾರಿ (ತಾಂತ್ರಿಕ ಕೋಶ)

ಪಿ.ಆರ್. ನಂ. 285 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸುತ್ತೋಲೆ

ಸಂಖ್ಯೆ: ಸಿಆಸುಇ 84 ಇಆಇ 2010, ಬೆಂಗಳೂರು, ದಿನಾಂಕ 24-01-2011

ವಿಷಯ : ಇ-ಆಡಳಿತದ ಅನ್ವಯಿಕೆಗಳಿಗಾಗಿ ಡಿಜಿಟಲ್ ಸಹಿಗಳನ್ನು ಬಳಸುವ ಕುರಿತು ಕೇಂದ್ರ ಸರ್ಕಾರ ನೀಡಿದ ಮಾರ್ಗಸೂಚಿಗಳನ್ನು ಅಳವಡಿಸುವ ಬಗ್ಗೆ.

ಉಲ್ಲೇಖ : 1. ದಿನಾಂಕ 31-07-2010ರ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 4 ಇಆಇ 2010

2. ಜಂಟಿ ಕಾರ್ಯದರ್ಶಿ, ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆ, ನವದೆಹಲಿ. ಇವರ ದಿನಾಂಕ 21-12-2010ರ ಅ.ಸ. ಪತ್ರ ಸಂಖ್ಯೆ: 2(38)/2009-ಇಜಿ-II

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೇಲೆ (1)ರಲ್ಲಿ ಉಲ್ಲೇಖಿಸಿದ ದಿನಾಂಕ 31-06-2010ರ ಸುತ್ತೋಲೆಯ ಕಡೆಗೆ ಗಮನ ಸೆಳೆಯಲಾಗಿದೆ.

2. 'ಭೂಮಿ', 'ನೆಮ್ಮದಿ' 'ಇ-ಸಂಗ್ರಹಣೆ ಇತ್ಯಾದಿ ಯೋಜನೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಅಧಿಕಾರಿಗಳು ಡಿಜಿಟಲ್ ಸಹಿಗಳನ್ನು ಬಳಸುವುದು ವಾಡಿಕೆಯಾಗಿದೆ. ವಿವಿಧ ಇಲಾಖೆ/ಸಂಸ್ಥೆಗಳ ಇ-ಆಡಳಿತ ಯೋಜನೆಗಳಿಗೆ ಸಂಬಂಧಿಸಿದಂತೆ ಡಿಜಿಟಲ್ ಸಹಿಗಳನ್ನು ಹೆಚ್ಚು ಹೆಚ್ಚಾಗಿ ಬಳಸುವ ಸಾಧ್ಯತೆ ಇದೆ. ಇ-ಆಡಳಿತದ ಅನ್ವಯಿಕೆಗಳಿಗಾಗಿ ಡಿಜಿಟಲ್ ಸಹಿಗಳ ಬಳಕೆ. ಅವುಗಳನ್ನು ಪಡೆಯುವ ಹಾಗೂ ದೃಢೀಕರಿಸುವ ಪದ್ಧತಿ ಮತ್ತು ಅವುಗಳ ಕಾನೂನಿನ ಸಿಂಧುತ್ವ ಇತ್ಯಾದಿಯ ಬಗ್ಗೆ "Guidelines for Usage of Digital Signatures in e-Governance-Version 1.0 December 2010" ಎಂಬುವ ಮಾರ್ಗಸೂಚಿಗಳನ್ನು ಕೇಂದ್ರ ಸರ್ಕಾರ ತಯಾರಿಸಿದ್ದು, ಅದರ ಪ್ರತಿಯನ್ನು ಮೇಲೆ (2)ರಲ್ಲಿ ಉಲ್ಲೇಖಿಸಿದ ದಿನಾಂಕ 21-12-2010ರ ಪತ್ರದೊಂದಿಗೆ ಲಗತ್ತಿಸಿದೆ. ಅದನ್ನು ಈ ಸುತ್ತೋಲೆಗೆ ಲಗತ್ತಿಸಿದೆ. ಅದರಲ್ಲಿ ಮತ್ತೆ ಮತ್ತೆ ಕೇಳುವ ಪ್ರಶ್ನೆಗಳು [Frequently asked Questions (FAQs)] ಸಹ ಒಳಗೊಂಡಿರುತ್ತವೆ. ಈ ಮಾರ್ಗಸೂಚಿಗಳನ್ನು ಸಂಬಂಧಿಸಿದ ಅಧಿಕಾರಿಗಳು ಸಿದ್ಧಗಣಕವಾಗಿ (as a ready reckoner) ಬಳಸಬಹುದಾಗಿದೆ.

3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಹಾಗೂ ಅವರ ಕಾರ್ಯ ವ್ಯಾಪ್ತಿಯೊಳಗೆ ಬರುವ ಕ್ಷೇತ್ರ ಇಲಾಖೆಗಳ ಇಲಾಖಾ ಮುಖ್ಯಸ್ಥರುಗಳು ಸದರಿ ಮಾರ್ಗಸೂಚಿಗಳನ್ನು ಅನುಸರಿಸಬೇಕೆಂದು ಹಾಗೂ ಅವುಗಳನ್ನು ಅವರವರ ಕಾರ್ಯವ್ಯಾಪ್ತಿಯೊಳಗೆ ಬರುವ ಸಂಬಂಧಿಸಿದ ಎಲ್ಲಾ ಅಧಿಕಾರಿಗಳ ಗಮನಕ್ಕೆ ತರಬೇಕೆಂದು ಈ ಮೂಲಕ ಕೋರಿದೆ.

ಪ್ರಸನ್ನ ಕುಮಾರ್ ಜಿ.ಎಸ್.

ಪೀಠಾಧಿಕಾರಿ-1, (ಇ-ಆಡಳಿತ)

ಪಿ.ಆರ್. ನಂ. 288 ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಶಿಕ್ಷಣ ಸಚಿವಾಲಯ

ವಿಷಯ : 2010-11ನೇ ಸಾಲಿನಲ್ಲಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 8ನೆಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೈಸಿಕಲ್‌ಗಳನ್ನು ವಿತರಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಇಡಿ 99 ಯೋಯೋಕ 2010, ದಿನಾಂಕ 03-04-2010

2) ಸರ್ಕಾರಿ ಆದೇಶ ಸಂಖ್ಯೆ: ಇಡಿ 142 ಯೋಯೋಕ 2010, ದಿನಾಂಕ 29-06-2010

3) ಸರ್ಕಾರಿ ಪತ್ರದ ಸಂಖ್ಯೆ: ಇಡಿ 235 ಯೋಯೋಕ 2010, ದಿನಾಂಕ 30-08-2010

4) ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ: ಯೋ-10ಉ.ಬೈ.ವಿ.ಯೋ.ಟೆಂಪ್ರ: 01/2010-11, ದಿನಾಂಕ 12-11-2010.

ಪ್ರಸ್ತಾವನೆ :

1. ಮೇಲೆ 1 ರಲ್ಲಿ ಓದಲಾದ ದಿನಾಂಕ 03-04-2010ರ ಆದೇಶದಲ್ಲಿ 2010-11ನೇ ಸಾಲಿಗೆ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ಸರಬರಾಜು ಮಾಡುವ ಯೋಜನೆಯನ್ನು ಮುಂದುವರೆಸಲು ಸರ್ಕಾರವು ಅನುಮೋದನೆ ನೀಡಿತು.

2. ಮೇಲೆ 2 ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2010-11ನೇ ಸಾಲಿಗೆ ಉಚಿತ ಬೈಸಿಕಲ್ ಸರಬರಾಜಿಗಾಗಿ ಪ್ರಸ್ತಾವನೆ ಸಿದ್ಧಪಡಿಸಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸರ್ಕಾರದ ಅನುಮೋದನೆ ನೀಡಲಾಯಿತು.

3. ಮೇಲೆ 3ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ 2010-11ನೇ ಸಾಲಿನಲ್ಲಿ ಬೈಸಿಕಲ್‌ಗಳ ಖರೀದಿಗಾಗಿ ಟೆಂಡರ್ ಪ್ರಕ್ರಿಯೆಯಲ್ಲಿ ಬೈಸಿಕಲ್‌ಗಳ ತಯಾರಿಕಾ ಕಂಪನಿಗಳ ವಾರ್ಷಿಕ ವಹಿವಾಟು ಕುರಿತಂತೆ ಹಿಂದಿನ ವರ್ಷದಲ್ಲಿ ನಿಗದಿಪಡಿಸಿದ್ದ ಷರತ್ತುಗಳನ್ನು ಮುಂದುವರೆಸಲು ಮತ್ತು 30 ದಿನಗಳ ಕಾಲಾವಕಾಶ ನಿಗದಿಪಡಿಸಿ ಅಲ್ಪಾವಧಿ ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿತ್ತು.

4. ಮೇಲೆ 4 ರಲ್ಲಿ ಓದಲಾದ ತಮ್ಮ ಪ್ರಸ್ತಾವನೆಯಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ದರ ಸಂಧಾನ ಸಭೆಗಳನ್ನು ನಡೆಸಿದ ನಂತರವೂ ಪ್ರತಿ ವಿಭಾಗದಲ್ಲಿ ಎಲ್1 ಆಯ್ಕೆಯಾದ ಸಂಸ್ಥೆಗಳು ಈ ಕೆಳಕಂಡಂತೆ ಅಂತಿಮ ದರಗಳನ್ನು ನಿಗದಿ ಪಡಿಸಿರುತ್ತವೆ.

ಬೆಂಗಳೂರು ವಿಭಾಗ	ಮೆ॥ ಏವನ್ ಸೈಕಲ್ಸ್ ಲಿ., ಲೂಧಿಯಾನ .	ರೂ. 2657.00
ಮೈಸೂರು ವಿಭಾಗ	ಮೆ॥ ಅಟ್ಲಾಸ್ ಸೈಕಲ್ಸ್ (ಹರಿಯಾಣ) ಲಿ, ಮಧ್ಯಪ್ರದೇಶ	ರೂ. 2657.00
ಬೆಳಗಾಂ ವಿಭಾಗ	ಮೆ॥ ಹಿರೋ ಸೈಕಲ್ಸ್ ಲಿ., ಲೂಧಿಯಾನ	ರೂ. 2657.00
ಗುಲ್ಬರ್ಗಾ ವಿಭಾಗ	ಮೆ॥ ಟಿ. ಐ. ಸೈಕಲ್ ಆಫ್ ಇಂಡಿಯಾ, ಚೆನ್ನೈ	ರೂ. 2657.00

5. ಈಗ ಅಂತಿಮವಾಗಿ ನಿಗದಿಪಡಿಸಿರುವ ದರವು ಹಿಂದಿನ ಸಾಲಿನ ದರಕ್ಕೆ ಹೋಲಿಸಿದಲ್ಲಿ ಪ್ರತಿ ಬೈಸಿಕಲ್‌ಗೆ ರೂ. 267 ಹೆಚ್ಚುವರಿಯಾಗುತ್ತದೆ. ಆದಾಗ್ಯೂ ಬೈಸಿಕಲ್ ತಯಾರಿಕಾ ಕಂಪನಿಗಳು ಬೈಸಿಕಲ್‌ಗಳ ಯೂನಿಟ್ ಬೆಲೆಯಲ್ಲಿ ಕಡಮೆ ಮಾಡಿರುವ ಮೊತ್ತವು ಗಣನೀಯ ಪ್ರಮಾಣದಲ್ಲಿ ಇಲ್ಲವೆಂದು ಕಂಡು ಬಂದಲ್ಲಿ ಸರ್ಕಾರದ ಮಟ್ಟದಲ್ಲಿ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಿ ಸದರಿ ಸಮಿತಿಯ ಪುನಃ ದರ ಸಂಧಾನ ನಡೆಸಬಹುದಾಗಿದೆ ಎಂದು ತಿಳಿಸಿರುತ್ತಾರೆ.

6. ಸಾರ್ವಜನಿಕ ಶಿಕ್ಷಣ ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಲಾಗಿದ್ದು ಅದರಂತೆ ಈ ಕೆಳಕಂಡಂತೆ ಆದೇಶ-

ಸರ್ಕಾರಿ ಆದೇಶ ಸಂಖ್ಯೆ: ಇಡಿ 259 ಯೋಯೋಕ 2010, ಬೆಂಗಳೂರು, ದಿನಾಂಕ: 22-01-2011

7. ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2010-11ನೇ ಸಾಲಿನಲ್ಲಿ ಉಚಿತ ಬೈಸಿಕಲ್‌ಗಳನ್ನು ವಿತರಿಸುವ ಸಂಬಂಧ ಈ ಕೆಳಕಂಡಂತೆ ಆದೇಶಿಸಲಾಗಿದೆ:-

   1. 2010-11ನೇ ಸಾಲಿನಲ್ಲಿ ಉಚಿತ ಬೈಸಿಕಲ್‌ಗಳನ್ನು ಖರೀದಿಸಲು ಕರೆದಿರುವ ಟೆಂಡರ್‌ನ್ನು ರದ್ದುಗೊಳಿಸಲು ಸಾರ್ವಜನಿಕ ಶಿಕ್ಷಣ ಆಯುಕ್ತರಿಗೆ ಅನುಮೋದನೆ ನೀಡಿದೆ.
   2. ಉಚಿತ ಬೈಸಿಕಲ್‌ಗಳ ಖರೀದಿಗಾಗಿ ಎಲ್ಲಾ ವಲಯಗಳಿಗೆ ಸಂಬಂಧಿಸಿದಂತೆ ಇ-ಸಂಗ್ರಹಣಾ ವೇದಿಕೆ ಮೂಲಕ ಒಂದೇ ಟೆಂಡರ್‌ನ್ನು ಟೆಂಡರ್ ಕರೆಯುವ ಕಾಲಾವಧಿಯನ್ನು 20 (ಇಪ್ಪತ್ತು) ದಿನಗಳಿಗೆ ಸೀಮಿತಗೊಳಿಸಿ ಅಲ್ಪಾವಧಿ ಟೆಂಡರ್ ಕರೆಯಲು ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು ರವರಿಗೆ ಅನುಮೋದನೆ ನೀಡಿದೆ.

8. ಸದರಿ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ: ಆಇ 880 ವೆಚ್ಚ 8/2010, ದಿನಾಂಕ 29-12-2010ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ. ಎಫ್. ಮಾಗಿ
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಪಿ.ಆರ್. ನಂ. 289

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಮುನ್ನೇಕೊಳಲು ಗ್ರಾಮದ ಸ.ನಂ. 23 ರಲ್ಲಿನ 18 ಗುಂಟೆ ಜಮೀನನ್ನು ಮೆ॥ ಉಷಾ ಮಾರ್ಟಿನ್ ಪವರ್ ಕಂಪನಿ ಲಿಮಿಟೆಡ್ ಇವರಿಗೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1) ಮೆ॥ ಉಷಾ ಮಾರ್ಟಿನ್ ಪವರ್ ಕಂಪನಿ ಲಿಮಿಟೆಡ್ ಇವರ ಪರವಾಗಿ ಜಿ.ಪಿ.ಎ. ಹೋಲ್ಡರ್ ಮೆ॥ ರೋಹನ್ ಬಿಲ್ಡರ್ಸ್‌ರವರ ಮನವಿ ದಿ: 29.09.2007.

2) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಲ್ಎನ್‌ಡಿ (ಪೂ) ಸಿಆರ್ 207/07-08, ದಿ: 02.02.2009.

3) ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 148 ಎಲ್‌ಜಿಬಿ 2009, ದಿ: 21.12.2009.

4) ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 148 ಎಲ್‌ಜಿಬಿ 2009, ದಿ: 15.05.2010.

ಪ್ರಸ್ತಾವನೆ:

ಮೆ॥ ಉಷಾ ಮಾರ್ಟಿನ್ ಪವರ್ ಕಂಪನಿ ಲಿಮಿಟೆಡ್ ಇವರ ಪರವಾಗಿ ಜಿ.ಪಿ.ಎ. ಹೋಲ್ಡರ್, ಮೆ॥ ರೋಹನ್ ಬಿಲ್ಡರ್ಸ್ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿ: 29.09.2007ರ ಮನವಿಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಮುನ್ನೇಕೊಳಲು ಗ್ರಾಮ ಸ.ನಂ. 22, 23, 24 ಮತ್ತು 28ರ ಒಟ್ಟು 7 ಎಕರೆ 33 ಗುಂಟೆ ಭೂ ಪರಿವರ್ತಿತ ಜಮೀನನ್ನು ಮೆ॥ ಉಷಾ ಮಾರ್ಟಿನ್ ಪವರ್ ಕಂಪನಿ ಲಿಮಿಟೆಡ್ ರವರು ಜಂಟಿಯಾಗಿ ಅಭಿವೃದ್ಧಿಪಡಿಸಲು ಮೆ॥ ರೋಹನ್ ಬಿಲ್ಡರ್ಸ್ ರವರಿಗೆ ನೀಡಲಾಗಿದ್ದು, ಈ ಪೈಕಿ ಸ.ನಂ. 23ರಲ್ಲಿನ ಹಳ್ಳದ ಬಿ ಖರಾಬ್ ಜಮೀನನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

2) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿ: 02.02.2009ರ ಪತ್ರದಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಮುನ್ನೇಕೊಳಲು ಗ್ರಾಮದ ಸ.ನಂ. 23ರಲ್ಲಿ 0.18 ಗುಂಟೆ ಬಿ ಖರಾಬ್ ಹಳ್ಳದ ಜಮೀನಿರುವುದಾಗಿ ತಿಳಿಸಿರುತ್ತಾರೆ. ಸದರಿ ಬಿ ಖರಾಬ್ ಜಮೀನು ನಿಗದಿಪಡಿಸಿದ ಉದ್ದೇಶಕ್ಕೆ ಬಳಕೆಯಾಗುತ್ತಿಲ್ಲವೆಂದು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ವರದಿ ನೀಡಿದ ಹಿನ್ನೆಲೆಯಲ್ಲಿ ಈ ಜಮೀನನ್ನು ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 68(1)ರನ್ವಯ ದಿ: 29.01.2008ರಲ್ಲಿ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಇವರು ನಮೂನೆ 27ರಲ್ಲಿ

ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಸದರಿ ಸಾರ್ವಜನಿಕ ಪ್ರಕಟಣೆಗೆ ಅನುಗುಣವಾಗಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ. ಆದ್ದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿ.21.12.2009ರ ಅಧಿಸೂಚನೆಯಲ್ಲಿ ಸದರಿ ಬಿ ಖರಾಬ್ ಹಳ್ಳದ ಜಮೀನನ್ನು ಸಾರ್ವಜನಿಕ ಹಕ್ಕಿನಿಂದ ವಿಹಿತಗೊಳಿಸಲು ನಮೂನೆ 29ರಲ್ಲಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

3) ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಸರ್ಕಾರದ ಪತ್ರದ ದಿ: 15.05.2010ರಲ್ಲಿ ಸದರಿ ಜಮೀನನ್ನು ಸರ್ಕಾರ ಅಥವಾ ಸರ್ಕಾರಿ ಸಂಸ್ಥೆಗಳಿಗೆ ಉಪಯೋಗ ಮಾಡಿಕೊಳ್ಳಬೇಕೆನ್ನುವ ಬಗ್ಗೆ ಪರಿಶೀಲಿಸಲು ನಿರ್ಧರಿಸಿ, ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಮುನ್ನೇಕೊಳಲು ಗ್ರಾಮದ ಸ.ನಂ. 23ರಲ್ಲಿ 18 ಗುಂಟೆ ಜಮೀನನ್ನು ಮೆ॥ ಉಷಾ ಮಾರ್ಟಿನ್ ಪವರ್ ಕಂಪನಿ ಲಿಮಿಟೆಡ್ ಇವರಿಗೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಸರ್ಕಾರವು ತಿರಸ್ಕರಿಸಲಾಗಿದೆ ಎಂದು ವಿಶೇಷ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿತ್ತು.

ಪ್ರಸ್ತಾವನೆಯನ್ನು ಸರ್ಕಾರವು ಮರು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 148 ಎಲ್‌ಜಿಬಿ 2009, ಬೆಂಗಳೂರು, ದಿನಾಂಕ 24-02-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 148 ಎಲ್‌ಜಿಬಿ 2009, ದಿ: 15.05.2010ನ್ನು ರದ್ದುಪಡಿಸಿ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಮುನ್ನೇಕೊಳಲು ಗ್ರಾಮದ ಸ.ನಂ. 23ರಲ್ಲಿನ 0.18 ಗುಂಟೆ ಜಮೀನನ್ನು ಮೆ॥ ಉಷಾ ಮಾರ್ಟಿನ್ ಪವರ್ ಕಂಪನಿ ಲಿಮಿಟೆಡ್ ಇವರಿಗೆ ಪ್ರಸಕ್ತ ಮಾರುಕಟ್ಟೆ ದರ ಹಾಗೂ ನಿಯಮಾನುಸಾರ ಇತರೇ ಶುಲ್ಕ ವಿಧಿಸಿ ಮಂಜೂರು ಮಾಡಲು ಸರ್ಕಾರವು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 94 ವೆಚ್ಚ–7/2010, ದಿ: 11.02.2010ರಲ್ಲಿ ನೀಡಿದ ಸಹಮತಿಯನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೀತಾ ರಮೇಶ್
ಸರ್ಕಾರದ ಉಪ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ.ಮಂ ಮತ್ತು ಭೂ ಕಂ)

ಪಿ.ಆರ್. 511

ಇಂಧನ ಸಚಿವಾಲಯ

ವಿಷಯ : ಜಸ್ಟೀಸ್ ವಿ. ಪಿ. ಮೋಹನ್ ಕುಮಾರ್‌ರವರ ಕಾರ್ಯದರ್ಶಿ ಶ್ರೀ ಹೆಚ್. ಪಿ. ದೇಸಿಗೌಡ ಇವರ ಮರುನೇಮಕಾತಿ ವೇತನವನ್ನು ನಿಗದಿಪಡಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಇಎನ್ 125 ಪಿಪಿಸಿ 2009, ದಿನಾಂಕ 13–10–2009, 03–02–2010, 14–06–2010 ಮತ್ತು 28–12–2010.
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 125 ಪಿಪಿಸಿ 2009, ದಿನಾಂಕ 04–12–2009
3) ಪತ್ರ ಸಂಖ್ಯೆ: ವಿ.ಪಿ.ಎಂ.ಐ. 238/2010, ದಿನಾಂಕ 04–12–2010
4) ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 2110 ವೆಚ್ಚ–1/2010, ದಿನಾಂಕ 17–01–2011.

ಪ್ರಸ್ತಾವನೆ :

ಮೇಲೆ ಓದಲಾದ ಸರ್ಕಾರಿ ಆದೇಶ (1)ರಲ್ಲಿ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಜಸ್ಟೀಸ್ ಶ್ರೀ ವಿ. ಪಿ. ಮೋಹನ್ ಕುಮಾರ್ ರವರನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ಕಲ್ಲಿದ್ದಲನ್ನು ಖರೀದಿಸುವಲ್ಲಿ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ಪವರ್ ಟ್ರಾನ್ಸ್‌ಫಾರ್ಮರ್ ಖರೀದಿಸುವಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ವಿಚಾರಣೆಯನ್ನು ನಡೆಸಲು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಇಎನ್ 125 ಪಿಪಿಸಿ 2009. ದಿನಾಂಕ 03–02–2010 ರಲ್ಲಿ ವಿಚಾರಣೆಯ ಕಾಲಾವಧಿಯನ್ನು ದಿನಾಂಕ 13–01–2010 ರಿಂದ ಮುಂದಿನ 6 ತಿಂಗಳವರೆಗೆ ಮತ್ತು ಸರ್ಕಾರಿ ಆದೇಶ ಸಂಖ್ಯೆ: ಇಎನ್ 125 ಪಿಪಿಸಿ 2009, ದಿನಾಂಕ 14–06–2010 ರಲ್ಲಿ 14–07–2010 ರಿಂದ 31–12–2010 ರವರೆಗೆ 5½ ತಿಂಗಳಿಗೆ ಕಾಲಾವಧಿಯನ್ನು ವಿಸ್ತರಿಸಲಾಗಿತ್ತು. ಪುನಃ ಸರ್ಕಾರಿ ಆದೇಶ ಸಂಖ್ಯೆ: ಇಎನ್ 125 ಪಿಪಿಸಿ 2009 ದಿನಾಂಕ 28–12–2010 ರಲ್ಲಿ 01–01–2011 ರಿಂದ 6 ತಿಂಗಳವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ.

ಮೇಲೆ ಓದಲಾದ ಸರ್ಕಾರಿ ಆದೇಶ (2)ರಲ್ಲಿ ನ್ಯಾಯಮೂರ್ತಿ ಶ್ರೀ ವಿ. ಪಿ. ಮೋಹನ್ ಕುಮಾರ್, ವಿಚಾರಣಾಧಿಕಾರಿಯವರ ಕಾರ್ಯಾಲಯಕ್ಕೆ ಕಾರ್ಯದರ್ಶಿ ಹಾಗೂ ಇತರೆ ಹುದ್ದೆಗಳನ್ನು ನೇಮಿಸಿಕೊಳ್ಳಲು ಅನುಮೋದನೆಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಪತ್ರ (3)ರಲ್ಲಿ ಶ್ರೀ ಶ್ರೀವತ್ಸ ಕೆದಿಲಾಯ, ಜಸ್ಟೀಸ್ ಶ್ರೀ ವಿ. ಪಿ. ಮೋಹನ್ ಕುಮಾರ್‌ರವರ ಕಾರ್ಯದರ್ಶಿ ಇವರು ದಿನಾಂಕ 30–11–2010ರ ಅಪರಾಹ್ನ ಜಾರಿಗೆ ಬರುವಂತೆ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆಯನ್ನು ನೀಡಿರುತ್ತಾರೆ ಹಾಗೂ ಇದನ್ನು ಜಸ್ಟೀಸ್ ಶ್ರೀ ವಿ. ಪಿ. ಮೋಹನ್ ಕುಮಾರ್ ಇವರು ಅನುಮೋದಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಶ್ರೀ ಹೆಚ್. ಪಿ. ದೇಸಿಗೌಡ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಇವರನ್ನು ದಿನಾಂಕ 01–12–2010ರ ಪೂರ್ವಾಹ್ನದಿಂದ ಜಾರಿಗೆ ಬರುವಂತೆ ಜಸ್ಟೀಸ್ ಶ್ರೀ ವಿ. ಪಿ. ಮೋಹನ್ ಕುಮಾರ್‌ರವರ ಕಾರ್ಯದರ್ಶಿಯನ್ನಾಗಿ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆಯೆಂದು ಹಾಗೂ ಇವರ ವೇತನವನ್ನು ಕೆ.ಸಿ.ಎಸ್.ಆರ್. ನಿಯಮಗಳು 1958ರನ್ವಯ [illegible]

ಶ್ರೀ ಹೆಚ್. ಪಿ. ದೇಸಿಗೌಡ, ಜಸ್ಟೀಸ್ ಶ್ರೀ ವಿ. ಪಿ. ಮೋಹನ್ ಕುಮಾರ್‌ರವರ ಕಾರ್ಯದರ್ಶಿ ಇವರ ಮರು ನೇಮಕಾತಿ ವೇತನವನ್ನು ನಿಗದಿಪಡಿಸುವ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ, ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ:–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 125 ಪಿಪಿಸಿ 2009, ಬೆಂಗಳೂರು, ದಿನಾಂಕ: 29-01-2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಹೆಚ್. ಪಿ. ದೇಸಿಗೌಡ, ಜಸ್ಟೀಸ್ ಶ್ರೀ ವಿ. ಪಿ. ಮೋಹನ್ ಕುಮಾರ್‌ರವರ ಕಾರ್ಯದರ್ಶಿ ಇವರ ಮರು ನೇಮಕಾತಿ ವೇತನವನ್ನು ರೂ. 23,783/–(ಇಪ್ಪತ್ತಮೂರು ಸಾವಿರದ ಏಳುನೂರಾ ಎಂಭತ್ತಮೂರು ರೂಪಾಯಿಗಳು ಮಾತ್ರ)

ಗಳಿಗೆ ನಿಗದಿಪಡಿಸಿದೆ. ಈ ವೇತನದೊಂದಿಗೆ ಮೂಲವೇತನವಾದ ರೂ. 51,550/- ಗಳಿಗೆ ಲಭ್ಯವಾಗುವ DA/HRA/CCA ಗಳನ್ನು ಪಡೆಯಬಹುದು. ಆದರೆ, ನಿವೃತ್ತ ವೇತನದ ಮೇಲಿನ ತುಟ್ಟಿಭತ್ಯೆಯನ್ನು ಪಡೆಯುವಂತಿಲ್ಲ. ನಿವೃತ್ತಿ ನಂತರದ ಸೇವೆಯನ್ನು ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವಂತಿಲ್ಲ. ಶ್ರೀಯುತರ ನೇಮಕಾತಿಯು ಈ ಅದೇಶದೊಂದಿಗೆ ಲಗತ್ತಿಸಿರುವ ಅನುಬಂಧದ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಟಿಪ್ಪಣಿ ಸಂಖ್ಯೆ: ಆಇ 2110 ವೆಚ್ಚ-1/2010, ದಿನಾಂಕ 17-01-2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಸರ್ಕಾರಿ ಆದೇಶ ಸಂಖ್ಯೆ: ಇಎನ್ 125 ಪಿಪಿಸಿ 2009, ದಿನಾಂಕ: 29-01-2011ಕ್ಕೆ ಅನುಬಂಧ

ಗುತ್ತಿಗೆ ಆಧಾರದ ಮರು ನೇಮಕಾತಿಯ ಬಗ್ಗೆ ಷರತ್ತು ಮತ್ತು ನಿಬಂಧನೆಗಳು

1 ಶ್ರೀ ಹೆಚ್. ಪಿ. ದೇಸಿಗೌಡ ಇವರ ಗುತ್ತಿಗೆ ನೇಮಕಾತಿ ಅವಧಿಯು ದಿನಾಂಕ 01-12-2010 ರಿಂದ 30-06-2011ರ ಅವಧಿಯವರೆಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇದ್ದು, ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.

2 ಶ್ರೀ ಹೆಚ್. ಪಿ. ದೇಸಿಗೌಡ ಇವರು ಪಡೆಯುತ್ತಿರುವ ನಿವೃತ್ತಿ ವೇತನದೊಂದಿಗೆ ರೂ. 23,783/-ಮರು ನೇಮಕಾತಿ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ವೇತನದ ಜೊತೆಗೆ ಅವರು ನಿವೃತ್ತಿ ಹೊಂದುವಾಗ ಪಡೆಯುತ್ತಿದ್ದ ಮೂಲ ವೇತನ ಮೇಲೆ ಕಾಲಕಾಲಕ್ಕೆ ಲಭ್ಯವಾಗುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ನಗರ ಪರಿಹಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಅವರು ಪಡೆಯುತ್ತಿರುವ ನಿವೃತ್ತಿ ವೇತನದ ಮೇಲೆ ತುಟ್ಟಿಭತ್ಯೆ ಸೇರಿದಂತೆ ಯಾವುದೇ ಇತರ ಭತ್ಯೆಗಳು ಲಭ್ಯವಿರುವುದಿಲ್ಲ.

3 ಸದರಿ ಗುತ್ತಿಗೆ ನೌಕರರು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಯಾಣ ಮಾಡಲೇ ಬೇಕಾದಲ್ಲಿ ಮಾತ್ರ ಅವರು ನೇಮಕಾತಿ ಹೊಂದಿರುವ ಹುದ್ದೆಯ ಕಾಲಿತ ವೇತನ ಶ್ರೇಣಿಯ ಕನಿಷ್ಠ ವೇತನದ ಮೇಲೆ ನಿಯಮಾನುಸಾರ ಲಭ್ಯವಿರುವ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

4 ಸದರಿ ಗುತ್ತಿಗೆ ನೌಕರರುಗಳು ವಾರ್ಷಿಕ 15 ದಿನಗಳ ಸಾಂದರ್ಭಿಕ ರಜೆ ಮತ್ತು ಕೆ.ಸಿ.ಎಸ್.ಆರ್. ನಿಯಮ 118 (ಎ)ರ ಪ್ರಕಾರ ಗಳಿಕೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.

5 ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯ ಅಂದರೆ ವೇತನ ಬಡ್ತಿ, ಪದೋನ್ನತಿ, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಸದರಿ ಗುತ್ತಿಗೆ ನೌಕರರು ಅರ್ಹರಾಗಿರುವುದಿಲ್ಲ.

6 ದುರ್ವರ್ತನೆ, ನಿರ್ಲಕ್ಷ್ಯತೆಯ ನಿಮಿತ್ತ ಸರ್ಕಾರಕ್ಕೆ ಸಂಬಂಧಿಸಬಹುದಾದ ಎಲ್ಲಾ ನಷ್ಟಗಳನ್ನು ಸರ್ಕಾರಕ್ಕೆ ಸದರಿ ನೌಕರರು ಭರಿಸಿಕೊಡಲು ಬದ್ಧರಾಗಿರತಕ್ಕದ್ದು.

7 ಸದರಿ ಮರು ನೇಮಕಾತಿ ಅವಧಿಯ ಸೇವೆಯನ್ನು ನಿವೃತ್ತಿ ವೇತನ ಹಾಗೂ ಇತ್ಯಾದಿ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವುದಿಲ್ಲ.

8 ಅವರ ಕರ್ತವ್ಯ, ಕಾರ್ಯ ಮತ್ತು ಪ್ರಕಾರ್ಯಗಳನ್ನು ಶ್ರದ್ಧೆ, ಭಕ್ತಿ ಮತ್ತು ಆಸಕ್ತಿಯಿಂದ ಅವರು ನೆರವೇರಿಸುವುದು

9 ಅವರು ಕರ್ತವ್ಯಗಳನ್ನು ಪಾಲಿಸುತ್ತಿರುವ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸಬೇಕು.

10 1966ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ ಮತ್ತು 1957ರ ಕರ್ನಾಟಕ ನಾಗರೀಕಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗೆ ಅವರು ಬದ್ಧರಾಗಿರುತ್ತಾರೆ.

11 ಈ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ

12 ಅವರ ದುರ್ನಡತೆಯಿಂದಾಗಲೀ ಅಥವಾ ನಿರ್ಲಕ್ಷ್ಯತೆ, ಉದಾಸಿನತೆಯಿಂದಾಗಲೀ ಸರ್ಕಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ನಷ್ಟವನ್ನು ಉಂಟುಮಾಡಿದ್ದಲ್ಲಿ, ಅದನ್ನು ಸರ್ಕಾರಕ್ಕೆ ತುಂಬಿಕೊಡಲು ಅವರು ಹೊಣೆಯಾಗಿರುತ್ತಾರೆ.

13 ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಐವತ್ತು (ರೂ. 50.00/-) ರೂಪಾಯಿಗಳ ಮೌಲ್ಯದ ಛಾಪಾ ಕಾಗದದಲ್ಲಿ ಸದರಿ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಒಳಗೊಂಡಿರುವ ಕರಾರು ಪತ್ರವನ್ನು ಕ್ರಮಬದ್ಧ ರೀತಿಯಲ್ಲಿ ಸದರಿ ನೌಕರರಿಂದ ಬರೆಯಿಸಿಕೊಳ್ಳತಕ್ಕದ್ದು.

ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. ನಂ. 339

FOREST, ECOLOGY AND ENVIRONMENT SECRETARIAT

Sub :- Diversion of 0.50 ha. of Forest Land in Sy. No. 78/1 of Marpady Block in Moodbidri Range, Kundapura Division, Dakshnina Kannada District for building materials in favour of Sri Aithappa Alva, m/s Padma Crashers, Bantwala.

Read :-
1) Letter No. A5 (6) GFL.CR.79/07-08, dated 13-08-2008 of the Principal Chief Conservator of Forests, Bangalore.
2) State Government letter No. FEE 93 FFM 2008, dated 10-11-2008
3) Government of India Ministry of Environment and Forests, Regional Office, South Zone, Bangalore letter No. 4-KRB551/2008-BAN/5220, dated 23rd July 2009.
4) Letter No. A5 (6) GFL.CR.79/07-08, dated 27-05-2010 of the Principal Chief Conservator of Forests, Bangalore.
5) State Government letter No. FEE 93 FFM 2008, dated 17-08-2010.
6) Government of India Ministry of Environment and Forests, Regional Office, South Zone, Bangalore letter No. 4-KRB551/2008-BAN/8122 dated: 2nd November, 2010.

Preamble:-

The Principal Chief Conservator of Forests had sent proposal vide his letter dated 13-08-2008 read at (1) above for diversion of 0.50 ha. of Forest land in Sy. No. 78/1 of Marpady Block in Moodbidri Range, Kundapura Division, Dakshnina Kannada District for building materials in favour of Sri Aithappa Alva, M/s Padma Crushers, Bantwala subject to certain conditions.

The proposal of the Principal Chief Conservator of Forests was recommended to Government of India, Ministry of Environment and Forests, Regional Office, South Zone, Bangalore vide State Government letter dated 10-11-2008 read at (2) above seeking prior approval of Government of India under section (2) of the Forest (Conservation) Act, 1980.

After careful consideration of the proposal of the State Government, Government of India vide its letter dated 23rd July 2009 read at (3) above has agreed in-principle (Stage-I) approval subject to the fulfillment of certain conditions.

In compliance of the conditions stipulated by Government of India vide its letter dated 23rd July 2009 the Principal Chief Conservator of Forests vide his letter dated 27-05-2010 read at (4) above has sent his compliance report. This compliance report was forwarded to Government of India vide State Government letter dated 17-08-2010 read at (5) above. Government of India vide its letter dated 2nd November 2010 read at (6) above has conveyed its final approval (Stage-II) under Section 2 of the Forest (Conservation) Act, 1980 for diversion of 0.50 ha. of forest land subject to certain conditions. Hence the order.

Government Order No.: FEE 93 FFM 2008, Bangalore, Dated 24-01-2011

In the circumstances explained above, Government is pleased to accord sanction under Section 2 of the Forest (Conservation) Act, 1980 for diversion of 0.50 ha. of Forest land in Sy. No. 78/1 of Marpady Block in Moodbidri Range, Kundapura Division, Dakshnina Kannada District for building materials in favour of Sri Aithappa Alva, M/s Padma Crushers, Bantwala subject to the following conditions.

1. Legal status of Forest land shall remain unchanged
2. The demarcation of the proposed forest area shall be carried out by erecting cement concrete pillars duly numbered at an interval of 20 meters at the cost of user agency.
3. The Compensatory afforestation shall be raised over 1.00 ha. of degraded forest land at the cost of user agency.
4. The user agency shall maintain area upto 7.5 meters as safety zone area all along the boundary outside the lease area as per the guidelines issued under forest (Conservation) Act, 1980. The State Government shall also raise and maintain the plantation over an area, one and half times of the extent of the safety zone, of the degraded forest land, at the project cost.
5. Adequate care shall be taken to check any rolling of over burdens/dumps beyond diverted area and also to check soil erosion caused due to quarrying activities.
6. The forest area shall be used for the purpose of quarrying, storage of materials and OB dumps only. No permanent buildings of labour sheds should be constructed in the leased area.
7. Reclamation plan shall be implemented by the user agency from the very first year of mining and an annual report shall be sent to the Nodal Officer, Karnataka and the Regional Office, Bangalore.
8. The consent of Karnataka State Pollution Control Board (KSPCB) shall be obtained under Air and Water Act before commencement of mining operation and it shall be renewed annually.
9. The additional amount of the Net Present Value (NPV) of the diverted forest land if any becoming due after revision of the same by the Hon'ble Supreme Court of India in future, shall be charged by the State Government from the user agency and the same shall be transferred to Ad-hoc CAMPA in account number CA 1582 of Corporation Bank, Block-II, CGO Complex, Phase-I, Lodhi Road, New Delhi-110003.
10. The total forest area utilized for the Project shall not exceed 0.50 ha. In case the land is not taken over by the user agency or the same is not used for the stipulated purpose within a period of two years, then the area shall be taken back by the Forest Department.
11. The lease period is for ten (10) years from the date of Notification
12. The user agency shall pay compensatory afforestation charges double the 0.50 ha. of degraded forest land in lieu of the land diverted for quarry purpose.

13. The lessee shall pay usual lease rent as prescribed by the Government from time to time.
14. The lessee shall take-up planting work on the static dumps during the advance quarrying operation.
15. Before closing the quarry lease the lessee shall reclaim the quarry and rehabilitate the dumping area at his cost/or deposit the cost to Forest Department as calculated by the Deputy Conservator of Forests/State Government.
16. The lessee shall carry out soil and water conservation and other necessary measures as advised by the Forest Department.
17. The lessee shall undertake to protect rigidly the leased area and forest area surrounding the area up to 100 meters from the leased site and shall ensure that no smuggling/poaching activities taken place in this area.
18. The lessee shall not cut any trees without prior permission of the Forest Department and all produce of permitted felling shall be handed over to Forest Department under cover of receipt transportation of quarried material (stones, jelly etc.,) should be strictly as per transit rules in force.
19. The lessee shall abide by all the conditions prescribed by Govt. of India and Govt. of Karnataka.
20. The lessee shall execute an agreement with the Forest Department binding himself to abide by all usual conditions and terms as per orders of the Government as well as Principal Chief Conservator of Forests.
21. In case of violation of agreement conditions, the Deputy Conservator of Forests will have right to suspend the mining activities.
22. Quarried material shall be used only within the District
23. Quarrying shall be operated by using Aluminum Nitrate and other light explosive chemicals for loosening the mineral.
24. The trees to be felled in the area should not exceed 10 number
25. The boundary of the quarry shall be fixed by erecting the stone pillars of four feet height.
26. No new roads shall be made/opened inside the forest
27. Net present Value shall be paid as per the Government Order dated 17-1-2004 and time to time revision.
28. Quarrying shall be contained within gentle slope not exceeding 30 degrees.
29. The lessee shall pay the cost of raising compensatory afforestation charges at the rate of prevailing at the time of sanction (at present it is Rs. 94,000/-per ha.)
30. Any other condition that the State Government or the Chief Conservator of Forests (Central), Regional Office, Bangalore may impose from time to time in the interest of conservation, protection and development of forests.

By Order and in the name of the Governor of Karnataka

H. M. Mallikarjuna Swamy

Under Secretary to Government

PR. No. 340 Forests, Ecology and Environment Department

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ನಗರಗೆರೆ ಹೋಬಳಿ ಎಂ. ಗೊಲ್ಲಹಳ್ಳಿ ಹೊಸಕೆರೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಶೇವಣಿ ಮಾಡಲು ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ 09–07–2010ರ ಪತ್ರದ ಸಂಖ್ಯೆ: ಮುಸದ/ಲೆಶಾಖೆ/ಲೆಸ–1/3 ಭೂಸ್ವಾದೀನ/10–11/1652.

2) ಕಂದಾಯ ಇಲಾಖೆಯ ಪತ್ರ ಸಂಖ್ಯೆ: ಕಂಇ 01 ಭೂಸ್ವಾಕೋ 2010, ದಿನಾಂಕ 09–12–2010.

ಪ್ರಸ್ತಾವನೆ :

ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ನಗರಗೆರೆ ಹೋಬಳಿ ಕಾಟನಕಲ್ಲು ಮತ್ತು ಮುದ್ದಲೋಡು ಗ್ರಾಮಗಳ ಜಮೀನುಗಳನ್ನು ಎಂ. ಗೊಲ್ಲಹಳ್ಳಿ ಹೊಸಕೆರೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡಿದ್ದು, ಒಪ್ಪಂದದ ಅವಾರ್ಡ್‌ನಂತೆ ಶೇವಣಿ ಮಾಡಲು ರೂ. 119.27 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ಇವರು ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ನಗರಗೆರೆ ಹೋಬಳಿ ಕಾಟನಕಲ್ಲು ಮತ್ತು ಮುದ್ದಲೋಡು ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ 44–24½ ಎಕರೆ ಜಮೀನನ್ನು ಎಂ. ಗೊಲ್ಲಹಳ್ಳಿ ಹೊಸಕೆರೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆ ದಿನಾಂಕ 10–05–2007ರಂದು ಹೊರಡಿಸಿದೆ. ಈ ಪ್ರಕರಣದಲ್ಲಿ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಇವರ ಕೋರಿಕೆಯಂತೆ ಸದರಿ ಗ್ರಾಮಗಳ ಖುಷ್ಕಿ ಜಮೀನಿಗೆ ರೂ. 3.00 ಲಕ್ಷ ಹಾಗೂ ಬಾಗಾಯ್ತು ಜಮೀನುಗಳಿಗೆ ರೂ. 3.50 ಲಕ್ಷಗಳನ್ನು ನಿಗಧಿಪಡಿಸಿ ಒಪ್ಪಂದದ ಅವಾರ್ಡ್ ರಚಿಸಲು ಕಂದಾಯ ಇಲಾಖೆಯ ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಪತ್ರದಲ್ಲಿ ಸೂಚಿಸಿದೆ. ಆದುದರಿಂದ ಸಹಾಯಕ ಆಯುಕ್ತರು ಮತ್ತು ಭೂಸ್ವಾಧೀನಾಧಿಕಾರಿ, ಚಿಕ್ಕಬಳ್ಳಾಪುರ ಉಪ ವಿಭಾಗ ಇವರು ದಿನಾಂಕ 25–11–2010 ರಂದು ಒಪ್ಪಂದದ ಅವಾರ್ಡ್ ರಚಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 102 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ: 29–01–2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು ನಗರಗೆರೆ ಹೋಬಳಿ ಕಾಟನಕಲ್ಲು ಮತ್ತು ಮುದ್ದಲೋಡು ಗ್ರಾಮಗಳ ಜಮೀನುಗಳನ್ನು ಎಂ. ಗೊಲ್ಲಹಳ್ಳಿ ಹೊಸಕೆರೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡಿದ್ದು, ಒಪ್ಪಂದದ ಅವಾರ್ಡ್‌ನಂತೆ ಶೇವಣಿ ಮಾಡಲು ರೂ. 119.27 ಲಕ್ಷಗಳನ್ನು ಬಿಡುಗಡೆ ಮಾಡಲು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ"4702-0-1-101-02-139 ಹೊಸಕೆರೆಗಳ ನಿರ್ಮಾಣ ಪ್ರಧಾನ ಕಾಮಗಾರಿಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೆ ಒಳಪಟ್ಟಿರುವ ಜಮೀನನ್ನು ಸಣ್ಣ ನೀರಾವರಿ ಇಲಾಖೆಯ ವಶಕ್ಕೆ ಪಡೆದುಕೊಂಡು ಕಂದಾಯ ದಾಖಲೆಗಳಲ್ಲಿ ಇಂಡೀಕರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2010, ದಿನಾಂಕ 20-10-2010ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋಪಾಲ್
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. ನಂ. 341

ವಸತಿ ಸಚಿವಾಲಯ

ವಿಷಯ : ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ವಇ 16 ಹೆಚ್‌ಎಹೆಚ್ 2010, ದಿನಾಂಕ 27-03-2010
2) ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಮುಮಕಾ/7447/2010. ದಿನಾಂಕ 31-12-2010.

ಪ್ರಸ್ತಾವನೆ :

ಕಳೆದ ವರ್ಷ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಸುರಿದ ಭಾರಿ ಮಳೆ ಮತ್ತು ನೆರೆಹಾವಳಿಯಿಂದ ಮನೆಗಳನ್ನು ಕಳೆದುಕೊಂಡವರಿಗೆ "ಆಸರೆ" ಯೋಜನೆಯಡಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿ. ಸಂಸ್ಥೆಯ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಇಳಕಲ್ ಗ್ರಾಮದಲ್ಲಿ 500 ಮನೆಗಳನ್ನು ನಿರ್ಮಿಸಲು ಪ್ರಾರಂಭಿಸದೆ ಇರುವುದರಿಂದ ಸದರಿ ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ಹಂಚಿಕೆ ಮಾಡಲು ಬಾಗಲಕೋಟೆ ಜಿಲ್ಲಾಧಿಕಾರಿಗಳು ಕೋರಿರುತ್ತಾರೆ. ಮನೆಗಳ ನಿರ್ಮಾಣ ಕೈಗೊಳ್ಳಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ವಇ 16 ಹೆಚ್‌ಎಹೆಚ್ 2010, ಬೆಂಗಳೂರು, ದಿನಾಂಕ: 21-01-2011

ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿ. ಸಂಸ್ಥೆಗೆ ವಹಿಸಲಾದ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ಇಳಕಲ್ ಗ್ರಾಮದಲ್ಲಿ 500 ಮನೆಗಳ ನಿರ್ಮಾಣ ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಿಕೊಡಲಾಗಿದೆ. ಈ ಮನೆಗಳ ನಿರ್ಮಾಣ ಕಾಮಗಾರಿಯನ್ನು ಕೂಡಲೇ ಕೈಗೊಂಡು ಶೀಘ್ರವಾಗಿ ಪೂರ್ಣಗೊಳಿಸಲು ಆದೇಶಿಸಲಾಗಿದೆ. ಈ ಕಾಮಗಾರಿಗಳಿಗೆ ಬೇಕಾದ ಹಣವನ್ನು ಬಿಡುಗಡೆ ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ಆರ್. ವಲ್ಲೂರ
ಪೀಠಾಧಿಕಾರಿ-2, ವಸತಿ ಇಲಾಖೆ

ಪಿ.ಆರ್. ನಂ. 342

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಸಿಆಸುಇ/36/ಕೆಇವಿ/2008, ಬೆಂಗಳೂರು, ದಿನಾಂಕ 24-01-2011

***

ಶ್ರೀ ಕೆ. ಪಿ. ಹೊನಕೇರಿ, ಕೆ.ಎ.ಎಸ್. ಇವರ ದಾಳಿ ಪ್ರಕರಣದ ವಿರುದ್ಧ ಹೊರಡಿಸಿದ ಅಭಿಯೋಜನಾ ಸರ್ಕಾರಿ ಆದೇಶ ಸಂಃಸಿಆಸುಇ 36 ಕೆಇವಿ 2008 ದಿನಾಂಕ 20-12-2010ರ ಆದೇಶದಲ್ಲಿನ ಎರಡನೇ ಪುಟದ ಮೊದಲ ಕಂಡಿಕೆಯ ಕ್ರಮ ಸಂ. 5 ರಲ್ಲಿ ದಿನಾಂಕ 28-03-2008 ಎಂಬುದರ ಬದಲಿಗೆ ದಿನಾಂಕ 28-04-2008 ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಹಾಗೂ ಸದರಿ ಆದೇಶದ ಎರಡನೇ ಪುಟದ ಕೊನೆಯಲ್ಲಿ ಕ್ರಮ ಸಂ. 4ರಲ್ಲಿ ದಿನಾಂಕ 28-03-2008 ರಂದು ಎಂದು ಸೇರಿಸಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಾ॥ ಎಂ. ಟಿ. ರೇಜು
ಸರ್ಕಾರದ ಉಪ ಕಾರ್ಯದರ್ಶಿ
ಸಿಆಸುಇ (ಸೇವೆಗಳು)

ಪಿ.ಆರ್. ನಂ. 343

ಇಂಧನ ಸಚಿವಾಲಯ

ವಿಷಯ : ಮೆII ಫೀಜ್ಞಾ ಡೆವಲಪರ್ಸ್ ಅಂಡ್ ಇಂಟರ್ ಟ್ರೇಡ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಹಂಚಿಕೆ ಮಾಡಲಾಗಿರುವ 15.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ರದ್ದು ಪಡಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಡಿಇ 319 ಎನ್‌ಸಿಇ 2004 ದಿನಾಂಕ: 21.12.2004.
2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/cancellation/ 2010/1001 ದಿನಾಂಕ: 15.04.2010 ಮತ್ತು 19/20.04.2010.
3) ಕಾರಣ ಕೇಳುವ ನೋಟೀಸ್ ಸಂಖ್ಯೆ: ಇಎನ್ 208 ಎನ್‌ಸಿಇ 2010 ದಿನಾಂಕ: 26.04 2010.

4) ಮೆ|| ಫೀಜ಼ಾ ಡೆವಲಪರ್ಸ್ ಅಂಡ್ ಇಂಟರ್ ಟ್ರೇಡ್ ಪ್ರೈವೇಟ್ಸ್ ಲಿಮಿಟೆಡ್‌ನ ಪತ್ರ ಸಂಖ್ಯೆ ಫೀಜ಼ಾ / ಎಸಿಎಸ್-ಇಡಿ/05-10/127 ದಿನಾಂಕ: 12.05.2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆII ಫೀಜ಼ಾ ಡೆವಲಪರ್ಸ್ ಅಂಡ್ ಇಂಟರ್‌ಟ್ರೇಡ್ ಲಿಮಿಟೆಡ್ ಇವರಿಗೆ ಚಿಕ್ಕಮಗಳೂರು ಜಿಲ್ಲೆಯ ಯರಡಹಂಕಲ್ಲು ಗ್ರಾಮದಲ್ಲಿ 6.00 ಮೆಗಾ ವ್ಯಾಟ್ ಮತ್ತು ಹೊಗೆರಹಳ್ಳಿ ಗ್ರಾಮದಲ್ಲಿ 9.00 ಮೆಗಾ ವ್ಯಾಟ್ (ಒಟ್ಟು 15.00 ಮೆಗಾ ವ್ಯಾಟ್) ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರು ದಿನಾಂಕ: 31.03.2010ರವರೆಗೆ ಈಗಾಗಲೇ ಹಂಚಿಕೆಯಾಗಿದ್ದು ಯೋಜನೆಯನ್ನು ಪ್ರಾರಂಭಿಸದೇ ಇರುವ ಕಂಪನಿಗಳ ಪಟ್ಟಿ ಮಾಡಿ ಕಳುಹಿಸಿರುತ್ತಾರೆ.

ಮೆ. ಫೀಜಾ ಡೆವಲಪರ್ಸ್ ಅಂಡ್ ಇಂಟರ್ ಟ್ರೇಡ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಯೋಜನೆ ಹಂಚಿಕೆಯಾಗಿ ನಿಗದಿತ ಅವಧಿಯೊಳಗೆ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಹಾಗೂ ಯೋಜನೆಯ ಕಾಲಾವಕಾಶ ವಿಸ್ತರಿಸಿಕೊಳ್ಳದೇ ಇರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಕಾರಣ ಕೇಳುವ ನೋಟೀಸಿನಲ್ಲಿ ಯೋಜನೆಯ ಹಂಚಿಕೆಯನ್ನು ಏಕೆ ರದ್ದು ಪಡಿಸಬಾರದೆಂಬುದಕ್ಕೆ ಸಮಜಾಯಿಷಿಯನ್ನು ನೀಡುವಂತೆ ನೋಂದಾಯಿತ ಅಂಚೆ ಮೂಲಕ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಅಭಿವೃದ್ಧಿದಾರರು ಕಾರಣ ಕೇಳುವ ನೋಟೀಸಿಗೆ ಉತ್ತರಿಸುತ್ತ, ಭೂ ಸರ್ವೆ ಹಾಗೂ ಇತರೆ ಅನುಮೋದನೆಗಾಗಿ ಹೆಚ್ಚಿನ ಪ್ರಮಾಣದಲ್ಲಿ ವೆಚ್ಚ ಮಾಡಲಾಗಿದೆ ಹಾಗೂ ಕಾಲಾವಧಿ ವಿಸ್ತರಣೆ ಕುರಿತು ಕೆ.ಇ.ಆರ್.ಇ.ಡಿ.ಎಲ್. ಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿ, ಕಾರಣ ಕೇಳುವ ನೋಟೀಸನ್ನು ಹಿಂದಕ್ಕೆ ಪಡೆಯಬೇಕೆಂದು ಕೋರಿರುತ್ತಾರೆ. ಅಭಿವೃದ್ಧಿದಾರರು ಸಾಧಿಸಿರುವ ಪ್ರಗತಿಯ ಬಗ್ಗೆ ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಯೋಜನೆ ಹಂಚಿಕೆಯಾಗಿ ಸುಮಾರು 5 1/2 ವರ್ಷಗಳು ಕಳೆದಿದ್ದರೂ ಸಹ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಯಾವುದೇ ಕ್ರಮವನ್ನು ಅಭಿವೃದ್ಧಿದಾರರು ಕೈಗೊಂಡಿರುವುದಿಲ್ಲ.

ಸದರಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಲಾಗಿದೆ:-

ಸರ್ಕಾರಿ ಆದೇಶ ಸಂಖ್ಯೆ: ಇಎನ್ 208 ಎನ್‌ಸಿಇ 2010, ಬೆಂಗಳೂರು, ದಿನಾಂಕ: 02-02-2011

ಪ್ರಸ್ತಾವನೆಯನ್ನು ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರಿ ಆದೇಶ ಸಂಖ್ಯೆ: ಡಿಇ 319 ಎನ್‌ಸಿಇ 2004 ದಿನಾಂಕ: 21.12.2004ರಲ್ಲಿ ಮೆII ಫೀಜ಼ಾ ಡೆವಲಪರ್ಸ್ ಅಂಡ್ ಇಂಟರ್ ಟ್ರೇಡ್ ಪ್ರೈವೇಟ್ ಲಿಮಿಟೆಡ್ ಇವರ ಚಿಕ್ಕಮಗಳೂರು ಜಿಲ್ಲೆಯ ಯರಡಹಂಕಲ್ಲು (6.00 ಮೆಗಾ ವ್ಯಾಟ್) ಮತ್ತು ಹೊಗರೆಹಳ್ಳಿ ಗ್ರಾಮದಲ್ಲಿ (9.00 ಮೆಗಾ ವ್ಯಾಟ್) ಹಂಚಿಕೆಯಾಗಿರುವ 15.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ಆದೇಶ ಮತ್ತು ಈ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್ 325

ಇಂಧನ ಸಚಿವಾಲಯ

ವಿಷಯ : ಮೆ. ವಕ್ಕಲ್ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರಿಗೆ 12.00 ಮೆಗಾ ವ್ಯಾಟ್ ಸಾಮರ್ಥ್ಯದ ಜೈವಿಕ ಇಂಧನ ಆಧಾರಿತ ವಿದ್ಯುತ್ ಸ್ಥಾವರ ಸಾಪನೆಗೆ ನಿರಾಕ್ಷೇಪಣೆ ನೀಡುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಪತ್ರ ಸಂಖ್ಯೆ: ಡಿಇ 24 ಎನ್‌ಸಿಇ 2002 ದಿನಾಂಕ: 03.04.2002.

2) ಸರ್ಕಾರದ ಪತ್ರ ಸಂಖ್ಯೆ: ಡಿ ಇ 270 ಎನ್‌ಸಿಇ 2002 ದಿನಾಂಕ: 07.11.2002.

3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/03/ವಿಪಿಸಿಎಲ್/10/3522 ದಿನಾಂಕ: 02/20.12.2010.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪತ್ರದಲ್ಲಿ ಮೆII ವಕ್ಕಲ್ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರಿಗೆ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ 7.5 ಮೆಗಾ ವ್ಯಾಟ್ ಸಾಮರ್ಥ್ಯದ ಜೈವಿಕ ಇಂಧನ ಆಧಾರಿತ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ನಿರಾಕ್ಷೇಪಣೆ ಯನ್ನು ನೀಡಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ ಮೆII ವಕ್ಕಲ್ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರಿಗೆ ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ನಿರಾಕ್ಷೇಪಣೆ ನಿಡಲಾಗಿದ್ದ 7.5 ಮೆಗಾ ವ್ಯಾಟ್ ಸಾಮರ್ಥ್ಯದ ಜೈವಿಕ ಇಂಧನ ಆಧಾರಿತ ವಿದ್ಯುತ್ ಸ್ಥಾವರದ ಸಾಮರ್ಥ್ಯವನ್ನು 12.00 ಮೆಗಾ ವ್ಯಾಟ್ ಹೆಚ್ಚಿಸಲಾಗಿತ್ತು.

ಮೇಲೆ ಓದಲಾದ (3) ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆII ವಕ್ಕಲ್ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರ ಕೋರಿಕೆಯ ಮೇರೆಗೆ ಸದರಿಯವರಿಗೆ ಈಗಾಗಲೇ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ 12.00 ಮೆಗಾ ವ್ಯಾಟ್ ಸಾಮರ್ಥ್ಯದ ಜೈವಿಕ ಇಂಧನ ಆಧಾರಿತ ವಿದ್ಯುತ್ ಸ್ಥಾವರದ ಸ್ಥಾಪನೆಗೆ ನೀಡಲಾಗಿರುವ ನಿರಾಕ್ಷೇಪಣೆಯ ಅವಧಿಯನ್ನು ವಿಸ್ತರಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಅಭಿವೃದ್ಧಿದಾರರು 2002ರಿಂದ ಇದುವರೆಗೂ ಜೈವಿಕ ಇಂಧನ ಆಧಾರಿತ ವಿದ್ಯುತ್ ಸ್ಥಾವರ ಸ್ಥಾಪಿಸಿರುವುದಿಲ್ಲ. ಆದ್ದರಿಂದ ಈಗಾಗಲೇ ನೀಡಿರುವ ನಿರಾಕ್ಷೇಪಣೆಯನ್ನು ರದ್ದುಗೊಳಿಸಿ ಹೊಸದಾಗಿ ನಿರಾಕ್ಷೇಪಣೆಯನ್ನು ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 500 ಎನ್‌ಸಿಇ 2010, ಬೆಂಗಳೂರು, ದಿನಾಂಕ: 02-02-2011

ಮೆ|| ವಕ್ಕಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ಸರ್ಕಾರದ ಪತ್ರಗಳ ಸಂಖ್ಯೆ: ಡಿಇ 24 ಎನ್‌ಸಿಇ 2002 ದಿನಾಂಕ: 03.04.2002 ಮತ್ತು ಸಂಖ್ಯೆ: ಡಿಇ 270 ಎನ್‌ಸಿಇ 2002 ದಿನಾಂಕ: 07.11.2002ರಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನಲ್ಲಿ 12 ಮೆಗಾ ವ್ಯಾಟ್ ಸಾಮರ್ಥ್ಯದ ಜೈವಿಕ ಇಂಧನ ವಿದ್ಯುತ್ ಸ್ಥಾವರ ಸ್ಥಾಪಿಸಲು ನೀಡಲಾಗಿದ್ದ ನಿರಾಕ್ಷೇಪಣೆಯನ್ನು ರದ್ದುಪಡಿಸಲಾಗಿದೆ.

ಮುಂದುವರೆದು, ಮೆII ವಕ್ಕಲ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ಇವರಿಗೆ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ವಿ. ಗಟ್ಟಹಳ್ಳಿ ಎಂಬಲ್ಲಿ ನೀಡಲಾಗಿರುವ 12.00 ಮೆಗಾ ವ್ಯಾಟ್ ಸಾಮರ್ಥ್ಯದ ಜೈವಿಕ ಇಂಧನ ಆಧಾರಿತ ವಿದ್ಯುತ್ ಸ್ಥಾವರವನ್ನು ದಿನಾಂಕ: 31.12.2011ರೊಳಗಾಗಿ ಸ್ಥಾಪಿಸಬೇಕೆಂಬ ನಿಬಂಧನೆಗೊಳಪಟ್ಟು ಈ ಕೆಳಗಿನ ಷರತ್ತಿಗೊಳಪಟ್ಟು ನಿರಾಕ್ಷೇಪಣೆಯನ್ನು ನೀಡಿದೆ:-

a. The company shall obtain separate clearance from Karnataka Power Transmission Corporation Limited inrespect of evacuation of power.

b. The company shall enter into wheeling and Banking agreement with Bagalore Electricity Supply Company Limited (BESCOM) in case of selling power to third party and power purchase agreement in case of selling power to BESCOM.

c. The company shalll obtain necessary statutory clearence wherever required from the respective Departments / Organizations such as Forest Department, Revenue Department, & Karnataka State Pollution Control Board, etc. for the Power plant.

d. The Detailed Project Report (D.P.R.) for the power plant shall be got approved by Karnataka Renewable Energy Development Limited, before the commencement of the power plant.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್ 326

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ವೆಂಕಟಾಪುರ ತಾಂಡಾ ಹತ್ತಿರ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ: 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ / ಸನೀ(ಉ) ವಲಯ/ಬಿಜೆಪಿ/ಎಇ-14/2010-11/6371 ದಿನಾಂಕ 02.12.2010

2) ಸರ್ಕಾರದ ಆದೇಶ ಸಂಖ್ಯೆ: ಸನೀಇ 236 ಮಸಾವಿ 2009 (10), ದಿ: 24/12/2009.

3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ 22/01/2011ರ ಪತ್ರ ಸಂಖ್ಯೆ: ಮುಸದ/ಆಪ್ತಶಾಖೆ/ಟೆಂಡರ್/08-09/249

ಪ್ರಸ್ತಾವನೆ:

ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ವೆಂಕಟಾಪುರ ತಾಂಡಾ ಹತ್ತಿರ ಅಣೆಕಟ್ಟು ನಿರ್ಮಾಣ ಕಾಮಗಾರಿಯ 250.00 ಲಕ್ಷ ರೂಗಳ ಅಂದಾಜಿಗೆ ಮೇಲೆ (2)ರಲ್ಲಿ ಓದಲಾದ ದಿನಾಂಕ 24/12/09ರ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಗೆ ಎ.ಐ.ಬಿ.ಪಿ ಕಾರ್ಯಕ್ರಮದಡಿ ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ- ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	18.10.2010
ಜಿಲ್ಲಾ ಟೆಂಡರ್ ಬುಲೆಟಿನ್	15.10.2010
ಸಂಯುಕ್ತ ಕರ್ನಾಟಕ ದಿನಪತ್ರಿಕೆ	16.10.2010
ಕರ್ನಾಟಕ ರಾಜ್ಯ ಪತ್ರ	21.10.2010

ಇ- ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ತೆರೆದು ಪರಿಶೀಲಿಸಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ 4 ಜನ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿದ್ದು ಈ ಪೈಕಿ ಎಲ್ಲಾ ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಅವರ ಆರ್ಥಿಕ ಬಿಡ್ ಅನ್ನು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 2,42,79,992/-
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 3,27,91,524/-

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ /ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಮೆII ಅಮೃತಾ ಕನ್‌ಸ್ಟ್ರಕ್ಷನ್ಸ್ (ಪಿ. ವೆಂಕಟೇಶ್ವರ ರಾವ್) ಪ್ರಥಮ ದರ್ಜೆ ಗುತ್ತಿಗೆದಾರರು	3,02,99,134/–	24.79 ಹೆಚ್ಚು	7.60 ಕಡಿಮೆ
2	ದೇವೀಂದ್ರಪ್ಪ ಗೌಡ ಪ್ರಥಮ ದರ್ಜೆ ಗುತ್ತಿಗೆದಾರರು	3,56,34,549/–	46.76 ಹೆಚ್ಚು	8.67 ಹೆಚ್ಚು
3	ಹುಲಿಕಂತರಾಯ ಸಾಹೇಬಗೌಡ ಪ್ರಥಮ ದರ್ಜೆ ಗುತ್ತಿಗೆದಾರರು	3,56,90,132/–	46.99 ಹೆಚ್ಚು	8.84 ಹೆಚ್ಚು
4	ರವಿಶಂಕರ ಆರ್. ಪ್ರಥಮ ದರ್ಜೆ ಗುತ್ತಿಗೆದಾರರು	3,61,97,870/–	49.09 ಹೆಚ್ಚು	10.39 ಹೆಚ್ಚು

ಮೇಲ್ಕಂಡಂತೆ ಕ್ರಸಂ.1ರಲ್ಲಿರುವ ಮೆ. ಅಮೃತಾ ಕನ್‌ಸ್ಟ್ರಕ್ಷನ್ಸ್, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 7.60 ರಷ್ಟು ಕಡಿಮೆ ಇದ್ದು, ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ದಿನಾಂಕ 06/01/2011ರಂದು ನಡೆದ ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಗೆ ಈ ಟೆಂಡರ್‌ನ್ನು ಮಂಡಿಸಲಾಯಿತು. ಸಭೆಯಲ್ಲಿ ಇವರ ಟೆಂಡರನ್ನು ಪರಿಶೀಲಿಸಿದ ನಂತರ 2010-11ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 3,27,91,524/– ಗಳ ಮೇಲೆ ಶೇಕಡ 7.60 ರಷ್ಟು ಕಡಿಮೆ ಇರುವ ದರಗಳಿಗೆ ಅಂದರೆ ರೂ. 3,02,99,134/– ಗಳಿಗೆ ಕಾಮಗಾರಿಯನ್ನು ಮೆII ಅಮೃತಾ ಕನ್‌ಸ್ಟ್ರಕ್ಷನ್ಸ್, ಒಂದನೆ ದರ್ಜೆ ಗುತ್ತಿಗೆದಾರರಿಗೆ ವಹಿಸುವಂತೆ ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 53 ಅಪಿಬಂ 2010, ಬೆಂಗಳೂರು, ದಿನಾಂಕ 03 ನೇ ಫೆಬ್ರವರಿ 2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ವೆಂಕಟಾಪುರ ತಾಂಡಾ ಹತ್ತಿರ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 3,27,91,524/– ಗಳ ಮೇಲೆ ಶೇಕಡ7.60 ರಷ್ಟು ಕಡಿಮೆ ಇರುವ ದರಗಳಿಗೆ ಅಂದರೆ ರೂ. 3,02,99,134/– ಗಳಿಗೆ (ಮೂರು ಕೋಟಿ ಎರಡು ಲಕ್ಷ ತೊಂಬತ್ತೊಂಬತ್ತು ಸಾವಿರದ ಒಂದು ನೂರ ಮುವ್ವತ್ತನಾಲ್ಕು ರೂ.ಗಳು ಮಾತ್ರ) ಮೆII ಅಮೃತಾ ಕನ್‌ಸ್ಟ್ರಕ್ಷನ್ಸ್, ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್ ಡಿ 1 ಟಿಎಫ್ ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಪಿ.ಆರ್ 327

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಕಿರಣಗಿ ಸೈಟ್-2 ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ: 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನೀ/(ಉ) ವ /ಬಿಜೆಪಿ/ಎಇ-1/2010-11/6361 ದಿನಾಂಕ 02.12.2010

2) ಸರ್ಕಾರದ ಆದೇಶ ಸಂಖ್ಯೆ: **ಸನೀಇ 236 ಮಸಾವಿ 2009 (6), ದಿ: 24/12/2009.**

3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ 22/01/2011ರ ಪತ್ರ ಸಂಖ್ಯೆ: ಮುಸದ/ಆಪ್ತಶಾಖೆ/ಟೆಂಡರ್/08-09/249

ಪ್ರಸ್ತಾವನೆ:

ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಕಿರಣಗಿ ಸೈಟ್-2 ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ 75.50 ಲಕ್ಷ ರೂ.ಗಳ ಅಂದಾಜಿಗೆ ಮೇಲೆ (2) ರಲ್ಲಿ ಓದಲಾದ ದಿನಾಂಕ 24/12/09ರ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಕಛೇರಿ ನೋಂದಣಿ ಸಂಖ್ಯೆ: 16/2010-11ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಗೆ ಎ.ಐ.ಬಿ.ಪಿ ಕಾರ್ಯಕ್ರಮದಡಿ ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	23/08/2010
ಸಂಯುಕ್ತ ಕರ್ನಾಟಕ ದಿನಪತ್ರಿಕೆ ಮತ್ತು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆ	28/08/2010

ದಿನಾಂಕ:04/10/2010ರಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರಿನ ತಾಂತ್ರಿಕ ಬಿಡ್ ಅನ್ನು ತೆರೆದು ಪರಿಶೀಲಿಸಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ 4 ಜನ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿದ್ದು, ಇಬ್ಬರು ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿದ್ದು, ಅವರ ಆರ್ಥಿಕ ಬಿಡ್‌ಅನ್ನು ದಿನಾಂಕ 21/10/10 ರಂದು ತೆರೆಯಲಾಗಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 64,07,525/–	
2010–11ನೇ ಸಾಲಿಗೆ ಮುಂದುವರೆಸಿರುವ 2007–08 ನೇ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 61,22,070/–	
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ /ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ವಿ.ಎಂ. ಹೆಬ್ಬಾಳ ಪ್ರಥಮ ದರ್ಜೆ ಗುತ್ತಿಗೆದಾರರು.	65,91,144/–	2.87 ಹೆಚ್ಚು	7.66 ಹೆಚ್ಚು
2	ತಮ್ಮಣ್ಣ ವಿ. ಪವಾರ, ಪ್ರಥಮ ದರ್ಜೆ ಗುತ್ತಿಗೆದಾರರು	67,21,556/–	4.90 ಹೆಚ್ಚು	9.79 ಹೆಚ್ಚು

ಮೇಲ್ಕಂಡಂತೆ ಶ್ರೀ ವಿ.ಎಂ. ಹೆಬ್ಬಾಳ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ನಮೂದಿಸಿದ ದರಗಳನ್ನು 2010–11ನೇ ಸಾಲಿಗೆ ಮುಂದುವರೆಸಿರುವ 2007–08ನೇ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತಕ್ಕೆ ಹೋಲಿಸಿದಾಗ ಶೇಕಡ 7.66ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 06/01/2011 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ 2010–11 ನೇ ಸಾಲಿಗೆ ಮುಂದುವರೆಸಿರುವ 2007–08 ನೇ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ ರೂ. 61,22,070/– ಗಳ ಮೇಲೆ ಶೇಕಡ 7.50 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 65,81,225/– ಗಳಿಗೆ ಕಾಮಗಾರಿಯನ್ನು ಶ್ರೀ ವಿ. ಎಂ. ಹೆಬ್ಬಾಳ, 1ನೇ ದರ್ಜೆ ಗುತ್ತಿಗೆದರರು ರವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 54 ಅಪಿಬಂ 2010, ಬೆಂಗಳೂರು, ದಿನಾಂಕ 03 ನೇ ಫೆಬ್ರವರಿ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಕಿರಣಗಿ ಸೈಟ್–2 ಗ್ರಾಮದ ಹತ್ತಿರ ಹಿರೇಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಕಾಮಗಾರಿಯನ್ನು 2010–11ನೇ ಸಾಲಿಗೆ ಮುಂದುವರೆಸಿರುವ 2007–08ನೇ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ ರೂ. 61,22,070/– ಗಳ ಮೇಲೆ ಶೇಕಡ 7.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 65,81,225/– ಗಳಿಗೆ (ಅರವತ್ತೈದು ಲಕ್ಷದ ಎಂಬತ್ತೊಂದು ಸಾವಿರದ ಇನ್ನೂರ ಇಪ್ಪತ್ತೈದು ರೂ.ಗಳು ಮಾತ್ರ) ಶ್ರೀ ವಿ.ಎಂ. ಹೆಬ್ಬಾಳ, ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್ 328

ರುದ್ರಮೂರ್ತಿ
ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿನ ಅಸುಂಡಿ ನಾಲಾ ಕೆರೆ ಸೈಟ್- 2 (ಗಂಗಾಪುರ) ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಬಂದಾರ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ: 1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನೀ/(ಉ) ವಲಯ /ಬಿಜೆಪಿ/ಎಇ-3/2010-11/6340 ದಿನಾಂಕ 01.12.2010

2) ಸರ್ಕಾರದ ಆದೇಶ ಸಂಖ್ಯೆ: ಸನೀಇ 236 ಮಸಾವಿ 2009 (1), ದಿ: 24/12/09.

3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ 22/01/2011ರ ಪತ್ರ ಸಂಖ್ಯೆ: ಮುಸದ/ಆಪ್ತಶಾಖೆ/ಟೆಂಡರ್/08-09/249.

ಪ್ರಸ್ತಾವನೆ:

ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿನ ಅಸುಂಡಿ ನಾಲಾ ಕೆರೆ ಸೈಟ್-2 (ಗಂಗಾಪುರ) ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಬಂದಾರ ನಿರ್ಮಾಣ ಕಾಮಗಾರಿಯ 99.00 ಲಕ್ಷ ರೂ.ಗಳ ಅಂದಾಜಿಗೆ ಮೇಲೆ (2) ರಲ್ಲಿ ಓದಲಾದ ದಿನಾಂಕ 24/12/09ರ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಗೆ ಎ.ಐ.ಬಿ.ಪಿ ಕಾರ್ಯಕ್ರಮದಡಿ ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್ ಮತ್ತು ಜಿಲ್ಲಾ ಟೆಂಡರ್ ಬುಲೆಟಿನ್	28/08/2010
ವಿಜಯ ಕರ್ನಾಟಕ ದಿನಪತ್ರಿಕೆ ಮತ್ತು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆ	30/08/2010

ದಿನಾಂಕ:18/10/2010ರಂದು ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರಿನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಇಬ್ಬರು ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿದ್ದು, ಇಬ್ಬರೂ ಗುತ್ತಿಗೆದಾರರು ಅರ್ಹತೆ ಹೊಂದಿದ್ದು, ಆರ್ಥಿಕ ಬಿಡ್‌ಗಳನ್ನು ತೆರೆದು ಪರಿಶೀಲಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 93,48,518/-
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 88,03,139/-

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ /ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಶ್ರೀ ಎಸ್.ಶಂಕರ ರೆಡ್ಡಿ ಪ್ರಥಮ ದರ್ಜೆ ಗುತ್ತಿಗೆದಾರರು.	92,57,033/-	0.98 ಕಡಿಮೆ	5.156 ಹೆಚ್ಚು
2	ಶ್ರೀ ಕೆ.ಆರ್ ಶೆಟ್ಟಿ, ಪ್ರಥಮ ದರ್ಜೆ ಗುತ್ತಿಗೆದಾರರು .	1,23,18,764/-	31,77 ಹೆಚ್ಚು	39.94 ಹೆಚ್ಚು

ಮೇಲ್ಕಂಡಂತೆ ಕ್ರಸಂ. 1ರಲ್ಲಿರುವ ಶ್ರೀ ಎಸ್. ಶಂಕರರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 5.156ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 06/01/2011 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಇವರ ಟೆಂಡರ್‌ನ್ನು ಪರಿಶೀಲಿಸಿದ ನಂತರ 2010-11 ನೇ ಸಾಲಿಗೆ ಮುಂದುವರೆಸಿರುವ 2007-09ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 88,03,139/-ಗಳ ಮೇಲೆ ಶೇಕಡ 5.156ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 92,57,033/-ಗಳಿಗೆ ಕಾಮಗಾರಿಯನ್ನು ಶ್ರೀ ಎಸ್. ಶಂಕರರೆಡ್ಡಿ, ಒಂದನೇ ದರ್ಜೆ ಗುತ್ತಿಗೆದಾರರಿಗೆ ವಹಿಸುವಂತೆ ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 56 ಅಪಿಬಂ 2010, ಬೆಂಗಳೂರು, ದಿನಾಂಕ 03 ನೇ ಫೆಬ್ರವರಿ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾವೇರಿ ಜಿಲ್ಲೆ, ರಾಣೆಬೆನ್ನೂರು ತಾಲ್ಲೂಕಿನ ಅಸುಂಡಿ ನಾಲಾ ಕೆರೆ ಸೈಟ್-2 (ಗಂಗಾಪುರ) ಹತ್ತಿರ ಹಳ್ಳಕ್ಕೆ ಅಡ್ಡಲಾಗಿ ಬಂದಾರ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 88,03,139/- ಗಳ ಮೇಲೆ ಶೇಕಡ 5.156ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 92,57,033/-ಗಳಿಗೆ (ತೊಂಬತ್ತೆರಡು ಲಕ್ಷದ ಐವತ್ತೇಳು ಸಾವಿರದ ಮುವ್ವತ್ತಮೂರು ರೂ.ಗಳು ಮಾತ್ರ) ಶ್ರೀ ಎಸ್. ಶಂಕರ ರೆಡ್ಡಿ, ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್ 329

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ಕುಡುಗೋಲುಮಟ್ಟಿ ಏತ ನೀರಾವರಿ ಯೋಜನೆಗೆ ಹಿರೇಹಡಗಲಿ ಗ್ರಾಮದ 66/11 ಕೆ.ವಿ. ಸಬ್ ಸ್ಟೇಶನ್‌ನಿಂದ ಎಕ್ಸ್‌ಪ್ರೆಸ್ ಫೀಡರ್ ಲೈನ್ ಮುಖಾಂತರ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ: 1) ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನೀ/(ಉ)ವ/ಬಿಜೆಪಿ/ಪಿಬಿ-12/2010-11/6717 ದಿನಾಂಕ 22.12.2010.

2) ಸರ್ಕಾರದ ಆದೇಶ ಸಂಖ್ಯೆ: ಸನೀಇ 13 ನಯೋಕಾ 2006 ದಿನಾಂಕ 17/03/2007

3) ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ 22.01.2011ರ ಪತ್ರ ಸಂಖ್ಯೆ: ಮುಸದ/ಆಪ್ತಶಾಖೆ/ಟೆಂಡರ್/08-09-249.

ಪ್ರಸ್ತಾವನೆ:

ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ಕುಡುಗೋಲುಮಟ್ಟಿ ಏತ ನೀರಾವರಿ ಯೋಜನೆ ಕಾಮಗಾರಿಯ ರೂ. 780.00 ಲಕ್ಷಗಳ ಮೂಲ ಅಂದಾಜಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮೂಲ ಅಂದಾಜಿನಲ್ಲಿ 11 ಕೆ.ವಿ. ಎಕ್ಸ್‌ಪ್ರೆಸ್ ಫೀಡರ್ ಲೈನ್ ಮುಖಾಂತರ ಏತ ನೀರಾವರಿ ಯೋಜನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ರೂ. 45.00 ಲಕ್ಷಗಳ ಇಡಿಗಂಟನ್ನು ಅವಕಾಶ ಮಾಡಿದೆ. ಸದರಿ ಏತ ನೀರಾವರಿ ಯೋಜನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಹಿರೇ ಹಡಗಲಿ ಗ್ರಾಮದ 66/11 ಕೆ.ವಿ. ಸಬ್‌ಸ್ಟೇಶನ್ ನಿಂದ ಎಕ್ಸ್‌ಪ್ರೆಸ್ ಫೀಡರ್ ಲೈನ್ ನಿರ್ಮಿಸುವ ಕಾಮಗಾರಿಗೆ ಜೆಸ್ಕಾಂ ನವರಿಂದ ತಯಾರಿಸಲ್ಪಟ್ಟ ರೂ. 25.27 ಲಕ್ಷ ಮೊತ್ತದ ಉಪ ಅಂದಾಜು ಪಟ್ಟಿಗೆ ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರು ಅನುಮೋದನೆ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಬಳ್ಳಾರಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	18/10/2010
ವಿಜಯ ಕರ್ನಾಟಕ ದಿನಪತ್ರಿಕೆ	18/10/2010

ದಿನಾಂಕ:03/11/2010ರಂದು ಟೆಂಡರ್‌ಅನ್ನು ತೆರೆದು ಪರಿಶೀಲಿಸಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್ ನಲ್ಲಿ ಭಾಗವಹಿಸಿದ್ದ ಮೂರು ಜನ ಗುತ್ತಿಗೆದಾರರ ಪೈಕಿ ಒಬ್ಬ ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿರುತ್ತಾರೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ /ಅನುಮೋದಿತ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 25,25,417/-	
2009-10ನೇ ಸಾಲಿನ ದರಗಳನ್ನು 2010-11ನೇ ಸಾಲಿಗೆ ಮುಂದುವರೆಸಿರುವ ಜೆಸ್ಕಾಂ ಗುಲ್ಬರ್ಗದ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 27,29,621/-	
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ /ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಮದೀನಾ ಎಲೆಕ್ಟ್ರಿಕಲ್ಸ್ ಪ್ರಥಮ ದರ್ಜೆ ಗುತ್ತಿಗೆದಾರರು.	45,47,104/-	80.05 ಹೆಚ್ಚು	66.58 ಹೆಚ್ಚು

ಮೇಲ್ಕಂಡಂತೆ ಮೆII ಮದೀನಾ ಎಲೆಕ್ಟ್ರಿಕಲ್ಸ್, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರಿಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 66.58ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 06/01/2011 ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 27,29,621/- ಗಳ ಮೇಲೆ ಶೇ.12.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 30,57,176/- ಗಳಿಗೆ ಕಾಮಗಾರಿಯನ್ನು ಮೆII ಮದೀನಾ ಎಲೆಕ್ಟ್ರಿಕಲ್ಸ್, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 2ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 68 ಏನಿಯೋ 2010, ಬೆಂಗಳೂರು, ದಿನಾಂಕ 03 ನೇ ಫೆಬ್ರವರಿ 2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನ ಕುಡುಗೋಲುಮಟ್ಟಿ ಏತ ನೀರಾವರಿ ಯೋಜನೆಗೆ ಹಿರೇಹಡಗಲಿ ಗ್ರಾಮದ 66/11 ಕೆ.ವಿ. ಸಬ್ ಸ್ಟೇಶನ್ ನಿಂದ ಎಕ್ಸ್‌ಪ್ರೆಸ್ ಫೀಡರ್ ಲೈನ್ ಮುಖಾಂತರ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 27,29,621/- ಗಳ ಮೇಲೆ ಶೇ. 12.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 30,57,176/- ಗಳಿಗೆ (ರೂ. ಮೂವತ್ತು ಲಕ್ಷ ಐವತ್ತೇಳು ಸಾವಿರದ ಒಂದು ನೂರ ಎಪ್ಪತ್ತಾರು) ಕಾಮಗಾರಿಯನ್ನು ಮೆII ಮದೀನಾ ಎಲೆಕ್ಟ್ರಿಕಲ್ಸ್, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ: 20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್ 330

HEALTH AND FAMILY WELFARE SECRETARIAT

Sub :- Designation of Comissioner, Health and Family Welfare Services as Commissioner of Food Safety for Karnataka.

Read :- (1) Government of Karnataka Order No: HFW 211 CGE 2008, dated: 04-10-2008.

(2) D.O. Letter No: 10/FSSAI/QCI/Study-2008, dated: 30-12-2010 of Chief Executive Officer, Food Safety and Standard Authority of India,.

Preamble:

The Food Safety and Standards Act 2006 (Central Act 34 of 2006) envisages appointment of Food Commissioners (Commissioners of Food Safety) at the state level. Accordingly, in the order dated: 4-10-2008 read at (1) above the Director, Health and Family Welfare Services, Karnataka has been appointed as the Commissioner of Food Safety for the State of Karnataka.

In the letter read at (2) above the Chief Executive Officer, Food Safety and Standard Authority of India, New Delhi, has stated that the draft rules to the Food Safety and Standard Act 2006, are in the process of being notified by the month of February 2011. In order to ensure smooth transition, from old Act it is necessary that all preparatry action may have to be taken well in time. According to the proposed Food Safety and Standard Rules, The Food Safety Commissioner shall be not below the rank of Commissioner and Secretary to State Government.

Hence, the following Order.

Government Order No. HFW 31 FPR 2011 Bangalore, dated : 03-02-2011

In exercise of the powers conferred under Section 30 of the food Safety and Standards Act 2006 (Central Act 34 of 2006) and in supersession of the G.O.No: HFW 211 CGE 2008, dated: 04-10-2008 Government of Karnataka hereby appoints the Commissioner, Health and Family Welfare Services, Karnataka as the Commissioner of Food Safety for the State of Karnataka.

By Order and in the name of the Governor of Karnataka,
I. HEMANTH
Under Secretary to Government,
Heath and Family welfare Department.

P.R. 331

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : ರಾಜ್ಯದಲ್ಲಿ ಸಾಮಾಜಿಕ ಆರ್ಥಿಕ ಸಮೀಕ್ಷೆ (ಸೋಷಿಯೋ ಎಕನಾಮಿಕ್ ಸರ್ವೆ - ಬಿಪಿಎಲ್ ಸೆನ್ಸಸ್ 2010) ನಡೆಸಲು ಅನುದಾನವನ್ನು ರಾಜ್ಯದ 15 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ : ಕ್ಯೂ 16025/ 8/2006.ಎ1(ಆರ್‌ಡಿ) (ಪಿಟಿ) ದಿನಾಂಕ 31-03-2010

2) ಸರ್ಕಾರದ ಪತ್ರದ ಸಮಸಂಖ್ಯೆ: ದಿನಾಂಕ 06/08/2010

3) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 10 ಎಸ್‌ಜೆವೈ 2010, ಬೆಂಗಳೂರು ದಿನಾಂಕ 21-08-2010

ಪ್ರಸ್ತಾವನೆ:

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಷ್ಟ್ರಾದ್ಯಂತ ಸಾಮಾಜಿಕ ಆರ್ಥಿಕ ಸಮೀಕ್ಷೆ (ಸೋಷಿಯೋ ಎಕನಾಮಿಕ್ ಸರ್ವೆ - ಬಿಪಿಎಲ್ ಸೆನ್ಸ್ 2010) ನಡೆಸಲು ಉದ್ದೇಶಿಸಿದೆ. ಈ ಸಮೀಕ್ಷೆಯ ಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುವುದು. ಇದರಂತೆ, ರಾಜ್ಯದಲ್ಲಿಯೂ ಸಮೀಕ್ಷೆ ನಡೆಸಬೇಕಾಗಿರುವುದರಿಂದ, ಓದಲಾಗಿದೆ (1) ರ ಪತ್ರದಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಮೊದಲನೇ ಕಂತಿನ ಅನುದಾನವಾಗಿ ₹ 6,20,62,000 ಗಳನ್ನು ಬಿಡುಗಡೆ ಮಾಡಿದೆ. ಓದಲಾಗಿದೆ (2) ರ ಸರ್ಕಾರದ ಪತ್ರದಲ್ಲಿ ರಾಜ್ಯದ ನಿಧಿಯಾಗಿ ₹ 22,22,000 ಗಳನ್ನು ಕಾಯ್ದಿರಿಸಿಕೊಂಡು, ಉಳಿದ ಅನುದಾನವನ್ನು 30 ಜಿಲ್ಲಾ ಪಂಚಾಯಿತಿಗಳಿಗೆ ವಿಂಗಡಣೆ ಮಾಡಿ ನಿಗದಿಪಡಿಸಿದೆ.

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನಿರ್ದೇಶನದಂತೆ, ರಾಜ್ಯದ 14 ಜಿಲ್ಲೆಗಳ 14 ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಸಾಮಾಜಿಕ ಆರ್ಥಿಕ ಸಮೀಕ್ಷೆ (ಸೋಷಿಯೋ ಎಕನಾಮಿಕ್ ಸರ್ವೆ - ಪೈಲಟ್ ಬಿಪಿಎಲ್ ಸೆನ್ಸಸ್ 2010) ನಡೆಸಬೇಕಾದುದರಿಂದ, ಓದಲಾಗಿದೆ (3)ರ ಆದೇಶದಲ್ಲಿ ರಾಜ್ಯ ಸರ್ಕಾರವು ಚಿಕ್ಕಮಗಳೂರು, ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮೈಸೂರು, ರಾಮನಗರ, ಶಿವಮೊಗ್ಗ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗಳಿಗೆ ₹ 3,14,62,000 ಗಳನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯತಿಗೆ ಸಮೀಕ್ಷೆಗಾಗಿ ₹ 13,60,000 ಗಳನ್ನು ಹಾಗೂ ರಾಜ್ಯದ ಪಾಲಿನ ನಿಧಿ ₹ 22,22,000 ಗಳನ್ನು ಸೇರಿ ಒಟ್ಟು ₹ 35,82,000 ಗಳನ್ನು ಬಿಡುಗಡೆಗೊಳಿಸಿದೆ.

ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಲ್ಲಿ ಸಾಮಾಜಿಕ ಆರ್ಥಿಕ ಸಮೀಕ್ಷೆ (ಸೋಷಿಯೋ ಎಕನಾಮಿಕ್ ಸರ್ವೆ- ಬಿಪಿಎಲ್ ಸೆನ್ಸಸ್ 2010) ನಡೆಸಬೇಕಾಗುತ್ತದೆ. ಆದುದರಿಂದ ಈಗಾಗಲೇ ನಿಗದಿಪಡಿಸಿದ ಅನುದಾನವನ್ನು ಬಿಡುಗಡೆಗೊಳಿಸಿರುವ 15 ಜಿಲ್ಲಾ ಪಂಚಾಯತಿಗಳನ್ನು ಹೊರತುಪಡಿಸಿ ಉಳಿದ 15 ಜಿಲ್ಲಾ ಪಂಚಾಯತಿಗಳಾದ ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಗದಗ್, ಗುಲ್ಬರ್ಗಾ, ಮಂಡ್ಯ, ರಾಯಚೂರು, ತುಮಕೂರು ಮತ್ತು ಯಾದಗಿರಿ ಜಿಲ್ಲಾ ಪಂಚಾಯತಿಗಳಿಗೆ ₹ 3,06,00,000ಗಳನ್ನು ಬಿಡುಗಡೆಗೊಳಿಸಬೇಕಾಗಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 10 ಎಸ್‌ಜೆವೈ 2010, ಬೆಂಗಳೂರು, 28-01-2011

ರಾಜ್ಯ ಸರ್ಕಾರವು, ಸಾಮಾಜಿಕ ಆರ್ಥಿಕ ಸಮೀಕ್ಷೆ (ಸೋಷಿಯೋ ಎಕನಾಮಿಕ್ ಸರ್ವೆ-ಬಿಪಿಎಲ್ ಸೆನ್ಸಸ್-2010) ಗಾಗಿ ಅನುಬಂಧದಲ್ಲಿ ತೋರಿಸಿರುವ 15 ಜಿಲ್ಲಾ ಪಂಚಾಯತಿಗಳಿಗೆ ₹ 3,06,00,000 (₹ ಮೂರು ಕೋಟಿ ಆರು ಲಕ್ಷ ಮಾತ್ರ) ಗಳನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಿ ಬಿಡುಗಡೆ ಮಾಡಿದೆ.

ಷರತ್ತುಗಳು :

ಅನುದಾನವನ್ನು ಖಜಾನೆಯಿಂದ ಸೆಳೆದು ಸಾಮಾಜಿಕ ಆರ್ಥಿಕ ಸಮೀಕ್ಷೆ (ಸೋಷಿಯೋ ಎಕನಾಮಿಕ್ಸ್ ಸರ್ವೆ-ಬಿಪಿಎಲ್ ಸೆನ್ಸಸ್ 2010) ಗಾಗಿಯೇ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆದು ಜಮೆ ಮಾಡತಕ್ಕದ್ದು.

ಸಾಮಾಜಿಕ ಆರ್ಥಿಕ ಸಮೀಕ್ಷೆ (ಸೋಷಿಯೋ ಎಕನಾಮಿಕ್ ಸರ್ವೆ-ಬಿಪಿಎಲ್ ಸೆನ್ಸಸ್ 2010) ಮಾರ್ಗಸೂಚಿಯಂತೆ ಅನುದಾನವನ್ನು ಉಪಯೋಗಿಸತಕ್ಕದ್ದು.

ಸಮೀಕ್ಷೆಗಾಗಿ ಬಿಡುಗಡೆ ಮಾಡಿದ ಅನುದಾನವನ್ನು ಬೇರೆ ಯಾವ ಉದ್ದೇಶಗಳಿಗೆ ಬಳಸದೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆಗಿಂದಾಗ್ಗೆ ನೀಡುವ ಸೂಚನೆಗಳನ್ವಯ ವೆಚ್ಚ ಮಾಡುವುದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ "2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು-198-ಗ್ರಾಮಪಂಚಾಯತ್‌ಗಳಿಗೆ ಸಹಾಯ-6-ಗ್ರಾಮ ಪಂಚಾಯತ್‌ಗಳು-01-ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2010-2011 ನೇ (2501-01-198-6-01)" (ಲಿಂಕ್ ಕೋಡ್ 2501-01-800-0-07) ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 7 ಜೆಡ್‌ಪಿಎ 2003 ದಿನಾಂಕ 14-07-2005 ರನ್ವಯ ಖಜಾನೆಯಿಂದ ಪಡೆಯುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ.

ಬಿಡುಗಡೆ ಮಾಡಿದ ಅನುದಾನದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ ಗ್ರಾಅಪ 7 ಪಿಬಿಎಸ್ 2011 ದಿನಾಂಕ 17-01-2011 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಪಿ.ಎ. ಮೇಘಣ್ಣವರ
ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ.
ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 10 ಎಸ್‌ಜಿವೈ 2010, ಬೆಂಗಳೂರು, ದಿನಾಂಕ : 28-01-2011

(₹ ಗಳಲ್ಲಿ)

ಕ್ರ. ಸಂ	ಜಿಲ್ಲಾ ಪಂಚಾಯತಿಯ ಹೆಸರು	ಜಿಪಂ ಕೋಡ್	ಡಿ.ಡಿ.ಓ ಕೋಡ್	ರಾಜ್ಯ ಸರ್ಕಾರವು ಬಿಡುಗಡೆ ಮಾಡುತ್ತಿರುವ ಮೊದಲನೇ ಕಂತಿನ ಅನುದಾನ
1	ಬಾಗಲಕೋಟೆ	461	2900ZZ0001	20,40,000
2	ಬೆಂಗಳೂರು ಗ್ರಾ	402	0300ZZ8001	13,60,000
3	ಬೆಳಗಾಂ	413	2200ZZ0002	34,00,000
4	ಬಳ್ಳಾರಿ	418	3400ZZ0001	23,80,000
5	ಬೀದರ್	419	3800ZZ5701	17,00,000
6	ಬಿಜಾಪುರ	414	2800ZZ9152	17,00,000
7	ಚಾಮರಾಜನಗರ	456	1000ZZ0001	13,60,000
8	ಚಿಕ್ಕಬಳ್ಳಾಪುರ	453	0600ZZ0001	20,40,000
9	ಚಿತ್ರದುರ್ಗ	403	1600ZZ0001	20,40,000
10	ಗದಗ್	462	2600ZZ0001	17,00,000
11	ಗುಲ್ಬರ್ಗಾ	417	3200ZZ0003	23,80,000
12	ಮಂಡ್ಯ	412	1100ZZ0001	23,80,000
13	ರಾಯಚೂರು	420	3600ZZ0001	17,00,000
14	ತುಮಕೂರು	406	0800ZZ0001	34,00,000
15	ಯಾದಗಿರಿ	421	3300ZZ0001	10,20,000
	ಒಟ್ಟು ₹			3,06,00,000

ಪಿ.ಎ. ಮೇಘಣ್ಣವರ
ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ.
ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್ 332

KA/BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಮಾರ್ಚ್ ೧೭, ೨೦೧೧ (ಫಾಲ್ಗುಣ ೨೬, ಶಕ ವರ್ಷ ೧೯೩೨)	ಸಂಚಿಕೆ ೧೧

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 29 ಪೊಪಸೆ 2011, ಬೆಂಗಳೂರು, ದಿನಾಂಕ: 9ನೇ ಫೆಬ್ರವರಿ, 2011

ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಿಆಸುಇ 202 ಎಸ್‌ಪಿಎಸ್ 2010 ದಿನಾಂಕ:09–02–2011ರಲ್ಲಿ ಸಿಆಸುಇ (ಸೇವೆಗಳು–4) ರವರು ಶ್ರೀ ಎಂ.ಕೆ. ಶ್ರೀವಾಸ್ತವ, ಐ.ಪಿ.ಎಸ್., ಎ.ಡಿ.ಜಿ.ಪಿ., ರವರನ್ನು ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತಕ್ಕೆ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡುವ ಸಲುವಾಗಿ ಒಳಾಡಳಿತ ಇಲಾಖೆಯ ವಶಕ್ಕೆ ನೀಡಿದ್ದು, ಶ್ರೀ ಎಂ.ಕೆ. ಶ್ರೀವಾಸ್ತವ, ಐ.ಪಿ.ಎಸ್., ಎ.ಡಿ.ಜಿ.ಪಿ., ರವರನ್ನು ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 253

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 161 ಎಲ್‌ಎಜಿ 2010, ಬೆಂಗಳೂರು, ದಿನಾಂಕ: 2ನೇ ಫೆಬ್ರವರಿ, 2011

ಶ್ರೀ ಎಸ್.ಎಸ್. ಕುಮ್ಮನ್, ಸರ್ಕಾರಿ ವಕೀಲರು, ಸಂಚಾರಿ ಪೀಠ, ಗುಲ್ಬರ್ಗ, ಇವರ ಸೇವಾವಧಿಯು ಮುಕ್ತಾಯಗೊಂಡಿರುವುದರಿಂದ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977ರ ನಿಯಮ 23ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹುದ್ದೆಯ ಅಧಿಕಾರ ವಹಿಸಿಕೊಳ್ಳುವ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಶ್ರೀ ಮಾನವೇಂದ್ರ ರೆಡ್ಡಿ, ವಕೀಲರು, ಇವರನ್ನು ಗುಲ್ಬರ್ಗ ಸಂಚಾರಿ ಪೀಠದ ಸರ್ಕಾರಿ ವಕೀಲರ ಹುದ್ದೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಯ್ಯದ್ ಅಬ್ದುಲ್ ನಜೀರ್,
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–I)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 254

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 134 ಶಿಸನೇ 2010(ಭಾಗ-2), ಬೆಂಗಳೂರು, ದಿನಾಂಕ: 29ನೇ ಜನವರಿ, 2011

ದಿನಾಂಕ: 25-11-2010ರ ಅಧಿಸೂಚನೆಯನ್ನು ಮಾರ್ಪಡಿಸಿ ಶ್ರೀ ಎಂ.ಸಿ. ಅಶ್ವಥ್, ಮಾಜಿ ಶಾಸಕರು, ಚನ್ನಪಟ್ಟಣ, ಇವರನ್ನು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ಅಧ್ಯಕ್ಷರಾಗಿ ನೇಮಿಸಿದ್ದು, ಸದರಿ ಹುದ್ದೆಯ ಕಾರ್ಯಭಾರವನ್ನು ವಹಿಸಿಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನವನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ವಿ. ರಾಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜ್ಯ ಶಿಷ್ಟಾಚಾರ)

ಪಿ.ಆರ್. 255

ಅಧಿಸೂಚನೆ

ಸಂಖ್ಯೆ: ಸಿಆಸುಇ 134 ಶಿಸನೇ 2010, ಬೆಂಗಳೂರು, ದಿನಾಂಕ: 31ನೇ ಜನವರಿ, 2011

ಶ್ರೀ ಹೆಚ್. ಚೂಡಾನಾಯಕ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಇವರಿಗೆ ಉಪ ಸಚಿವರ ದರ್ಜೆ ಸ್ಥಾನಮಾನವನ್ನು ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆವಿಗೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ. ವಿ. ರಾಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜ್ಯ ಶಿಷ್ಟಾಚಾರ)

ಪಿ.ಆರ್. 256

ಅಧಿಸೂಚನೆ

ಸಂಖ್ಯೆ: ಸಿಆಸುಇ 556 ಸಅಸೇ 2010, ಬೆಂಗಳೂರು, ದಿನಾಂಕ: 29ನೇ ನವೆಂಬರ್, 2010

ಶ್ರೀ ಈ.ಎನ್. ಚವಾಣ್, ಹಿಂದಿನ ಮಾನ್ಯ ತೋಟಗಾರಿಕೆ ಮತ್ತು ಬಂಧೀಖಾನೆ ಸಚಿವರ ವಿಶೇಷ ಕರ್ತವ್ಯಾಧಿಕಾರಿಯಾಗಿ ಗುತ್ತಿಗೆ ಆಧಾರದ ಮೇಲೆ ದಿನಾಂಕ 27-8-2008ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ 23-9-2010ರಿಂದ ಮಾನ್ಯ ತೋಟಗಾರಿಕೆ ಮತ್ತು ಬಂಧೀಖಾನೆ ಸಚಿವರ ಬದಲಾದ ಖಾತೆಯಾದ ಕೃಷಿ ಸಚಿವರ ವಿಶೇಷ ಕರ್ತವ್ಯಾಧಿಕಾರಿಯಾಗಿ ದಿನಾಂಕ 23-9-2010ರಿಂದಲೂ ಕರ್ತವ್ಯದಲ್ಲಿ ಮುಂದುವರೆದಿರುತ್ತಾರೆ. ಶ್ರೀ ಈ.ಎನ್. ಚವ್ಹಾಣ್ ಅವರ ಗುತ್ತಿಗೆ ನೇಮಕಾತಿಯ ಅಧಿಸೂಚನೆ ದಿನಾಂಕ 12-3-2009 ಹಾಗೂ ನೇಮಕಾತಿ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 257

ಅಧಿಸೂಚನೆ

ಸಂಖ್ಯೆ: ಸಿಆಸುಇ 37 ಎಸ್ಐಎಸ್ 2011, ಬೆಂಗಳೂರು, ದಿನಾಂಕ: 14ನೇ ಫೆಬ್ರವರಿ, 2011

ಶ್ರೀ ಕೆ.ಪಿ. ಮೋಹನರಾಜ್, ಐ.ಎ.ಎಸ್., ಉಪವಿಭಾಗಾಧಿಕಾರಿ, ಸವಣೂರು, ಇವರಿಗೆ ದಿನಾಂಕ:28-2-2011 ರಿಂದ 11-3-2011ರವರೆವಿಗೆ (ಉದಿಸೇ) 12 ದಿನಗಳ **ಗಳಿಕೆ** ರಜೆಯನ್ನು ಮಂಜೂರು ಮಾಡಲಾಗಿದೆ ಹಾಗೂ ದಿನಾಂಕ 12-3-2011 ಮತ್ತು 13-3-2011ರಂದು ಇರುವ ಸಾರ್ವತ್ರಿಕ ರಜೆಯನ್ನು ಉಪಯೋಗಿಸಿಕೊಳ್ಳಲು ಸಹ ಅನುಮತಿ ನೀಡಲಾಗಿದೆ.

ಶ್ರೀ ಕೆ.ಪಿ. ಮೋಹನರಾಜ್, ಐ.ಎ.ಎಸ್., ರವರಿಗೆ ಮೇಲ್ಕಂಡ ರಜೆ ಅವಧಿಯಲ್ಲಿ 2010-2011ರ ಬ್ಲಾಕ್ ಅವಧಿಯಲ್ಲಿ ಸ್ವಗ್ರಾಮ ಪ್ರಯಾಣ ರಿಯಾಯಿತಿ ಸೌಲಭ್ಯವನ್ನು ಉಪಯೋಗಿಸಿಕೊಂಡು **ತಿರುಪೂರ್, ತಮಿಳುನಾಡಿಗೆ** ಹೋಗಿ-ಬರಲು ಅನುಮತಿ ನೀಡಲಾಗಿದೆ.

ಸದರಿ ಉದ್ದೇಶಕ್ಕಾಗಿ ತಗಲುವ ವಾಸ್ತವಿಕ ಪ್ರಯಾಣ ವೆಚ್ಚದ ಶೇಕಡ 90ರಷ್ಟು ಹಣವನ್ನು ಅಂತಿಮ ಪ್ರಯಾಣಭತ್ಯೆ ಬಿಲ್ಲಿನಲ್ಲಿ ಹೊಂದಾಣಿಕೆ ಮಾಡುವ ಷರತ್ತಿಗೆ ಒಳಪಟ್ಟು ಮುಂಗಡ ಪ್ರಯಾಣಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಶ್ರೀ ಕೆ.ಪಿ. ಮೋಹನರಾಜ್, ಐ.ಎ.ಎಸ್., ರವರು ರಜೆಯ ಮೇಲೆ ಹೋಗಿರದಿದ್ದರೆ, ಉಪವಿಭಾಗಾಧಿಕಾರಿ, ಸವಣೂರು, ಈ ಹುದ್ದೆಯಲ್ಲೇ ಸ್ಥಾನಪನ್ನರಾಗಿರುತ್ತಿದ್ದರೆಂದು ದೃಡೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಅಶೋಕ್.ಪಿ.ಅತ್ರೆ,
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಸಿಆಸುಇ (ಸೇವೆಗಳು-I)

ಪಿ.ಆರ್. 258

HIGH COURT OF KARNATAKA

NOTIFICATION

No. GOB(I) 28/2001, Bangalore, Dated 8th February, 2011

In pursuance to Rule 118-A(1) of K.C.S.Rs., sanction is hereby accorded for payment of cash equivalent of leave salary for Earned Leave at the credit of Sri. Solapurkar Ajit Narasinga Rao, District Judge, subject to maximum of 240 days, on the date of his attaining the age of superannuation i.e., on 31-01-2011. It is certified that no Departmental Enquiry was pending against the said Officer, as on that date.

By Order of the High Court,
R.B. BUDIHAL,
Registrar General.

P.R. 259

NOTIFICATION

No. GOB(I) 3/2011, Bangalore, Dated 29th February, 2011

The Presiding Officers of the Courts mentioned at Column No.1 below, are concurrently appointed as the Presiding Officers of the Courts mentioned at Column No.2, with effect from 24-01-2011 and until further orders:-

Designation of the Presiding Officer	Name of the Courts to which concurrent appointment is made
(1)	(2)
1. Addl. Civil Judge and JMFC., Haveri.	Civil Judge and JMFC., Haveri.
2. Addl. Civil Judge and JMFC., Ranebennur.	Prl. Civil Judge and JMFC., Ranebennur.
3. Addl. Civil Judge and JMFC., Ranebennur.	Civil Judge and JMFC., Byadgi.
4. Civil Judge and JMFC., Hangal.	Civil Judge and JMFC., Hirekerur. (with a direction to itinerate the said court for the first two days in a week.)

By Order of the High Court,
R.B. BUDIHAL,
Registrar General.

P.R. 260

NOTIFICATION

No. GOB(I) 28/2001, Bangalore, Dated 8th February, 2011

Sri. Suresh Basalingappa Turamari, Presiding Officer, Fast Track Court, Ranebennur, is permitted to retire from Judicial Service, with effect from 28-02-2011, on attaining the age of superannuation, i.e., 60 years.

By Order of the High Court,
R.B. BUDIHAL,
Registrar General.

P.R. 261

NOTIFICATION

No. GOB(I) 1/2011, Bangalore, Dated 31st January, 2011

The Presiding Officer of the court of Prl. District and Sessions Judge, Dharwad, is concurrently appointed as the Presiding Officer of the Court of III Addl. District and Sessions Judge, Dharwad (vice Sri. Solapurkar Ajit Narasinga Rao- due to retire from service w.e.f. 31-01-2011) with effect from 01-02-2011 and until further orders.

By Order of the High Court,
R.B. BUDIHAL,
Registrar General.

P.R. 262

NOTIFICATION

No. GOB(I) 3/2011, Bangalore, Dated 29th January, 2011

The Presiding Officer of the Court of Senior Civil Judge and CJM., Gadag, is concurrently appointed as the Presiding Officer of the Court of Addl. Civil Judge and JMFC-I Court, Gadag, with effect from 24-01-2011 and until further orders.

By Order of the High Court,
R.B. BUDIHAL,
Registrar General.

P.R. 263

NOTIFICATION

No. GOB(I) 20(1)/2011, Bangalore, Dated 29th January, 2011

The Presiding Officer of the Fast Track Court, Hunsur, is continued in concurrent charge of the Court of the Senior Civil Judge and JMFC., Hunsur, from 17-01-2011 till the commencement of office hours on 02-05-2011, during the leave period of Sri. Meti Pompanagowda, Senior Civil Judge and JMFC., Hunsur.

By Order of the High Court,
Registrar (Judicial)

P.R. 264

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 35 ಎಸ್‌ಐಎಸ್ 2011, ಬೆಂಗಳೂರು, ದಿನಾಂಕ: 14ನೇ ಫೆಬ್ರವರಿ, 2011

ಶ್ರೀಮತಿ ಎಂ.ದೀಪಾ, ಐ.ಎ.ಎಸ್., ಉಪವಿಭಾಗಾಧಿಕಾರಿ, ಗದಗ, ರವರಿಗೆ ದಿನಾಂಕ 17-1-2011 ರಿಂದ 13-3-2011 ರವರೆವಿಗೆ (ಉದಿಸೇ) 56 ದಿನಗಳ ಗಳಿಕೆ ರಜೆಯನ್ನು ವೈದ್ಯಕೀಯ ನೆಲೆಯಲ್ಲಿ ಮಂಜೂರು ಮಾಡಲಾಗಿದೆ.

ಶ್ರೀಮತಿ ಎಂ.ದೀಪಾ, ಐ.ಎ.ಎಸ್., ರವರು ರಜೆಯ ಮೇಲೆ ಹೋಗಿರದಿದ್ದರೆ, ಉಪವಿಭಾಗಾಧಿಕಾರಿ, ಗದಗ, ಈ ಹುದ್ದೆಯಲ್ಲೇ ಸ್ಥಾನಪನ್ನರಾಗಿರುತ್ತಿದ್ದರೆಂದು ದೃಢೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಅಶೋಕ್.ಪಿ.ಅತ್ರೆ,
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ),
ಸಿಆಸುಇ (ಸೇವೆಗಳು-I)

ಪಿ.ಆರ್. 265

PERSONNEL AND ADMINISTRATIVE REFORMS SECRETARIAT

NOTIFICATION

No. DPAR 195 SPS 2010, Bangalore, Dated 11th February, 2011

Shri. Amit Singh, IPS (KN-2007), Senior Assistant Superintendent of Police waiting for posting is posted for a day in the cadre post of Superintendent of Police. Dakshina Kannada District, Mangalore vice Dr.A.Subramanyeswara Rao, IPS, transferred. From the next day Dr.A.Subramanyeswara Rao, IPS is re-posted as Superintendent of Police, Dakshina Kannada District, Mangalore.

By Order and in the Name of the Governor of Karnataka,
ASHOK P. ATRE,
Under Secretary to Government,
DP & AR (Services-IV)

P.R. 266

NOTIFICATION

No. DPAR 227 SPS 2010, Bangalore, Dated 17th February, 2011

Dr. Chandra Gupta, IPS (KN-2006), Superintendent of Police, Haveri District, Haveri is transferred with immediate effect and posted until further orders as Superintendent of Police, Bellary District, Bellary vice, Shri. M.N.Nagaraj,IPS (KN-2003), transferred.

By Order and in the Name of the Governor of Karnataka,
ASHOK P. ATRE,
Under Secretary to Government,
DP & AR (Services-IV)

P.R. 267

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 19 ಆಸಿಇ, ಬೆಂಗಳೂರು, ದಿನಾಂಕ: 11ನೇ ಫೆಬ್ರವರಿ, 2011

2011 ನೇ ಸಾಲಿನಲ್ಲಿ 60 ವರ್ಷ ವಯೋಮಿತಿಯು ಪೂರ್ಣಗೊಳ್ಳಲಿರುವ ಕರ್ನಾಟಕ ಸರ್ಕಾರ ಸಚಿವಾಲಯದ ಈ ಕೆಳಕಂಡ ಪತ್ರಾಂಕಿತ ಆಪ್ತ ಸಹಾಯಕರು ಅವರ ಹೆಸರಿನ ಮುಂದೆ ಸೂಚಿಸಿರುವ ದಿನಾಂಕದ ಅಪರಾಹ್ನದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ನಿವೃತ್ತರಾಗಲಿರುವರು:

ಕ್ರಸಂ.	ಹೆಸರು ಮತ್ತು ಕಾರ್ಯನಿರ್ವಹಿಸುತ್ತಿರುವ ಇಲಾಖೆ	ಹುಟ್ಟಿದ ದಿನಾಂಕ	ವಯೋನಿವೃತ್ತರಾಗಲಿರುವ ದಿನಾಂಕ
1	ಶ್ರೀ.ಸಿ.ಆರ್. ಜಯರಾಮ್, ಕೃಷಿ ಮತ್ತು ತೋಟಗಾರಿಕೆ ಇಲಾಖೆ (ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ)	08-10-1951	31-10-2011

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್. ಹೇಮರಾಜು,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ಆಡಳಿತ-2)

ಪಿ.ಆರ್. 268

ಅಧಿಸೂಚನೆ

ಸಂಖ್ಯೆ: ಸಿಆಸುಇ 27 ಆಸೇವ 2011, ಬೆಂಗಳೂರು, ದಿನಾಂಕ: 15ನೇ ಫೆಬ್ರವರಿ, 2011

ಈ ಕೆಳಕಂಡ ಕೆ.ಎ.ಎಸ್. (ಹಿರಿಯ ಶ್ರೇಣಿ/ಕಿರಿಯ ಶ್ರೇಣಿ) ಅಧಿಕಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಿಗೆ ವರ್ಗಾಯಿಸಿ ನೇಮಿಸಿದೆ.

ಕ್ರಸಂ.	ಅಧಿಕಾರಿಯ ಹೆಸರು ಮತ್ತು ಪ್ರಸ್ತುತ ಹುದ್ದೆ	ವರ್ಗಾಯಿಸಿ ನೇಮಿಸಲಾದ ಹುದ್ದೆ
1	ಡಾ: ಸಿ.ಜಿ. ಬೆಟ್‌ಸೂರ್‌ಮಠ್, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು	ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಹುದ್ದೆಗೆ- ಶ್ರೀ.ಪಿ.ಸಿ.ಜಯಣ್ಣ, ಇವರ ಸ್ಥಾನದಲ್ಲಿ ವರ್ಗಾಯಿಸಿ ನೇಮಿಸಲು ಇವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಿದೆ.
2	ಶ್ರೀ ಪಿ.ಆರ್.ಶಿವಪ್ರಸಾದ್, ಎಸ್.ಎಲ್.ಎ.ಓ., ಕೆ.ಐ.ಎ.ಡಿ.ಬಿ., ಬೆಂಗಳೂರು.	ಜನರಲ್ ಮ್ಯಾನೇಜರ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು-ಖಾಲಿ ಹುದ್ದೆಗೆ ವರ್ಗಾಯಿಸಿ ನೇಮಿಸಲು ಇವರ ಸೇವೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವಶಕ್ಕೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು.ಇ. (ಸೇವೆಗಳು-2)

ಪಿ.ಆರ್. 269

ಅಧಿಸೂಚನೆ

ಸಂಖ್ಯೆ: ಸಿಆಸುಇ 272 ಆಸೇವ 2010, ಬೆಂಗಳೂರು, ದಿನಾಂಕ: 15ನೇ ಫೆಬ್ರವರಿ, 2011

ಶ್ರೀ ಹೆಚ್.ಎನ್. ಗೋಪಾಲಕೃಷ್ಣ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಶಿವಮೊಗ್ಗ, ಇವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಉಪವಿಭಾಗಾಧಿಕಾರಿ, ಇಂಡಿ ಉಪವಿಭಾಗ, ಬಿಜಾಪುರ ಜಿಲ್ಲೆ-ಖಾಲಿ ಹುದ್ದೆಗೆ ವರ್ಗಾಯಿಸಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು.ಇ. (ಸೇವೆಗಳು-2)

ಪಿ.ಆರ್. 270

ಅಧಿಸೂಚನೆ

ಸಂಖ್ಯೆ: ಸಿಆಸುಇ 24 ಆಸೇವ 2011, ಬೆಂಗಳೂರು, ದಿನಾಂಕ: 11ನೇ ಫೆಬ್ರವರಿ, 2011

ಶ್ರೀ ಇಬ್ರಾಹಿಂ ಮೈಗೂರು, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ವಿಶೇಷ ಭೂಸ್ವಾಧೀನಾಧಿಕಾರಿ, ಕೃಷ್ಣ ಮೇಲ್ದಂಡೆ ಯೋಜನೆ, ಜಮಖಂಡಿ ಇವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವಿಶೇಷ ಭೂಸ್ವಾಧೀನಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು-ಖಾಲಿ ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವಶಕ್ಕೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಾ|| ಎಂ.ಟಿ. ರೇಜು,
ಸರ್ಕಾರದ ಉಪ ಕಾರ್ಯದರ್ಶಿ,
ಸಿ.ಆ.ಸು.ಇ. (ಸೇವೆಗಳು)

ಪಿ.ಆರ್. 271

LAW, JUSTICE AND HUMAN RIGHTS SECRETARIAT

NOTIFICATION

No. LAW 2 HRS 2011, Bangalore, Dated 11th February, 2011

Shri. Mohamed Wazir Ahmed, IPS (KN-90), whose services are placed at the disposal of Law, Justice and Human Rights Department vide Notification No. DPAR 11 SPS 2011 dated 05-02-2011 is posted with immediate effect and until further orders as Inspector General of Police, Karnataka State Human Rights Commission, Bangalore, relieving Sri N.S. Megharikh, IPS, of additional charge.

By Order and in the Name of the Governor of Karnataka,
N. MAHALAKSHMAMMA,
Under Secretary to Government,
(Human Rights)
Dept. of Law, Justice and Human Rights

P.R. 272

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 97 ಎಲ್ಎಜಿ 2009, ಬೆಂಗಳೂರು, ದಿನಾಂಕ: 15ನೇ ಫೆಬ್ರವರಿ, 2011

ಶ್ರೀ ಎ.ಜಿ. ಶಿವಕುಮಾರ್, ವಕೀಲರು, ಇವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಜಿಲ್ಲಾ ಸರ್ಕಾರಿ ವಕೀಲರು, ಬಳ್ಳಾರಿ, ಹುದ್ದೆಯ ಕರ್ತವ್ಯಗಳಿಂದ ವಿಮುಕ್ತಿಗೊಳಿಸಿ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977ರ ನಿಯಮ 26(2)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹುದ್ದೆಯ ಅಧಿಕಾರ ವಹಿಸಿಕೊಳ್ಳುವ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಶ್ರೀ ಪಾಟೀಲ್ ಸಿದ್ದಾರೆಡ್ಡಿ, ವಕೀಲರು, ಇವರನ್ನು ನೇಮಿಸಲಾಗಿದೆ.

ರಿಟ್ ಅರ್ಜಿ ಸಂಖ್ಯೆ: 15303/2010(GM-FOR)2010 ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ: 29-10-2010ರಂದು ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977ರ ನಿಯಮ 5(6)ರನ್ವಯ ಶ್ರೀ ಎ.ಜಿ. ಶಿವಕುಮಾರ್‌ರವರಿಗೆ ಒಂದು ತಿಂಗಳ ಹೆಚ್ಚುವರಿ ರೀಟೈನರ್ ಫೀಯನ್ನು ಪಾವತಿಸಲು ಅನುಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಯ್ಯದ್ ಅಬ್ದುಲ್ ನಜೀರ್,
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1),
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 273

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ವಾಕೈ 19 ಕೈಸೇವಿ 2011, ಬೆಂಗಳೂರು, ದಿನಾಂಕ: 21ನೇ ಫೆಬ್ರವರಿ, 2011

ಶ್ರೀ ಎ. ಲೋಕೇಶ್, ಇವರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಉಪ ನಿರ್ದೇಶಕರ ವೃಂದದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಅವರ ಜೇಷ್ಠತಾ ಸ್ಥಾನದಲ್ಲಿ ಯಾವುದೇ ಮಾರ್ಪಾಡುಗಳು ಬಂದರೆ, ಪುನರ್ ಪರಿಶೀಲಿಸಬಹುದಾದ ಮತ್ತು ಇದು ಜೇಷ್ಠತಾ ಸ್ಥಾನದಲ್ಲಿ ಪುನರ್ ನಿಗದಿಪಡಿಸುವುದಕ್ಕೆ ಯಾವುದೇ ಅಧಿಕ ಹಕ್ಕಾಗಿರುವುದಿಲ್ಲವೆಂಬ ಷರತ್ತಿಗೊಳಪಡಿಸಿ ಉಪ ನಿರ್ದೇಶಕರ ಹುದ್ದೆಯಲ್ಲಿ ಸ್ಥಿರೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಲ್.ಎಸ್. ವಾಸನ್,
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

ಪಿ.ಆರ್. 274

COMMERCE AND INDUSTRIES SECRETARIAT

NOTIFICATION

No.CI 19 ICS 2011, Bangalore, Dated 21st February, 2011

Sri A. Lokesh, while he was working as Deputy Director in the Department of Industries & Commerce is confirmed in the cadre of Deputy Director subject to review if there is any modification of his seniority in future in the cadre and that it shall not confer on him any additional right for refixation of seniority.

By Order and in the Name of the Governor of Karnataka,
L.S. VASAN,
Under Secretary to Government,
Commerce & Industries Department (Services)

P.R. 274

ವಸತಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ವಇ 5 ಕೊಮಂಸೇ 2011, ಬೆಂಗಳೂರು, ದಿನಾಂಕ: 18ನೇ ಫೆಬ್ರವರಿ, 2011

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ವೃಂದ ಮತ್ತು ನೇಮಕಾತಿ(ತಿದ್ದುಪಡಿ) 2010 ನಿಯಮಾವಳಿಗಳನ್ವಯ ಇಲಾಖಾ ಪದೋನ್ನತಿ ಸಮಿತಿ ಸಭೆಯ ತೀರ್ಮಾನದಂತೆ ದಿನಾಂಕ: 03-01-2011ರ ಮಂಡಳಿಯ ಆದೇಶದಲ್ಲಿ ಮುಂಬಡ್ತಿ ಹೊಂದಿ ಸ್ಥಳ ನಿರೀಕ್ಷಣೆಯಲ್ಲಿರುವ ಕಾರ್ಯನಿರ್ವಾಹಕ ಇಂಜಿನಿಯರ್‌ಗಳಿಗೆ ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಗೆ ಹಾಲಿ ಹಾಗೂ ಹೊಸ ವಿಭಾಗ ಕಛೇರಿಗಳ ಕಾರ್ಯಕ್ಷೇತ್ರಗಳನ್ನು ಮರುವಿಂಗಡಣೆ ಮಾಡಿ ಸ್ಥಾಪಿಸಲು ಹಾಗೂ ಅಧಿಕಾರಿಗಳನ್ನು ಸ್ಥಳ ನಿಯುಕ್ತಿಗೊಳಿಸಲು ಸರ್ಕಾರವು ನೀಡಿರುವ ಆದೇಶದನ್ವಯ, ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಮಂಡಳಿಯ ಆಡಳಿತ ನಿರ್ವಹಣೆ ಹಿನ್ನೆಲೆಯಲ್ಲಿ ಈ ಕೆಳಕಂಡ ಕಾರ್ಯನಿರ್ವಾಹಕ ಇಂಜಿನಿಯರ್‌ಗಳ ಹಾಗೂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಿಗೆ ನೇಮಕ ಮಾಡಲು ಆದೇಶಿಸಿದೆ.

ಕ್ರಮ ಸಂಖ್ಯೆ	ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಹೆಸರು ಹಾಗೂ ಸ್ಥಳ	ನೇಮಿಸಲಾದ ಹುದ್ದೆ ಮತ್ತು ಸ್ಥಳ
1	2	3
1	ಎನ್.ಪಿ. ಬಾಲರಾಜು, ವಿಶೇಷದಳ ಉಪ ವಿಭಾಗ, ಕಕೊಅಮ, ಬೆಂಗಳೂರು	ಕಾರ್ಯನಿರ್ವಾಹಕ ಇಂಜಿನಿಯರ್, ನಂ. 1ನೇ ವಿಭಾಗ, ಕಕೊಅಮ, ಬೆಂಗಳೂರು
2	ಎಸ್. ಜಿ. ಪದ್ಮನಾಭ, ಧಾರವಾಡ ಉಪ ವಿಭಾಗ, ಕಕೊಅಮ, ಧಾರವಾಡ	ಕಾರ್ಯನಿರ್ವಾಹಕ ಇಂಜಿನಿಯರ್, ನಂ. 2ನೇ ವಿಭಾಗ, ಕಕೊಅಮ, ಬೆಂಗಳೂರು ಶ್ರೀ ರಾಜಣ್ಣ ಇವರ ವಯೋ ನಿವೃತ್ತಿ ಹೊಂದಿದ ನಂತರ, ಅವರ ಸ್ಥಾನದಲ್ಲಿ ಸ್ಥಳ ನಿಯುಕ್ತಿಗೊಳಿಸಲು ಉದ್ದೇಶಿಸಿದೆ
3	ಹೆಚ್.ಎಂ. ಮೋಹನ್‌ಕುಮಾರ್, ನಂ. 1ನೇ ಉಪ ವಿಭಾಗ, ಕಕೊಅಮ, ಬೆಂಗಳೂರು	ಕಾರ್ಯನಿರ್ವಾಹಕ ಇಂಜಿನಿಯರ್, ನಂ. 3ನೇ ವಿಭಾಗ, ಕಕೊಅಮ, ಬೆಂಗಳೂರು
4	ಸಿ.ಕೆ. ರವಿಕುಮಾರ್, ಉಪ ವಿಭಾಗ, ಕಕೊಅಮ, ಬೆಂಗಳೂರು	ಕಾರ್ಯನಿರ್ವಾಹಕ ಇಂಜಿನಿಯರ್, ಡೆಪ್ಯೂಟಿ ಚೀಫ್ ಇಂಜಿನಿಯರ್‌ರ ಕಾರ್ಯನಿರ್ವಾಹಣೆ ಶಾಖೆ, ಕೇಂದ್ರ ಕಛೇರಿ, ಕಕೊಅಮ, ಬೆಂಗಳೂರು

1	2	3
5	ಬಿ.ಎಂ. ಕಪನಿ ಗೌಡ, ಲಗ್ಗೆರೆ ಉಪ ವಿಭಾಗ, ಕಕೊಅಮ, ಬೆಂಗಳೂರು	ಕಾರ್ಯನಿರ್ವಾಹಕ ಇಂಜಿನಿಯರ್, ನಂ. 1ನೇ ವಿಭಾಗ, ಕಕೊಅಮ, ಮೈಸೂರು. ಶ್ರೀ ಡಿ. ಬಿಳಿಗಿರಿ ರಂಗಸ್ವಾಮಿ ಇವರ ಸ್ಥಾನದಲ್ಲಿ
6	ಎನ್. ಮೋಹನ್, ಉಪ ವಿಭಾಗ, ಕಕೊಅಮ, ಬೆಂಗಳೂರು	ಕಾರ್ಯನಿರ್ವಾಹಕ ಇಂಜಿನಿಯರ್, ನಂ. 2ನೇ ವಿಭಾಗ, ಕಕೊಅಮ, ಮೈಸೂರು.
7	ಹೆಚ್. ಮಂಜು, ಶಿವಮೊಗ್ಗ ಉಪ ವಿಭಾಗ, ಕಕೊಅಮ, ಶಿವಮೊಗ್ಗ	ಕಾರ್ಯನಿರ್ವಾಹಕ ಇಂಜಿನಿಯರ್, ಶಿವಮೊಗ್ಗ ವಿಭಾಗ, ಕಕೊಅಮ, ಶಿವಮೊಗ್ಗ
8	ಆರ್.ಕೆ. ಕೃಷ್ಣಮೂರ್ತಿ, ರಾಯಚೂರು ಉಪ ವಿಭಾಗ, ಕಕೊಅಮ, ರಾಯಚೂರು	ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಭಾಗ, ಕಕೊಅಮ, ದಾವಣಗೆರೆ
9	ಡಿ.ಎ. ಮೆಂಡಿಗೇರಿ, ಪ್ರಾಯೋಜನಾ ವ್ಯವಸ್ಥಾಪಕರು (ಅ) ಕಕೊಅಮ, ಧಾರವಾಡ	ಕಾರ್ಯನಿರ್ವಾಹಕ ಇಂಜಿನಿಯರ್, ಧಾರವಾಡ ವಿಭಾಗ, ಕಕೊಅಮ, ಧಾರವಾಡ
